ಶುಕ್ರವಾರ, ನವೆಂಬರ್ 7, 2025| ₹ 7.00
prajavani.net prajavani
www.prajavani.net
ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ವಿಕೆಟ್‌ಗಳ ಅರ್ಧಶತಕ!

ಭಾರತದ ವಾಷಿಂಗ್ಟನ್ ಸುಂದರ್ ಗುರುವಾರ ಆಸ್ಟ್ರೇಲಿಯಾ ವಿರುದ್ಧದ ಪಂದ್ಯದಲ್ಲಿ 3 ವಿಕೆಟ್ ಪಡೆಯುವುದರೊಂದಿಗೆ ಟಿ20 ಕ್ರಿಕೆಟ್‌ನಲ್ಲಿ 50 ವಿಕೆಟ್‌ಗಳ ಮೈಲಿಗಲ್ಲು ದಾಟಿದರು

ಲೋಹದ ಹಕ್ಕಿಯ ಹಾರಾಟ

ವಾಯುಪಡೆಯ ಸಾರಂಗ್ ಹೆಲಿಕಾಪ್ಟರ್‌ಗಳ ತಂಡದ ಸದಸ್ಯರು ಗುರುವಾರ ಗುವಾಹಟಿಯಲ್ಲಿ ತಾಲೀಮು ನಡೆಸಿದರು

MORE SPACE COLLECTIONS

ಸಂಪ್ರದಾಯ ಮತ್ತು ವೈಭವ!
ನವಿರು ಸಂಗಮದ ಜೊತೆಗೆ
ನಿಮ್ಮ ವಿವಾಹವನ್ನು ಸಂಭ್ರಮಿಸಿರಿ

ಶುಭಮುಹೂರ್ತ ಕಲೆಕ್ಷನ್ಸ್

ಸೌಂದರ್ಯಕ್ಕೆ ಮೆರಗು. ಕಂಗೊಳಿಸುವ ತೇಜಸ್ಸು
ನಮ್ಮ ಅತ್ಯಂತ ವಿಶಿಷ್ಟ
ವಧುವಿನ ಉಡುಪುಗಳು ಮತ್ತು ಕಾಲಾತೀತ ಆಭರಣ ಸಂಗ್ರಹಗಳು
ಪ್ರತಿ ವಧು ಬೆಡಗು ಮತ್ತು ಭವ್ಯತೆಯಿಂದ
ಮಿನುಗುವಂತೆ ತಯಾರಿಸಲ್ಪಟ್ಟಿವೆ.

ರೇಷ್ಮೆ ಮತ್ತು ಆಭರಣ @ ಒಂದೇ ಸ್ಥಳದಲ್ಲಿ

ಏಷ್ಯದ ಬೃಹತ್ ಟೆಕ್ಸ್‌ಟೈಲ್ ಶೋರೂಮ್
ದಿ ಚೆನ್ನೈ ಸಿಲ್ಕ್ಸ್
ರೇಷ್ಮೆ ಉತ್ಪಾದನೆ ಮತ್ತು ಮಾರಾಟ ಕೇಂದ್ರ
ಇದೀಗ @ ಕಾಂಚಿಪುರಂ

SCAN TO LOCATE VENUE

30 MINS FROM ELECTRONIC CITY

ದಿ ಚೆನ್ನೈ ಸಿಲ್ಕ್ಸ್
The Chennai Silks™
Let the celebrations begin!

India's Most Trusted Jeweller
ಶ್ರೀ ಕುಮರನ್ ಜ್ಯುವೆಲರ್ಸ್
Sree Kumaran JEWELLERS
Gold • Diamond • Platinum • Silver

ಹೊಸೂರ್ (ಟೆಕ್ಸ್‌ಟೈಲ್ & ಜ್ಯುವೆಲ್ಲರಿ) : ಬೆಂಗಳೂರು ಹೆದ್ದಾರಿ. 9677761978 9167527777
ಗ್ರಾಹಕ ಸೇವಾ ಕೇಂದ್ರ : ಎಎಸ್‌ಎಲ್ ಪ್ಲಾಜಾ, ಬಸ್ ನಿಲ್ದಾಣದ ಎದುರು, ಹೊಸೂರ್. 7845750888
ಮೈಸೂರು (ಜ್ಯುವೆಲ್ಲರಿ) : ಬಿ ಎನ್ ರಸ್ತೆ, ಲಷ್ಕರ್ ಮೊಹಲ್ಲಾ (ಸಬರ್ಬನ್ ಬಸ್ ನಿಲ್ದಾಣದ ಬಳಿ). 0821–2418916, 9491685000
ಕಾಂಚಿಪುರಂ (ಜ್ಯುವೆಲ್ಲರಿ & ಸಿಲ್ಕ್) : ವೆಸ್ಟ್ ರಾಜಾ ಸ್ಟ್ರೀಟ್. 044 27234916, 9566743916, 9003796888

ಕರ್ನಾಟಕ • ತೆಲಂಗಾಣ • ತಮಿಳನಾಡು • ಪುದುಚೆರಿ

ಸರ್ಕಾರಕ್ಕೆ ಮತ್ತೆರಡು ದಿನ ಗಡುವು

ಗುರ್ಲಾಪುರದಲ್ಲಿ ಧರಣಿ ಮುಂದುವರಿಕೆ, ಸಚಿವ ಶಿವಾನಂದ ಪಾಟೀಲ ಮನವಿ: ಉಪವಾಸ, ರಸ್ತೆ ತಡೆ ಮುಂದಕ್ಕೆ

ಪ್ರಜಾವಾಣಿ ವಾರ್ತೆ

ಗುರ್ಲಾಪುರ: ಕಬ್ಬು ಬೆಳೆಗಾರರು ಶುಕ್ರವಾರದಿಂದ ನಡೆಸಲು ಉದ್ದೇಶಿಸಿದ್ದ ಹೆದ್ದಾರಿ ಬಂದ್ ಮತ್ತು ಆಮರಣಾಂತ ಉಪವಾಸವನ್ನು ಎರಡು ದಿನ ಮುಂದಕ್ಕೆ ಹಾಕಲು ನಿರ್ಧರಿಸಿದ್ದಾರೆ. ಸಕ್ಕರೆ ಸಚಿವ ಶಿವಾನಂದ ಪಾಟೀಲ ಅವರು ಹೋರಾಟ ಕೈಬಿಡುವಂತೆ ಪರಿಪರಿಯಾಗಿ ಮನವಿ ಮಾಡಿದರೂ ರೈತರು ಜಗ್ಗಲಿಲ್ಲ. ಆದರೆ, ಹೆದ್ದಾರಿ ಬಂದ್ ಮತ್ತು ಆಮರಣಾಂತ ಉಪವಾಸವನ್ನು ಮುಂದೂಡಲು ಒಪ್ಪಿದರು. ಧರಣಿ ಮುಂದುವರಿಯಲಿದೆ ಎಂದೂ ಅವರು ತಿಳಿಸಿದ್ದಾರೆ.

ಮೂಡಲಗಿ ತಾಲ್ಲೂಕಿನ ಗುರ್ಲಾಪುರ ಬಳಿ ರಾಜ್ಯ ಹೆದ್ದಾರಿ ಮೇಲೆ ಅನಿರ್ದಿಷ್ಟ ಧರಣಿ ಹಮ್ಮಿಕೊಂಡ ರೈತರನ್ನು ಸಚಿವರು ಗುರುವಾರ ಭೇಟಿ ಮಾಡಿದರು. ಸಚಿವರ ಕಾರು ಸ್ಥಳಕ್ಕೆ ಬರುತ್ತಿದ್ದಂತೆಯೇ ಪ್ರತಿಭಟನಕಾರರು ಆಕ್ರೋಶ ಹೊರ ಹಾಕಿದರು. ಮಾತನಾಡುವುದಕ್ಕೆ ಬಿಡದೇ ಕೂಗಾಡಿದರು.

‘ಕೈ ಮುಗಿದು ಕೇಳುತ್ತೇನೆ ಎರಡು ದಿನ ಗಡುವು ಕೊಡಿ’ ಎಂದು ಸಚಿವರು ಮನವಿ ಮಾಡಿದರು. ಆ ಪದ ಕಿವಿಗೆ ಬೀಳುತ್ತಿದ್ದಂತೆಯೇ ಸಮೂಹದಿಂದ ಮತ್ತೆ ಕೂಗಾಟ ಜೋರಾಯಿತು.

ಮಧ್ಯ ಪ್ರವೇಶಿಸಿದ ರೈತ ಮುಖಂಡ ಚೂಣಪ್ಪ ಪೂಜಾರಿ ಮುಂತಾದವರು, ‘ಸಚಿವರು ನಮ್ಮ ಸಲುವಾಗಿಯೇ ಬಂದಿದ್ದಾರೆ. ಅವರಿಗೆ ಮಾತಾಡಲು ಬಿಡಿ. ಕಾಲಿಗೆ ಬೀಳುತ್ತೇನೆ’ ಎಂದರು.

‘ನೀವು ಮಾತಾಡು ಎಂದರೆ ಮಾತ್ರ ಮಾತಾಡುತ್ತೇನೆ. ಇಲ್ಲದಿದ್ದರೆ ನಾನೂ ಇಲ್ಲೇ ಧರಣಿ ಕುಳಿತುಕೊಳ್ಳುತ್ತೇನೆ’ ಎಂದು ಸಚಿವರು ಹೇಳಿದರು.

ಗದ್ದಲದ ಮಧ್ಯೆಯೇ ಮಾತು ಮುಂದುವರಿಸಿದ ಶಿವಾನಂದ ಪಾಟೀಲ, ‘ರೈತರ ವಿಚಾರದಲ್ಲಿ ನಾನು ಯಾವುದೇ ಕಾರಣಕ್ಕೂ ರಾಜಕೀಯ ಮಾಡುವುದಿಲ್ಲ. ಚರ್ಚೆ ಮಾಡಬೇಕಿದೆ. ಸಿಟ್ಟಿನ ಕೈಯಲ್ಲಿ ಬುದ್ಧಿ ಕೊಡಬೇಡಿ. ನಿಮ್ಮ ಸಾಮರ್ಥ್ಯ ಏನೆಂದು ಇಡೀ ದೇಶಕ್ಕೆ ತೋರಿಸಿದ್ದೀರಿ. ಕೇಂದ್ರವೇ ಆಗಲಿ, ರಾಜ್ಯ ಸರ್ಕಾರವೇ ಆಗಲಿ ಇಂಥ ದುಃಸ್ಥಿತಿಗೆ ಬರಬಾರದು. ರಾಷ್ಟ್ರೀಯ ಹೆದ್ದಾರಿ ಬಂದ್ ಮಾಡುವುದನ್ನು ಎರಡು ದಿನ ಮುಂದಕ್ಕೆ ಹಾಕಿರಿ’ ಎಂದೂ ಕೋರಿದರು.

ಆಗ ರೈತ ಮುಖಂಡರು, ಎರಡು ದಿನ ಗಡುವು ಕೊಡುತ್ತೇವೆ. ಇಲ್ಲಿ ಧರಣಿ ನಿಲ್ಲಿಸುವುದಿಲ್ಲ. ಗಡುವು ಮುಗಿದ ಮೇಲೆ ಮತ್ತೆ ಗಡುವು ಕೇಳಲು ಬಂದರೆ ಪರಿಸ್ಥಿತಿ ನೆಟ್ಟಗಿರುವುದಿಲ್ಲ ಎಂದು ಎಚ್ಚರಿಸಿದರು.

ನಮ್ಮ ಕೈಯಲ್ಲಿ ಇಲ್ಲ: ‘ಕಬ್ಬು ದರ ನಿಗದಿ ಮಾಡುವ ಅಧಿಕಾರ ನಮ್ಮ ಕೈಯಲ್ಲಿ ಇಲ್ಲ. ಕೇಂದ್ರ ಸರ್ಕಾರದ ಕೈಯಲ್ಲಿದೆ. ಆದರೂ ರೈತರಿಗೆ ಸಹಾಯ ಮಾಡಲು ನಮ್ಮ ಸರ್ಕಾರ ಯತ್ನಿಸುತ್ತದೆ’ ಎಂದು ಶಿವಾನಂದ ಪಾಟೀಲ ಹೇಳಿದರು.

‘ಕೇಂದ್ರದ ಸಕ್ಕರೆ ಸಚಿವರು ರಾಜ್ಯದವರೇ ಇದ್ದಾರೆ. ದುರದೃಷ್ಟವಶಾತ್ ಪ್ರಲ್ಹಾದ್ ಜೋಶಿ ಅವರ ಹೆಸರನ್ನು ಯಾರೂ ಇಲ್ಲಿಯವರೆಗೂ ತೆಗೆದಿಲ್ಲ. ಶಿವಾನಂದ ಪಾಟೀಲ ಸ್ಥಳಕ್ಕೆ ಬಂದಿಲ್ಲ ಎಂದು ಮಾತ್ರ ಆರೋಪಿಸುತ್ತಿದ್ದಾರೆ’ ಎಂದರು.

‘ನ.7ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜ್ಯದ ಎಲ್ಲ ಸಕ್ಕರೆ ಕಾರ್ಖಾನೆಗಳ ಮಾಲೀಕರ ಸಭೆ ಕರೆದಿದ್ದಾರೆ. ಅಲ್ಲಿನ ನಿರ್ಧಾರ ಪ್ರಕಟಿಸುವವರೆಗೆ ರೈತರು ಸಂಘರ್ಷಕ್ಕೆ ಎಡೆ ಮಾಡಿಕೊಡಬಾರದು’ ಎಂದರು.

‘ರೈತರ ಹೋರಾಟ ಪ್ರಾಮಾಣಿಕವಾದದ್ದು. ಅದರ ಅರಿವು ನಮಗೂ ಇದೆ. ರೈತರ ಸಮಸ್ಯೆ ಆಲಿಸುವ ಕೆಲಸ ಮಾಡುತ್ತೇವೆ. ಧರಣಿ ಸ್ಥಳಕ್ಕೆ ಹೋಗದಂತೆ ನನ್ನ ಮೇಲೆ ಯಾರೂ ಒತ್ತಡ ಹೇರಿಲ್ಲ’ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಇದಕ್ಕೂ ಮುನ್ನ ಅವರು ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಜತೆಗೆ ಸಭೆ ನಡೆಸಿ, ಪರಿಸ್ಥಿತಿಯ ಮಾಹಿತಿ ಪಡೆದರು.

ಗುರ್ಲಾಪುರದಲ್ಲಿ ಪ್ರತಿಭಟನಕಾರರು ಸಕ್ಕರೆ ಸಚಿವ ಶಿವಾನಂದ ಪಾಟೀಲ ಅವರಿಗೆ ಶ್ರದ್ಧಾಂಜಲಿ ಎಂದು ಬರೆದ ಬ್ಯಾನರ್ ಪ್ರದರ್ಶಿಸಿ ಆಕ್ರೋಶ ಹೊರಹಾಕಿದರು

ಬ್ಯಾನರ್ ಅಳವಡಿಸಿ ಶ್ರದ್ಧಾಂಜಲಿ

ಗುರ್ಲಾಪುರದಲ್ಲಿ ಬೆಳಿಗ್ಗೆ ಶಿವಾನಂದ ಪಾಟೀಲ ಅವರ ಅಣಕು ಶವಯಾತ್ರೆ ನಡೆಸಲಾಯಿತು. ‘ಸತ್ತುಹೋದ ಸಕ್ಕರೆ ಸಚಿವ’ ಎಂಬ ಬ್ಯಾನರ್ ಹಾಕಿ, ಬಾಯಿ ಬಾಯಿ ಬಡಿದುಕೊಂಡು ಅತ್ತರು.

ಜಿಲ್ಲೆಯ ವಿವಿಧೆಡೆಯಿಂದ 25ಕ್ಕೂ ಹೆಚ್ಚು ಮಠಾಧೀಶರು ಕೂಡ ರೈತರ ಧರಣಿ ಬೆಂಬಲಿಸಿ ಪಾಲ್ಗೊಂಡರು. ಹಲವು ಶಾಲೆ– ಕಾಲೇಜುಗಳ ವಿದ್ಯಾರ್ಥಿಗಳೂ ಗುರ್ಲಾಪುರದತ್ತ ಧಾವಿಸಿದರು.

ರೈತರ ಬಗ್ಗೆ ಕನಿಷ್ಠ ಕಾಳಜಿ ತೋರದ ಸರ್ಕಾರಕ್ಕೆ ಧಿಕ್ಕಾರ. ಮುಖ್ಯಮಂತ್ರಿ ಸಿದ್ದರಾಮಯ್ಯ, ಸಕ್ಕರೆ ಸಚಿವ ಶಿವಾನಂದ ಪಾಟೀಲ ಅವರು ‘ಇದ್ದೂ ಸತ್ತಂತೆ’ ಎಂದು ಘೋಷಣೆ ಮೊಳಗಿಸಿದರು. ತಾಳ್ಮೆ ಕಟ್ಟೆಯೊಡೆದಂತೆ ರೈತರು ಕಟು ಪದಗಳಲ್ಲಿ ಖಂಡಿಸಿದರು.

ಬೆಳಗಾವಿ ಜಿಲ್ಲೆಯ ಗುರ್ಲಾಪುರದಲ್ಲಿ ಹಮ್ಮಿಕೊಂಡ ಧರಣಿಯಲ್ಲಿ ಗುರುವಾರ ಕೂಡ ಅಪಾರ ಜನ ಪಾಲ್ಗೊಂಡರು
– ಪ್ರಜಾವಾಣಿ ಚಿತ್ರಗಳು

ಮೂಡಲಗಿ ಸಂಪೂರ್ಣ ಬಂದ್

ರೈತರ ಹೋರಾಟ ಬೆಂಬಲಿಸಿ ಮೂಡಲಗಿ ಬಂದ್ ಮಾಡಲಾಯಿತು. ವ್ಯಾಪಾರಿಗಳು, ಖಾಸಗಿ ವಾಹನಗಳ ಮಾಲೀಕರು, ಶಾಲೆ– ಕಾಲೇಜುಗಳ ವಿದ್ಯಾರ್ಥಿಗಳೂ ಇದಕ್ಕೆ ಬೆಂಬಲ ಸೂಚಿಸಿದರು. ಪಟ್ಟಣದ ಎಲ್ಲ ವ್ಯಾಪಾರಿಗಳು ಸ್ವಯಂ ಪ್ರೇರಣೆಯಿಂದಲೇ ಅಂಗಡಿಗಳನ್ನು ಬಂದ್ ಮಾಡಿದರು. ಮುಗಳಖೋಡದ ಯುವಕರೂ ಧರಣಿ ಬೆಂಬಲಿಸಿ, ಬೈಕ್ ಜಾಥಾ ನಡೆಸಿದರು.

‘₹3,400ಕ್ಕೆ ಒಪ್ಪುತ್ತೇವೆ’

‘ನಾವು ₹3,500 ಕೇಳಿದ್ದೇವೆ. ಸರ್ಕಾರ ಈಗಾಗಲೇ ₹3,200 ಕೊಡುವುದಾಗಿ ಹೇಳಿದೆ. ನಾವೂ ತುಸು ಹಿಂದೆ ಸರಿಯುತ್ತೇವೆ. ₹3,400ಕ್ಕೆ ಒಪ್ಪುತ್ತೇವೆ. ನೀವು ಭರವಸೆ ನೀಡಿದರೆ ಈಗಲೇ ಹೋರಾಟ ನಿಲ್ಲಿಸುತ್ತೇವೆ’ ಎಂದು ರೈತ ಮುಖಂಡರು ಹೇಳಿದರು. ಇದಕ್ಕೂ ರೈತರು ಒಪ್ಪದೇ ಕೂಗಾಡಿದರು. ಈ ಬೆಳವಣಿಗೆಗಳ ಮಧ್ಯೆ ಸಚಿವರು ಮೌನವಾಗಿ ಕುಳಿತರು.

ಸಚಿವರ ಕಾರಿಗೆ ಮುತ್ತಿಗೆ ತೂರಿಬಂದ ಚಪ್ಪಲಿ

ಸಚಿವ ಶಿವಾನಂದ ಪಾಟೀಲ ಧರಣಿ ಸ್ಥಳದಿಂದ ಮಾತು ಮುಗಿಸಿ ಹೊರಡುತ್ತಿದ್ದಂತೆಯೇ ಪ್ರತಿಭಟನಾಕಾರರು ಕಾರಿಗೆ ಮುತ್ತಿಗೆ ಹಾಕಿದರು. ಜನಸಂದಣಿ ಕಡೆಯಿಂದ ತೂರಿಬಂದ ಚಪ್ಪಲಿ ಸಚಿವರ ಕಾರಿನ ಮೇಲೆ ಬಿದ್ದಿತು. ಪೊಲೀಸರು ಅದನ್ನು ತೆರವು ಮಾಡಿ, ಜನಸಂದಣಿ ಚೆದುರಿಸಿ ಸಚಿವರು ಹೋಗಲು ದಾರಿ ಮಾಡಿಕೊಟ್ಟರು.

ಸಂಯುಕ್ತ ಹೋರಾಟ ಬೆಂಬಲ

ಬೆಂಗಳೂರು: ಕಬ್ಬಿಗೆ ದರ ನಿಗದಿ ಮಾಡುವ ಬಗ್ಗೆ ರಾಜ್ಯ ಸರ್ಕಾರವು ಸ್ಪಷ್ಟ ತೀರ್ಮಾನ ಕೈಗೊಳ್ಳದೇ ಇದ್ದರೆ ಕಬ್ಬು ಬೆಳೆಗಾರರ ಹೋರಾಟವನ್ನು ರಾಜ್ಯ ವ್ಯಾಪಿ ನಡೆಸಲಾಗುವುದು ಎಂದು ಸಂಯುಕ್ತ ಹೋರಾಟ ಕರ್ನಾಟಕ ಎಚ್ಚರಿಕೆ ನೀಡಿದೆ.

ಸಂಯುಕ್ತ ಹೋರಾಟ ಕರ್ನಾಟಕದ ಪದಾಧಿಕಾರಿಗಳಾದ ಎಚ್.ಆರ್. ಬಸವರಾಜಪ್ಪ, ಬಡಗಲಪುರ ನಾಗೇಂದ್ರ, ಸಿದಗೌಡ ಮೋದಗಿ, ನೂರ್ ಶ್ರೀಧರ್, ಟಿ.ಯಶವಂತ, ಭಗವಾನ್ ರೆಡ್ಡಿ, ಡಿ.ಎಚ್. ಪೂಜಾರ್ ಈ ಬಗ್ಗೆ ಹೇಳಿಕೆ ನೀಡಿದ್ದು, ಕಬ್ಬು ಬೆಳೆಗಾರರ ಹೋರಾಟಕ್ಕೆ ಬೆಂಬಲ ನೀಡಲಾಗುವುದು ಎಂದು ಘೋಷಿಸಿದ್ದಾರೆ.

ವಿವಿಧ ರೈತ ಸಂಘಟನೆಗಳ ಮುಖಂಡರು ಹಾಗೂ ಕಾರ್ಯಕರ್ತರು ಶುಕ್ರವಾರ ಬೆಳಗಾವಿಗೆ ಬರುತ್ತಿದ್ದಾರೆ. ಬೆಳಗಾವಿಯ ಕಬ್ಬು ಬೆಳೆಯುವ ರೈತರ ಹಕ್ಕೊತ್ತಾಯದಂತೆ ಪ್ರತಿ ಟನ್‌ಗೆ ₹3,500 ನಿಗದಿಪಡಿಸಬೇಕು ಎಂದು ಒತ್ತಾಯಿಸಿದ್ದಾರೆ.

ಈ ಸಮಸ್ಯೆ ಉಲ್ಬಣಗೊಳ್ಳಲು ಕೇಂದ್ರ ಸರ್ಕಾರ ನೇರ ಹೊಣೆ. ಎಥೆನಾಲ್ ಉತ್ಪಾದನೆಯ ಪ್ರಮಾಣ ನಿಗದಿಯಲ್ಲಿ ರಾಜ್ಯಕ್ಕೆ ಅನ್ಯಾಯವಾಗುತ್ತಿದೆ. ಗುಜರಾತಿನಲ್ಲಿ ಕಾರ್ಖಾನೆಗಳಿಗೆ ಶೇ 70ರಷ್ಟು ಎಥೆನಾಲ್ ಉತ್ಪಾದನೆ ಅವಕಾಶ ಕೊಟ್ಟಿದ್ದರೆ, ರಾಜ್ಯದ ಕಾರ್ಖಾನೆಗಳಿಗೆ ಶೇ 17ಕ್ಕೆ ನಿರ್ಬಂಧಿಸಲಾಗಿದೆ. ಈ ಅನ್ಯಾಯವನ್ನು ಸರಿಪಡಿಸಬೇಕು ಎಂದು ಆಗ್ರಹಿಸಿದ್ದಾರೆ.

ಕಬ್ಬಿಗೆ ಉತ್ತಮ ಬೆಲೆ ನಿಗದಿಗೆ ಒತ್ತಾಯಿಸಿ ಕಬ್ಬು ಬೆಳೆಗಾರರ ಸಂಘದವರು ಕರೆ ನೀಡಿದ್ದ ಅಫಜಲಪುರ ಬಂದ್ ಅಂಗವಾಗಿ ರೈತರು ರಸ್ತೆ ಬಂದ್ ಮಾಡಿ ಪ್ರತಿಭಟಿಸಿದರು

ಅಫಜಲಪುರ ಬಂದ್‌ಗೆ ಉತ್ತಮ ಪ್ರತಿಕ್ರಿಯೆ

ಕಲಬುರಗಿ: ಜಿಲ್ಲೆಯ ಕಾರ್ಖಾನೆಗಳು ಪ್ರತಿ ಟನ್ ಕಬ್ಬಿಗೆ ₹3,500 ದರ ನಿಗದಿ ಮಾಡಬೇಕು ಎಂದು ಒತ್ತಾಯಿಸಿ ಜಿಲ್ಲಾ ಕಬ್ಬು ಬೆಳೆಗಾರರ ಸಂಘ ಗುರುವಾರ ಕರೆ ನೀಡಿದ್ದ ‘ಅಫಜಲಪುರ ಬಂದ್’ಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಯಿತು.

ಬಂದ್ ಅಂಗವಾಗಿ ಪಟ್ಟಣದ ಬಸವೇಶ್ವರ ವೃತ್ತದಲ್ಲಿ ಬೆಳಿಗ್ಗೆಯಿಂದಲೇ ಪ್ರತಿಭಟನೆ ನಡೆದಿದ್ದರಿಂದ ವಾಹನ ಸಂಚಾರ ಅಸ್ತವ್ಯಸ್ತವಾಗಿತ್ತು.

ಕಲಬುರಗಿ–ಸೋಲಾಪುರ, ವಿಜಯಪುರ–ಘತ್ತರಗಿ ಗ್ರಾಮಗಳಿಗೆ ಸಂಚರಿಸುವ ಜನರಿಗೆ ಮತ್ತು ವಾಹನ ಸವಾರರಿಗೆ ತೊಂದರೆಯಾಗಿತ್ತು.

ಕಬ್ಬಿಗೆ ಬೆಂಬಲ ಬೆಲೆ ಘೋಷಿಸಲು ಒತ್ತಾಯಿಸಿ ಜಿಲ್ಲೆಯ ಚಿಂಚೋಳಿಯಲ್ಲಿ ಭಾರತೀಯ ಕಿಸಾನ್ ಮೋರ್ಚಾ ಕಾರ್ಯಕರ್ತರು ಸರ್ಕಾರದ ಅಣಕು ಶವಯಾತ್ರೆ ನಡೆಸಿ ಪ್ರತಿಭಟಿಸಿದರು.

ವಿಪಕ್ಷ ನಾಯಕರ ಅಭಿಪ್ರಾಯ

ಸ್ವತಂತ್ರ ಸರ್ಕಾರ ಇಲ್ಲದ ವೇಳೆಯೂ ರೈತರ ಉಳಿವಿಗಾಗಿ ಶ್ರಮವಹಿಸಿದ್ದೆ. 136 ಸೀಟಿನ ಸ್ವತಂತ್ರ ಸರ್ಕಾರ, ಇವರಿಗೇನಾಗಿದೆ ದರಿದ್ರ? ರೈತರನ್ನು 7 ದಿನದಿಂದ ರಸ್ತೆಯಲ್ಲಿ ಮಲಗಿಸಬೇಕಿತ್ತಾ? ಶಾಸಕ ಮೇಟಿಯವರ ಅಂತಿಮ ದರ್ಶನಕ್ಕೆ ಹೋಗಿದ್ದ ಮುಖ್ಯಮಂತ್ರಿ ಯವರು ಅಲ್ಲೇ ಪಕ್ಕದಲ್ಲೇ ನಡೆಯುತ್ತಿದ್ದ ಪ್ರತಿಭಟನೆ ಜಾಗಕ್ಕೆ ಹೋಗಬಹುದಿತ್ತಲ್ಲವೇ?

ಎಚ್.ಡಿ.ಕುಮಾರಸ್ವಾಮಿ, ಕೇಂದ್ರ ಸಚಿವ

‘15 ಲಕ್ಷ ಟನ್ ಸಕ್ಕರೆ ರಫ್ತಿಗೆ ಅವಕಾಶ’

‘ಕಬ್ಬು ಕಾರ್ಖಾನೆಗಳ ಮಾಲೀಕರು ರಫ್ತಿಗೆ ಅವಕಾಶ ಕೋರಿದ್ದು, ಹೆಚ್ಚುವರಿ ಸಂಗ್ರಹವಿರುವ 15 ಲಕ್ಷ ಟನ್ ಸಕ್ಕರೆ ರಫ್ತಿಗೆ ಅವಕಾಶ ನೀಡಲಾಗುವುದು. ಮೊಲಾಸಿಸ್ ರಫ್ತಿಗೆ ಅನುಮತಿ ಈಗಾಗಲೇ ಕೊಟ್ಟಿದ್ದೇವೆ’ ಎಂದು ಕೇಂದ್ರ ಗ್ರಾಹಕ ವ್ಯವಹಾರಗಳ ಪ್ರಲ್ಹಾದ ಜೋಶಿ ಹೇಳಿದರು.

‘ಕಬ್ಬು ಬೆಳೆಗಾರರ ವಿಚಾರದಲ್ಲಿ ರಾಜ್ಯ ಸರ್ಕಾರ ಜವಾಬ್ದಾರಿಯಿಂದ ವರ್ತಿಸಬೇಕು. ಸಂಧಾನ ನಡೆಸಬೇಕು. ರೈತರು ಪ್ರತಿ ಟನ್‌ಗೆ ₹3,500 ಕೇಳುತ್ತಿದ್ದಾರೆ. ವರ್ಷದ ಆರಂಭದಲ್ಲೇ ಕೇಂದ್ರ ಸರ್ಕಾರ ಪ್ರತಿ ಟನ್ ಕಬ್ಬಿಗೆ ಎಫ್‌ಆರ್‌ಪಿ ₹3,500 ನಿಗದಿ ಮಾಡಿದೆ. ಜತೆಗೆ, ಎಥೆನಾಲ್ ಖರೀದಿ ಮೊತ್ತ 97.2 ಶೇಕಡಾ ಪಾವತಿ ಆಗಿದೆ’ ಎಂದರು.

‘ರೈತರ ನೆರವಿಗೆ ಬಾರದ ರಾಜ್ಯ’

ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದ ನಂತರ ರಾಜ್ಯದ ರೈತರಿಗೆ ಯಾವುದೇ ನೆರವು ನೀಡಿಲ್ಲ. ಬರೆ ಎಳೆಯುವ ಕೆಲಸ ಮಾಡಿದೆ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದರು.

ಮಹಾರಾಷ್ಟ್ರ ಸರ್ಕಾರ ಈಗಾಗಲೇ ರೈತರಿಗೆ ಪರಿಹಾರ ನೀಡಿದೆ. ಕರ್ನಾಟಕ ಸರ್ಕಾರ ಪರಿಹಾರ ನೀಡದೆ ಕೇಂದ್ರ ಸರ್ಕಾರದ ಮೇಲೆ ಗೂಬೆ ಕೂರಿಸುವ ಕೆಲಸ ಮಾಡುತ್ತಿದೆ. ತಹಶೀಲ್ದಾರರ ಕಚೇರಿಗೆ ಹತ್ತಾರು ಬಾರಿ ಸುತ್ತಾಡಿದರೂ ಪರಿಹಾರ ಸಿಗುತ್ತಿಲ್ಲ. ಕಬ್ಬು ಬೆಳೆಗಾರರು ಸೇರಿದಂತೆ ರೈತರ ಬೇಡಿಕೆ ಈಡೇರಿಸಿಲ್ಲ ಎಂದು ಟೀಕಿಸಿದರು.

‘ಎಲ್ಲದಕ್ಕೂ ಕೇಂದ್ರದತ್ತ ಬೊಟ್ಟು’

‘ಸರ್ವರೋಗಕ್ಕೂ ಒಂದೇ ಮದ್ದು ಎನ್ನುವಂತೆ ರಾಜ್ಯ ಸರ್ಕಾರ ತನ್ನ ಎಲ್ಲ ಸಮಸ್ಯೆಗಳಿಗೂ ಕೇಂದ್ರ ಸರ್ಕಾರದ ಕಡೆ ಬೊಟ್ಟು ಮಾಡಿ ಕೈತೊಳೆದುಕೊಳ್ಳುವ ಪ್ರಯತ್ನ ಮಾಡುತ್ತಿದೆ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ದೂರಿದರು.

ಕಬ್ಬು ಬೆಳೆಗಾರರ ಪ್ರತಿಭಟನೆಯ ಬಿಸಿ ಸರ್ಕಾರಕ್ಕೆ ತಟ್ಟುತ್ತಿದ್ದಂತೆ ಗಾಢ ನಿದ್ದೆಯಿಂದ ಎದ್ದಿರುವ ಸಿದ್ದರಾಮಯ್ಯ ಕಾಟಾಚಾರಕ್ಕೆ ಸುದ್ದಿಗೋಷ್ಠಿ ಮಾಡಿ ಕೇಂದ್ರದ ಮೇಲೆ ಗೂಬೆ ಕೂರಿಸಿದ್ದಾರೆ. ಎಫ್‌ಆರ್‌ಪಿ ದರ ನಿಗದಿ ಮಾಡುವ ಅಧಿಕಾರ ರಾಜ್ಯ ಸರ್ಕಾರಕ್ಕೆ ಇಲ್ಲ ಎಂದು ನುಣುಚಿಕೊಳ್ಳುವ ಪ್ರಯತ್ನ ಮಾಡಿದ್ದಾರೆ. ಕಾರ್ಖಾನೆಗಳು ಉತ್ಪಾದಿಸುವ ಉಪಉತ್ಪನ್ನಗಳ ವಹಿವಾಟಿನಲ್ಲೂ ರೈತರಿಗೆ ಪಾಲು ಕೊಡಿಸಲು ಕಾನೂನಿನ ಪ್ರಕಾರ ಅವಕಾಶವಿದೆ ಎನ್ನುವ ಸತ್ಯ ಮರೆಮಾಚುತ್ತಿದ್ದಾರೆ ಎಂದು ಆರೋಪಿಸಿದರು.

ಸರ್ಕಾರಕ್ಕೆ ಕಾಳಜಿ ಇದ್ದರೆ ಪ್ರತಿ ಟನ್ ಕಬ್ಬಿಗೆ ₹500 ಸಹಾಯಧನ ನೀಡಬೇಕು ಎಂದರು.

‘ದೆಹಲಿಗೆ ಹೋಗಿ ಪ್ರತಿಭಟನೆ ಮಾಡಲಿ’

‘ದರ ಹೆಚ್ಚಿಸುವ ಅಧಿಕಾರ ನಮ್ಮ ಕೈಯಲ್ಲಿ ಇಲ್ಲ. ಕೇಂದ್ರ ಸರ್ಕಾರದ ಕೈಯಲ್ಲಿದೆ. ಹೀಗಾಗಿ, ತಕ್ಷಣ ಬಿಜೆಪಿಯವರು ದೆಹಲಿಗೆ ಹೋಗಬೇಕು. ಆರು ವರ್ಷದಿಂದ ಸಕ್ಕರೆ ಬೆಲೆ ಹೆಚ್ಚಳ ಆಗಿಲ್ಲ’ ಎಂದು ಸಚಿವ ಸತೀಶ ಜಾರಕಿಹೊಳಿ ದೂರಿದರು.

ಪ್ರತಿಭಟನೆಯಲ್ಲಿ ಬಿ.ವೈ. ವಿಜಯೇಂದ್ರ ಭಾಗವಹಿಸಿರುವುದಕ್ಕೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದ ಅವರು, ‘ಕೇಂದ್ರದಲ್ಲಿ ವಿಜಯೇಂದ್ರ ಅವರ ಪಕ್ಷದ ಸರ್ಕಾರವಿದೆ. ಹೀಗಾಗಿ, ಕೇಂದ್ರದಲ್ಲಿ ಅವರೇ ಮಾತನಾಡಬೇಕಿದೆ. ಅದು ಬಿಟ್ಟು ತಮ್ಮ ಪಾತ್ರ ಇಲ್ಲ ಎಂದು ಬಿಂಬಿಸಲು ಅವರು ಹೊರಟಿದ್ದಾರೆ. ಮಹಾರಾಷ್ಟ್ರದಲ್ಲಿ ಕಬ್ಬು ದರ ಹೆಚ್ಚಾದರೆ ಸಹಜವಾಗಿ ಮಹಾರಾಷ್ಟ್ರ ಕಡೆ ರೈತರು ಹೋಗುತ್ತಾರೆ. ಸುಮಾರು ಶೇ 5ರಿಂದ ಶೇ 10ರಷ್ಟು ಕಬ್ಬು ಮಹಾರಾಷ್ಟ್ರಕ್ಕೆ ಹೋಗಬಹುದು. ನಾವು ಮಹಾರಾಷ್ಟ್ರದಲ್ಲಿನ ದರ ನೀಡಲು ಸಾಧ್ಯವಿಲ್ಲ’ ಎಂದರು.

‘ನಾವೆಲ್ಲರೂ ಸೇರಿ ₹ 3,200 ಬೆಲೆ ನೀಡಲು ನಿರ್ಧರಿಸಿದ್ದೆವು. ಆದರೆ, ರೈತರು ಈ ಬೆಲೆಗೆ ಒಪ್ಪದ ಕಾರಣ ಪ್ರತಿಭಟನೆ ಮುಂದುವರಿದಿದೆ. ಬೆಲೆ ನಿಗದಿ ಸಂಬಂಧ ಪ್ರತಿ ವರ್ಷ ಪ್ರತಿಭಟನೆ ನಡೆಯುತ್ತದೆ. ಈ ಬಾರಿ ದೊಡ್ಡ ಪ್ರಮಾಣದ ಪ್ರತಿಭಟನೆ ನಡೆದಿದೆ’ ಎಂದೂ ಅವರು ಹೇಳಿದರು.

ಒಡಹುಟ್ಟಿದ ಅಣ್ಣನಿಂದಲೇ ಅತ್ಯಾಚಾರ: ತಾಯಿಯಾದ ತಂಗಿ

ಪ್ರಜಾವಾಣಿ ವಾರ್ತೆ

ಕೊಪ್ಪಳ: ಒಡಹುಟ್ಟಿದ ಅಣ್ಣನಿಂದಲೇ ನಿರಂತರ ಅತ್ಯಾಚಾರಕ್ಕೆ ಒಳಗಾದ ತಂಗಿ ಗರ್ಭಿಣಿಯಾಗಿ ಇತ್ತೀಚೆಗೆ ಇಲ್ಲಿನ ಜಿಲ್ಲಾ ಆಸ್ಪತ್ರೆಯಲ್ಲಿ ಮಗುವಿಗೆ ಜನ್ಮ ನೀಡಿದ್ದಾಳೆ.

ತಾಲ್ಲೂಕಿನ ಗ್ರಾಮವೊಂದರ 17 ವರ್ಷದ ಬಾಲಕಿ ಆಸ್ಪತ್ರೆಗೆ ದಾಖಲಾದಾಗ ಪ್ರಕರಣ ಬಹಿರಂಗವಾಗಿದೆ. ಬಾಲಕಿಯ ಪೋಷಕರಿಗೆ ಒಟ್ಟು ಮೂರು ಮಕ್ಕಳಿದ್ದರು. ಮನೆಯಲ್ಲಿ ಯಾರೂ ಇಲ್ಲದಾಗ ಅಣ್ಣನು, ‘ನಿನ್ನ ಮದುವೆ ಮಾಡಿಕೊಳ್ಳುತ್ತೇನೆ. ಯಾವತ್ತೂ ಕೈ ಬಿಡುವುದಿಲ್ಲ. ಸಮಾಜ ಏನೆಂದುಕೊಂಡರೂ ತಲೆ ಕೆಡಿಸಿಕೊಳ್ಳ ಬೇಡ’ ಎಂದು ಪುಸಲಾಯಿಸಿದ್ದಾನೆ. ಆರಂಭದಲ್ಲಿ ತಂಗಿ ಇದಕ್ಕೆ ವಿರೋಧ ವ್ಯಕ್ತಪಡಿಸಿ, ‘ಅಣ್ಣ–ತಂಗಿಯೇ ಈ ರೀತಿ ಮಾಡಿಕೊಂಡರೆ ಸಮಾಜದ ಜನ ನಮ್ಮನ್ನು ಸೇರಿಸಿಕೊಳ್ಳುವುದಿಲ್ಲ’ ಎಂದು ಹೇಳಿದ್ದರೂ ಆತ ಒಪ್ಪಿಕೊಂಡಿಲ್ಲ’ ಎಂದು ಪೊಲೀಸರಿಗೆ ನೀಡಿದ ಹೇಳಿಕೆಯಲ್ಲಿ ಬಾಲಕಿ ತಿಳಿಸಿದ್ದಾಳೆ.

ಪೋಕ್ಸೊ ಪ್ರಕರಣ ದಾಖಲು

ಅ. 26ರಂದು ಮನೆಯಲ್ಲಿ ಕೆಲಸ ಮಾಡುವಾಗ ಜಾರಿಬಿದ್ದು ಬಾಲಕಿ ಸೊಂಟಕ್ಕೆ ಪೆಟ್ಟಾಗಿತ್ತು. ಸ್ಕ್ಯಾನಿಂಗ್ ಮಾಡಿಸಲು ಜಿಲ್ಲಾ ಆಸ್ಪತ್ರೆಗೆ ಬಂದಾಗ ಗರ್ಭಿಣಿಯಾದ ವಿಷಯ ಗೊತ್ತಾಗಿದೆ. ಆಸ್ಪತ್ರೆಗೆ ದಾಖಲಾದ ನಾಲ್ಕು ದಿನಗಳ ಬಳಿಕ ಬಾಲಕಿ ಗಂಡು ಮಗುವಿಗೆ ಜನ್ಮ ನೀಡಿದ್ದಾಳೆ. ಬಾಲಕಿಯ ಸ್ಥಿತಿಕಂಡು ಅವರ ಕುಟುಂಬ ಆತಂಕಕ್ಕೆ ಒಳಗಾಗಿದ್ದು, ಬಾಲಕಿಗೆ ಪ್ರಜ್ಞೆ ಬಂದ ನಂತರ ಪೊಲೀಸರ ಮುಂದೆ ನೀಡಿದ ಹೇಳಿಕೆ ಕುಟುಂಬಕ್ಕೆ ಗರ ಬಡಿದಂತಾಗಿದೆ.

‘ಗರ್ಭಿಣಿಯಾಗಲು ಸ್ವಂತ ಅಣ್ಣನೆ ಕಾರಣ’ ಎಂದು ಬಾಲಕಿ ಹೇಳಿಕೆ ನೀಡಿದ್ದಾಳೆ ಎಂದು ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ. ಬಾಲಕಿ ದೂರು ಆಧರಿಸಿ ಕೃತ್ಯ ಎಸಗಿದ 21 ವರ್ಷದ ಆರೋಪಿಯನ್ನು ಪೊಲೀಸರು ಬಂಧಿಸಿದ್ದಾರೆ.

ಕೊಪ್ಪಳ ಗ್ರಾಮೀಣ ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣವನ್ನು ಬಳಿಕ ಮಹಿಳಾ ಪೊಲೀಸ್ ಠಾಣೆಗೆ ವರ್ಗಾಯಿಸಿ ತನಿಖೆ ನಡೆಸಲಾಗುತ್ತಿದೆ. ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದ್ದು, ಪೋಕ್ಸೊ ಕಾಯ್ದೆಯಡಿ ಪ್ರಕರಣ ದಾಖಲಾಗಿದೆ.

ಮಕ್ಕಳ ಪತ್ತೆ ಹಚ್ಚಿ ಡಿಜಿಪಿಗೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಮಕ್ಕಳ ನಾಪತ್ತೆ ಪ್ರಕರಣಗಳಿಗೆ ಸಂಬಂಧಿಸಿದಂತೆ ಕಠಿಣ ಕ್ರಮ ಕೈಗೊಳ್ಳುವ ಮೂಲಕ ಆದ್ಯತೆ ಮೇರೆಗೆ ಮಕ್ಕಳನ್ನು ಪತ್ತೆಹಚ್ಚಲು ಕ್ರಮ ಕೈಗೊಳ್ಳಬೇಕು ಎಂದು ರಾಜ್ಯ ಪೊಲೀಸ್ ಮಹಾನಿರ್ದೇಶಕರಿಗೆ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ ಸೂಚನೆ ನೀಡಿದೆ.

ಅಕ್ಟೋಬರ್ 28ರಂದು ‘ಪ್ರಜಾವಾಣಿ’ಯಲ್ಲಿ ಪ್ರಕಟಗೊಂಡಿದ್ದ ‘ನಾಪತ್ತೆ ಪ್ರಕರಣ: ಬಾಲಕಿಯರೇ ಅಧಿಕ’ ಎಂಬ ಶೀರ್ಷಿಕೆಯ ವರದಿ ಆಧರಿಸಿ ಆಯೋಗದ ಅಧ್ಯಕ್ಷ ಶಶಿಧರ ಕೋಸಂಬೆ ಸ್ವಯಂ ಪ್ರೇರಿತ ಪ್ರಕರಣ ದಾಖಲಿಸಿಕೊಂಡು, ಇಲಾಖೆಯು ಕೈಗೊಂಡ ಮತ್ತು ಕೈಗೊಳ್ಳಬಹುದಾದ ಕ್ರಮಗಳ ಬಗ್ಗೆ ಮಾಹಿತಿಯನ್ನು ಏಳು ದಿನದೊಳಗೆ ಸಲ್ಲಿಸುವಂತೆ ಕೋರಿದ್ದಾರೆ.

ದಲಿತರಿಗೆ ಸಿ.ಎಂ ಸ್ಥಾನ: ಸತೀಶ ಮನೆ ಎದುರು ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಲಿತ ಸಮುದಾಯದವರಿಗೆ ಮುಖ್ಯಮಂತ್ರಿ ಸ್ಥಾನ ನೀಡಬೇಕೆಂದು ಆಗ್ರಹಿಸಿ ಆದಿ ಜಾಂಬವ ಸಂಘಟನೆಯ ಸದಸ್ಯರು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಅವರ ಸರ್ಕಾರಿ ನಿವಾಸದ ಎದುರು ಗುರುವಾರ ಪ್ರತಿಭಟನೆ ನಡೆಸಿದರು.

ದಶಕಗಳಿಂದ ದಲಿತರು ಕಾಂಗ್ರೆಸ್ ಪಕ್ಷಕ್ಕೆ ನಿಷ್ಠರಾಗಿದ್ದಾರೆ. ಆದರೆ, ಮುಖ್ಯಮಂತ್ರಿ ಸ್ಥಾನ ನೀಡದೆ ನಿರ್ಲಕ್ಷ್ಯ ಮಾಡಲಾಗುತ್ತಿದೆ. ಸಿದ್ದರಾಮಯ್ಯ ಅವರನ್ನು ಮುಖ್ಯಮಂತ್ರಿ ಸ್ಥಾನದಿಂದ ಬದಲಾಯಿಸಿದರೆ ದಲಿತರಿಗೆ ಆ ಸ್ಥಾನ ಬಿಟ್ಟುಕೊಡಬೇಕು ಎಂದು ಪ್ರತಿಭಟನಕಾರರು ಆಗ್ರಹಿಸಿದರು.

ಸತೀಶ ಜಾರಕಿಹೊಳಿ ಅವರೇ ಬಂದು ಪ್ರತಿಭಟನಕಾರರಿಂದ ಮನವಿ ಸ್ವೀಕರಿಸಿದರು.

ಸಂಘಟನೆಯ ಬೇಡಿಕೆಯನ್ನು ವರಿಷ್ಠರ ಗಮನಕ್ಕೆ ತರಲಾಗುವುದು ಎಂದೂ ಅವರು ಹೇಳಿದರು.

ಕೆಪಿಎಸ್‌ಸಿ: ಅಧ್ಯಕ್ಷಗೆ ದಿಗ್ಬಂಧನ

• ರಾಜೇಶ್ ರೈ ಚಟ್ಲ

ಬೆಂಗಳೂರು: ಒಳ ಮೀಸಲಾತಿ ಅನ್ವಯಿಸದೇ ನೇಮಕಾತಿ ಪ್ರಕ್ರಿಯೆ ನಡೆಸಿಯೇ ತೀರುವ ಹಟಕ್ಕೆ ಬಿದ್ದ ಕರ್ನಾಟಕ ಲೋಕಸೇವಾ ಆಯೋಗದ ಅಧ್ಯಕ್ಷ ಶಿವಶಂಕರಪ್ಪ ಸಾಹುಕಾರ ಅವರಿಗೆ ಸಭಾ ಕೊಠಡಿಯಲ್ಲೇ ದಿಗ್ಬಂಧನ ಹಾಕಿದ ಪ್ರಸಂಗ ನಡೆದಿದೆ.

ಹಿಂದೆ ಹೊರಡಿಸಿದ್ದ ನೇಮಕಾತಿ ಅಧಿಸೂಚನೆಗಳು ತಿದ್ದುಪಡಿಯಾಗಿದ್ದರೆ, ಅವುಗಳನ್ನು ರದ್ದುಪಡಿಸಿ, ಪರಿಶಿಷ್ಟ ಜಾತಿಯಲ್ಲಿ ಒಳ ಮೀಸಲಾತಿ ಕಲ್ಪಿಸಿ ಮರು ಅಧಿಸೂಚನೆ ಹೊರಡಿಸಬೇಕೆಂದು ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ. ಮೋಟಾರು ವಾಹನ ನಿರೀಕ್ಷಕ ಮತ್ತು ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಹುದ್ದೆಗಳ ನೇಮಕಾತಿ ಅಧಿಸೂಚನೆಗಳು ತಿದ್ದುಪಡಿಯಾಗಿದ್ದವು.

ಎರಡೂ ಹುದ್ದೆಗಳಿಗೆ ಹೊರಡಿಸಿದ್ದ ನೇಮಕಾತಿ ಅಧಿಸೂಚನೆಗಳಿಗೆ ತಿದ್ದುಪಡಿ ಆಗಿರುವುದನ್ನು ಮರೆಮಾಚಿ, ಈ ನೇಮಕಾತಿ ಪ್ರಕ್ರಿಯೆಯನ್ನು ‘ವಿಶೇಷ ಪ್ರಕರಣ’ವೆಂದು ಮುಂದುವರಿಸಲು ಅಧ್ಯಕ್ಷ ಮತ್ತು ಕಾರ್ಯದರ್ಶಿ ಆರ್. ವಿಶಾಲ್ ಅವರು ಸರ್ಕಾರದಿಂದ ಅನುಮತಿ ಪಡೆದಿದ್ದಾರೆಂದು ಆಯೋಗದ ಸದಸ್ಯರು ಕೆರಳಿ ಕೆಂಡವಾಗಿದ್ದರು ಎಂದು ಗೊತ್ತಾಗಿದೆ.

ಈ ವಿಷಯ ಅ. 28ರಂದು ನಡೆದ ಆಯೋಗದ ಸಭೆಯಲ್ಲಿ ಚರ್ಚೆಗೆ ಬಂದು ಗದ್ದಲ ಉಂಟಾಗುತ್ತಿದ್ದಂತೆ, ಸಭೆಯನ್ನು ಅರ್ಧದಲ್ಲಿಯೇ ಮೊಟಕುಗೊಳಿಸಲು ಅಧ್ಯಕ್ಷರು ಮುಂದಾದರು. ಆಗ, ಸಾಹುಕಾರ ಅವರನ್ನು ಸಭಾ ಕೊಠಡಿಯಲ್ಲಿಯೇ ಕೂಡಿಹಾಕಿದ ಘಟನೆಯೂ ನಡೆದಿದೆ ಎಂದು ಮೂಲಗಳು ತಿಳಿಸಿವೆ.

‘ಸಚಿವ ಸಂಪುಟ ಸಭೆಯ ನಿರ್ಣಯಕ್ಕೆ ಪೂರಕವಾಗಿ ಆಯೋಗದ ಸಭೆಯಲ್ಲಿಯೂ ನಿರ್ಣಯ ತೆಗೆದುಕೊಳ್ಳಲಾಗಿದೆ. ಬಳಿಕ, ನಿರ್ಣಯವನ್ನು ತಿದ್ದುಪಡಿ ಮಾಡಿ, ಈ ಎರಡೂ ಹುದ್ದೆಗಳ ನೇಮಕಾತಿ ಪ್ರಕ್ರಿಯೆ ಮುಂದುವರಿಸಲು ಅನುಮತಿ ಪಡೆಯಲಾಗಿದೆ. ಅಧ್ಯಕ್ಷ ಮತ್ತು ಕಾರ್ಯದರ್ಶಿಯ ಈ ವರ್ತನೆಗೆ ಯಾವುದೇ ಕಾರಣಕ್ಕೂ ಅವಕಾಶ ನೀಡುವುದಿಲ್ಲ. ತಪ್ಪು ಮಾಹಿತಿ ನೀಡಿರುವುದನ್ನು ಒಪ್ಪಿಕೊಂಡು, ಸರ್ಕಾರಕ್ಕೆ ಬರೆದಿರುವ ಪತ್ರವನ್ನು ವಾಪಸ್ ಪಡೆಯಲೇಬೇಕು. ಅಲ್ಲದೆ, ಈ ಎರಡೂ ಹುದ್ದೆಗಳಿಗೆ ಮರು ಅಧಿಸೂಚನೆ ಹೊರಡಿಸಬೇಕು ಎಂದು ಸದಸ್ಯರು ಪಟ್ಟು ಹಿಡಿದಿದ್ದಾರೆ’ ಎಂದೂ ಮೂಲಗಳು ಹೇಳಿವೆ.

ಆಯೋಗದ ಸದಸ್ಯರ ಗಮನಕ್ಕೆ ತಾರದೆ ಅ. 6ರಂದು ಸರ್ಕಾರಕ್ಕೆ ಪತ್ರ ಬರೆದಿದ್ದ ಕೆಪಿಎಸ್‌ಸಿ ಕಾರ್ಯದರ್ಶಿ, ‘ವಿಶೇಷ ಪ್ರಕರಣ’ವೆಂದು ಪರಿಗಣಿಸಿ ಈ ಎರಡೂ ಹುದ್ದೆಗಳ ನೇಮಕಾತಿ ಪ್ರಕ್ರಿಯೆ ಮುಂದುವರಿಸಲು ಅನುಮತಿ ಕೋರಿದ್ದರು. ಆಯೋಗದ ಸಭೆಯ ನಿರ್ಣಯವನ್ನು ಅಧ್ಯಕ್ಷರ ನಿರ್ದೇಶನದಂತೆ ತಿದ್ದುಪಡಿ ಎರಡೂ ಹುದ್ದೆಗಳ ನೇಮಕಾತಿ ಪ್ರಕ್ರಿಯೆ ಮುಂದುವರಿಸಲು ಈ ಪತ್ರ ಬರೆದಿರುವುದಾಗಿ ಕಾರ್ಯದರ್ಶಿಯು ಸದಸ್ಯರಿಗೆ ಸ್ಪಷ್ಟನೆ ನೀಡಿದ್ದರು. ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರನ್ನೂ ಭೇಟಿ ಮಾಡಿ ಈ ಹುದ್ದೆಗಳ ನೇಮಕಾತಿ ಮುಂದುವರಿಸಲು ಅನುಮತಿ ನೀಡುವಂತೆ ಒತ್ತಡ ಹೇರಲಾಗಿತ್ತು ಎಂದು ಆರೋಪಿಸಲಾಗಿದೆ. ಕೆಪಿಎಸ್‌ಸಿ ಕಾರ್ಯದರ್ಶಿಗೆ ಇದೇ ಅ. 9ರಂದು ಪತ್ರ ಬರೆದಿರುವ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ ಕಾರ್ಯದರ್ಶಿ, ‘ಈ ಎರಡೂ ಹುದ್ದೆಗಳ ನೇಮಕಾತಿ ಪ್ರಕ್ರಿಯೆ ಮುಂದುವರಿಸಲು ಮುಖ್ಯಮಂತ್ರಿಯ ಅನುಮೋದನೆ ಅನ್ವಯ ಅನುಮತಿ ನೀಡಲಾಗಿದೆ’ ಎಂದು ತಿಳಿಸಿದ್ದಾರೆ.

ಎಂವಿಐ ಮತ್ತು ಎಇಇ ಹುದ್ದೆಗಳ ನೇಮಕಾತಿ ಪ್ರಕ್ರಿಯೆ ಮುಂದುವರಿಸುವುದಕ್ಕೆ ಯಾವುದೇ ಕಾರಣಕ್ಕೂ ಅವಕಾಶ ನೀಡುವುದಿಲ್ಲ ಎಂದು ಬಹುತೇಕ ಸದಸ್ಯರು ತೀರ್ಮಾನ ತೆಗೆದುಕೊಂಡಿರುವುದರಿಂದ ನ. 4ರಂದು ನಡೆಯಬೇಕಿದ್ದ ಆಯೋಗದ ಸಭೆಯೇ ನಡೆದಿಲ್ಲ ಎಂದೂ ಕೆಪಿಎಸ್‌ಸಿ ಮೂಲಗಳು ತಿಳಿಸಿವೆ.

‘ಒಳ ಮೀಸಲು ವಂಚಿಸಲು ಅವಕಾಶ ಕೊಡುವುದಿಲ್ಲ’



‘ಎಂವಿಐ ಮತ್ತು ಎಇಇ ಹುದ್ದೆಗಳ ನೇಮಕಾತಿಯ ಅಧಿಸೂಚನೆ ತಿದ್ದುಪಡಿ ಆಗಿರುವುದನ್ನು ಮರೆಮಾಚಲಾಗಿದೆ. ಅಲ್ಲದೆ, ಸರ್ಕಾರಕ್ಕೆ ತಪ್ಪು ಮಾಹಿತಿ ನೀಡಿ, ಈ ಹುದ್ದೆಗಳಿಗೆ ನೇಮಕಾತಿ ಮುಂದುವರೆಸಲು ಕೆಪಿಎಸ್‌ಸಿ ಅಧ್ಯಕ್ಷ ಮತ್ತು ಕಾರ್ಯದರ್ಶಿ ಅನುಮತಿ ಪಡೆದಿದ್ದಾರೆ. ಸಂಪುಟ ಸಭೆಯ ತೀರ್ಮಾನವನ್ನು ಉಲ್ಲಂಘಿಸಿ ಮತ್ತು ಸಮರ್ಪಕ ಮಾಹಿತಿ ನೀಡದೆ ಮುಖ್ಯಮಂತ್ರಿಯಿಂದ ಅನುಮೋದನೆ ಪಡೆಯಲಾಗಿದೆ. ಒಳ ಮೀಸಲಾತಿಯಿಂದ ಪರಿಶಿಷ್ಟ ಜಾತಿಯ ಕೆಲವು ವರ್ಗದ ಅಭ್ಯರ್ಥಿಗಳಿಗೆ ಸಿಗಬೇಕಾದ ಅವಕಾಶವನ್ನು ವಂಚಿಸುವ ಮೂಲಕ ಮೀಸಲಾತಿ ವಿರೋಧಿ ಧೋರಣೆಯನ್ನು ಈ ಇಬ್ಬರೂ ಅನುಸರಿಸುತ್ತಿದ್ದಾರೆ. ಈ ನಡೆಗೆ ಯಾವುದೇ ಕಾರಣಕ್ಕೂ ಅವಕಾಶ ಕೊಡುವುದಿಲ್ಲ’ ಎಂದು ಮಾಜಿ ಸಚಿವ ಎಚ್. ಆಂಜನೇಯ ಹೇಳಿದರು.

ಏನಿದು ವಿವಾದ?

2024ರ ಅ. 28ಕ್ಕೂ ಮೊದಲು ನೇಮಕಾತಿಗೆ ಅಧಿಸೂಚನೆ ಹೊರಡಿಸಿ, ಆ ಅಧಿಸೂಚನೆಯಲ್ಲಿ ಅ. 28ರ ನಂತರ ಯಾವುದಾದರೂ ತಿದ್ದುಪಡಿ ಆಗಿದ್ದರೆ, ಅಂತಹ ಎಲ್ಲ ಅಧಿಸೂಚನೆಗಳನ್ನೂ ರದ್ದಪಡಿಸಬೇಕು. ಪರಿಶಿಷ್ಟ ಜಾತಿಯಲ್ಲಿ ಒಳ ಮೀಸಲಾತಿ ಅಳವಡಿಸಿಕೊಂಡು ಮರು ಅಧಿಸೂಚನೆ ಹೊರಡಿಸಿ ನೇಮಕಾತಿ ಪ್ರಕ್ರಿಯೆ ನಡೆಸಬೇಕು ಎಂದು 2025ರ ಸೆ. 4ರಂದು ಸರ್ಕಾರ ಆದೇಶ ಹೊರಡಿಸಿತ್ತು. ಈ ಆದೇಶದಂತೆ, ತಿದ್ದುಪಡಿಯಾದ ಎಲ್ಲ ಅಧಿಸೂಚನೆಗಳನ್ನು ರದ್ದುಪಡಿಸಿ ಮರು ಅಧಿಸೂಚನೆ ಹೊರಡಿಸಲು ಕೆಪಿಎಸ್‌ಸಿ ಸಭೆಯಲ್ಲಿ ನಿರ್ಣಯ ತೆಗೆದುಕೊಳ್ಳಲಾಗಿತ್ತು.

ಸಾರಿಗೆ ಇಲಾಖೆಯಲ್ಲಿನ ಮೋಟಾರು ವಾಹನ ನಿರೀಕ್ಷಕರು ಒಟ್ಟು 76 (ಈ ಪೈಕಿ 6 ಹೈ–ಕ) ಹುದ್ದೆಗಳಿಗೆ ನೇಮಕಾತಿಗೆ ಕೆಪಿಎಸ್‌ಸಿ 2024ರ ಮಾರ್ಚ್ 14ರಂದು ಅಧಿಸೂಚನೆ ಹೊರಡಿಸಿದ್ದರೂ, 2024ರ ಅ. 30ರಂದು ತಿದ್ದುಪಡಿ ಅಧಿಸೂಚನೆ ಹೊರಡಿಸಲಾಗಿದೆ. ಅದೇ ರೀತಿ ಲೋಕೋಪಯೋಗಿ ಇಲಾಖೆಯ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಒಟ್ಟು 42 (ಈ ಪೈಕಿ 12 ಹೈ–ಕ) ಹುದ್ದೆಗಳ ನೇಮಕಾತಿಗೆ 2024ರ ಸೆ. 18ರಂದು ಅಧಿಸೂಚನೆ ಹೊರಡಿಸಿದ್ದರೂ, 2025ರ ಜ. 20ರಂದು ತಿದ್ದುಪಡಿ ಅಧಿಸೂಚನೆ ಹೊರಸಲಾಗಿದೆ. ಸಚಿವ ಸಂಪುಟ ಸಭೆಯ ನಿರ್ಣಯದಂತೆ, ಈ ಎರಡೂ ತಿದ್ದುಪಡಿ ಅಧಿಸೂಚನೆಗಳನ್ನು ರದ್ದುಪಡಿಸಲು ಕೆಪಿಎಸ್‌ಸಿ ನಿರ್ಣಯ ತೆಗೆದುಕೊಂಡಿತ್ತು.

‘ಸಂಪನ್ಮೂಲ ಕ್ರೋಡೀಕರಣ ಸಮಿತಿ’ಯಿಂದ ಸರ್ಕಾರಕ್ಕೆ ಶಿಫಾರಸು

‘ಭೂ ಸ್ವತ್ತು ನಗದೀಕರಿಸಿ ಆದಾಯ ಹೆಚ್ಚಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಗರ ಪ್ರದೇಶಗಳಲ್ಲಿನ ಭೂ ಸ್ವತ್ತುಗಳನ್ನು ನಗದೀಕರಿಸುವ ಮೂಲಕ ಆದಾಯ ಗಳಿಕೆ ಸಾಮರ್ಥ್ಯವನ್ನು ಹೆಚ್ಚಿಸಬಹುದು’ ಎಂದು ನಿವೃತ್ತ ಐಎಎಸ್ ಅಧಿಕಾರಿ ಕೆ.ಪಿ. ಕೃಷ್ಣನ್ ನೇತೃತ್ವದ ‘ಸಂಪನ್ಮೂಲ ಕ್ರೋಡೀಕರಣ ಸಮಿತಿ’ಯು ರಾಜ್ಯ ಸರ್ಕಾರಕ್ಕೆ ಶಿಫಾರಸು ಮಾಡಿದೆ.

ಸಮಿತಿಯು ಕೈಗೊಂಡ ಸಮಗ್ರ ವಿಶ್ಲೇಷಣೆ ಮತ್ತು ಶಿಫಾರಸುಗಳ ವರದಿಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಗುರುವಾರ ಸಲ್ಲಿಸಿತು.

ತೆರಿಗೆಯೇತರ ಆದಾಯ ಮತ್ತು ಆಸ್ತಿ ನಗದೀಕರಣದ ಮೇಲ್ವಿಚಾರಣೆ ಮಾಡಲು ಆರ್ಥಿಕ ಇಲಾಖೆಯಲ್ಲಿ ಆರ್ಥಿಕ ನೀತಿ ವಿಭಾಗ ರಚಿಸಬೇಕು ಎಂದೂ ಸಮಿತಿ ಸಲಹೆ ನೀಡಿದೆ.

ದೇಶದ ಇತರೆ ರಾಜ್ಯಗಳಿಗೆ ಹೋಲಿಸಿದರೆ ಕರ್ನಾಟಕವು ಅತ್ಯುತ್ತಮ ಆರ್ಥಿಕ ಬೆಳವಣಿಗೆ ಹೊಂದಿದೆ. ರಾಜ್ಯದ ಒಟ್ಟು ರಾಜಸ್ವ ಸ್ವೀಕೃತಿಗಳಲ್ಲಿ ಸ್ವಂತ ತೆರಿಗೆ ಪಾಲು ಶೇ 60ರಿಂದ ಶೇ 70 ರಷ್ಟಿದೆ. ವಾಣಿಜ್ಯ, ಅಬಕಾರಿ, ನೋಂದಣಿ ಮತ್ತು ಮುದ್ರಾಂಕ, ಮೋಟಾರು ವಾಹನ ತೆರಿಗೆಗಳು ರಾಜಸ್ವದ ಪ್ರಮುಖ ಸ್ವೀಕೃತಿಗಳಾಗಿದ್ದು, ರಾಜ್ಯದ ಸ್ವಂತ ತೆರಿಗೆಯಾಗಿದೆ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಆದಾಯ ಹೆಚ್ಚಿಸುವಲ್ಲಿನ ಪ್ರಮುಖ ಸವಾಲುಗಳನ್ನು ಸಮಿತಿಯು ವರದಿಯಲ್ಲಿ ಪಟ್ಟಿ ಮಾಡಿದೆ. ರಾಜ್ಯದ ತೆರಿಗೆಯೇತರ ಆದಾಯ ಕಡಿಮೆ ಇದೆ. ಬಳಕೆದಾರರ ಶುಲ್ಕಗಳು ಹಾಗೂ ಸರ್ಕಾರಿ ಸ್ವತ್ತುಗಳಿಂದ, ಗುತ್ತಿಗೆ ಮತ್ತು ನಗದೀಕರಣದಿಂದ ಹೆಚ್ಚಿನ ರಾಜಸ್ವ ಸೃಜಿಸಲು ಅವಕಾಶಗಳಿವೆ. ಆಸ್ತಿ ದತ್ತಾಂಶಗಳ ಉತ್ತಮ ನಿರ್ವಹಣೆ ಮತ್ತು ಸರ್ಕಾರಿ ಆಸ್ತಿಗಳ ವ್ಯವಸ್ಥಿತ ಸಮೀಕ್ಷೆ ಮಾಡಬೇಕಾದ ಅಗತ್ಯವಿದೆ.

ಮಾರ್ಗಸೂಚಿ ದರಗಳು ಮತ್ತು ಆಸ್ತಿ ತೆರಿಗೆಗಳ ಪರಿಷ್ಕರಣೆಯಿಂದಾಗಿ ಸ್ಥಳೀಯ ಸಂಸ್ಥೆಗಳು ರಾಜಸ್ವ ಸೃಜಿಸಲು ಅವಕಾಶವಿದೆ ಎಂದೂ ವರದಿಯಲ್ಲಿದೆ.

‘ಮೂಲಸೌಕರ್ಯ, ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರಗಳಲ್ಲಿ ಬೆಳವಣಿಗೆಯನ್ನು ಉತ್ತೇಜಿಸಲು ಅಗತ್ಯವಾದ ಅನುದಾನ ಮೀಸಲಿಡಬೇಕು’ ಎಂದು ಸಲಹೆ ನೀಡಿರುವ ಸಮಿತಿ, ವೆಚ್ಚವನ್ನು ಪರಿಣಾಮಕಾರಿಯಾಗಿ ನಿರ್ವಹಿಸುವ ಅಗತ್ಯದ ಬಗ್ಗೆಯೂ ವರದಿಯಲ್ಲಿ ವಿವರಿಸಿದೆ.

ರಾಜ್ಯದ ಸಮಗ್ರ ಮತ್ತು ಸುಸ್ಥಿರ ಆರ್ಥಿಕ ಬೆಳವಣಿಗೆಯನ್ನು ಉತ್ತೇಜಿಸಲು ರಾಜ್ಯದ ರಾಜಸ್ವ ಸಂಗ್ರಹಣೆಯಲ್ಲಿ ವ್ಯವಸ್ಥಿತ ಮತ್ತು ಕ್ರಮಬದ್ಧ ಸುಧಾರಣೆಗಳು ಅತೀ ಅಗತ್ಯವಾಗಿದೆ ಎಂದೂ ಸಮಿತಿ ಪ್ರತಿಪಾದಿಸಿದೆ.

ರಾಜ್ಯದ ಆರ್ಥಿಕ ಪರಿಸ್ಥಿತಿ ಮತ್ತು ಸುಸ್ಥಿರ ಆರ್ಥಿಕ ಬೆಳವಣಿಗೆಯನ್ನು ಬಲಪಡಿಸುವ ಉದ್ದೇಶದಿಂದ 2024ರ ಆಗಸ್ಟ್‌ನಲ್ಲಿ ರಾಜ್ಯ ಸರ್ಕಾರ ಈ ಸಮಿತಿಯನ್ನು ರಚಿಸಿದೆ.

ತೆರಿಗೆ ವ್ಯಾಪ್ತಿ ವಿಸ್ತರಿಸಿ: ಶಿಫಾರಸು

- ತೆರಿಗೆ ಸುಧಾರಣೆ ಮೂಲಕ ಕೆಲವು ಪ್ರಮುಖ ರಾಜಸ್ವ ಮೂಲಗಳ ಮೇಲಿನ ಅತಿಯಾದ ಅವಲಂಬನೆಯನ್ನು ಕಡಿಮೆ ಮಾಡಬೇಕು. ತೆರಿಗೆ ವ್ಯಾಪ್ತಿ ವಿಸ್ತರಿಸಬೇಕು
- ಅಬಕಾರಿ ಇಲಾಖೆಯಲ್ಲಿ ಪಾರದರ್ಶಕತೆ ಮತ್ತು ದಕ್ಷತೆ ಹೆಚ್ಚಿಸಲು ಹರಾಜು ಆಧಾರಿತ ಡಿಜಿಟಲ್ ಸನ್ನದು ನೀಡಬೇಕು
- ಸಾರ್ವಜನಿಕ ಸೇವೆಗಳಲ್ಲಿ ಬಳಕೆದಾರ ಶುಲ್ಕಗಳನ್ನು ತರ್ಕಬದ್ಧಗೊಳಿಸಬೇಕು. ಹಂತ ಹಂತವಾಗಿ ಪ್ರಮಾಣೀಕೃತ ಬಿಲ್ಲಿಂಗ್ ವ್ಯವಸ್ಥೆ ತರಬೇಕು. ಹಣದುಬ್ಬರಕ್ಕೆ ಅನುಗುಣವಾಗಿ ಬಳಕೆದಾರರ ಶುಲ್ಕಗಳನ್ನು ಸ್ವಯಂಚಾಲಿತವಾಗಿ ಪರಿಷ್ಕರಿಸುವ ವ್ಯವಸ್ಥೆ ರೂಪಿಸಬೇಕು
- ವೈಜ್ಞಾನಿಕ ಆಸ್ತಿ ಮೌಲ್ಯಮಾಪನ, ಸಾರ್ವಜನಿಕ-ಖಾಸಗಿ ಪಾಲುದಾರಿಕೆಗಳ ಅಡಿಯಲ್ಲಿ ಗುತ್ತಿಗೆಯನ್ನು ವಿಸ್ತರಿಸಬೇಕು

ಶುಕ್ರವಾರ, ನವೆಂಬರ್ 7, 2025| ₹ 7.00
prajavani.net prajavani
www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ರೇಸ್‌ನಲ್ಲಿ ಸ್ಮೃತಿ
ಭಾರತ ತಂಡದ ಉಪನಾಯಕಿ ಸ್ಮೃತಿ ಮಂದಾನ ಅವರು ಐಸಿಸಿಯ ಅಕ್ಟೋಬರ್ ತಿಂಗಳ ಆಟಗಾರ್ತಿ ಪ್ರಶಸ್ತಿಗೆ ನಾಮ ನಿರ್ದೇಶನಗೊಂಡಿದ್ದಾರೆ

ಭಕ್ತಿ...
ಪ್ರಯಾಗರಾಜ್‌ನ ಯಮುನಾ ನದಿ ತೀರದಲ್ಲಿ 'ಕಾರ್ತಿಕ ಹುಣ್ಣಿಮೆ' ಅಂಗವಾಗಿ ಮಹಿಳೆಯೊಬ್ಬರು ಧಾರ್ಮಿಕ ವಿಧಿಗಳನ್ನು ನೆರವೇರಿಸಿದರು

Flipkart

ನಿಮ್ಮ ಮನಸ್ಸಿಗೆ ಇಷ್ಟವಾಗಲು ಸ್ಮಾರ್ಟ್‌ಫೋನ್‌ನಲ್ಲಿ ಏನಿರಬೇಕು?

A: ಎಲ್ಲಾ ಆಯಾಮದಿಂದಲೂ 4K ವಿಡಿಯೋ ಸೆರೆಹಿಡಿಯುವ ಕ್ಯಾಮೆರಾ

B: ಚಾರ್ಜಿಂಗ್ ಪಾಯಿಂಟ್ ಕಾಣಿಸಿದ್ರೂ ಚಾರ್ಜ್ ಹಾಕದೇ ಮುಂದೆ ಸಾಗಲು ಅನುವು ಮಾಡಿಕೊಡುವ ಬ್ಯಾಟರಿ

C: ನಿಮ್ಮ ಯೋಚನೆಗಿಂತಲೂ ವೇಗವಾಗಿ ಕೆಲಸ ಮಾಡುವ ಪ್ರೊಸೆಸರ್

D: ವೀಗನ್ ಶೈಲಿಯ ಪ್ರೀಮಿಯಂ ಲೆದರ್ ಬ್ಯಾಕ್

ಇದನ್ನು ಖರೀದಿಸಲೋ ಅಥಾ ಅದನ್ನೋ ಅಂತ ಏಕೆ ಯೋಚಿಸಬೇಕು,
ಇದು ಮತ್ತು ಅದು ಎರಡನ್ನೂ ಪಡೆಯುವ ಅವಕಾಶವಿರುವಾಗ!

ಪರಿಚಯಿಸುತ್ತಿದ್ದೇವೆ

moto g 67 POWER 5G

50MP Sony LYTIA™ 600 ಕ್ಯಾಮೆರಾ ಮತ್ತು 7000mAH ಬ್ಯಾಟರಿ ಜೊತೆಗೆ

ಮಾರಾಟದ ಪ್ರಾರಂಭ: ನವೆಂಬರ್ 12 ರಿಂದ

Flipkart ನಲ್ಲಿ

ಕೇವಲ **₹14,999*** ಕ್ಕೆ

ಷರತ್ತುಗಳು ಮತ್ತು ನಿಬಂಧನೆಗಳು ಅನ್ವಯಿಸುತ್ತವೆ*

ಹೊಚ್ಚಹೊಸ moto g67 POWER 5G ಗೆಲ್ಲಲು ಆಟವಾಡಿ

moto g67 POWER 5G

LYTIA

Snapdragon 7s Gen 2

ನ ಶಕ್ತಿಯ ಜೊತೆಗೆ

ಮತ ಕಳವು ವಿರುದ್ಧ ನಾಳೆ ಅಭಿಯಾನ

ಅಭಿಯಾನ ಮುಂದುವರಿಸಲು ಕಾಂಗ್ರೆಸ್ ನಿರ್ಧಾರ

• 5 ಕೋಟಿ ಜನರಿಂದ ಸಹಿ ಸಂಗ್ರಹಿಸಿ ರಾಷ್ಟ್ರಪತಿಗೆ ಹಸ್ತಾಂತರ

ನವದೆಹಲಿ (ಪಿಟಿಐ): 'ಮತಕಳ್ಳರೇ, ಅಧಿಕಾರದ ಗದ್ದುಗೆ ಬಿಡಿ' ಎಂಬ ಘೋಷಣೆಯೊಂದಿಗೆ ಬಿಜೆಪಿ ವಿರುದ್ಧ ಆರಂಭವಾದ ಅಭಿಯಾನವು ಇದೇ ನವೆಂಬರ್ 8ಕ್ಕೆ ಮೊದಲ ವರ್ಷ ತುಂಬಲಿದ್ದು, ದೇಶದಾದ್ಯಂತ ರಾಜ್ಯದ ಕೇಂದ್ರ ಕಚೇರಿಗಳಲ್ಲಿ ಬೃಹತ್ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಕಾಂಗ್ರೆಸ್ ಗುರುವಾರ ತಿಳಿಸಿದೆ.

ಈ ಕುರಿತು ಮಾಹಿತಿ ನೀಡಿದ ಎಐಸಿಸಿ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಕೆ.ಸಿ.ವೇಣುಗೋಪಾಲ್, 'ಚುನಾವಣಾ ಆಯೋಗದ ಜೊತೆ ಸೇರಿಕೊಂಡು ಬಿಜೆಪಿಯು ನಡೆಸಿದ ಮತಕಳವಿನ ವಿರುದ್ಧ ವ್ಯಕ್ತವಾದ ಜನಾಕ್ರೋಶ ಹಾಗೂ ಅಸಮಾಧಾನದ ಕುರಿತಂತೆ ದೇಶದಾದ್ಯಂತ 5 ಕೋಟಿ ಜನರಿಂದ ಸಹಿ ಸಂಗ್ರಹಿಸಿದ್ದು, ರಾಷ್ಟ್ರಪತಿಯವರಿಗೆ ಹಸ್ತಾಂತರಿಸಲಾಗುವುದು' ಎಂದು ತಿಳಿಸಿದ್ದಾರೆ.

'ಹೋರಾಟದ ರೂಪುರೇಷೆ ಕುರಿತಂತೆ ಪಕ್ಷದ ಪ್ರಧಾನ ಕಾರ್ಯದರ್ಶಿಗಳು, ರಾಜ್ಯ ಘಟಕದ ಅಧ್ಯಕ್ಷರು, ಪದಾಧಿಕಾರಿಗಳು ಬುಧವಾರ ಸಭೆ ಸೇರಿ ಚರ್ಚೆ ನಡೆಸಿದ್ದರು. ಇದೇ ನವೆಂಬರ್ 8ರಂದು ಅಭಿಯಾನ ಒಂದು ವರ್ಷ ಪೂರೈಸಲಿದೆ. ಆ ಪ್ರಯುಕ್ತ ಪಕ್ಷದ ಎಲ್ಲ ರಾಜ್ಯ ಘಟಕಗಳ ನೇತೃತ್ವದಲ್ಲಿ ಕಾರ್ಯಕ್ರಮ ನಡೆಸಲು ನಿರ್ಧರಿಸಲಾಗಿದೆ. ಸಮಾರಂಭದಲ್ಲಿ ಪಕ್ಷದ ಹಿರಿಯ ನಾಯಕರು, ಪದಾಧಿಕಾರಿಗಳು ಭಾಗವಹಿಸುವ ಮೂಲಕ ಪ್ರಜಾಪ್ರಭುತ್ವವನ್ನು ಕಾಪಾಡುವ ಕಾಂಗ್ರೆಸ್ ಪಕ್ಷದ ಸಾಮೂಹಿಕ ಏಕತೆ ಹಾಗೂ ಧೃಡಸಂಕಲ್ಪವನ್ನು ಪ್ರದರ್ಶಿಸಲಿದ್ದಾರೆ' ಎಂದು ತಿಳಿಸಿದ್ದಾರೆ.

ಪ್ರಜಾಪ್ರಭುತ್ವದ ಪಾವಿತ್ರ್ಯ ಹಾಳು ಮಾಡುತ್ತಿರುವ ಚುನಾವಣಾ ಅಕ್ರಮದ ಕುರಿತಂತೆ ಕಾಂಗ್ರೆಸ್ ಪಕ್ಷವು ನಿರಂತರವಾಗಿ ಗಂಭೀರ ಕಳವಳವನ್ನು ವ್ಯಕ್ತಪಡಿಸಿದೆ

ಕೆ.ಸಿ.ವೇಣುಗೋಪಾಲ್, ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ

'ಮತ ಕಳವಿನ ಕುರಿತು ಪ್ರಬಲ ಸಾಕ್ಷಿಯಾಗಿ ದೇಶದಾದ್ಯಂತ 5 ಕೋಟಿ ಸಹಿ ಸಂಗ್ರಹಿಸಲಾಗಿದೆ. ನಕಲಿ ಮತದಾರರ ಸೇರ್ಪಡೆಗೊಳಿಸಿ, ನಕಲಿ ಮತದಾನದ ಮೂಲಕ ಪ್ರಜಾಪ್ರಭುತ್ವದ ಹತ್ಯೆ ಮಾಡುತ್ತಿರುವ ಕುರಿತು ಜನರ ಆಳವಾದ ಕಳಕಳಿಯೂ ಕಾಂಗ್ರೆಸ್ ಪಕ್ಷವು ನಡೆಸಿದ ಅಭಿಯಾನದ ಮೂಲಕ ವ್ಯಕ್ತವಾಗಿದೆ' ಎಂದು ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದ್ದಾರೆ.

'ಕಾರ್ಯಕ್ರಮ ಮುಕ್ತಾಯಗೊಂಡ ಬಳಿಕ ಸಂಗ್ರಹಿಸಿದ ಎಲ್ಲ ಸಹಿಗಳನ್ನು ಎಐಸಿಸಿ ಕೇಂದ್ರ ಕಚೇರಿಗೆ ಕಳುಹಿಸಿಕೊಡಲಾಗುತ್ತದೆ. ಇದಾದ ಬಳಿಕ ಮುಂದಿನ ಹಂತದ ಅಭಿಯಾನದಲ್ಲಿ ದೇಶದಾದ್ಯಂತ ನಾಗರಿಕರ ಮತ್ತಷ್ಟು ಸಹಿಗಳನ್ನು ಸಂಗ್ರಹಿಸಲಾಗುವುದು' ಎಂದು ವೇಣುಗೋಪಾಲ್ ತಿಳಿಸಿದ್ದಾರೆ.

'ಅಂತಿಮವಾಗಿ ಈ ಎಲ್ಲ ಸಹಿಗಳು ದೇಶದ ಕೋಟ್ಯಂತರ ಜನರ ಧ್ವನಿಯನ್ನು ಪ್ರತಿನಿಧಿಸುತ್ತವೆ. ಆ ಮೂಲಕ ಚುನಾವಣಾ ಅಕ್ರಮವನ್ನು ತಕ್ಷಣವೇ ತಡೆಯಬೇಕು ಎಂದು ರಾಷ್ಟ್ರಪತಿಯನ್ನು ಕೋರಲಿದ್ದೇವೆ' ಎಂದು ಹೇಳಿದ್ದಾರೆ.

ರೂಪದರ್ಶಿ ಫೋಟೊ ಪ್ರದರ್ಶನ–ಸ್ಪಷ್ಟನೆ

ಹರಿಯಾಣ ವಿಧಾನಸಭಾ ಚುನಾವಣೆಯಲ್ಲಿ ರಾಯ್ ವಿಧಾನಸಭಾ ಕ್ಷೇತ್ರದಲ್ಲಿ ಗೆಲ್ಲಲು ಬ್ರೆಜಿಲ್ ರೂಪದರ್ಶಿಯ ಚಿತ್ರವು 10 ಮತಗಟ್ಟೆಗಳಲ್ಲಿ 20 ಬಾರಿ ಕಾಣಿಸಿಕೊಂಡಿತ್ತು ಎಂದು ರಾಹುಲ್ ಗಾಂಧಿ ಬುಧವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಆರೋಪಿಸಿದ್ದರು.

ಈ ಕುರಿತು ಬ್ರೆಜಿಲ್‌ನ ರೂಪದರ್ಶಿ ಲಾರಿಸ್ಸಾ ಅವರು ವಿಡಿಯೊದ ಮೂಲಕ ಪ್ರತಿಕ್ರಿಯೆ ನೀಡಿದ್ದಾರೆ.

'ನನ್ನ ಹಳೆಯ ಫೋಟೊವನ್ನು ಬಳಸಲಾಗಿದೆ. ಅದು ನನಗೆ 18ರಿಂದ 20 ವರ್ಷ ಆಗಿದ್ದ ವೇಳೆ ತೆಗೆದ ಚಿತ್ರ. ಅದನ್ನು ಭಾರತದ ಚುನಾವಣೆಯಲ್ಲಿ ಏಕೆ ಬಳಸಲಾಗುತ್ತಿದೆ. ನನ್ನನ್ನು ಭಾರತೀಯಳು ಎಂಬಂತೆ ಬಿಂಬಿಸಲಾಗಿದೆ. ಇದೆಂಥ ಹುಚ್ಚಾಟ' ಎಂದು ಪೋರ್ಚುಗೀಸ್ ಭಾಷೆಯಲ್ಲಿ ಪ್ರತಿಕ್ರಿಯೆ ನೀಡಿದ್ದಾರೆ.

ಎಸ್‌ಐಆರ್ ವಿರುದ್ಧ ಬೀದಿಗಿಳಿದು ಹೋರಾಟ

ಚೆನ್ನೈ: 'ನೈಜ ಮತದಾರರನ್ನು ತೆಗೆದುಹಾಕುವ ದೃಷ್ಟಿಯಿಂದಲೇ, ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಗೆ (ಎಸ್‌ಐಆರ್)ಗೆ ಚುನಾವಣಾ ಆಯೋಗವು ಮುಂದಾಗಿದೆ' ಎಂದು ಡಿಎಂಕೆ ಆರೋಪಿಸಿದೆ.

ಈ ಪ್ರಕ್ರಿಯೆಯನ್ನು ತಕ್ಷಣವೇ ಸ್ಥಗಿತಗೊಳಿಸಬೇಕು ಎಂದು ಜಾತ್ಯತೀತ ಪ್ರಗತಿಪರ ಒಕ್ಕೂಟ(ಎಸ್‌ಪಿಎ) ಆಗ್ರಹಿಸಿದ್ದು, ರಾಜ್ಯದ 38 ಜಿಲ್ಲಾ ಕೇಂದ್ರ ಕಚೇರಿಗಳಲ್ಲಿ ನವೆಂಬರ್ 11ರಂದು ಬೃಹತ್ ಪ್ರತಿಭಟನೆ ನಡೆಸಲು ನಿರ್ಧರಿಸಲಾಗಿದೆ ಎಂದು ಘೋಷಿಸಿದೆ.

ಸುದ್ದಿ 2 ನಿಮಿಷ

ಅನಿಲ್ ಅಂಬಾನಿಗೆ ಇ.ಡಿ ಸಮನ್ಸ್

ನವದೆಹಲಿ (ಪಿಟಿಐ): ಹಣ ಅಕ್ರಮ ವರ್ಗಾವಣೆ ನಡೆಸಿದ ಆರೋಪದ ಮೇಲೆ ಜಾರಿ ನಿರ್ದೇಶನಾಲಯವು (ಇ.ಡಿ) ರಿಲಯನ್ಸ್ ಸಮೂಹ ಸಂಸ್ಥೆಯ ಅಧ್ಯಕ್ಷ ಅನಿಲ್ ಅಂಬಾನಿ ಅವರಿಗೆ ಹೊಸತಾಗಿ ಸಮನ್ಸ್ ಜಾರಿಗೊಳಿಸಿದೆ ಎಂದು ಮೂಲಗಳು ತಿಳಿಸಿವೆ.

ನವೆಂಬರ್ 14ರಂದು ವಿಚಾರಣೆಗೆ ಹಾಜರಾಗುವಂತೆ ನೋಟಿಸ್ ನೀಡಿದೆ. ಕಳೆದ ಆಗಸ್ಟ್ ತಿಂಗಳಲ್ಲಿಯೂ ತನಿಖಾ ಸಂಸ್ಥೆಯು 66 ವರ್ಷದ ಅನಿಲ್ ಅವರನ್ನು 10 ಗಂಟೆಗಳ ಕಾಲ ವಿಚಾರಣೆಗೆ ಒಳಪಡಿಸಿತ್ತು.

ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾಕ್ಕೆ(ಎಸ್‌ಬಿಐ) ₹2,929 ಕೋಟಿ ವಂಚನೆ ಮಾಡಿದ ಆರೋಪ ರಿಲಯನ್ಸ್ ಕಮ್ಯೂನಿಕೇಷನ್ ಲಿಮಿಟೆಡ್ (ಆರ್‌ಕಾಮ್) ಕಂಪನಿ ಮೇಲಿದೆ. ಈ ಸಂಬಂಧ ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆಯಡಿ ದಾಖಲಿಸಿರುವ ಪ್ರಕರಣದಲ್ಲಿ ವಿಚಾರಣೆಗೆ ಹಾಜರಾಗುವಂತೆ ನೋಟಿಸ್ ನೀಡಲಾಗಿದೆ. ಕಳೆದ ಬಾರಿಯಂತೆ ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆ (ಪಿಎಂಎಲ್‌ಎ) ಅಡಿಯಲ್ಲಿಯೇ ಹೇಳಿಕೆ ದಾಖಲಿಸಿಕೊಳ್ಳಲಿದೆ ಎಂದು ಮೂಲವು ತಿಳಿಸಿದೆ.

ಕೇಂದ್ರ ತನಿಖಾ ದಳ (ಸಿಬಿಐ) ಸಂಸ್ಥೆಯು ಆಗಸ್ಟ್ 21ರಂದು ದಾಖಲಿಸಿದ ಎಫ್‌ಐಆರ್ ಆಧರಿಸಿ ಇ.ಡಿ ತನಿಖೆ ನಡೆಸಿದೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಅನಿಲ್ ಅಂಬಾನಿ ಅವರಿಗೆ ಸೇರಿದ ಮುಂಬೈನ ಹಲವು ಸ್ಥಳಗಳ ಮೇಲೂ ಸಿಬಿಐ ಶೋಧ ನಡೆಸಿತ್ತು.

ಸಾರ್ವಜನಿಕ ವಲಯದ ಬ್ಯಾಂಕ್‌ಗಳಿಗೆ ಆರ್‌ಕಾಮ್ ₹ 40,000 ಕೋಟಿ ಸಾಲ ಬಾಕಿ ಇರಿಸಿಕೊಂಡಿದೆ. ಎಸ್‌ಬಿಐ ಒಂದಕ್ಕೇ ₹ 2,929 ಕೋಟಿ ನಷ್ಟ ಉಂಟು ಮಾಡಿದೆ ಎಂಬ ಆರೋಪ ಎಸ್‌ಬಿಐ ಸಲ್ಲಿಸಿರುವ ದೂರು ಆಧರಿಸಿ ಸಿಬಿಐ ದಾಖಲಿಸಿರುವ ಎಫ್‌ಐಆರ್‌ನಲ್ಲಿದೆ.

ಆರ್‌ಕಾಮ್ ಮತ್ತು ಅದರ ಸಹವರ್ತಿ ಕಂಪನಿಗಳಿಗೆ ಸೇರಿದ ನ₹ 7,500 ಕೋಟಿ ಮೌಲ್ಯದ ಆಸ್ತಿಗಳನ್ನು ಜಾರಿ ನಿರ್ದೇಶನಾಲಯವು ಇತ್ತೀಚೆಗೆ ಮುಟ್ಟುಗೋಲು ಹಾಕಿಕೊಂಡಿತ್ತು.

ಇರುವೆಗೆ ಹೆದರಿ ಮಹಿಳೆ ಆತ್ಮಹತ್ಯೆ

ಹೈದರಾಬಾದ್ (ಪಿಟಿಐ): ಮನುಷ್ಯನ ಭಯ ಆತನನ್ನು ಯಾವ ಹಂತಕ್ಕೆ ಬೇಕಾದರೂ ಕೊಂಡೊಯ್ಯಬಲ್ಲದು. ಕೆಲವೊಮ್ಮೆ ಅದೇ ಜೀವಕ್ಕೆ ಸಂಚಕಾರವನ್ನೂ ತರಬಲ್ಲದು. ಅಂಥದ್ದೇ ಘಟನೆ ತೆಲಂಗಾಣದಲ್ಲಿ ನಡೆದಿದ್ದು, ಇರುವೆಗಳ ಮೇಲಿನ ಭಯದಿಂದಾಗಿ ಮಹಿಳೆಯೊಬ್ಬರು ಆತ್ಮಹತ್ಯೆಗೆ ಶರಣಾಗಿದ್ದಾರೆ.

ಸಂಗಾರೆಡ್ಡಿ ಜಿಲ್ಲೆಯ ನಿವಾಸಿಯಾಗಿದ್ದ 25 ವರ್ಷದ ಮಹಿಳೆ ಇರುವೆಗಳನ್ನು ಕಂಡರೆ ಭಯಪಡುವ ಮಾನಸಿಕ ಸಮಸ್ಯೆಯಿಂದ (ಮೈರ್ಮೆಕೊಫೋಬಿಯಾ) ಬಳಲುತ್ತಿದ್ದರು. 2022ರಲ್ಲಿ ಮದುವೆಯಾಗಿದ್ದ ಅವರಿಗೆ 3 ವರ್ಷದ ಹೆಣ್ಣು ಮಗುವೂ ಇತ್ತು.

ನವೆಂಬರ್ 4ರಂದು ಮಹಿಳೆಯು, ಮನೆ ಶುಚಿಗೊಳಿಸಿದ ಬಳಿಕ ಮಗುವನ್ನು ಕರೆದುಕೊಂಡು ಹೋಗುವುದಾಗಿ ತಿಳಿಸಿ ಸಂಬಂಧಿಕರ ಮನೆಯಲ್ಲಿ ಮಗುವನ್ನು ಬಿಟ್ಟು ವಾಪಸಾಗಿದ್ದರು. ಆದರೆ, ಸಂಜೆ ಮಹಿಳೆಯ ಪತಿ ಮನೆಗೆ ಬಂದು ನೋಡುವಷ್ಟರಲ್ಲಿ ಆಕೆ ಮರಣಪತ್ರ ಬರೆದಿಟ್ಟು ನೇಣುಹಾಕಿಕೊಂಡಿದ್ದರು.

'ನನ್ನನ್ನು ಕ್ಷಮಿಸಿ, ಈ ಇರುವೆಗಳ ಜತೆಗೆ ಜೀವಿಸಲು ನನಗೆ ಸಾಧ್ಯವಾಗುತ್ತಿಲ್ಲ. ನನ್ನ ಮಗಳನ್ನು ಜೋಪಾನವಾಗಿ ನೋಡಿಕೊಳ್ಳಿ. ಅನ್ನಾವರಂ, ತಿರುಪತಿಗೆ ₹1,116 ಕಾಣಿಕೆ ಹಾಗೂ ಎಲ್ಲಮ್ಮಾ ದೇವಿಗೆ ಮಡಿಲಕ್ಕಿ ನೀಡುವ ಹರಕೆಗಳನ್ನು ಮರೆಯದಿರಿ' ಎಂದೂ ಮಹಿಳೆ ಡೆತ್‌ನೋಟ್‌ನಲ್ಲಿ ಬರೆದಿದ್ದಾರೆ. ಮನೆ ಶುಚಿಗೊಳಿಸುವಾಗ ಮಹಿಳೆ ಇರುವೆಗಳನ್ನು ನೋಡಿ, ಆತ್ಮಹತ್ಯೆ ಮಾಡಿಕೊಂಡಿರಬಹುದು ಎಂದು ಪೊಲೀಸರು ತಿಳಿಸಿದ್ದಾರೆ.

ರಾಜೀನಾಮೆ ನೀಡಿದ ಅಸ್ಸಾಂ ಸಿಐಸಿ

ಗುವಾಹಟಿ (ಪಿಟಿಐ): ಅಸ್ಸಾಂನ ಮುಖ್ಯ ಮಾಹಿತಿ ಆಯುಕ್ತ (ಸಿಐಸಿ) ಭಾಸ್ಕರ್ ಜ್ಯೋತಿ ಮಹಂತ ಅವರು ತಮ್ಮ ಸ್ಥಾನಕ್ಕೆ ಗುರುವಾರ ರಾಜೀನಾಮೆ ನೀಡಿದ್ದಾರೆ.

ಖ್ಯಾತ ಗಾಯಕ ಜುಬಿನ್ ಗರ್ಗ್ ಸಾವಿನ ಪ್ರಕರಣಕ್ಕೆ ಸಂಬಂಧಿಸಿದಂತೆ ಮಹಂತ ಅವರ ಕಿರಿಯ ಸಹೋದರ ಶ್ಯಾಮಕಾನು ಅವರನ್ನು ಬಂಧಿಸಲಾಗಿದೆ. ಶ್ಯಾಮಕಾನು ಅವರಿಗೆ ಸರ್ಕಾರ ನೀಡಿರುವ ಅನುದಾನದ ಮಾಹಿತಿ ಕೋರಿ ಆರ್‌ಟಿಐ ಅಡಿ ಅರ್ಜಿ ಸಲ್ಲಿಸಿದ ಬೆನ್ನಲ್ಲೇ ಈ ಬೆಳವಣಿಗೆ ನಡೆದಿದೆ.

ಅಸ್ಸಾಂನ ಮಾಜಿ ಡಿಜಿಪಿ ಕೂಡ ಆಗಿರುವ ಮಹಂತ ಅವರು ತಮ್ಮ ರಾಜೀನಾಮೆಯ ಕುರಿತು ಫೇಸ್‌ಬುಕ್‌ನಲ್ಲಿ ತಿಳಿಸಿದ್ದು, ಈಗಾಗಲೇ ರಾಜೀನಾಮೆ ಪತ್ರವನ್ನು ರಾಜ್ಯಪಾಲರಿಗೆ ಕಳುಹಿಸಿದ್ದಾಗಿ ಹೇಳಿದ್ದಾರೆ.

'ಖ್ಯಾತ ಗಾಯಕ ಜುಬಿನ್ ಗರ್ಗ್ ಸಾವಿನೊಂದಿಗೆ ಶ್ಯಾಮಕಾನು ಮಹಂತ ಹೆಸರು ತಳಕುಹಾಕಲಾಗಿದೆ. ಶ್ಯಾಮಕಾನು ಕುರಿತು ಯಾವುದೇ ಮಾಹಿತಿ ಕೇಳಿ ಯಾರಾದರೂ ಅರ್ಜಿ ಸಲ್ಲಿಸಿದರೆ, ಅವರ ಮನಸ್ಸಿನಲ್ಲಿ ಯಾವುದೇ ಅನುಮಾನ ಮೂಡಬಾರದು ಎಂಬ ಉದ್ದೇಶದಿಂದ ಈ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಎಂಬುದಾಗಿ ನನ್ನ ಆತ್ಮಸಾಕ್ಷಿ ಹೇಳುತ್ತಿತ್ತು' ಎಂದು ತಿಳಿಸಿದ್ದಾರೆ.

ಮತ ಬ್ಯಾಂಕ್ ರಾಜಕಾರಣಕ್ಕಾಗಿ ರಾಮನ ಮೇಲೆ ದ್ವೇಷ: ಪ್ರಧಾನಿ ಮೋದಿ ಆರೋಪ

ಬಿಹಾರ: ಶಾಂತಿಯುತ ಮತದಾನ

ಬಿಹಾರ ಪ್ರಜಾಮತ ಜನತಂತ್ರದ ಹಬ್ಬ
ವಿಧಾನಸಭಾ ಚುನಾವಣೆ - 2025

ಪಟ್ನಾ (ಪಿಟಿಐ): ಬಿಹಾರದ ಅರ್ಧದಷ್ಟು ಜನರು ಗುರುವಾರ ನಡೆದ ಮೊದಲ ಹಂತದ ಚುನಾವಣೆಯಲ್ಲಿ ಮತ ಚಲಾಯಿಸಿದರು. ಈ ಬಾರಿ ನಿತೀಶ್ ಕುಮಾರ್, ಲಾಲೂ, ರಾಬ್ಡಿ ದೇವಿ ಸ್ಪರ್ಧಿಸಿರಲಿಲ್ಲ.

ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ನಂತರ ಬಿಹಾರದಲ್ಲಿ ಒಟ್ಟು ಮತದಾರರ ಸಂಖ್ಯೆ 7.9 ಕೋಟಿಯಿಂದ 7.4 ಕೋಟಿಗೆ ಇಳಿಕೆಯಾಗಿದೆ.

ಪಟ್ನಾದಿಂದ 50 ಕಿ.ಮೀ ದೂರದಲ್ಲಿರುವ ಭಕ್ತಿಯಾರ್‌ಪುರದ ಮತಗಟ್ಟೆಯಲ್ಲಿ ನಿತೀಶ್ ಕುಮಾರ್ ಮೊದಲಿಗರಾಗಿ ಹಕ್ಕು ಚಲಾಯಿಸಿದರು. ಲಾಲೂ ಮತ್ತು ಕುಟುಂಬ ಸದಸ್ಯರು ಪಟ್ನಾದ ಮತಗಟ್ಟೆಯಲ್ಲಿ ಮತದಾನ ಮಾಡಿದರು. ಬೆಗೂಸರಾಯ್‌ನಲ್ಲಿ ಗರಿಷ್ಠ ಪ್ರಮಾಣದ ಹಾಗೂ ಶೇಖಪುರದಲ್ಲಿ ಕನಿಷ್ಠ ಪ್ರಮಾಣದಲ್ಲಲಿ ಮತದಾನ ದಾಖಲಾಗಿದೆ.

ಮೊದಲ ಹಂತದ ಚುನಾವಣೆಯಲ್ಲಿ ತೇಜಸ್ವಿ ಯಾದವ್ (ರಘೋಪುರ), ತೇಜ್ ಪ್ರತಾಪ್ (ಮಹುವಾ), ಬಿಹಾರದ ಉಪ ಮುಖ್ಯಮಂತ್ರಿ ಸಾಮ್ರಾಟ್ ಚೌಧರಿ (ತಾರಾಪುರ), ವಿಜಯ್ ಸಿನ್ಹಾ (ಲಖಿಸರೈ), ಮೈಥಿಲಿ ಠಾಕೂರ್ (ಅಲಿನಗರ), ಅನಂತ್ ಸಿಂಗ್ (ಮೊಕಾಮ) ದಿ. ಶಹಾಬುದ್ದೀನ್ ಪುತ್ರ ಒಸಾಮ (ರಘುನಂತಪುರ) ಸೇರಿದಂತೆ 121 ಕ್ಷೇತ್ರಗಳಲ್ಲಿ ಸ್ಪರ್ಧಿಸಿರುವ ಅಭ್ಯರ್ಥಿಗಳ ಭವಿಷ್ಯ ನಿರ್ಧಾರವಾಗಲಿದೆ.

ದರ್ಭಂಗಾದ ಕುಶೇಶ್ವರ ಆಸ್ಥಾನ್ ಕ್ಷೇತ್ರದಲ್ಲಿ ಪ್ರವಾಹದ ಸಂಕಷ್ಟದ ನಡುವೆಯೂ ಮತದಾರರು ಧೈರ್ಯದಿಂದ ಮತದಾನದಲ್ಲಿ ಭಾಗವಹಿಸಿದರು.

'ಎನ್‌ಡಿಎ ಮೈತ್ರಿಕೂಟ ಪ್ರಾಬಲ್ಯ ಹೊಂದಿರುವ ಕಡೆ ಮತದಾನವನ್ನು ಉದ್ದೇಶಪೂರ್ವಕವಾಗಿಯೇ ನಿಧಾನಗೊಳಿಸಲಾಗಿತ್ತು. ಆದರೆ, ಇದಕ್ಕೆ ಸಂಬಂಧಿಸಿದಂತೆ ನಮ್ಮ ಆರೋಪವನ್ನು ಚುನಾವಣಾ ಆಯೋಗವು ತಕ್ಷಣವೇ ತಿರಸ್ಕರಿಸಿತು' ಎಂದು ಆರ್‌ಜೆಡಿ 'ಎಕ್ಸ್'ನಲ್ಲಿ ಆರೋಪಿಸಿದೆ.

ಮಟ್ಟ ಹಾಕುತ್ತೇವೆ (ಭಾಗಲ್ಪುರ): 'ಬಿಹಾರದಲ್ಲಿ ಆರ್‌ಜೆಡಿ–ಕಾಂಗ್ರೆಸ್ ಮೈತ್ರಿಯು ನುಸುಳುಕೋರರಿಗೆ ಹಿಂಬಾಗಿಲು ತೆರೆದಿಟ್ಟಿದ್ದು, ಮತ ಬ್ಯಾಂಕ್ ರಾಜಕಾರಣಕ್ಕಾಗಿ ರಾಮನ ಮೇಲೆ ದ್ವೇಷ ಸಾಧಿಸುತ್ತಿದೆ' ಎಂದು ಪ್ರಧಾನಿ ನರೇಂದ್ರ ಮೋದಿ ಆರೋಪಿಸಿದರು.

ಭಾಗಲ್ಪುರ ಮತ್ತು ಅರರಿಯಾ ಜಿಲ್ಲೆಗಳಲ್ಲಿ ಗುರುವಾರ ನಡೆದ ಚುನಾವಣಾ ರ್‍ಯಾಲಿಯಲ್ಲಿ ಕಾಂಗ್ರೆಸ್ ವಿರುದ್ಧ ವಾಗ್ದಾಳಿ ನಡೆಸಿದ ಅವರು, 'ಜಂಗಲ್ ರಾಜ್' ಆಡಳಿತದ 15 ವರ್ಷಗಳಲ್ಲಿ ಬಿಹಾರದಲ್ಲಿ ಅಭಿವೃದ್ಧಿ ಶೂನ್ಯವಾಗಿತ್ತು. ಅಭಿವೃದ್ಧಿಗೆ ಅಡ್ಡಿಯಾಗಿರುವ ನುಸುಳುಕೋರರನ್ನು ಮಟ್ಟ ಹಾಕುವುದೇ ಈಗಿನ ಪ್ರಮುಖ ಸವಾಲಾಗಿದೆ' ಎಂದು ಹೇಳಿದರು.

ಬಿಹಾರದಲ್ಲಿ ಜಂಗಲ್ ರಾಜ್ ಮರಳುವುದನ್ನು ತಡೆಯಲು ಮಹಿಳೆಯರು ಗುರುವಾರ ಮತಗಟ್ಟೆಗಳಲ್ಲಿ ಭದ್ರ ಕೋಟೆ ನಿರ್ಮಿಸಿರುವ ದೃಶ್ಯ ಕಂಡುಬಂತು

ನರೇಂದ್ರ ಮೋದಿ
ಪ್ರಧಾನಿ

ಬಿಹಾರದ ವೈಶಾಲಿ ಜಿಲ್ಲೆಯ ಹಾಜಿಪುರ ಮತಗಟ್ಟೆಯಲ್ಲಿ ಗುರುವಾರ ಮಹಿಳೆಯರು ಸರತಿ ಸಾಲಿನಲ್ಲಿ ನಿಂತು ಮತ ಚಲಾಯಿಸಿದರು — ಪಿಟಿಐ ಚಿತ್ರ

ನುಸುಳುಕೋರರು ದೇಶದ ಭದ್ರತೆಗೆ ಕಂಟಕವಾಗಿದ್ದಾರೆ. ಈ ಚುನಾವಣೆಯಲ್ಲಿ ಬಿಹಾರವು ಅಕ್ರಮ ವಲಸಿಗರು, ನುಸುಳುಕೋರರಿಂದ ಮುಕ್ತವಾಗಲಿದೆ

ಅಮಿತ್ ಶಾ, ಕೇಂದ್ರ ಗೃಹ ಸಚಿವ

'ಬಿಜೆಪಿ ಬಿಹಾರ ವಿಧಾನಸಭೆ ಚುನಾವಣೆಯಲ್ಲೂ ಮತ ಕಳವಿಗೆ ಪ್ರಯತ್ನಿಸಬಹುದು. ಇದನ್ನು ತಡೆಯುವ ಜವಾಬ್ದಾರಿ ಯುವ ಮತದಾರರದ್ದು

ರಾಹುಲ್ ಗಾಂಧಿ ಕಾಂಗ್ರೆಸ್ ನಾಯಕ

'ಬೇರು ಸಹಿತ ತೆಗೆಯುತ್ತೇವೆ'

ಮೋತಿಹಾರಿ (ಪಿಟಿಐ): 'ಬಿಹಾರ ಚುನಾವಣೆಯು ಮುಕ್ತವಾಗಿ, ನ್ಯಾಯಸಮ್ಮತವಾಗಿ ನಡೆದರೆ, ಎನ್‌ಡಿಎ ಸರ್ಕಾರವನ್ನು ಬೇರು ಸಹಿತ ಕಿತ್ತೊಗೆಯಲಾಗುವುದು' ಎಂದು ಕಾಂಗ್ರೆಸ್ ನಾಯಕಿ ಪ್ರಿಯಾಂಕಾ ಗಾಂಧಿ ವಾದ್ರಾ ಅವರು ಹೇಳಿದ್ದಾರೆ.

ಇಲ್ಲಿ ನಡೆದ ಚುನಾವಣಾ ರ್‍ಯಾಲಿಯಲ್ಲಿ ಮಾತನಾಡಿದ ಅವರು, 'ಬಿಜೆಪಿ ಮುಖಂಡರು ಧರ್ಮದ ಹೆಸರಿನಲ್ಲಿ ಮತಯಾಚನೆ ಮಾಡುತ್ತಿದ್ದಾರೆ. ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಬಡವರು, ಮಹಿಳೆಯರು, ಯುವಜನರ ಪರವಾದ ಸರ್ಕಾರ ರಚನೆಯಾಗುತ್ತದೆ' ಎಂದು ಹೇಳಿದರು.

ಮದುವೆ ಯಾವಾಗ: ರಾಹುಲ್‌ಗೆ ಪ್ರಶ್ನೆ

ಅರರಿಯಾ (ಪಿಟಿಐ): ಇಲ್ಲಿ ಗುರುವಾರ ನಡೆದ ಚುನಾವಣಾ ರ್‍ಯಾಲಿಯಲ್ಲಿ ರಾಹುಲ್ ಗಾಂಧಿ ಅವರಿಗೆ ಹಸ್ತಲಾಘವ ನೀಡಿದ ಬಾಲಕನೊಬ್ಬ, 'ನಿಮ್ಮ ಮದುವೆ ಯಾವಾಗ' ಎಂದು ಪ್ರಶ್ನಿಸಿದ. ಇದಕ್ಕೆ ಉತ್ತರಿಸಿದ ರಾಹುಲ್ ಗಾಂಧಿ, 'ನನ್ನ ಕೆಲಸ ಮುಗಿದ ನಂತರ ಮದುವೆಯಾಗುತ್ತೇನೆ' ಎಂದು ನಗುತ್ತಾ ಉತ್ತರಿಸಿದರು. ಬಾಲಕ ಮತ್ತು ರಾಹುಲ್ ನಡುವಿನ ಪುಟ್ಟ ಸಂಭಾಷಣೆಯ ವಿಡಿಯೊ ತುಣುಕು ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ.

ವಿದ್ಯಾರ್ಥಿಗಳಿಗೆ 'ಪ್ರಜಾವಾಣಿ ರಸಪ್ರಶ್ನೆ': ನೋಂದಣಿ ಶುರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿದ್ಯಾರ್ಥಿಗಳಲ್ಲಿನ ಜ್ಞಾನದ ಮಟ್ಟವನ್ನು ನಿಕಷಕ್ಕೊಡ್ಡಿ, ಅವರಲ್ಲಿನ ಪ್ರತಿಭೆಯನ್ನು ಹೊರತೆಗೆಯುವ ಉದ್ದೇಶದಿಂದ 'ಪ್ರಜಾವಾಣಿ–ರಸಪ್ರಶ್ನೆ ಚಾಂಪಿಯನ್‌ಶಿಪ್' ಹಮ್ಮಿಕೊಂಡಿದ್ದು, ಈ ಸ್ಪರ್ಧೆಯ ನೋಂದಣಿ ಪ್ರಕ್ರಿಯೆ ಈಗಾಗಲೇ ಶುರುವಾಗಿದೆ.

7ರಿಂದ 10ನೇ ತರಗತಿಯ ವಿದ್ಯಾರ್ಥಿಗಳು ಈ ಚಾಂಪಿಯನ್‌ಶಿಪ್‌ನ ಸ್ಪರ್ಧೆಯಲ್ಲಿ ಭಾಗವಹಿಸಬಹುದು. ಸ್ಪರ್ಧೆಯು ಆರು ವಲಯಗಳಲ್ಲಿ ಮೊದಲ ಹಂತದಲ್ಲಿ ನಡೆಯಲಿದೆ. ಮೈಸೂರು, ಹುಬ್ಬಳ್ಳಿ, ಬಾಗಲಕೋಟೆ, ಬೀದರ್, ದಾವಣಗೆರೆ ಮತ್ತು ಬೆಂಗಳೂರು ವಲಯಗಳಲ್ಲಿ ಗೆಲುವು ಸಾಧಿಸಿದವರು ರಾಜ್ಯಮಟ್ಟದ ಸ್ಪರ್ಧೆಗೆ ಪಾಲ್ಗೊಳ್ಳುವ ಅರ್ಹತೆ ಪಡೆಯಲಿದ್ದಾರೆ.

ವಲಯಗಳಲ್ಲಿ ವಿಜೇತರಾದ ಎಲ್ಲರಿಗೂ ಒಂದು ದಿನದ ಆವಿಷ್ಕಾರ ಕಾರ್ಯಾಗಾರವನ್ನು ಆಯೋಜಿಸಲಾಗುತ್ತದೆ. ಈ ಕಾರ್ಯಾಗಾರದಲ್ಲಿ ಸಮೃದ್ಧ ಕಲಿಕೆಯ ಅನುಭವ ಪಡೆಯಬಹುದು. ವಿದ್ಯಾರ್ಥಿಗಳಲ್ಲಿನ ಸೃಜನಶೀಲತೆ ಹೊರಹೊಮ್ಮಲು ಈ ಆವಿಷ್ಕಾರ ಕಾರ್ಯಾಗಾರವು ಹೊಸ ವೇದಿಕೆಯಾಗಲಿದೆ.

ಪ್ರಕ್ರಿಯೆ ಹೇಗೆ?: ಇದು ಸಾಮಾನ್ಯ ಜ್ಞಾನಕ್ಕೆ ಸಂಬಂಧಿಸಿದ ರಸಪ್ರಶ್ನೆ ಸ್ಪರ್ಧೆಯಾಗಿದ್ದು, ವಿದ್ಯಾರ್ಥಿಗಳು ಶಾಲೆಗಳ ಮೂಲಕ ತಂಡವಾಗಿ ನೋಂದಾಯಿಸಿಕೊಳ್ಳಬೇಕು. ಪ್ರತಿ ತಂಡದಲ್ಲಿ ಕಡ್ಡಾಯವಾಗಿ ಇಬ್ಬರು ವಿದ್ಯಾರ್ಥಿಗಳು ಇರಬೇಕು. ಬೇರೆ ಬೇರೆ ತರಗತಿಯ ವಿದ್ಯಾರ್ಥಿಗಳೂ ಸೇರಿ ಒಂದು ತಂಡವಾಗಿ ಭಾಗವಹಿಸಬಹುದು.

ನೋಂದಾಯಿತ ತಂಡಗಳಿಗೆ ಪ್ರಾಥಮಿಕ ಹಂತದ ಪರೀಕ್ಷೆ ನಡೆಸಲಾಗುತ್ತದೆ. ಪ್ರತಿ ವಲಯದಲ್ಲಿ 6 ಅಗ್ರ ತಂಡಗಳು ವಲಯ ಮಟ್ಟದ ಅಂತಿಮ ಹಂತಕ್ಕೆ ತಲುಪುತ್ತವೆ. ಆರು ವಲಯಗಳ ವಿಜೇತರು ರಾಜ್ಯಮಟ್ಟದ ಸ್ಪರ್ಧೆಗೆ ಅರ್ಹತೆ ಪಡೆಯುತ್ತಾರೆ. ಅಂತಿಮ ಹಂತದ ಎಲ್ಲ ಸ್ಪರ್ಧಿಗಳಿಗೆ ಆವಿಷ್ಕಾರ ಕಾರ್ಯಾಗಾರ ನಡೆಸಲಾಗುತ್ತದೆ. ಬೆಂಗಳೂರಿನಲ್ಲಿ ರಾಜ್ಯಮಟ್ಟದ ಸ್ಪರ್ಧೆ ನಡೆಯಲಿದೆ.

ನೋಂದಣಿ ಉಚಿತವಾಗಿದ್ದು, ಆಸಕ್ತರು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡುವ ಮೂಲಕ 'ಪ್ರಜಾವಾಣಿ–ರಸಪ್ರಶ್ನೆ ಚಾಂಪಿಯನ್‌ಶಿಪ್'ಗೆ ನೋಂದಾಯಿಸಿಕೊಳ್ಳಬಹುದು.

ಸಂಪರ್ಕಕ್ಕೆ: 7338018541 (ಕಚೇರಿ ಅವಧಿಯಲ್ಲಿ ಬೆಳಿಗ್ಗೆ 10ರಿಂದ ಸಂಜೆ 5ರವರೆಗೆ ಲಭ್ಯ)

ORCHIDS The International School Presents ಪ್ರಜಾವಾಣಿ QUIZ CHAMPIONSHIP

ನೋಂದಣಿಗೆ ಸ್ಕ್ಯಾನ್ ಮಾಡಿ

ತರಳಬಾಳು ಶ್ರೀಗೆ ಹೈಕೋರ್ಟ್ ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಿರಿಗೆರೆಯ ತರಳಬಾಳು ಬೃಹನ್ಮಠದ ಆಸ್ತಿ ಹಾಗೂ ಅಧಿಕಾರ ದುರ್ಬಳಕೆ, ಟ್ರಸ್ಟ್ ಡೀಡ್ ರದ್ದು ಸೇರಿದಂತೆ ಹಲವು ಆರೋಪಗಳಿಗೆ ಸಂಬಂಧಿಸಿ ಚಿತ್ರದುರ್ಗ ಜಿಲ್ಲಾ ಸೆಷನ್ಸ್ ನ್ಯಾಯಾಲಯದಲ್ಲಿ ನಡೆಯುತ್ತಿರುವ ಅಸಲು ದಾವೆಯಲ್ಲಿ ನೀಡಲಾಗಿರುವ ಮಧ್ಯಂತರ ಅರ್ಜಿಗಳ ಮೇಲಿನ ಆದೇಶಕ್ಕೆ ಹೈಕೋರ್ಟ್ ಮಧ್ಯಂತರ ತಡೆ ನೀಡಿದೆ.

ಈ ಸಂಬಂಧ ಹಿರೇಕೆರೂರಿನ ಎಸ್.ಎಸ್.ಪಾಟೀಲ್ ಸೇರಿದಂತೆ ಒಟ್ಟು 8 ಜನ ಸಲ್ಲಿಸಿರುವ ರಿಟ್ ಅರ್ಜಿಯನ್ನು (ಡಬ್ಲ್ಯು.ಪಿ 28891/2025) ನ್ಯಾಯಮೂರ್ತಿ ಪ್ರದೀಪ್ ಸಿಂಗ್ ಯೆರೂರು ಅವರಿದ್ದ ಏಕಸದಸ್ಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿ ಈ ಕುರಿತಂತೆ ಆದೇಶಿಸಿದೆ. ಪೀಠಾಧಿಪತಿ ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಸೇರಿದಂತೆ ಪ್ರಕರಣದ ಎಲ್ಲ ಪ್ರತಿವಾದಿಗಳಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿ ವಿಚಾರಣೆ ಮುಂದೂಡಿದೆ.

ಅರ್ಜಿದಾರರು: ಹಿರೇಕೆರೂರಿನ ಎಸ್.ಎಸ್.ಪಾಟೀಲ್ (80) ಮತ್ತು ಸುಭಾಷ್‌ಚಂದ್ರ (61), ಹೊನ್ನಾಳಿ ತಾಲ್ಲೂಕು ಬಿದರಗಡ್ಡೆಯ ಬಿ.ಎಚ್.ಮಂಜಪ್ಪ (68), ಬೆಂಗಳೂರಿನ ಎಂ.ಶಿವಕುಮಾರಸ್ವಾಮಿ (68), ಜಿ.ಎಂ.ಲಿಂಗರಾಜು (67), ಟಿ.ಪಿ.ಕಲ್ಲೇಶ್ (62), ಪಿ.ಕಾಂತರಾಜ್ (54) ಹಾಗೂ ಎಸ್.ಶಿವಕುಮಾರ್ ಮಾಳಿಗೆ (56).

ಪ್ರತಿವಾದಿಗಳು: ತರಳಬಾಳು ಜಗದ್ಗುರು ಬೃಹನ್ಮಠದ ಹಾಲಿ ಪೀಠಾಧಿಪತಿ ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ, ಶ್ರೀಮಠದ ಸಾಧು ಸದ್ಧರ್ಮ ವೀರಶೈವ ಸಂಘದ ಅಧ್ಯಕ್ಷ ಕೆ.ಆರ್.ಜಯದೇವಪ್ಪ, ಶ್ರೀ ತರಳಬಾಳು ವಿದ್ಯಾಸಂಸ್ಥೆ ಅಧ್ಯಕ್ಷ ಎಚ್.ಕರಿಬಸಪ್ಪ.

ಅರ್ಜಿದಾರರ ಪರ ಪದಾಂಕಿತ ಹಿರಿಯ ವಕೀಲ ಕೆ.ಎನ್.ಫಣೀಂದ್ರ ವಾದ ಮಂಡಿಸಿದರು. ಹೈಕೋರ್ಟ್ ವಕೀಲ ಕೆ.ಶ್ರೀಕಾಂತ್ ಪಾಟೀಲ್ ಅರ್ಜಿದಾರರ ಪರ ವಕಾಲತ್ತು ವಹಿಸಿದ್ದಾರೆ.

'ಎಸ್‌ಐಆರ್: ಪ್ರಮಾಣಪತ್ರ ಸಲ್ಲಿಸಿ'

ಕೋಲ್ಕತ್ತ (ಪಿಟಿಐ): 'ರಾಜ್ಯದಲ್ಲಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಯನ್ನು 2002ರ ಮತದಾರರ ಪಟ್ಟಿಯ ಆಧಾರದಲ್ಲಿ ಯಾಕೆ ಮಾಡಲಾಗುತ್ತಿದೆ ಎಂಬುದರ ಬಗ್ಗೆ ನ. 19ರ ಒಳಗೆ ಪ್ರಮಾಣಪತ್ರ ಸಲ್ಲಿಸಿ' ಎಂದು ಕಲ್ಕತ್ತ ಹೈಕೋರ್ಟ್ ಕೇಂದ್ರ ಚುನಾವಣಾ ಆಯೋಗಕ್ಕೆ ಗುರುವಾರ ಸೂಚನೆ ನೀಡಿದೆ.

ಈ ಬಗ್ಗೆ ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಲಾಗಿತ್ತು. ಅರ್ಜಿಯ ಕುರಿತು ಪ್ರಕ್ರಿಯೆ ನೀಡುವಂತೆಯೂ ಹೈಕೋರ್ಟ್ ಆಯೋಗಕ್ಕೆ ಹೇಳಿದೆ. 'ಇದೇ ರೀತಿಯ ಅರ್ಜಿಗಳ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ಈಗಾಗಲೇ ನಡೆಸುತ್ತಿದೆ. ಆದ್ದರಿಂದ ಈ ಅರ್ಜಿಯ ವಿಚಾರಣೆ ನಡೆಸಬಾರದು' ಎಂದು ಆಯೋಗದ ಪರ ವಕೀಲೆ ಅನಾಮಿಕಾ ಪಾಂಡೆ ಮನವಿ ಮಾಡಿದರು.

ಹೈಕೋರ್ಟ್‌ನ ಹಂಗಾಮಿ ಮುಖ್ಯ ನ್ಯಾಯಮೂರ್ತಿ ಸುಜಾಯ್ ಪಾಲ್ ಅವರ ಪೀಠವು ಅರ್ಜಿಯ ವಿಚಾರಣೆ ನಡೆಸುತ್ತಿದೆ. 2025ರಲ್ಲಿ ಜನರ ಬಳಿ ಇರುವ ದಾಖಲೆಗಳ ಅನ್ವಯವೇ ಎಸ್‌ಐಆರ್ ಪ್ರಕ್ರಿಯೆ ನಡೆಸಬೇಕು ಎಂದು ಆಯೋಗಕ್ಕೆ ಸೂಚನೆ ನೀಡಬೇಕು' ಎಂದು ಅರ್ಜಿಯಲ್ಲಿ ಮನವಿ ಮಾಡಲಾಗಿದೆ.

'ಎಸ್‌ಐಆರ್ ಪ್ರಕ್ರಿಯೆ ನಡೆಸುತ್ತಿರುವ ಬೂತ್ ಮಟ್ಟದ ಅಧಿಕಾರಿಗಳಿಗೆ ಸೂಕ್ತ ಭದ್ರತೆ ಒದಗಿಸಬೇಕು' ಎಂದು ಅರ್ಜಿಯಲ್ಲಿ ಹೇಳಲಾಗಿದೆ.

'ಚೀಟಿ ಪಡೆದಿದ್ದೇನೆ ಎಂಬುದು ಸುಳ್ಳು'

'ಎಸ್‌ಐಆರ್ ಸಂಬಂಧ ಬೂತ್ ಮಟ್ಟದ ಅಧಿಕಾರಿಯಿಂದ (ಬಿಎಲ್‌ಒ) ನಾನು ಖುದ್ದಾಗಿ ಮತದಾರರ ಚೀಟಿಯನ್ನು ಸ್ವೀಕರಿಸಿದ್ದೇನೆ ಎನ್ನುವ ಮಾಹಿತಿ ಸುಳ್ಳು' ಎಂದು ಮಮತಾ ಬ್ಯಾನರ್ಜಿ ಗುರುವಾರ ಸ್ಪಷ್ಟಪಡಿಸಿದರು.

ಈ ಕುರಿತ ಮಾಧ್ಯಮಗಳ ವರದಿಗಳನ್ನು ಮಮತಾ ತಳ್ಳಿ ಹಾಕಿದರು. 'ಮಾಧ್ಯಮಗಳ ವರದಿಗಳು ಸಂಪೂರ್ಣವಾಗಿ ಸುಳ್ಳುಗಳಿಂದ ಕೂಡಿವೆ. ಇದು ದಾರಿ ತಪ್ಪಿಸುವಂತಿವೆ' ಎಂದರು. ಈ ಬಗ್ಗೆ ಅವರು ಸಾಮಾಜಿಕ ಮಾಧ್ಯಮಗಳ ತಮ್ಮ ಖಾತೆಗಳಲ್ಲಿ ಪೋಸ್ಟ್ ಹಂಚಿಕೊಂಡಿದ್ದಾರೆ.

'ಬಂಧನ ಕಾರಣ ಲಿಖಿತವಾಗಿ ತಿಳಿಸಿ'

ನವದೆಹಲಿ: ಅಪರಾಧದ ಸ್ವರೂಪ ಮತ್ತು ಕಾನೂನಿನ ಸ್ವರೂಪವನ್ನು ಲೆಕ್ಕಿಸದೆ, ಬಂಧನಕ್ಕೊಳಗಾದ ಪ್ರತಿಯೊಬ್ಬ ವ್ಯಕ್ತಿಗೂ ಬಂಧನದ ಕಾರಣಗಳನ್ನು ಲಿಖಿತವಾಗಿ ಮತ್ತು ಅವರು ಅರ್ಥ ಮಾಡಿಕೊಳ್ಳುವ ಭಾಷೆಯಲ್ಲಿ ಒದಗಿಸಬೇಕು ಎಂದು ಸುಪ್ರೀಂ ಕೋರ್ಟ್ ಗುರುವಾರ ನೀಡಿದ ತನ್ನ ಮಹತ್ವದ ತೀರ್ಪಿನಲ್ಲಿ ಹೇಳಿದೆ.

ಮುಖ್ಯ ನ್ಯಾಯಮೂರ್ತಿ ಬಿ.ಆರ್ ಗವಾಯಿ ಮತ್ತು ನ್ಯಾಯಮೂರ್ತಿ ಅಗಸ್ಟಿನ್ ಜಾರ್ಜ್ ಮಸಿಹ್ ಅವರ ಪೀಠವು ಈ ಆದೇಶವನ್ನು ನೀಡಿದೆ.

ಅದಾಗ್ಯೂ, ಬಂಧನಕ್ಕೆ ಮೊದಲು ಅಥವಾ ನಂತರ ತಕ್ಷಣವೇ ಬಂಧನಕ್ಕೆ ಕಾರಣಗಳನ್ನು ಲಿಖಿತವಾಗಿ ಒದಗಿಸದಿದ್ದರೆ, ಸರಿಯಾದ ಸಮಯದೊಳಗೆ ಮತ್ತು ಬಂಧನಕ್ಕೊಳಗಾದ ವ್ಯಕ್ತಿಯನ್ನು ಯಾವುದೇ ಸಂದರ್ಭದಲ್ಲಿ ಮ್ಯಾಜಿಸ್ಟ್ರೇಟ್ ಮುಂದೆ ಹಾಜರುಪಡಿಸುವ ಎರಡು ಗಂಟೆಗಳ ಮೊದಲು ಲಿಖಿತವಾಗಿ ಒದಗಿಸಿದರೆ ಆದೇಶದ ಉಲ್ಲಂಘನೆ ಮಾಡಿದಂತೆ ಆಗುವುದಿಲ್ಲ ಎಂದು ಹೇಳಿದೆ. 2024ರ ಜುಲೈನಲ್ಲಿ ಮುಂಬೈನಲ್ಲಿ ನಡೆದ ಬಿಎಂಡಬ್ಲ್ಯು 'ಹಿಟ್ ಆ್ಯಂಡ್ ರನ್' ಘಟನೆಗೆ ಸಂಬಂಧಿಸಿದ ಮಿಹಿರ್ ರಾಜೇಶ್ ಶಾ ಪ್ರಕರಣದಲ್ಲಿ ಈ ತೀರ್ಪು ಹೊರಬಿದ್ದಿದೆ.

ನಟ ಹರೀಶ್ ರಾಯ್ ನಿಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಥೈರಾಯ್ಡ್ ಕ್ಯಾನ್ಸರ್‌ನಿಂದ ನಟ ಹರೀಶ್ ರಾಯ್ (55) ಗುರುವಾರ ಕಿದ್ವಾಯಿ ಆಸ್ಪತ್ರೆಯಲ್ಲಿ ನಿಧನರಾದರು. ಕಳೆದ ಕೆಲ ವರ್ಷಗಳಿಂದ ಅನಾರೋಗ್ಯದಿಂದ ಬಳಲುತ್ತಿದ್ದರು. ಕೆಲವು ದಿನಗಳಿಂದ ಅವರ ಆರೋಗ್ಯ ಬಹಳ ಹದಗೆಟ್ಟಿತ್ತು. ಅವರಿಗೆ ಪತ್ನಿ, ಇಬ್ಬರು ಪುತ್ರರು ಇದ್ದಾರೆ.

ಉಡುಪಿಯಲ್ಲಿ ಶುಕ್ರವಾರ(ನ.7) ಅಂತ್ಯಕ್ರಿಯೆ ನಡೆಯಲಿದೆ.

2017ರಲ್ಲಿ ಹರೀಶ್ ಅವರಿಗೆ ಕುತ್ತಿಗೆಯಲ್ಲಿ ಗೆಡ್ಡೆ ಕಾಣಿಸಿಕೊಂಡಿತ್ತು. ಬಳಿಕ ಶ್ವಾಸಕೋಶದಲ್ಲಿ ನೀರು ತುಂಬಿಕೊಂಡಿತ್ತು.

ನಟ ಯಶ್ ಅಭಿನಯದ ಕೆ.ಜಿ.ಎಫ್. ಸರಣಿಯ ಚಿತ್ರೀಕರಣ ಪೂರ್ಣಗೊಳಿಸಿದ ಬಳಿಕ ನಡೆಸಿದ ತಪಾಸಣೆಯಲ್ಲಿ ಥೈರಾಯ್ಡ್ ಕ್ಯಾನ್ಸರ್ ಇರುವುದು ಖಚಿತವಾಗಿತ್ತು.

ಉಡುಪಿಯ ಹರೀಶ್, ಕೆಲ ಕಾಲ ಮುಂಬೈನಲ್ಲಿದ್ದರು. 1994ರಲ್ಲಿ ಬೆಂಗಳೂರಿಗೆ ಬಂದ ಅವರು ಸಿನಿ ಕ್ಷೇತ್ರಕ್ಕೆ ಕಾಲಿಟ್ಟರು. ನಟ ಉಪೇಂದ್ರ ನಿರ್ದೇಶನದ, ಶಿವರಾಜ್‌ಕುಮಾರ್ ನಟಿಸಿದ್ದ 'ಓಂ' ಸಿನಿಮಾ ಹರೀಶ್ ಸಿನಿಜೀವನಕ್ಕೆ ತಿರುವು ಕೊಟ್ಟಿತು. 'ಓಂ' ಸಿನಿಮಾದಲ್ಲಿನ 'ರಾಯ್' ಎನ್ನುವ ಹೆಸರಿನ ಪಾತ್ರ ಅವರಿಗೆ ಖ್ಯಾತಿ ತಂದಿತ್ತು. ಹರೀಶ್ ಅವರ ಮೂಲ ಹೆಸರು ಹರೀಶ್ ಆಚಾರ್ಯ. ಈ ಸಿನಿಮಾದ ಪಾತ್ರದ ಗೆಲುವಿನ ಬಳಿಕ ಹೆಸರಿಗೆ ರಾಯ್ ಎನ್ನುವ ಹೆಸರು ಸೇರಿಸಿಕೊಂಡರು. ಹೆಚ್ಚಾಗಿ ಬಾಂಬೆ ಶೂಟರ್, ಕಿಲ್ಲರ್ ಮುಂತಾದ ಖಳನಾಯಕನಾಗಿ ಬಣ್ಣ ಹಚ್ಚಿದ್ದರು. 'ಮೆಜೆಸ್ಟಿಕ್', 'ಇಂದ್ರ' ಮುಂತಾದ ಸಿನಿಮಾಗಳಲ್ಲಿ ಅವರು ನಟಿಸಿದ್ದಾರೆ. ಇನ್ನಷ್ಟೇ ಬಿಡುಗಡೆಯಾಗಬೇಕಿರುವ 'ಸೂರಿ ಅಣ್ಣ' ಸಿನಿಮಾದಲ್ಲೂ ನಟಿಸಿದ್ದಾರೆ. 'ಕೆ.ಜಿ.ಎಫ್' ಸರಣಿ ಬಳಿಕ 'ಚಾಚಾ' ಎನ್ನುವ ಪಾತ್ರದ ಮೂಲಕ ಅವರು ಗುರುತಿಸಿಕೊಂಡಿದ್ದರು. ಚಿಕಿತ್ಸೆಯ ಸಂದರ್ಭದಲ್ಲಿ ಹಲವು ನಟರು ಹರೀಶ್ ರಾಯ್ ಅವರಿಗೆ ಆರ್ಥಿಕ ಸಹಾಯ ಮಾಡಿದ್ದರು.

ಚಂದನವನದ ಅನೇಕ ಗಣ್ಯರು ಹರೀಶ್ ಅವರ ಅಂತಿಮ ದರ್ಶನ ಪಡೆದರು.

'ಸಂಘದ ಪಯಣ' ನಾಳೆಯಿಂದ: ಭಾಗವತ್ ಉಪನ್ಯಾಸ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರ್‌ಎಸ್‌ಎಸ್) ಶತಮಾನೋತ್ಸವದ ನೆನಪಿಗಾಗಿ ನ.8 ಮತ್ತು 9ರಂದು ಹಮ್ಮಿಕೊಂಡಿರುವ 'ಸಂಘದ 100 ವರ್ಷದ ಪಯಣ: ನವ ಕ್ಷಿತಿಜ' ಕಾರ್ಯಕ್ರಮದಲ್ಲಿ ಸಂಘದ ಸರಸಂಘ ಸಂಚಾಲಕ ಮೋಹನ್ ಭಾಗವತ್ ಉಪನ್ಯಾಸ ನೀಡಲಿದ್ದಾರೆ.



ಮೋಹನ್ ಭಾಗವತ್

ಇಲ್ಲಿನ ಹೊಸಕೆರೆಹಳ್ಳಿ ವರ್ತುಲ ರಸ್ತೆಯ ಪಿಇಎಸ್ ವಿಶ್ವವಿದ್ಯಾಲಯದಲ್ಲಿ ಕಾರ್ಯಕ್ರಮ ಆಯೋಜಿಸಲಾಗಿದೆ.

ನ.8ರಂದು ಸಂಜೆ 4ರಿಂದ 7.30ರವರೆಗೆ ಎರಡು ಅವಧಿಯಲ್ಲಿ ಮೋಹನ್ ಭಾಗವತ್ ಅವರು ಉಪನ್ಯಾಸ ನೀಡುವರು. ನ.9ರಂದು ಬೆಳಿಗ್ಗೆ 10.30ರಿಂದ ಮಧ್ಯಾಹ್ನ 1.30ರವರೆಗೆ ಎರಡು ಅವಧಿಯಲ್ಲಿ ಸಭಿಕರ ಪ್ರಶ್ನೆಗಳಿಗೆ ಉತ್ತರಿಸುವರು. ಕಾರ್ಯಕ್ರಮದ ನೇರಪ್ರಸಾರವನ್ನು ಆರ್‌ಎಸ್‌ಎಸ್‌ನ ಅಧಿಕೃತ ಜಾಲತಾಣ www.youtube.com/rssorg ಹಾಗೂ www.facebook.com/rssorg ಮೂಲಕ ವೀಕ್ಷಿಸಬಹುದು.

ಸಂಘದ ಶತಮಾನೋತ್ಸವದ ಪ್ರಯುಕ್ತ ವಿಜಯದಶಮಿ ಉತ್ಸವ, ಯುವ ಸಮಾವೇಶ, ಮನೆ–ಮನೆ ಸಂಪರ್ಕ, ಹಿಂದೂ ಸಮ್ಮೇಳನ, ಸಾಮಾಜಿಕ ಸದ್ಭಾವನಾ ಸಮಾವೇಶ, ಪ್ರಮುಖ ನಾಗರಿಕರ ವಿಚಾರಗೋಷ್ಠಿಗಳನ್ನು ದೇಶದಾದ್ಯಂತ ಆಯೋಜಿಸಲಾಗಿದೆ. ನವದೆಹಲಿ, ಬೆಂಗಳೂರು, ಮುಂಬೈ, ಕೋಲ್ಕತ್ತಾದಲ್ಲಿ ಉಪನ್ಯಾಸ ಮಾಲೆಗಳು ನಡೆಯಲಿವೆ. ದೆಹಲಿಯ ಮೊದಲ ಕಾರ್ಯಕ್ರಮ ಈಗಾಗಲೇ ಮುಕ್ತಾಯವಾಗಿದೆ ಎಂದು ಸಂಘದ ಕ್ಷೇತ್ರೀಯ ಕಾರ್ಯವಾಹ ನಾ.ತಿಪ್ಪೇಸ್ವಾಮಿ ಮಾಹಿತಿ ನೀಡಿದ್ದಾರೆ.

5 ವೇದಿಕೆಗಳಲ್ಲಿ ಸಾಹಿತ್ಯ ಸಂಭ್ರಮ • 47 ಚರ್ಚಾಗೋಷ್ಠಿಗಳು, 250 ಲೇಖಕರು ಭಾಗಿ

ನಾಳೆಯಿಂದ 'ಸಮಾಜಮುಖಿ' ಸಮ್ಮೇಳನ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಮಾಜಮುಖಿ' ಪತ್ರಿಕೆ ವತಿಯಿಂದ ಅರಮನೆ ರಸ್ತೆಯಲ್ಲಿರುವ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್‌ನ ಆವರಣದಲ್ಲಿ ಇದೇ ಶನಿವಾರ (ನ.8) ಮತ್ತು ಭಾನುವಾರ (ನ.9) 'ಸಮಾಜಮುಖಿ ಸಾಹಿತ್ಯ ಸಮ್ಮೇಳನ' ಆಯೋಜಿಸಲಾಗಿದೆ.

ಗುರುವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಾಹಿತಿ ಹಂಪ ನಾಗರಾಜಯ್ಯ, 'ಕನ್ನಡ ಸಾಹಿತ್ಯದ ಹಿಂದಣ ಹೆಜ್ಜೆಯನ್ನು ಅರಿಯುತ್ತಾ, ಸಮಕಾಲೀನ ಹಾಗೂ ಭವಿಷ್ಯದ ನೆಲೆ–ಬೆಲೆಗಳನ್ನು ಗುರುತಿಸಲು ಈ ಸಮ್ಮೇಳನ ಸಹಕಾರಿಯಾಗಲಿದೆ. ಸಾಹಿತಿಗಳು, ಚಿಂತಕರು, ಕಲಾವಿದರು, ಸಾಹಿತ್ಯಾಸಕ್ತರು, ಸಾಹಿತ್ಯ ವಿದ್ಯಾರ್ಥಿಗಳನ್ನು ಒಳಗೊಂಡು ಈ ಸಮ್ಮೇಳನ ನಡೆಸಲಾಗುತ್ತಿದೆ. ಮುಖ್ಯ ವೇದಿಕೆಯ ಜತೆಗೆ ನಾಲ್ಕು ಸಮಾನಾಂತರ ವೇದಿಕೆಗಳು ಇರಲಿದ್ದು, ಒಟ್ಟು 47 ಚರ್ಚಾಗೋಷ್ಠಿಗಳು ನಡೆಯಲಿವೆ. 225ಕ್ಕೂ ಅಧಿಕ ಲೇಖಕರು, ಚಿಂತಕರು ಈ ಚರ್ಚೆಯಲ್ಲಿ ಪಾಲ್ಗೊಳ್ಳುತ್ತಾರೆ' ಎಂದು ಹೇಳಿದರು.

ಕನ್ನಡ ಸಾಹಿತ್ಯದ ಬಗ್ಗೆ ಗಂಭೀರ ಚರ್ಚೆ, ವಿಮರ್ಶೆ ಮತ್ತು ಸಂವಾದಕ್ಕೆ ಹೊಸ ವೇದಿಕೆ ಕಲ್ಪಿಸುವ ಉದ್ದೇಶವನ್ನು ಈ ಸಮ್ಮೇಳನ ಹೊಂದಿದೆ. ಸರ್ಕಾರದಿಂದ ಅನುದಾನ ಪಡೆಯದೆ ಸಮ್ಮೇಳನ ನಡೆಸಲಾಗುತ್ತಿದೆ

ಹಂಪ ನಾಗರಾಜಯ್ಯ, ಸಾಹಿತಿ

'ಸಮ್ಮೇಳನದ ಮೊದಲ ದಿನ 'ಹಳಗನ್ನಡ ಸಾಹಿತ್ಯ–ಹಿಂದಣ ಹೆಜ್ಜೆಯನರಿತಲ್ಲದೆ', 'ಕನ್ನಡ ಭಾಷಾ ಬಿಕ್ಕಟ್ಟುಗಳು', 'ಚಾಟಿ ಹಿಡಿಯದ ಚಾಳಿ: ಕನ್ನಡ ವಿಮರ್ಶಾ ಸಾಹಿತ್ಯವೇಕೆ ಬತ್ತಿಹೋಗಿದೆ..?' ಸೇರಿ ವಿವಿಧ ಗೋಷ್ಠಿಗಳು ನಡೆಯಲಿವೆ. ಸಾಹಿತ್ಯ ಚರ್ಚೆಗಳ ಜತೆಗೆ ಸಮ್ಮೇಳನದ ಸಂದರ್ಭದಲ್ಲಿ 16 ಕಲಾವಿದರು ಕಲಾಕೃತಿಗಳನ್ನು ಪ್ರದರ್ಶಿಸಲಿದ್ದಾರೆ. ಸುಮಾರು 2 ಸಾವಿರ ಪ್ರತಿನಿಧಿಗಳು ಭಾಗವಹಿಸುವ ನಿರೀಕ್ಷೆಯಿದೆ' ಎಂದರು.

16 ಪುಸ್ತಕ ಮಳಿಗೆಗಳು: ರಂಗಕರ್ಮಿ ಶಶಿಧರ್ ಭಾರಿಘಾಟ್ ಮಾತನಾಡಿ, 'ಶನಿವಾರ ಬೆಳಿಗ್ಗೆ 10 ಗಂಟೆಗೆ ಉದ್ಘಾಟನೆ ಸಮಾರಂಭ ನಡೆಯಲಿದೆ. ಸಂಜೆಯವರೆಗೂ ವಿವಿಧ ಗೋಷ್ಠಿಗಳನ್ನು ಆಯೋಜಿಸಲಾಗಿದೆ. ಸಂಜೆ 6.30ರಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿದ್ದು, ಮೂಡಲಪಾಯ ಯಕ್ಷಗಾನ ತಾಳಮದ್ದಳೆ ಆಯೋಜಿಸಲಾಗಿದೆ. ಪುಸ್ತಕ ಬಿಡುಗಡೆ, ಬಯಲು ಚಿತ್ರಕಲಾ ಶಿಬಿರವೂ ನಡೆಯಲಿದೆ. ಪುಸ್ತಕ ಪ್ರದರ್ಶನ ಮತ್ತು ಮಾರಾಟವನ್ನೂ ಹಮ್ಮಿಕೊಳ್ಳಲಾಗಿದೆ. 16 ಮಳಿಗೆಗಳು ಇರಲಿವೆ' ಎಂದರು.

ಚೈಲ್ಡ್ ರೈಟ್ಸ್ ಟ್ರಸ್ಟ್‌ನ ಕಾರ್ಯಕಾರಿ ನಿರ್ದೇಶಕ ವಾಸುದೇವ ಶರ್ಮ ಎನ್.ವಿ., 'ಸಮ್ಮೇಳನದ ಎರಡನೇ ದಿನವಾದ ಭಾನುವಾರ 'ಬಾಲವನ' ಶೀರ್ಷಿಕೆಯಡಿ ಮಕ್ಕಳಿಗೆ ಪ್ರತ್ಯೇಕ ಗೋಷ್ಠಿ ಹಮ್ಮಿಕೊಳ್ಳಲಾಗಿದೆ' ಎಂದು ತಿಳಿಸಿದರು.

ಲೇಖಕಿ ಎಚ್.ಆರ್. ಸುಜಾತಾ, 'ಕರ್ನಾಟಕ ಹಾಗೂ ದೇಶದ ಸಾಹಿತ್ಯ ಮತ್ತು ಸಾಂಸ್ಕೃತಿಕ ವಲಯದಲ್ಲಿ ನಡೆಯುತ್ತಿರುವ ಪ್ರಯೋಗಗಳು, ಪಲ್ಲಟಗಳನ್ನು ಗುರುತಿಸುವ ಪ್ರಯತ್ನ ನಡೆಯಲಿದೆ. ಇಂಗ್ಲಿಷ್ ಭಾಷೆಗೂ ಒಂದು ವೇದಿಕೆ ಇರಲಿದೆ' ಎಂದು ಹೇಳಿದರು.

ಸಮ್ಮೇಳನದ ಸಂಯೋಜಕ ಆನಂದ ರಾಜೇ ಅರಸ್ ಉಪಸ್ಥಿತರಿದ್ದರು.

prajavani.net prajavani www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ನಾನಕರಿಗೆ ನಮನ
ಗುರುನಾನಕ್ ದೇವ್ ಜಯಂತಿ ಅಂಗವಾಗಿ ಬೀದರ್‌ನ ಗುರುದ್ವಾರಕ್ಕೆ ಪಂಜಾಬಿನಿಂದ ಗುರುವಾರ ಬಂದ ಸಿಖ್ ಧರ್ಮೀಯರ ತಂಡದಲ್ಲಿದ್ದ ಬಾಲಕನೊಬ್ಬ ಖಡ್ಗದೊಂದಿಗೆ ಕಂಡಿದ್ದು ಹೀಗೆ



ಮುದ್ದು ಮಂಗಟ್ಟೆ
ಅಸ್ಸಾಂನ ಮೊರಿಗಾಂವ್‌ನಲ್ಲಿ ಮಂಗಟ್ಟೆ ಹಕ್ಕಿಗಳು ಮರದ ರೆಂಬೆಯೊಂದರ ಮೇಲೆ ಕುಳಿತಿದ್ದವು

ಸೆನ್ಸೆಕ್ಸ್ 83,311 | ನಿಫ್ಟಿ 25,509 | $/₹ 88.63 | ಚಿನ್ನ (Std. 10g) ₹1,25,550 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹1,56,560 (ಬೆಂಗಳೂರು)

ಆಸ್ತಿ ವಿವರ: ಸಲ್ಲಿಕೆಗೆ ದೂರ

ಐವರು ಸಚಿವರು ಸೇರಿ 100 ಮಂದಿ ಸಲ್ಲಿಕೆ ಬಾಕಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಚಿವರಾದ ಕೆ.ಎಚ್. ಮುನಿಯಪ್ಪ, ದಿನೇಶ್ ಗುಂಡೂರಾವ್, ಬಿ.ಝಡ್. ಜಮೀರ್ ಅಹಮದ್ ಖಾನ್, ರಹೀಂ ಖಾನ್, ಕೆ.ವೆಂಕಟೇಶ್ ಸೇರಿ ವಿಧಾನಸಭೆಯ 72 ಮತ್ತು ವಿಧಾನ ಪರಿಷತ್‌ನ 28 ಸದಸ್ಯರು ನಿಗದಿತ ಗಡುವು ಮುಗಿದರೂ ತಮ್ಮ ಆಸ್ತಿ ವಿವರವನ್ನು ಲೋಕಾಯುಕ್ತಕ್ಕೆ ಸಲ್ಲಿಸಿಲ್ಲ.

2024–25ನೇ ಸಾಲಿನ ಆಸ್ತಿ ಮತ್ತು ಋಣ ಬಾಧ್ಯತೆಯ ವಿವರಗಳನ್ನು ಸಲ್ಲಿಸದ ಚುನಾಯಿತ ಪ್ರತಿನಿಧಿಗಳ ಪಟ್ಟಿಯನ್ನು ಕರ್ನಾಟಕ ಲೋಕಾಯುಕ್ತ ಬಿಡುಗಡೆ ಮಾಡಿದೆ. ಅವಧಿ ಮುಗಿದರೂ 2024–25ರ ಅವಧಿಯ ಆಸ್ತಿ ವಿವರ ಸಲ್ಲಿಸದ ಶಾಸಕರಿಗೆ ನೋಟಿಸ್ ಜಾರಿಗೊಳಿಸಲಾಗಿತ್ತು. ಗಡುವು ಮುಗಿದ ಬಳಿಕ ಸಚಿವ ಡಿ.ಸುಧಾಕರ್, ಮೂವರು ಶಾಸಕರು ಹಾಗೂ ವಿಧಾನ ಪರಿಷತ್‌ನ ಸದಸ್ಯರೊಬ್ಬರು ಆಸ್ತಿ ವಿವರ ಸಲ್ಲಿಸಿದ್ದಾರೆ.

ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಪ್ರಕಾರ, ವಿಧಾನಸಭೆ ಮತ್ತು ವಿಧಾನ ಪರಿಷತ್‌ನ ಎಲ್ಲ ಸದಸ್ಯರು ಪ್ರತಿ ವರ್ಷ ಜೂನ್ 30ರೊಳಗೆ ತಮ್ಮ ಆಸ್ತಿ ಹಾಗೂ ಸಾಲದ ವಿವರಗಳ ಪ್ರಮಾಣಪತ್ರ ಸಲ್ಲಿಸಬೇಕು. ಆದರೆ, ಹಲವರು ಆಸ್ತಿ ವಿವರದ ಪ್ರಮಾಣಪತ್ರ ಸಲ್ಲಿಸಿಲ್ಲ. ಇತ್ತೀಚೆಗೆ ನಿಧನರಾದ ಬಾಗಲಕೋಟೆ ಶಾಸಕ ಎಚ್.ವೈ.ಮೇಟಿ ಸಹ ಆಸ್ತಿ ವಿವರಕ್ಕೆ ಸಂಬಂಧಿಸಿದ ದಾಖಲೆ ನೀಡಿರಲಿಲ್ಲ.

ಲೋಕಾಯುಕ್ತ ಸಂಸ್ಥೆ ಬಿಡುಗಡೆ ಮಾಡಿದ ಪಟ್ಟಿಯಲ್ಲಿ ವಿಧಾನ ಸಭೆಯ ಮುಖ್ಯ ಸಚೇತಕ ಅಶೋಕ ಪಟ್ಟಣ, ವಿಧಾನ ಪರಿಷತ್‌ನ ಸರ್ಕಾರದ ಮುಖ್ಯ ಸಚೇತಕ ಸಲೀಂ ಅಹಮದ್ ಅವರ ಹೆಸರುಗಳೂ ಇವೆ.

▶5

ವಿವರ ಸಲ್ಲಿಸದವರು ಯಾರು?

ಮುನಿಯಪ್ಪ | ದಿನೇಶ್ ಗುಂಡೂರಾವ್ | ಜಮೀರ್ ಅಹಮದ್ | ಕೆ.ವೆಂಕಟೇಶ್ | ರಹೀಂ ಖಾನ್

ವಿಧಾನಸಭಾ ಸದಸ್ಯರು

ಕೆ.ಎಚ್. ಮುನಿಯಪ್ಪ, ದಿನೇಶ್ ಗುಂಡೂರಾವ್, ಬಿ.ಝಡ್. ಜಮೀರ್ ಅಹಮದ್ ಖಾನ್, ರಹೀಂ ಖಾನ್, ಕೆ.ವೆಂಕಟೇಶ್, ಲಕ್ಷ್ಮಣ ಸವದಿ, ಬಸವರಾಜ ರಾಯರಡ್ಡಿ, ಎನ್.ಎ.ಹ್ಯಾರಿಸ್, ಕೆ.ಎನ್. ರಾಜಣ್ಣ, ಸತೀಶ್ ಸೈಲ್, ಟಿ.ಡಿ.ರಾಜೇಗೌಡ, ಸಿ.ಪುಟ್ಟರಂಗ ಶೆಟ್ಟಿ, ಕೆ.ಎಂ.ಉದಯ್, ಕೆ.ಎಚ್. ಪುಟ್ಟಸ್ವಾಮಿಗೌಡ, ಸಿ.ಪಿ. ಯೋಗೇಶ್ವರ, ಡಾ.ಎಚ್.ಡಿ. ರಂಗನಾಥ್, ಎಸ್.ಎನ್. ಸುಬ್ಬಾರೆಡ್ಡಿ, ಕೆ.ಎಂ.ರೂಪಕಲಾ, ಸಿ.ಬಿ.ಸುರೇಶ್ ಬಾಬು, ಎಚ್.ಡಿ. ರೇವಣ್ಣ, ಎ.ಮಂಜು, ಸಿ.ಎನ್. ಬಾಲಕೃಷ್ಣ, ಜಿ. ಜನಾರ್ದನ ರೆಡ್ಡಿ, ವಿಜಯಾನಂದ ಕಾಶಪ್ಪನವರ, ವಿಠ್ಠಲ ಕಟಕದೊಂಡ , ಎಂ.ವೈ.ಪಾಟೀಲ್, ಅಲ್ಲಮಪ್ರಭು ಪಾಟೀಲ.

ಕನೀಜ್ ಫಾತಿಮಾ, ಶರಣು ಸಲಗರ, ಸಿದ್ದು ಪಾಟೀಲ, ಬಸನಗೌಡ ತುರುವಿಹಾಳ, ಕೆ.ರಾಘವೇಂದ್ರ ಹಿಟ್ನಾಳ್, ಜಿ.ಎಸ್. ಪಾಟೀಲ, ಎನ್.ಎಚ್.ಕೋನರಡ್ಡಿ, ವಿನಯ ಕುಲಕರ್ಣಿ, ದಿನಕರ್ ಶೆಟ್ಟಿ, ಬಸವರಾಜ ಶಿವಣ್ಣವರ, ಜೆ.ಎನ್.ಗಣೇಶ್, ಎನ್.ವೈ.ಗೋಪಾಲಕೃಷ್ಣ, ಎಂ.ಚಂದ್ರಪ್ಪ, ಲತಾ ಮಲ್ಲಿಕಾರ್ಜುನ, ಕೆ.ಎಸ್. ಬಸವಂತಪ್ಪ, ಶಾರದಾ ಪೂರ್‍ಯಾ ನಾಯ್ಕ, ಬಿ.ಕೆ.ಸಂಗಮೇಶ್ವರ್, ನಯನಾ ಮೋಟಮ್ಮ, ಜಿ.ಎಚ್.ಶ್ರೀನಿವಾಸ, ಕೆ.ಎಸ್.ಆನಂದ. ಡಾ.ಎಚ್.ಡಿ.ರಂಗನಾಥ್, ಬಿ.ಸುರೇಶ್ ಗೌಡ, ಎಚ್.ವಿ.ವೆಂಕಟೇಶ್,

▶5

ಪರಿಷತ್ ಸದಸ್ಯರು

ಸಲೀಂ ಅಹಮದ್, ಕೆ. ಗೋವಿಂದರಾಜು, ನಸೀರ್ ಅಹ್ಮದ್, ಎಚ್.ವಿಶ್ವನಾಥ್, ಎಂ.ಟಿ.ಬಿ. ನಾಗರಾಜು, ಪ್ರದೀಪ ಶೆಟ್ಟರ್, ಕೆ.ಅಬ್ದುಲ್ ಜಬ್ಬರ್, ಎಂ.ಎಲ್.ಅನಿಲ್ ಕುಮಾರ್, ಬಸನಗೌಡ ಬಾದರ್ಲಿ, ಐವನ್ ಡಿಸೋಜ, ಟಿ.ಎನ್.ಜವರಾಯಿಗೌಡ, ಸಿ.ಎನ್.ಮಂಜೇಗೌಡ, ಎಂ.ಜಿ.ಮುಳೆ, ಕೆ.ಎಸ್.ನವೀನ್, ಪಿ.ಎಚ್.ಪೂಜಾರ್, ರಾಜೇಂದ್ರ ರಾಜಣ್ಣ, ರಾಮೋಜಿ ಗೌಡ, ಶಶೀಲ್ ಜಿ.ನಮೋಶಿ, ಎಸ್.ವಿ.ಸಂಕನೂರ, ಸುನಿಲ್ ವಲ್ಯಾಪುರ, ಸುನಿಲ್ ಗೌಡ ಪಾಟೀಲ, ಟಿ.ಎ.ಶರವಣ, ವೈ.ಎಂ.ಸತೀಶ್, ಸೂರಜ್ ರೇವಣ್ಣ, ಎಚ್.ಪಿ.ಸುಧಾಮ್ ದಾಸ್, ತಿಪ್ಪಣ್ಣಪ್ಪ ಕಮಕನೂರ, ಡಾ.ಡಿ.ತಿಮ್ಮಯ್ಯ, ಕೆ.ವಿವೇಕಾನಂದ.

ಬಾಗಲಕೋಟೆ, ಕಲಬುರಗಿಯಲ್ಲೂ ಕಿಡಿ • ರೈತರ ಭೇಟಿಯಾದ ಸಕ್ಕರೆ ಸಚಿವ

ಉತ್ತರದಲ್ಲಿ ಹಬ್ಬಿದ ಕಬ್ಬಿನ ‘ಕಿಚ್ಚು’

ಪ್ರಜಾವಾಣಿ ವಾರ್ತೆ

ಬೆಳಗಾವಿ/ಬಾಗಲಕೋಟೆ: ಪ್ರತಿ ಟನ್ ಕಬ್ಬಿಗೆ ₹3,500 ದರ ನಿಗದಿಪಡಿಸಬೇಕೆಂದು ಒತ್ತಾಯಿಸಿ ಬೆಳಗಾವಿ ಜಿಲ್ಲೆಯ ಗುರ್ಲಾಪುರದಲ್ಲಿ ನಡೆಯುತ್ತಿರುವ ಪ್ರತಿಭಟನೆ ಗುರುವಾರ ತೀವ್ರ ಸ್ವರೂಪ ಪಡೆದುಕೊಂಡಿದೆ. ಈ ಮಧ್ಯೆ ಉತ್ತರ ಕರ್ನಾಟಕದ ಬಾಗಲಕೋಟೆ ಮತ್ತು ಕಲಬುರಗಿ ಜಿಲ್ಲೆಗಳಿಗೂ ಹೋರಾಟ ಹಬ್ಬಿದೆ.



ರೈತರ ಹೋರಾಟ ಬೆಂಬಲಿಸಿ ಗುರುವಾರ ಮೂಡಲಗಿ ಬಂದ್ ಮಾಡಲಾಯಿತು. ವ್ಯಾಪಾರಸ್ಥರು, ವಿದ್ಯಾರ್ಥಿಗಳು ಸ್ವಯಂ ಪ್ರೇರಿತರಾಗಿ ಪ್ರತಿಭಟನೆಗೆ ಧುಮುಕಿದರು.

ಗುರ್ಲಾಪುರದ ರಾಜ್ಯ ಹೆದ್ದಾರಿಯಲ್ಲಿ ಧರಣಿ ನಡೆಸುತ್ತಿದ್ದ ರೈತರನ್ನು ಸಚಿವ ಶಿವಾನಂದ ಪಾಟೀಲ ಭೇಟಿಯಾಗಿ ಮಾತುಕತೆಗೆ ಪ್ರಯತ್ನಿಸಿದರು. ಆದರೆ ಅವರಿಗೆ ಮಾತನಾಡುವು ದಕ್ಕೆ ಬಿಡದೇ ಪ್ರತಿಭಟನಕಾರರು ಕೂಗಾಡಿದರು. ಮಧ್ಯ ಪ್ರವೇಶಿಸಿದ ರೈತ ಮುಖಂಡರು, ‘ಸಚಿವರಿಗೆ ಮಾತಾಡಲು ಬಿಡಿ’ ಎಂದು ಮನವಿ ಮಾಡಿದರು.

ನಂತರ ಮಾತು ಮುಂದುವರಿಸಿದ ಶಿವಾನಂದ ಪಾಟೀಲ, ‘ರೈತರ ವಿಚಾರದಲ್ಲಿ ನಾನು ಯಾವುದೇ ಕಾರಣಕ್ಕೂ ರಾಜಕೀಯ ಮಾಡುವುದಿಲ್ಲ. ಈ ವಿಷಯದ ಬಗ್ಗೆ ಚರ್ಚೆ ಮಾಡಬೇಕಿದೆ. ಹೆದ್ದಾರಿ ಬಂದ್ ಮಾಡುವುದನ್ನು ಎರಡು ದಿನ ಮುಂದಕ್ಕೆ ಹಾಕಿ’ ಎಂದು ಕೋರಿದರು. ‘ಎರಡು ದಿನ ಗಡುವು ಕೊಡುತ್ತೇವೆ. ಇಲ್ಲಿ ಧರಣಿ ನಿಲ್ಲಿಸುವುದಿಲ್ಲ. ಗಡುವು ಮುಗಿದ ಮೇಲೆ ಮತ್ತೆ ಗಡುವು ಕೇಳಲು ಬಂದರೆ ಪರಿಸ್ಥಿತಿ ನೆಟ್ಟಗಿರುವುದಿಲ್ಲ’ ಎಂದು ರೈತ ಮುಖಂಡರು ಎಚ್ಚರಿಸಿದರು.

ಸಚಿವರು ಮಾತು ಮುಗಿಸಿ ಧರಣಿ ಸ್ಥಳದಿಂದ ಹೊರಡುತ್ತಿದ್ದಂತೆಯೇ ಜನಸಂದಣಿ ಕಡೆಯಿಂದ ತೂರಿಬಂದ ಚಪ್ಪಲಿ ಸಚಿವರ ಕಾರಿನ ಮೇಲೆ ಬಿದ್ದಿತು.

ಬಾಗಲಕೋಟೆ ಜಿಲ್ಲೆಯ ಜಮಖಂಡಿ, ಲೋಕಾಪುರ, ಕಮತಗಿ, ಬೀಳಗಿ ತಾಲ್ಲೂಕಿನ ಕಾತರಕಿಯಲ್ಲಿ ರೈತರು ರಸ್ತೆ ತಡೆ ಮಾಡಿ ರಾಜ್ಯ ಹಾಗೂ ಕೇಂದ್ರ ಸರ್ಕಾರದ ವಿರುದ್ಧ ಘೋಷಣೆ ಕೂಗಿದರು. ಕಬ್ಬಿಗೆ ದರ ನಿಗದಿ ಮಾಡಿ ಸಕ್ಕರೆ ಕಾರ್ಖಾನೆ ಆರಂಭಿಸಬೇಕು. ಅಲ್ಲಿಯವರೆಗೆ ಹೋರಾಟ ಮುಂದುವರೆಯಲಿದೆ ಎಂದು ಎಚ್ಚರಿಸಿದರು.

ಕಲಬುರಗಿ ಜಿಲ್ಲೆಯ ಅಫಜಲಪುರದಲ್ಲೂ ರೈತರು ಪ್ರತಿಭಟನೆ ನಡೆಸಿದರು. ಪಟ್ಟಣದ ಬಸವೇಶ್ವರ ವೃತ್ತದಲ್ಲಿ ಬೆಳಿಗ್ಗೆಯಿಂದಲೇ ಪ್ರತಿಭಟನೆ ನಡೆದಿದ್ದರಿಂದ ವಾಹನ ಸಂಚಾರ ಅಸ್ತವ್ಯಸ್ತವಾಗಿತ್ತು.

‘ರೈತರ ಸಂಕಷ್ಟಕ್ಕೆ ಕೇಂದ್ರವೇ ಹೊಣೆ’

ಸಿದ್ದರಾಮಯ್ಯ

ಬೆಂಗಳೂರು: ‘ಕೇಂದ್ರ ಸರ್ಕಾರದ ತಪ್ಪು ನೀತಿ ಮತ್ತು ರಾಜ್ಯದ ರೈತರ ಬದುಕಿನೊಂದಿಗೆ ಚೆಲ್ಲಾಟ ಆಡುತ್ತಿರುವ ಪರಿಣಾಮ ಕಬ್ಬು ಬೆಳೆಗಾರರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಬಿಜೆಪಿಯವರು ತಪ್ಪು ಮಾಹಿತಿ ನೀಡಿ ರೈತರ ದಾರಿ ತಪ್ಪಿಸುತ್ತಿದ್ದಾರೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಕಿಡಿ ಕಾರಿದರು.

ಗುರುವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ಕಬ್ಬು ಬೆಳೆಗಾರರ ಹೋರಾಟ ಮತ್ತು ಅವರ ಸಮಸ್ಯೆ ಈಡೇರಿಸುವ ಕುರಿತು ನಡೆದ ಸುದೀರ್ಘ ಚರ್ಚೆಯ ಬಳಿಕ ಅವರು ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

‘ನ್ಯಾಯಯುತ ಮತ್ತು ಲಾಭದಾಯಕ ದರ (ಎಫ್‌ಆರ್‌ಪಿ) ನಿಗದಿ ಮಾಡುವುದು ಕೇಂದ್ರ ಸರ್ಕಾರವೇ ವಿನಾ ರಾಜ್ಯ ಸರ್ಕಾರವಲ್ಲ. ಕಬ್ಬು ಮತ್ತು ಸಕ್ಕರೆ ವಿಚಾರದಲ್ಲಿ ರಾಜ್ಯ ಸರ್ಕಾರದ ಪಾತ್ರ ಅತ್ಯಲ್ಪ. ಕೇಂದ್ರ ನಿಗದಿ ಮಾಡುವ ದರ ರೈತರಿಗೆ ಲಭಿಸುತ್ತದೆಯೇ ಎಂಬುದನ್ನು ನೋಡಿಕೊಳ್ಳುವುದು, ತೂಕ, ಬೆಲೆ ಮತ್ತು ನಿಗದಿತ ಅವಧಿಯಲ್ಲಿ ಪಾವತಿ ಆಗುವಂತೆ ಗಮನಿಸುವುದು ರಾಜ್ಯ ಸರ್ಕಾರದ ಜವಾಬ್ದಾರಿ’ ಎಂದು ಅವರು ಪ್ರತಿಪಾದಿಸಿದರು.

▶7

ರೈತ–ಮಾಲೀಕರ ಜತೆ ಇಂದು ಸಭೆ

‘ಬೆಳಗಾವಿ, ವಿಜಯಪುರ, ಬಾಗಲಕೋಟೆ ಜಿಲ್ಲೆಗಳಲ್ಲಿ ನಡೆಯುತ್ತಿರುವ ಕಬ್ಬು ಬೆಳೆಗಾರರ ಬೇಡಿಕೆಗಳಿಗೆ ಸಂಬಂಧಿಸಿದಂತೆ ಶುಕ್ರವಾರ ರಾಜ್ಯದ ಎಲ್ಲಾ ಸಕ್ಕರೆ ಕಾರ್ಖಾನೆಗಳ ಮಾಲೀಕರು ಮತ್ತು ರೈತ ಮುಖಂಡರ ಜತೆ ಚರ್ಚಿಸಲು ಪ್ರತ್ಯೇಕ ಸಭೆಗಳನ್ನು ಕರೆಯಲಾಗಿದೆ. ಮೊದಲು ಸಕ್ಕರೆ ಕಾರ್ಖಾನೆ ಮಾಲೀಕರ ಜತೆ, ಬಳಿಕ ರೈತ ಮುಖಂಡರ ಜತೆ ಸಬೆ ನಡೆಸಿ, ಎರಡೂ ಕಡೆಯವರ ಅಹವಾಲುಗಳನ್ನು ಆಲಿಸಿ ಸೂಕ್ತ ತೀರ್ಮಾನ ತೆಗೆದುಕೊಳ್ಳುತ್ತೇವೆ’ ಎಂದು ಸಿದ್ದರಾಮಯ್ಯ ಹೇಳಿದರು.

ಸದ್ಯ ಯಾವ ಕ್ರಾಂತಿಯೂ ಇಲ್ಲ: ಡಿಕೆಶಿ

ಪ್ರಜಾವಾಣಿ ವಾರ್ತೆ

ನವದೆಹಲಿ: ‘ನವೆಂಬರ್ ಕ್ರಾಂತಿಯೂ ಇಲ್ಲ, ಡಿಸೆಂಬರ್ ಕ್ರಾಂತಿಯೂ ಇಲ್ಲ. ಜನವರಿ ಹಾಗೂ ಫೆಬ್ರವರಿಯಲ್ಲೂ ಆಗುವುದಿಲ್ಲ. ಕಾಂಗ್ರೆಸ್ ಮತ್ತೆ ಅಧಿಕಾರಕ್ಕೆ ಬರುವ ಮೂಲಕ 2028ರಲ್ಲಿ ಕ್ರಾಂತಿ ಆಗಲಿದೆ’ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಡಿ.ಕೆ. ಶಿವಕುಮಾರ್

ಗುರುವಾರ ಇಲ್ಲಿ ಸುದ್ದಿಗಾರರ ಜತೆಗೆ ಮಾತನಾಡಿದ ಅವರು, ‘ಮುಖ್ಯಮಂತ್ರಿ ಐದು ವರ್ಷ ಇರಬೇಕೆಂದು ಹೈಕಮಾಂಡ್ ಹೇಳಿದರೆ ಐದು ವರ್ಷ ಇರುತ್ತಾರೆ. ಹತ್ತು ವರ್ಷ ಇರಬೇಕು ಎಂದರೆ ಹತ್ತು ವರ್ಷ ಇರುತ್ತಾರೆ. 15 ವರ್ಷ ಇರಬೇಕು ಎಂದರೆ 15 ವರ್ಷ ಇರುತ್ತಾರೆ. ನಮಗೆ ಕೊಟ್ಟ ಕೆಲಸ ಮಾಡಿಕೊಂಡು ಹೋಗುತ್ತಿರಬೇಕು ಅಷ್ಟೇ’ ಎಂದು ಮಾರ್ಮಿಕವಾಗಿ ಹೇಳಿದರು.

‘ನವೆಂಬರ್ ಕ್ರಾಂತಿಯ ದಿನ ನಿಗದಿಯಾಗಿರುವ ಬಗ್ಗೆ ಯಾರೋ ಸುಮ್ಮನೆ ಬರೆದಿದ್ದಾರೆ. ಬಿಹಾರ ಚುನಾವಣೆ ಸೇರಿದಂತೆ ಅನೇಕ ಜವಾಬ್ದಾರಿಗಳನ್ನು ಪಕ್ಷ ನಮಗೆ ನೀಡಿದೆ. ನಾವು ಆ ಕೆಲಸ ಮಾಡುತ್ತಿದ್ದೇವೆ. ಇದರ ಹೊರತಾಗಿ ಬೇರೆ ಯಾವುದೇ ಕ್ರಾಂತಿ ಆಗುವುದಿಲ್ಲ’ ಎಂದು ಅವರು ತಿಳಿಸಿದರು.

▶8

ಬಿಹಾರ ಹಂತ–1 ಶೇ 65ರಷ್ಟು ಮತದಾನ

ಪಟ್ನಾ (ಪಿಟಿಐ): ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಮೂಲಕ ರಾಷ್ಟ್ರ ರಾಜಕಾರಣದಲ್ಲಿ ಸಂಚಲನಕ್ಕೆ ಕಾರಣವಾಗಿದ್ದ ಬಿಹಾರದಲ್ಲಿ ಗುರುವಾರ ಮೊದಲ ಹಂತದ ಚುನಾವಣೆ 121 ಕ್ಷೇತ್ರಗಳಲ್ಲಿ ಶಾಂತಿಯುತವಾಗಿ ನಡೆಯಿತು. ರಾಜ್ಯದ 3.75 ಕೋಟಿ ಮತದಾರರಲ್ಲಿ ಶೇ 65ಷ್ಟು ಮಂದಿ ಮತ ಚಲಾಯಿಸಿದರು. ‘ಮತದಾನದ ದಿನ 143 ದೂರುಗಳು ಬಂದಿದ್ದು, ಅವುಗಳನ್ನು ತಕ್ಷಣವೇ ಇತ್ಯರ್ಥಪಡಿಸಲಾಯಿತು. ಬಕ್ಸರ್, ಫತುವಾ ಮತ್ತು ಸೂರ್ಯಗಢ ಮತಗಟ್ಟೆಗಳಲ್ಲಿ ಮತದಾನ ಬಹಿಷ್ಕರಿಸಿದ್ದರು’ ಎಂದು ಮುಖ್ಯ ಚುನಾವಣಾ ಅಧಿಕಾರಿ (ಸಿಇಒ) ವಿನೋದ್ ಸಿಂಗ್ ಗುಂಜಿಯಾಲ್ ತಿಳಿಸಿದ್ದಾರೆ.

ತಮ್ಮ ಬೆಂಗಾವಲು ಪಡೆ ಮೇಲೆ ದಾಳಿ ನಡೆದಿದೆ ಎಂದು ಉಪ ಮುಖ್ಯಮಂತ್ರಿ ವಿಜಯ್ ಕುಮಾರ್ ಸಿನ್ಹಾ ಅವರು ಆರೋಪಿಸಿದ್ದಾರೆ.

ಚಿನಕುರುಳಿ ಪ್ರಕಾಶ್ ಶೆಟ್ಟಿ

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ, ಅಲ್ಲಲ್ಲಿ ಮಳೆ ಸಾಧ್ಯತೆ

ಚಿಟಿಕೆ ಸುದ್ದಿ

ಚಂದ್ರಕಾಂತ ಬಿಜ್ಜರಗಿಗೆ 'ಕನಕಶ್ರೀ ಪ್ರಶಸ್ತಿ'

ಬೆಂಗಳೂರು: ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನೀಡುವ 'ಕನಕಶ್ರೀ ಪ್ರಶಸ್ತಿ'ಗೆ ಸಾಹಿತಿ ಮತ್ತು ಸಂಶೋಧಕ ಚಂದ್ರಕಾಂತ ಬಿಜ್ಜರಗಿ ಅವರನ್ನು ಆಯ್ಕೆ ಮಾಡಲಾಗಿದೆ.

ಚಂದ್ರಕಾಂತ ಬಿಜ್ಜರಗಿ

ಕನಕದಾಸರ ಜಯಂತಿ ಪ್ರಯುಕ್ತ ನೀಡುವ ಈ ಪ್ರಶಸ್ತಿಯು ₹5 ಲಕ್ಷ ನಗದು, ಕನಕದಾಸರ ಪುತ್ಥಳಿ ಹಾಗೂ ಪ್ರಶಸ್ತಿ ಫಲಕ ಒಳಗೊಂಡಿದೆ. ಸಾಹಿತಿ ಕೆ.ಮರುಳಸಿದ್ದಪ್ಪ ನೇತೃತ್ವದ ಸಮಿತಿ ಈ ಆಯ್ಕೆ ಮಾಡಿದೆ.

ವಿಜಯಪುರದ ಚಂದ್ರಕಾಂತ ಬಿಜ್ಜರಗಿ ಅವರು, 'ದರ್ಪಣ' ವಾರಪತ್ರಿಕೆಯ ಸಂಪಾದಕರಾಗಿ ಕಾರ್ಯನಿರ್ವಹಿಸಿದ್ದಾರೆ. 'ಹಾಲುಮತ ಸನಾತನ ಧರ್ಮ', 'ಕುರುಬರ ಕುಲ ಪುತ್ರ ಚಂದ್ರಗುಪ್ತ ಮೌರ್ಯ', 'ದಾರ್ಶನಿಕ ಕವಿ ಕನಕದಾಸ' ಸೇರಿ ಅನೇಕ ಕೃತಿಗಳನ್ನು ರಚಿಸಿದ್ದಾರೆ. ಅವರ ಅನೇಕ ಸಂಶೋಧನಾ ಲೇಖನಗಳು ವಿವಿಧ ಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ.

ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಇದೇ ಶನಿವಾರ ಆಯೋಜಿಸಿರುವ ಕನಕದಾಸರ ಜಯಂತಿ ಸಮಾರಂಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪ್ರಶಸ್ತಿಯನ್ನು ಪ್ರದಾನ ಮಾಡಲಿದ್ದಾರೆ ಎಂದು ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ತಂಗಡಗಿ ತಿಳಿಸಿದ್ದಾರೆ.

ವೆಂಕಟಾಲದಲ್ಲಿ ನಾಳೆಯಿಂದ ಕಡಲೆಕಾಯಿ ಪರಿಷೆ

ಯಲಹಂಕ: ವೆಂಕಟಾಲದಲ್ಲಿರುವ ಅಭಯ ಮಹಾಗಣಪತಿ ದೇವಾಲಯದ 13ನೇ ವಾರ್ಷಿಕೋತ್ಸವ ಪ್ರಯುಕ್ತ ನವೆಂಬರ್ 8 ಮತ್ತು 9ರಂದು ಕಡಲೆಕಾಯಿ ಪರಿಷೆಯನ್ನು ಆಯೋಜಿಸಲಾಗಿದೆ.

ಪರಿಷೆಯಲ್ಲಿ ಕಡಲೆಕಾಯಿಯನ್ನು ರಾಶಿ ಹಾಕಿ ವ್ಯಾಪಾರ ಮಾಡುವ ಪ್ರತಿಯೊಬ್ಬರಿಗೂ ₹500 ಪ್ರೋತ್ಸಾಹಧನ ವಿತರಿಸಲಾಗುವುದು ಎಂದು ದೇವಸ್ಥಾನದ ಆಡಳಿತ ಮಂಡಳಿ ಅಧ್ಯಕ್ಷ ಕೆಂಪೇಗೌಡ ತಿಳಿಸಿದ್ದಾರೆ.

ಮಾಹಿತಿಗಾಗಿ 9980196440/9632365956 ಸಂಪರ್ಕಿಸಬಹುದು ಎಂದೂ ಮಾಹಿತಿ ನೀಡಿದ್ದಾರೆ.

ಭೂಭರ್ತಿಗೆ ತ್ಯಾಜ್ಯ: ಪ್ರಮಾಣ ಕಡಿತ

ಪ್ರತಿನಿತ್ಯ 600 ಟನ್ ಒಣ ತ್ಯಾಜ್ಯದಿಂದ 11.5 ಮೆಗಾವಾಟ್ ವಿದ್ಯುತ್ ಉತ್ಪಾದನೆ

ಪ್ರಜಾವಾಣಿ ವಾರ್ತೆ

ಅಂಕಿ ಅಂಶಗಳು

6,000 ಟನ್
ಪ್ರತಿನಿತ್ಯ ನಗರದಲ್ಲಿ ಉತ್ಪಾದನೆಯಾಗುವ ತ್ಯಾಜ್ಯ

1,500 ಟನ್
ಪ್ರತಿನಿತ್ಯ ಸಂಗ್ರಹವಾಗುವ ಒಣತ್ಯಾಜ್ಯ

ಕಸದಿಂದ ವಿದ್ಯುತ್

ಬೆಂಗಳೂರು: ಬಿಡದಿಯಲ್ಲಿ ಕಸದಿಂದ ವಿದ್ಯುತ್ ಉತ್ಪಾದಿಸುವ ಘಟಕ ಪೂರ್ಣ ಪ್ರಮಾಣದಲ್ಲಿ ಕಾರ್ಯನಿರ್ವಹಿಸುತ್ತಿರುವುದರಿಂದ ಭೂಭರ್ತಿಗೆ ಹೋಗುವ ತ್ಯಾಜ್ಯದ ಪ್ರಮಾಣ ಕಡಿಮೆಯಾಗಿದೆ ಎಂದು ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತದ (ಬಿಎಸ್‌ಡಬ್ಲ್ಯುಎಂಎಲ್) ಸಿಇಒ ಕರೀಗೌಡ ತಿಳಿಸಿದರು.

ಕರ್ನಾಟಕ ವಿದ್ಯುತ್ ನಿಗಮದ (ಕೆಪಿಸಿಎಲ್) ಸಹಭಾಗಿತ್ವದಲ್ಲಿ ಬಿಡದಿಯಲ್ಲಿ ಸ್ಥಾಪಿಸಿರುವ ತ್ಯಾಜ್ಯದಿಂದ ವಿದ್ಯುತ್ ಉತ್ಪಾದಿಸುವ ಘಟಕದಲ್ಲಿ ಗುರುವಾರ ಪರಿಶೀಲನೆ ನಡೆಸಿದ ನಂತರ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು.

ಜಿಬಿಎಯ ಐದು ನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ ಸಂಗ್ರಹಿಸುತ್ತಿರುವ 200 ಟನ್ ಒಣ ತ್ಯಾಜ್ಯವನ್ನು ಅಕ್ಟೋಬರ್‌ನಿಂದ ಪ್ರತಿನಿತ್ಯವೂ ವಿದ್ಯುತ್ ಉತ್ಪಾದನೆ ಘಟಕಕ್ಕೆ ಕಳುಹಿಸಲಾಗುತ್ತಿದೆ. ಹೀಗಾಗಿ, ಭೂಭರ್ತಿಗೆ ಹೋಗುತ್ತಿದ್ದ 390 ಕಾಂಪ್ಯಾಕ್ಟರ್‌ಗಳ ಸಂಖ್ಯೆ 340ಕ್ಕೆ ಇಳಿಕೆಯಾಗಿದೆ ಎಂದು ಹೇಳಿದರು.

ಮಂಡೂರಿನ ಹಳೆಯ ತ್ಯಾಜ್ಯದಿಂದ ಬೇರ್ಪಡಿಸಿದ 400 ಟನ್ ಒಣ ತ್ಯಾಜ್ಯವನ್ನು (ಆರ್‌ಡಿಎಫ್) ವಿದ್ಯುತ್ ಉತ್ಪಾದನಾ ಘಟಕಕ್ಕೆ ಕಳುಹಿಸಲಾಗುತ್ತಿದೆ. ನವೆಂಬರ್ ಅಂತ್ಯದ ವೇಳೆಗೆ, ನಗರದಲ್ಲಿ ನಿತ್ಯ ಸಂಗ್ರಹವಾಗುವ ಕಸದಲ್ಲೇ ವಿಂಗಡಿಸಲಾದ 600 ಟನ್ ಒಣ ತ್ಯಾಜ್ಯವನ್ನು ವಿದ್ಯುತ್ ಘಟಕಕ್ಕೆ ಪ್ರತಿನಿತ್ಯ ಕಳುಹಿಸುವ ಗುರಿ ಹೊಂದಲಾಗಿದೆ. ಇದರಿಂದ ಭೂಭರ್ತಿ ಮೇಲಿನ ಅವಲಂಬನೆ ಸಾಕಷ್ಟು ಪ್ರಮಾಣದಲ್ಲಿ ಕಡಿಮೆಯಾಗಲಿದೆ. ಕಸದಿಂದ ವಿದ್ಯುತ್ ಉತ್ಪಾದನೆ ಮಾಡುವ ಇನ್ನೂ ಮೂರು ಘಟಕಗಳನ್ನು ಸ್ಥಾಪಿಸುವ ಉದ್ದೇಶವಿದೆ ಎಂದು ಮಾಹಿತಿ ನೀಡಿದರು.

ಬಿಡದಿಯಲ್ಲಿರುವ ಕಸದಿಂದ ವಿದ್ಯುತ್ ಉತ್ಪಾದಿಸುವ ಘಟಕ

ತ್ಯಾಜ್ಯದಿಂದ ವಿದ್ಯುತ್ ಉತ್ಪಾದನಾ ಘಟಕ ನಿರ್ಮಾಣಕ್ಕಾಗಿ ಜಿಬಿಎ ಮತ್ತು ಕೆಪಿಸಿಎಲ್ ನಡುವೆ ಒಪ್ಪಂದ ಮಾಡಿಕೊಂಡಿದ್ದು, ನಿರ್ಮಾಣ ವೆಚ್ಚದಲ್ಲಿ ತಲಾ ಶೇ 50ರಷ್ಟು ಪಾಲಿದೆ. ಒಟ್ಟು ₹314.74 ಕೋಟಿ ವೆಚ್ಚದಲ್ಲಿ ಘಟಕವನ್ನು ನಿರ್ಮಿಸಲಾಗಿದೆ. ಪುನರ್‌ಬಳಕೆ ಸಾಧ್ಯವಾಗದ ಪ್ಲಾಸ್ಟಿಕ್ ಹಾಗೂ ಒಣತ್ಯಾಜ್ಯವನ್ನು ಬಳಸಿ ಪ್ರತಿನಿತ್ಯ 11.5 ಮೆಗಾವಾಟ್ ವಿದ್ಯುತ್ ಉತ್ಪಾದಿಸಲಾಗುತ್ತಿದೆ ಎಂದು ಕೆಪಿಸಿಎಲ್ ಕಾರ್ಯಪಾಲಕ ಎಂಜಿನಿಯರ್ ಸತೀಶ್ ಕುಮಾರ್ ತಿಳಿಸಿದರು.

'ಈ ಘಟಕದಲ್ಲಿ ಒಂದು ದಿನ ಉತ್ಪಾದನೆಯಾಗುವ ವಿದ್ಯುತ್ ಅನ್ನು ನಿತ್ಯ ಸರಾಸರಿ 5 ಯೂನಿಟ್ ವಿದ್ಯುತ್ ಬಳಸುವ 25 ಸಾವಿರ ಮನೆಗಳಿಗೆ 24 ಗಂಟೆಯೂ ಸರಬರಾಜು ಮಾಡಬಹುದು. ಕಸದಿಂದ ವಿದ್ಯುತ್ ಉತ್ಪಾದಿಸುವ ರಾಜ್ಯದ ಮೊದಲ ಘಟಕ ಇದು. ಘಟಕದಿಂದ ಯಾವುದೇ ವಾಯುಮಾಲಿನ್ಯ ಉಂಟಾಗುವುದಿಲ್ಲ. ವಾಸನೆ ಹರಡದಂತೆ ಸಿಂಪಡಣೆ ಸೇರಿ ಎಲ್ಲ ಮುನ್ನೆಚ್ಚರಿಕಾ ಕ್ರಮ ಕೈಗೊಳ್ಳಲಾಗಿದೆ' ಎಂದು ತಿಳಿಸಿದರು.

'ಅಕ್ಟೋಬರ್ ತಿಂಗಳಲ್ಲಿ ಘಟಕದ ಸಾಮರ್ಥ್ಯ ಶೇ 75ರಷ್ಟು ಪ್ರಮಾಣದಲ್ಲಿ ಬಳಕೆಯಾಗಿದ್ದು, 2024ರ ಜುಲೈನಿಂದ ಇದು ಅತಿಹೆಚ್ಚಿನ ಉತ್ಪಾದನೆಯಾಗಿದೆ. ಈವರೆಗೆ 1,68,036 ಟನ್ ತ್ಯಾಜ್ಯವನ್ನು ಸಂಸ್ಕರಿಸಲಾಗಿದ್ದು, 54.29 ದಶಲಕ್ಷ ಯೂನಿಟ್ ವಿದ್ಯುತ್ ಉತ್ಪಾದನೆಯಾಗಿದೆ ಎಂದು ಮಾಹಿತಿ ನೀಡಿದರು.

ತ್ಯಾಜ್ಯ ವಿಂಗಡಿಸಿ ಕೊಡಿ: ಕರೀಗೌಡ



'ನಗರದಲ್ಲಿ ಮನೆಗಳಲ್ಲಿ ಒಣ ಮತ್ತು ಹಸಿ ತ್ಯಾಜ್ಯವನ್ನು ಕಡ್ಡಾಯವಾಗಿ ಪ್ರತ್ಯೇಕಿಸಿ ಆಟೊ ಟಿಪ್ಪರ್‌ಗೆ ನೀಡಲು ಎಲ್ಲ ನಾಗರಿಕರಿಗೆ ಮನವಿ ಮಾಡಿಕೊಳ್ಳುತ್ತೇನೆ. ತ್ಯಾಜ್ಯದಿಂದ ವಿದ್ಯುತ್ ಉತ್ಪಾದಿಸುವ ಘಟಕಗಳ ಸ್ಥಾಪನೆಗೆ ಇದರಿಂದ ಸಹಕಾರಿಯಾಗುತ್ತದೆ. ಕೆಲವು ಭಾಗದಲ್ಲಿ ಜನರು ವಿಂಗಡಿಸಿ ಕೊಟ್ಟರೂ ಅದನ್ನು ನಮ್ಮ ಸಿಬ್ಬಂದಿ ಒಟ್ಟುಗೂಡಿಸುತ್ತಿದ್ದಾರೆ ಎಂಬ ಆರೋಪವಿದೆ. ಇಂತಹ ಪ್ರಕರಣಗಳ ಬಗ್ಗೆ ಕಠಿಣ ಕ್ರಮ ಕೈಗೊಳ್ಳಲಾಗುತ್ತದೆ' ಎಂದು ಬಿಎಸ್‌ಡಬ್ಲ್ಯುಎಂಎಲ್‌ನ ಸಿಇಒ ಕರೀಗೌಡ ತಿಳಿಸಿದರು.

ಸುದ್ದಿ 2 ನಿಮಿಷ

ಟಿವಿಗಾಗಿ ಕೈದಿಗಳ ರಂಪಾಟ

ಕಲಬುರಗಿ: ನಗರದ ಹೊರವಲಯದ ಕೇಂದ್ರ ಕಾರಾಗೃಹದಲ್ಲಿ ಟಿವಿ ನೀಡುವಂತೆ ವಿಚಾರಣಾಧೀನ ಕೈದಿಗಳಿಬ್ಬರು ರಂಪಾಟ ನಡೆಸಿದ ವಿಷಯ ತಡವಾಗಿ ಬೆಳಕಿಗೆ ಬಂದಿದೆ.

ವಿಚಾರಣಾಧೀನ ಕೈದಿಗಳಾದ ಕಿರಣ್ ಶೆಟ್ಟಿ ಹಾಗೂ ತುಳಸಿರಾಮ ಹರಿಜನ ರಂಪಾಟ ನಡೆಸಿದವರು.

ಘಟನೆಯ ವಿವರ: ಮೈಸೂರು ಮೂಲದ ವಿಚಾರಣಾಧೀನ ಕೈದಿ ಕಿರಣ್ ಶೆಟ್ಟಿ ಶಿಸ್ತುಕ್ರಮದ ಮೇಲೆ ಬೆಂಗಳೂರಿನ ಕೇಂದ್ರ ಕಾರಾಗೃಹದಿಂದ 2025ರ ಫೆಬ್ರುವರಿ 22ರಂದು ಕಲಬುರಗಿ ಕೇಂದ್ರ ಕಾರಾಗೃಹಕ್ಕೆ ಸ್ಥಳಾಂತರಗೊಂಡಿದ್ದ. ನ.1ರಂದು ಅನಾರೋಗ್ಯದ ನಿಮಿತ್ತ ಆತನನ್ನು ಜಿಮ್ಸ್‌ಗೆ ಚಿಕಿತ್ಸೆಗಾಗಿ ದಾಖಲಿಸಲಾಗಿತ್ತು. ನ.4ರಂದು ಗುಣಮುಖವಾಗಿ ಕೈದಿ ಜೈಲಿಗೆ ಮರುಳುತ್ತಿದ್ದ. ಆಗ ತನ್ನೊಂದಿಗೆ 32 ಇಂಚಿನ ಟಿವಿ, ಏರ್‌ಟೆಲ್ ಡಿಶ್ ಬಾಕ್ಸ್, 64 ಜಿಬಿ ಸಾಮರ್ಥ್ಯದ ಪೆನ್‌ಡ್ರೈವ್, ಒಂದು ಸಣ್ಣ ಕನ್ನಡಿ, ಎರಡು ಚಿಕ್ಕ ಕತ್ತರಿ ಹಾಗೂ ₹ 2,500 ನಗದನ್ನು ಜೈಲಿನಲ್ಲಿ ಒಯ್ಯಲು ಯತ್ನಿಸಿದ್ದ. ಭದ್ರತೆಗೆ ನಿಯೋಜನೆಗೊಂಡಿದ್ದ ಕೆಎಸ್‌ಐಎಸ್‌ಎಫ್‌ನ ಸಿಬ್ಬಂದಿ ಆತನನ್ನು ತಪಾಸಣೆಗೆ ಒಳಪಡಿಸಿದಾಗ ಇದು ಪತ್ತೆಯಾಗಿತ್ತು. ಬಳಿಕ ಎಲ್ಲ ನಿಷೇಧಿತ ವಸ್ತುಗಳನ್ನು ಭದ್ರತಾ ಸಿಬ್ಬಂದಿ ವಶಕ್ಕೆ ಪಡೆದಿದ್ದರು.

'ತದನಂತರ ಸಂಜೆ ಕಾರಾಗೃಹದಲ್ಲಿ ಕೈದಿಗಳನ್ನು ಸೆಲ್‌ಗೆ ಹಾಕುವಾಗ ವಿಚಾರಣಾಧೀನ ಕೈದಿ ಕಿರಣ್ ಶೆಟ್ಟಿ ಹಾಗೂ ಮತ್ತೊಬ್ಬ ವಿಚಾರಣಾಧೀನ ಕೈದಿ ತುಳಸಿರಾಮ ಹರಿಜನ ಸೆಲ್‌ನಲ್ಲಿ ಲಾಕ್ ಆಗದೇ ಟಿವಿ ನೀಡುವಂತೆ ಗಲಾಟೆ ಶುರು ಮಾಡಿದ್ದಾರೆ. ಕಾರಾಗೃಹದ ಸಿಬ್ಬಂದಿಗೆ ನಿಂದಿಸಿ ಕರ್ತವ್ಯಕ್ಕೂ ಅಡ್ಡಿಪಡಿಸಿದ್ದಾರೆ. ಕಾರಾಗೃಹದ ಆಡಳಿತ ಹಾಗೂ ಭದ್ರತೆಗೆ ಧಕ್ಕೆ ತರುವ ಉದ್ದೇಶದಿಂದ ಜೈಲಿನ ಗೇಟ್‌ಗೆ ಕಲ್ಲು ತೂರಾಟ ನಡೆಸಿದ್ದಾರೆ' ಎನ್ನಲಾಗಿದೆ.

ಕೆ.ಆರ್.ಪುರ: ಅಂಬೇಡ್ಕರ್ ಪುತ್ಥಳಿ ನಿರ್ಮಾಣಕ್ಕೆ ಒತ್ತಾಯ

ಕೆ.ಆರ್.ಪುರ: ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಪುತ್ಥಳಿ ನಿರ್ಮಿಸುವಂತೆ ಒತ್ತಾಯಿಸಿ ಭೀಮ್ ಪ್ರಜಾ ಸಂಘದ ನೇತೃತ್ವದಲ್ಲಿ ಕೋಲಾರದಿಂದ ಬೆಂಗಳೂರುವರೆಗೆ ಹಮ್ಮಿಕೊಂಡಿರುವ ಪಾದಯಾತ್ರೆಯನ್ನು ಹೊಸಕೋಟೆ ಟೋಲ್ ಬಳಿ ಪೊಲೀಸರು ತಡೆದು, ನೂರಾರು ಪ್ರತಿಭಟನಕಾರರನ್ನು ವಶಕ್ಕೆ ಪಡೆದರು.

'ಅಂಬೇಡ್ಕರ್ ಪುತ್ಥಳಿ ನಿರ್ಮಾಣ ಮಾಡುವಂತೆ ಸರ್ಕಾರದ ಮೇಲೆ ಒತ್ತಡ ಹೇರಲು ಸ್ವಾಭಿಮಾನಿಗಳ ನೇತೃತ್ವದಲ್ಲಿ ಪಾದಯಾತ್ರೆ ಹಮ್ಮಿಕೊಳ್ಳಲಾಗಿದೆ. ಆದರೆ, ಪೊಲೀಸರು ಏಕಾಏಕಿ ತಡೆದು ಹೋರಾಟವನ್ನು ಹತ್ತಿಕ್ಕುವ ಕೆಲಸ ಮಾಡುತ್ತಿದ್ದಾರೆ ಎಂದು ಸಂಘದ ರಾಜ್ಯ ಘಟಕದ ಅಧ್ಯಕ್ಷ ವೈಟ್‌ಫೀಲ್ಡ್ ಮುರುಗೇಶ್ ಆಕ್ರೋಶ ವ್ಯಕ್ತಪಡಿಸಿದರು.

'ಸಚಿವ ಮಹಾದೇವಪ್ಪ ಅವರು ನಾಲ್ಕು ತಿಂಗಳಲ್ಲಿ ಅಂಬೇಡ್ಕರ್ ಪುತ್ಥಳಿ ನಿರ್ಮಿಸುವ ಕಾರ್ಯ ಮಾಡಲಾಗುವುದು ಎಂದು ಆಶ್ವಾಸನೆ ನೀಡಿದ್ದರು. ಆದರೆ, ಇಲ್ಲಿಯವರೆಗೆ ಪ್ರತಿಮೆ ನಿರ್ಮಿಸಲು ಮುಂದಾಗಿಲ್ಲ' ಎಂದರು.

ಭಾರತೀಯ ವಿದ್ಯಾಭವನದಲ್ಲಿ ಸಂತವಾಣಿ ಉತ್ಸವ 10 ರಿಂದ

ಬೆಂಗಳೂರು: ಭಾರತದ ಸಂತರ ಸಂದೇಶ, ಧರ್ಮಗಳ ಸಾರ, ನಮ್ಮ ಪರಂಪರೆಯನ್ನು ಪರಿಚಯಿಸಲೆಂದೇ ನಗರದ ಭಾರತೀಯ ವಿದ್ಯಾಭವನದಲ್ಲಿ ನ.10ರಿಂದ 12 ದಿನಗಳ ಕಾಲ ಸಂತವಾಣಿ ಉತ್ಸವ ಹಮ್ಮಿಕೊಳ್ಳಲಾಗಿದೆ.

ನಿತ್ಯ ಬೆಳಿಗ್ಗೆಯಿಂದ ಸಂಜೆ ವರೆಗೂ ಚಲನಚಿತ್ರ ಪ್ರದರ್ಶನ, ಸಾಂಸ್ಕೃತಿಕ ಕಾರ್ಯಕ್ರಮ, ನಾಟಕ, ತಜ್ಞರಿಂದ ವಿಚಾರ ಮಂಡನೆ, ಪುಸ್ತಕ ಪ್ರದರ್ಶನ ಆಸಕ್ತರನ್ನು ಆಕರ್ಷಿಸಲಿವೆ ಎಂದು ಭಾರತೀಯ ವಿದ್ಯಾಭವನ ನಿರ್ದೇಶಕ ಎಚ್.ಎನ್.ಸುರೇಶ್ ತಿಳಿಸಿದ್ದಾರೆ.

ಭಕ್ತ ಕನಕದಾಸ, ತ್ಯಾಗಯ್ಯ, ಸಂತ ತುಕಾರಾಂ, ಸಂತ ಶಿಶುನಾಳ ಶರೀಫ, ಮೀರಾ ಚಲನಚಿತ್ರಗಳು ಚಿತ್ರೋತ್ಸವದ ಆಕರ್ಷಣೆಯಾಗಲಿವೆ. ರಾಷ್ಟ್ರ ಪ್ರಶಸ್ತಿ ಪುರಸ್ಕೃತ ನಿರ್ದೇಶಕ ಟಿ.ಎಸ್. ನಾಗಾಭರಣ ಚಿತ್ರೋತ್ಸವಕ್ಕೆ ಚಾಲನೆ ನೀಡುವರು. ಸಾಧು ಸಂತರ ಕುರಿತ ಪುಸ್ತಕಗಳ ಪ್ರದರ್ಶನ, ಮಾರಾಟಕ್ಕೂ ವ್ಯವಸ್ಥೆ ಮಾಡಲಾಗಿದ್ದು ಮೇಳವನ್ನು ನರಹಳ್ಳಿ ಬಾಲಸುಬ್ರಹ್ಮಣ್ಯ ಉದ್ಘಾಟಿಸುವರು. ಪ್ರತಿದಿನ ತಜ್ಞರ ಉಪನ್ಯಾಸ, ದೇಶದ ನಾನಾ ಭಾಗಗಳ ಕಲಾವಿದರ ನೃತ್ಯರೂಪಕ, ಸಮೂಹ ಗಾಯನ ಒಳಗೊಂಡ ಸಾಂಸ್ಕೃತಿಕ ಕಾರ್ಯಕ್ರಮಗಳೂ ಇರಲಿವೆ.

ಕಲ್ಯಾಣ ಕರ್ನಾಟಕದ ತತ್ವಪದಕಾರರ ತತ್ವಪದಗಳು, ಆಳ್ವಾರ್, ನಯನ್ಮಾರ್, ನಾಥ, ಹರಿದಾಸ, ಗುರುಬಾನಿ, ವಾರ್ಕರಿ, ಗೌಡೀಯ, ರಮಾನಂದ, ಶಿವಶರಣ ಸಂಪ್ರದಾಯದ ಕುರಿತು ಪ್ರಸ್ತುತಿ ಇರಲಿದೆ. ಗುಜರಾತ್, ರಾಜಸ್ಥಾನ, ಪಶ್ಚಿಮ ಬಂಗಾಳ, ತಮಿಳುನಾಡು, ಕೇರಳದಿಂದ ಆಗಮಿಸುವ ಉಪನ್ಯಾಸಕರು ಜೈನ, ಬೌದ್ಧ, ಕ್ರೈಸ್ತ, ಇಸ್ಲಾಂ ಧರ್ಮದ ಸಂತರ ಕುರಿತು ವಿಚಾರ ಮಂಡಿಸುವರು.

ಆಸಕ್ತರು ಭಾರತೀಯ ವಿದ್ಯಾಭವನದ ಜಂಟಿ ನಿರ್ದೇಶಕಿ ನಾಗಲಕ್ಷ್ಮಿ ರಾವ್ ಅವರನ್ನು 9845625899 ಮೂಲಕ ಸಂಪರ್ಕಿಸಬಹುದು. santvanibvbblr@gmail.com ಬಳಸಿ ಹೆಸರು ನೋಂದಾಯಿಸಿಕೊಳ್ಳಬಹುದು ಎಂದು ತಿಳಿಸಿದ್ದಾರೆ.

ಶಿಕ್ಷಕರ ಸಮಸ್ಯೆ ಬಗೆಹರಿಸುವಲ್ಲಿ ಸರ್ಕಾರ ವಿಫಲ: ಆರೋಪ

ಬೆಂಗಳೂರು: 'ರಾಜ್ಯದಲ್ಲಿನ ಕಾಂಗ್ರೆಸ್ ಸರ್ಕಾರ ಶಿಕ್ಷಕರ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ಸಂಪೂರ್ಣ ವಿಫಲವಾಗಿದೆ' ಎಂದು ಜೆಡಿಎಸ್ ಬೆಂಗಳೂರು ಜಿಲ್ಲಾ ಘಟಕದ ಅಧ್ಯಕ್ಷ ಎಚ್.ಎಂ. ರಮೇಶ್‌ಗೌಡ ದೂರಿದರು.

ವಿಧಾನ ಪರಿಷತ್ ಚುನಾವಣೆಗೆ ಸಂಬಂಧಿಸಿದಂತೆ ಬೆಂಗಳೂರು ಶಿಕ್ಷಕರ ಕ್ಷೇತ್ರದ ಬಗ್ಗೆ ಅವರು ಪಕ್ಷದ ಮುಖಂಡರ ಜತೆಗೆ ಮಂಗಳವಾರ ಸಭೆ ನಡೆಸಿದರು.

'ಮುಂದಿನ ವರ್ಷ ಮೇಲ್ಮನೆಗೆ ಚುನಾವಣೆ ನಡೆಯಲಿದ್ದು, ಮುಖಂಡರು ಮತ್ತು ಕಾರ್ಯಕರ್ತರು ಒಗ್ಗಟ್ಟಿನಿಂದ ಕೆಲಸ ಮಾಡಬೇಕು. ಬೆಂಗಳೂರು ನಗರ ಶಿಕ್ಷಕರ ಕ್ಷೇತ್ರದಲ್ಲಿ ದೊಡ್ಡ ಪ್ರಮಾಣದಲ್ಲಿ ಶಿಕ್ಷಕರ ನೋಂದಣಿ ಮಾಡಿಸಬೇಕು' ಎಂದು ಹೇಳಿದರು.

ಜೆಡಿಎಸ್ ಪಕ್ಷದ ಮುಖಂಡರ ಸಭೆಯಲ್ಲಿ ರಮೇಶ್‌ಗೌಡ ಮಾತನಾಡಿದರು

'ರಾಜ್ಯ ಸರ್ಕಾರವು ನಿರುದ್ಯೋಗ ಸಮಸ್ಯೆ ತೊಡೆದು ಹಾಕಿ, ಪದವೀಧರ ನಿರುದ್ಯೋಗಿಗಳಿಗೆ ಉದ್ಯೋಗ ಕಲ್ಪಿಸುವಲ್ಲಿ ಸಂಪೂರ್ಣ ವಿಫಲವಾಗಿದೆ. ಯುವನಿಧಿ 'ಗ್ಯಾರಂಟಿ'ಯನ್ನೂ ಸಮರ್ಪಕವಾಗಿ ಜಾರಿಗೊಳಿಸಿಲ್ಲ. ಈ ವಿಷಯಗಳನ್ನು ಇಟ್ಟುಕೊಂಡು ನಾವು ಶಿಕ್ಷಕರನ್ನು ಸಂಘಟಿಸಬೇಕು' ಎಂದರು.

'ಮೇಲ್ಮನೆ ಚುನಾವಣೆಯಲ್ಲಿ ಎನ್‌ಡಿಎ ಮೈತ್ರಿಕೂಟವು ಎಲ್ಲ ಕ್ಷೇತ್ರಗಳನ್ನು ಗೆಲ್ಲಬೇಕು' ಎಂದು ಹೇಳಿದರು.

ವಿಧಾನ ಪರಿಷತ್ತಿನ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಸ್.ಎಲ್. ಭೋಜೇಗೌಡ, ಶಾಸಕರಾದ ಜವರಾಯಿ ಗೌಡ, ಟಿ.ಎ. ಶರವಣ, ಮಾಜಿ ಶಾಸಕರಾದ ಕೆ.ಎ. ತಿಪ್ಪೇಸ್ವಾಮಿ, ಚೌಡರೆಡ್ಡಿ ತೂಪಲ್ಲಿ, ಪಕ್ಷದ ನಗರ ಮಹಿಳಾ ವಿಭಾಗದ ಅಧ್ಯಕ್ಷೆ ಶೈಲಾ ಸಂತೋಜಿ ರಾವ್ ಉಪಸ್ಥಿತರಿದ್ದರು.

ಕೆ.ಐ.ಎ.ಡಿ.ಬಿ.
ಜಿಲ್ಲಾಡಳಿತ, ತುಮಕೂರು ಜಿಲ್ಲೆ, ತುಮಕೂರು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ, ತುಮಕೂರು ಇವರ ಸಂಯುಕ್ತಾಶ್ರಯದಲ್ಲಿ
ತುಮಕೂರು ತಾಲ್ಲೂಕಿನ ಭೀಮಸಂದ್ರ ಕೆರೆಯಿಂದ ವಸಂತನರಸಾಪುರ ಕೈಗಾರಿಕಾ ಪ್ರದೇಶಕ್ಕೆ 30 ಎಂ.ಎಲ್.ಡಿ. ತೃತೀಯ ಹಂತದ ಸಂಸ್ಕರಿಸಿದ ನೀರು ಪೂರೈಕೆ ಯೋಜನೆಯ ಪ್ರಾರಂಭೋತ್ಸವ
ದಿನಾಂಕ: 07.11.2025, ಮಧ್ಯಾಹ್ನ 02.30 ಗಂಟೆ, ಸ್ಥಳ: ತುಮಕೂರು ಜಿಲ್ಲಾ ಆಸ್ಪತ್ರೆ ಆವರಣ, ಬಿ.ಹೆಚ್.ರಸ್ತೆ, ತುಮಕೂರು
ಶ್ರೀ ಸಿದ್ದರಾಮಯ್ಯ
ಮಾನ್ಯ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

ಶ್ರೀ ಡಿ. ಕೆ. ಶಿವಕುಮಾರ
ಮಾನ್ಯ ಉಪ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

ಶ್ರೀ ಎಂ.ಬಿ. ಪಾಟೀಲ
ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯರವರೊಡನೆ ಸಂವಾದ ನಡೆಸುತ್ತಿರುವುದು

ಉದ್ಘಾಟನೆ
ಶ್ರೀ ಸಿದ್ದರಾಮಯ್ಯ
ಮಾನ್ಯ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

ಘನ ಉಪಸ್ಥಿತಿ
ಶ್ರೀ ಡಿ.ಕೆ. ಶಿವಕುಮಾರ
ಮಾನ್ಯ ಉಪ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ
ಶ್ರೀ ವಿ. ಸೋಮಣ್ಣ
ಮಾನ್ಯ ರೈಲ್ವೆ ಮತ್ತು ಜಲಶಕ್ತಿ ರಾಜ್ಯ ಖಾತೆ ಸಚಿವರು, ಭಾರತ ಸರ್ಕಾರ ಹಾಗೂ ಸಂಸದರು, ತುಮಕೂರು ಲೋಕಸಭಾ ಕ್ಷೇತ್ರ
ಡಾ. ಜಿ. ಪರಮೇಶ್ವರ
ಮಾನ್ಯ ಗೃಹ ಸಚಿವರು, ಕರ್ನಾಟಕ ಸರ್ಕಾರ ಹಾಗೂ ತುಮಕೂರು ಜಿಲ್ಲೆ ಉಸ್ತುವಾರಿ ಸಚಿವರು

ಅಧ್ಯಕ್ಷತೆ
ಶ್ರೀ ಎಂ. ಬಿ. ಪಾಟೀಲ
ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ, ಮೂಲಸೌಲಭ್ಯ ಅಭಿವೃದ್ಧಿ ಸಚಿವರು
ಕರ್ನಾಟಕ ಸರ್ಕಾರ

ಮುಖ್ಯ ಅತಿಥಿಗಳು
ಶ್ರೀ ಟಿ.ಬಿ. ಜಯಚಂದ್ರ
ಮಾನ್ಯ ಕರ್ನಾಟಕ ಸರ್ಕಾರದ ವಿಶೇಷ ಪ್ರತಿನಿಧಿ ನವದೆಹಲಿ ಹಾಗೂ ಶಾಸಕರು, ಶಿರಾ ವಿಧಾನಸಭಾ ಕ್ಷೇತ್ರ
ಶ್ರೀ ಎಸ್.ಆರ್. ಶ್ರೀನಿವಾಸ್
ಮಾನ್ಯ ಅಧ್ಯಕ್ಷರು, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ ನಿಯಮಿತ ಹಾಗೂ ಶಾಸಕರು, ಗುಬ್ಬಿ ವಿಧಾನಸಭಾ ಕ್ಷೇತ್ರ
ಶ್ರೀ ಗೋವಿಂದ ಎಂ ಕಾರಜೋಳ
ಮಾನ್ಯ ಸಂಸದರು, ಚಿತ್ರದುರ್ಗ ಲೋಕಸಭಾ ಕ್ಷೇತ್ರ
ಡಾ|| ಸಿ.ಎನ್. ಮಂಜುನಾಥ್
ಮಾನ್ಯ ಸಂಸದರು, ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರ
ಶ್ರೀ ಕೆ. ಎನ್. ರಾಜಣ್ಣ
ಮಾನ್ಯ ಶಾಸಕರು, ಮಧುಗಿರಿ ವಿಧಾನಸಭಾ ಕ್ಷೇತ್ರ ಹಾಗೂ ಅಧ್ಯಕ್ಷರು, ಡಿ.ಸಿ.ಸಿ. ಬ್ಯಾಂಕ್ ತುಮಕೂರು
ಶ್ರೀ ಸುರೇಶ್ ಬಾಬು ಸಿ.ಬಿ.
ಮಾನ್ಯ ಶಾಸಕರು, ಚಿ.ನಾ.ಹಳ್ಳಿ ವಿಧಾನಸಭಾ ಕ್ಷೇತ್ರ
ಶ್ರೀ ಎಂ.ಟಿ. ಕೃಷ್ಣಪ್ಪ
ಮಾನ್ಯ ಶಾಸಕರು, ತುರುವೇಕೆರೆ ವಿಧಾನಸಭಾ ಕ್ಷೇತ್ರ
ಶ್ರೀ ಕೆ. ಷಡಕ್ಷರಿ
ಮಾನ್ಯ ಶಾಸಕರು, ತಿಪಟೂರು ವಿಧಾನಸಭಾ ಕ್ಷೇತ್ರ
ಶ್ರೀ ಬಿ.ಸುರೇಶ್‌ಗೌಡ
ಮಾನ್ಯ ಶಾಸಕರು, ತುಮಕೂರು ಗ್ರಾಮಾಂತರ ವಿಧಾನಸಭಾ ಕ್ಷೇತ್ರ
ಡಾ|| ಹೆಚ್.ಡಿ. ರಂಗನಾಥ್
ಮಾನ್ಯ ಶಾಸಕರು, ಕುಣಿಗಲ್ ವಿಧಾನಸಭಾ ಕ್ಷೇತ್ರ
ಶ್ರೀ ಜಿ. ಬಿ. ಜ್ಯೋತಿಗಣೇಶ್
ಮಾನ್ಯ ಶಾಸಕರು, ತುಮಕೂರು ನಗರ ವಿಧಾನಸಭಾ ಕ್ಷೇತ್ರ
ಶ್ರೀ ಹೆಚ್. ವಿ. ವೆಂಕಟೇಶ್
ಮಾನ್ಯ ಶಾಸಕರು ಪಾವಗಡ ವಿಧಾನಸಭಾ ಕ್ಷೇತ್ರ ಹಾಗೂ ಅಧ್ಯಕ್ಷರು, ತುಮಕೂರು ಹಾಲು ಒಕ್ಕೂಟ.
ಶ್ರೀ ಚಿದಾನಂದ ಎಂ. ಗೌಡ
ಮಾನ್ಯ ವಿಧಾನ ಪರಿಷತ್ ಸದಸ್ಯರು
ಶ್ರೀ ರಾಜೇಂದ್ರ ಆರ್.
ಮಾನ್ಯ ವಿಧಾನ ಪರಿಷತ್ ಸದಸ್ಯರು
ಶ್ರೀ ಡಿ. ಟಿ. ಶ್ರೀನಿವಾಸ್
ಮಾನ್ಯ ವಿಧಾನ ಪರಿಷತ್ ಸದಸ್ಯರು

ನಿಗಮ, ಸಮಿತಿ, ಮಂಡಳಿ, ಗ್ರಾಮ ಪಂಚಾಯಿತಿಯ ಮಾನ್ಯ ಅಧ್ಯಕ್ಷರುಗಳು, ಉಪಾಧ್ಯಕ್ಷರು ಮುಖ್ಯ ಅತಿಥಿಗಳಾಗಿ ಮತ್ತು ಸ್ಥಳೀಯ ಚುನಾಯಿತ ಜನಪ್ರತಿನಿಧಿಗಳು ಕಾರ್ಯಕ್ರಮದಲ್ಲಿ ಭಾಗವಹಿಸುವರು

ಸರ್ವರಿಗೂ ಆದರದ ಸುಸ್ವಾಗತ

ವೀರಭದ್ರಯ್ಯ ಬಿ.ಆರ್.
ಮುಖ್ಯ ಅಭಿಯಂತರರು-1, ಕೆಐಎಡಿಬಿ ಕೇಂದ್ರ ಕಚೇರಿ, ಬೆಂಗಳೂರು

ಅಂಗರಾಜು ಡಿ.ಕೆ.
ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ, ತುಮಕೂರು ಜಿಲ್ಲೆ

Pure Since 1925
ಭೀಮ
ಭೀಮ ಈಗ
ಆರ್.ಆರ್.ನಗರದಲ್ಲಿ
ಇಂದು ಅದ್ಧೂರಿ ಉದ್ಘಾಟನೆ
ಉದ್ಘಾಟನಾ ಕೊಡುಗೆಗಳು ನವೆಂಬರ್ 30 ರವರೆಗೆ.
ಬಂಪರ್ ಬಹುಮಾನ
ಗೆಲ್ಲಿರಿ ₹ 20* ಲಕ್ಷ ರೂಪಾಯಿ
ಮೌಲ್ಯದ ಚಿನ್ನದ ಆಭರಣ
60* % ವರೆಗೆ ರಿಯಾಯಿತಿ
ಚಿನ್ನ, ವಜ್ರ ಮತ್ತು ಬೆಳ್ಳಿಯ ಮೇಲಿನ ಮೇಕಿಂಗ್ ಶುಲ್ಕದಲ್ಲಿ
* ನಿಯಮ ಮತ್ತು ಷರತ್ತುಗಳು ಅನ್ವಯ.
ಹಳೆಯ ಚಿನ್ನದ ವಿನಿಮಯ
ಪ್ರತಿ ಗ್ರಾಂಗೆ
₹150*
ಹೆಚ್ಚುವರಿ ಪಡೆಯಿರಿ
ವಜ್ರ
ಪ್ರತಿ ಕ್ಯಾರೆಟ್‌ಗೆ
₹10,000*
ಮೌಲ್ಯದ ಚಿನ್ನ ಮತ್ತು ಬೆಳ್ಳಿಯ ಆಭರಣಗಳು ಉಚಿತ
ಭೀಮ
BHIMA
ಭೀಮ
BHIMA Helpline
1800-121-9076
(10:00 a.m. to 7:00 p.m.)
BHIMA
ಸ್ಥಳ ತಿಳಿಯಲು, ಸ್ಕ್ಯಾನ್ ಮಾಡಿ
ಆರ್ ಆರ್ ನಗರ : #22, 3 ನೇ ಹಂತ, ಬಿ ಇ ಎಂ ಎಲ್ ಲೇಔಟ್, ಜವಾಹರಲಾಲ್ ನೆಹರು ರಸ್ತೆ, ಬೆಂಗಳೂರು, ದೂರವಾಣಿ: 080-23230050
ಬೆಂಗಳೂರು · ಉಡುಪಿ · ಹಾಸನ · ಮಂಗಳೂರು · ಶಿವಮೊಗ್ಗ · ವಿಜಯವಾಡ · ಚೆನ್ನೈ · ರಾಜಮಂಡ್ರಿ · ಹೊಸೂರು · ಬೆಳಗಾವಿ · ಹುಬ್ಬಳ್ಳಿ

ಮಹೇಶ ಜೋಶಿ ಸುಳ್ಳಿನ ಸರದಾರ: ಎಜಿ

ರೈಲ್ವೆ ಟಿಕೆಟ್ ಬುಕ್ ಮಾಡಿ, ರದ್ದುಗೊಳಿಸಿದ ಅಧ್ಯಕ್ಷ: ಶಶಿಕಿರಣ ಶೆಟ್ಟಿ ವಾದ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಜೋಶಿ ನಡವಳಿಕೆ ಬಗ್ಗೆ ನ್ಯಾಯಪೀಠ ತೀವ್ರ ಅಸಮಾಧಾನ
- ವಿಚಾರಣೆ ಡಿ.8ಕ್ಕೆ ಮುಂದೂಡಿಕೆ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ ವೇಳೆಯಲ್ಲಿ (ಈಗ ಆಡಳಿತಾಧಿಕಾರಿ) ಮಹೇಶ ಜೋಶಿ ಹೇಳಿರುವುದೆಲ್ಲಾ ಅಕ್ಷರಶಃ ಸುಳ್ಳು. ಅವರ ನಡವಳಿಕೆ ಆಘಾತಕಾರಿಯಾಗಿದೆ. ಒಂದಲ್ಲ, ಎರಡಲ್ಲ ಅವರು ಸಾಲು-ಸಾಲು ಸುಳ್ಳುಗಳನ್ನು ಹೇಳಿದ್ದಾರೆ, ಈ ಸುಳ್ಳುಗಳನ್ನೆಲ್ಲ ನ್ಯಾಯಾಲಯದ ಮುಂದೆಯೇ ಪ್ರತಿಪಾದಿಸಿದ್ದಾರೆ...!

ಕನ್ನಡ ಸಾಹಿತ್ಯ ಪರಿಷತ್‌ಗೆ (ಕಸಾಪ) ತನಿಖಾಧಿಕಾರಿ ನೇಮಕ ಮಾಡಿರುವುದನ್ನು ಪ್ರಶ್ನಿಸಿ ಮಹೇಶ ಜೋಶಿ ಸಲ್ಲಿಸಿರುವ ರಿಟ್ ಅರ್ಜಿಯನ್ನು ಗುರುವಾರ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠಕ್ಕೆ ಅಡ್ವೊಕೇಟ್ ಜನರಲ್ (ಎಜಿ) ಅರುಹಿದ ಅಂಶಗಳಿವು.

ವಿಚಾರಣೆ ವೇಳೆ ಸರ್ಕಾರದ ಪರ ವಾದ ಮಂಡಿಸಿದ ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ್ ಶೆಟ್ಟಿ, 'ತನಿಖಾಧಿಕಾರಿ ಮುಂದೆ ಹಾಜರಾಗಲು ನೋಟಿಸ್ ಕೊಟ್ಟರೆ ಕುಟುಂಬದಲ್ಲಿ ಸಾವು ಸಂಭವಿಸಿದೆ, ಪ್ರಯಾಣ ಮಾಡಬೇಕಾಗಿರುವ ಕಾರಣ 15 ದಿನಗಳ ಕಾಲಾವಕಾಶಬೇಕು ಎಂದು ಜೋಶಿ ಕೋರಿದ್ದರು. ಆದರೆ, ಅವರು ಎಲ್ಲೂ ಪ್ರಯಾಣ ಮಾಡಿಯೇ ಇಲ್ಲ' ಎಂದು ದೂರಿದರು.

'ವಿಚಾರಣೆಯಿಂದ ತಪ್ಪಿಸಿಕೊಳ್ಳಲು ರೈಲ್ವೆ ಟಿಕೆಟ್ ಬುಕ್ ಮಾಡಿ, ನಂತರ ಅದನ್ನು ರದ್ದುಗೊಳಿಸಿದ್ದಾರೆ. ತಾನು ಪ್ರಯಾಣ ಮಾಡಿದ್ದೇನೆಂದು ತೋರಿಸಲಷ್ಟೇ ಟಿಕೆಟ್ ಬುಕ್ ಮಾಡಿಸಿದ್ದರು. ಟಿಕೆಟ್ ರದ್ದು ಮಾಡಿಸಿದ ವಿವರ ಕೊಡದಂತೆ ರೈಲ್ವೆ ಅಧಿಕಾರಿಗಳಿಗೆ ಬೆದರಿಕೆ ಹಾಕಿದ್ದಾರೆ. ವಾರಾಣಸಿಯಿಂದ ಲಖನೌಗೆ ವಿಮಾನ ಪ್ರಯಾಣ ಮಾಡಿದ ಅವಧಿ ಗಮನಿಸಿದರೆ, ಮನುಷ್ಯರಿಂದ ಅದು ಸಾಧ್ಯವೇ ಇಲ್ಲ' ಎಂಬ ಅಂಶವನ್ನು ನ್ಯಾಯಪೀಠದ ಗಮನಕ್ಕೆ ತಂದರು.

'ಪ್ರಯಾಣ ಮಾಡಬೇಕಾಗಿದೆ ಎಂದು ಹೇಳಲಾಗಿದ್ದ ದಿನಗಳಲ್ಲಿ ಜೋಶಿ ಕಸಾಪ ಕಚೇರಿಗೆ ಬಂದು, ದೈನಂದಿನ ಜವಾಬ್ದಾರಿಗಳನ್ನು ನಿರ್ವಹಿಸಿದ್ದಾರೆ' ಎಂಬ ಶಶಿಕಿರಣ್ ಶೆಟ್ಟಿ ಅವರ ವಾದಕ್ಕೆ ನ್ಯಾಯಪೀಠ, 'ಅವರು ಕಚೇರಿಗೆ ಬಂದು ಕಾರ್ಯ ನಿರ್ವಹಿಸಿದ್ದಾರೆ ಎಂಬುದು ನಿಮಗೆ ಹೇಗೆ ಗೊತ್ತಾಯಿತು' ಎಂದು ಪ್ರಶ್ನಿಸಿತು. ಇದಕ್ಕೆ ಶಶಿಕಿರಣ್ ಶೆಟ್ಟಿ, 'ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯಾವಳಿಗಳಿಂದ ಇದು ಪತ್ತೆಯಾಗಿದೆ' ಎಂದು ಹೇಳಿದರು.

'ಕಸಾಪ ಕಚೇರಿಯಲ್ಲಿ ಅನವಶ್ಯವಾಗಿ ಸಿ.ಸಿ.ಟಿ.ವಿ ಕ್ಯಾಮೆರಾ ಅಳವಡಿಸಲಾಗಿದೆ. ಇದರ ಮೂಲಕವೂ ಹಣ ದುರ್ಬಳಕೆಯಾದ ಮಾತುಗಳು ಕೇಳಿಬಂದಿವೆ. ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯಾವಳಿ ಕೊಡದಂತೆ ಜೋಶಿ ಕಸಾಪ ಸಿಬ್ಬಂದಿಗೆ ಬೆದರಿಕೆ ಹಾಕಿದ್ದಾರೆ. ಕಾನೂನು ಮತ್ತು ನ್ಯಾಯಾಲಯವನ್ನು ಅವರು ದುರ್ಬಳಕೆ ಮಾಡಿಕೊಂಡಿದ್ದಾರೆ' ಎಂದು ಜೋಶಿ ಅವರ ಪ್ರತಿಯೊಂದು ದುರ್ನಡತೆಯನ್ನು ನ್ಯಾಯಪೀಠಕ್ಕೆ ತೆರೆದಿಟ್ಟರು.

ಕನ್ನಡ ಸಾಹಿತ್ಯ ಪರಿಷತ್‌ನ ಪದಾಧಿಕಾರಿಗಳ ಕಾರ್ಯವೈಖರಿ, ಅನುದಾನ ಮತ್ತು ಖರ್ಚು–ವೆಚ್ಚಗಳ ಕುರಿತು ವಿಚಾರಣೆ ನಡೆಸಲು ತನಿಖಾಧಿಕಾರಿ ನೇಮಕ ಮಾಡಿ 2025ರ ಜೂನ್ 26 ಹಾಗೂ 30ರಂದು ಸಹಕಾರ ಸಂಘಗಳ ನೋಂದಣಾಧಿಕಾರಿ ಹೊರಡಿಸಿದ್ದ ಆದೇಶಕ್ಕೆ ತಡೆ ನೀಡಬೇಕು' ಎಂದು ಕೋರಿ ಜೋಶಿ ಈ ಅರ್ಜಿ ಸಲ್ಲಿಸಿದ್ದಾರೆ.

ಪ್ರತಿವಾದಿ ಸಿ.ಕೆ. ರಾಮೇಗೌಡ ಪರ ಪದಾಂಕಿತ ಹಿರಿಯ ವಕೀಲ ಕೆ.ದಿವಾಕರ ಅವರು ವಾದ ಮಂಡಿಸಿದರು.

'30 ದಿನಗಳಲ್ಲಿ ತನಿಖೆ ಮುಗಿಸಿ'

'ಈ ಪ್ರಕರಣದಲ್ಲಿ ಜೋಶಿ ಅವರನ್ನು ವೈಯಕ್ತಿಕವಾಗಿ ಗುರಿ ಮಾಡಲಾಗಿಲ್ಲ. ತನಿಖೆ ನಡೆಯಲಿ, ನ್ಯಾಯಾಲಯವೇ ಕಾಲಮಿತಿ ನಿಗದಿಪಡಿಸಿ ಮೇಲ್ವಿಚಾರಣೆ ನಡೆಸಲಿ. ವಿಷಯ ಬಹಳ ಗಂಭೀರವಾಗಿದ್ದು, ಅರ್ಜಿದಾರರ ನಡವಳಿಕೆ ಅನುಮಾನಾಸ್ಪದ ಹಾಗೂ ಆಘಾತಕಾರಿಯಾಗಿದೆ' ಎಂದು ಶಶಿಕಿರಣ್ ಶೆಟ್ಟಿ ನ್ಯಾಯಪೀಠಕ್ಕೆ ಮನವಿ ಮಾಡಿದರು.

ಈ ಸಂದರ್ಭದಲ್ಲಿ ಜೋಶಿ ಪರ ಪದಾಂಕಿತ ಹಿರಿಯ ವಕೀಲರು ಸ್ಪಷ್ಟನೆ ನೀಡಲು ಮುಂದಾದರು. ಆಗ ಜೋಶಿಯವರ ನಡವಳಿಕೆ ಬಗ್ಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದ ನ್ಯಾಯಪೀಠ, 'ಇದು ಕಾನೂನು ಮತ್ತು ನ್ಯಾಯಾಲಯದ ದುರ್ಬಳಕೆ. ಆದ್ದರಿಂದ, 30 ದಿನಗಳಲ್ಲಿ ತನಿಖೆ ಮುಗಿಸಬೇಕು. ಅಲ್ಲಿಯವರೆಗೆ ಯಾವುದೇ ಸಭೆ ನಡೆಸುವಂತಿಲ್ಲ. ಜೋಶಿ ತನಿಖೆಗೆ ಸಂಪೂರ್ಣ ಸಹಕಾರ ನೀಡಬೇಕು' ಎಂದು ಖಡಕ್ ತಾಕೀತು ಮಾಡಿದೆ.

'ಈ ವಿಚಾರದಲ್ಲಿ ಯಾವುದೇ ರಿಯಾಯಿತಿ ಅಥವಾ ಕರುಣೆ ಇಲ್ಲ. ಜೋಶಿ ತನಿಖೆಗೆ ಸಹಕರಿಸದೇ ಇದ್ದರೆ ಸರ್ಕಾರಿ ವಕೀಲರು ನ್ಯಾಯಾಲಯಕ್ಕೆ ತಿಳಿಸಬೇಕು' ಎಂದು ನಿರ್ದೇಶಿಸಿರುವ ನ್ಯಾಯಪೀಠ ವಿಚಾರಣೆಯನ್ನು ಡಿ.8ಕ್ಕೆ ಮುಂದೂಡಿದೆ.

ವಂದೇ ಮಾತರಂ ಸಾಮೂಹಿಕ ಗಾಯನ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇದೇ 7ರಂದು ದೇಶದ 150 ಜಿಲ್ಲೆಗಳಲ್ಲಿ 'ವಂದೇ ಮಾತರಂ' ಗೀತೆಯ ಸಾಮೂಹಿಕ ಗಾಯನ ಆಯೋಜಿಸಿದ್ದು, ರಾಜ್ಯದ ಬೆಂಗಳೂರು, ಮೈಸೂರು, ಚಿತ್ರದುರ್ಗ, ಬಾಗಲಕೋಟೆ, ಗದಗ, ಕಲಬುರಗಿ, ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಈ ಕಾರ್ಯಕ್ರಮ ನಡೆಯಲಿದೆ ಎಂದು ಬಿಜೆಪಿಯ ರಾಜ್ಯ ಘಟಕದ ಉಪಾಧ್ಯಕ್ಷೆ ಮಾಳವಿಕ ಅವಿನಾಶ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಅವರು, ಅಂದು ಪಕ್ಷದ ರಾಜ್ಯ ಕಾರ್ಯಾಲಯದಲ್ಲಿ 300ರಿಂದ 400 ಜನ ಸೇರಿ ಒಟ್ಟಾಗಿ ವಂದೇ ಮಾತರಂ ಸಾಮೂಹಿಕ ಗಾಯನ ಪ್ರಸ್ತುತಪಡಿಸಲಿದ್ದಾರೆ ಎಂದರು.

ದೇಶದಾದ್ಯಂತ ಬಿಜೆಪಿಯ ಎಲ್ಲ ಕಾರ್ಯಾಲಯಗಳಲ್ಲೂ ಸಾಮೂಹಿಕ ಗಾಯನ ನಡೆಯಲಿದೆ. ಪ್ರಧಾನಿ ಮೋದಿ ಅವರೂ ಈ ಗಾಯನ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ ಎಂದು ಹೇಳಿದರು.

ರಾಜ್ಯದಲ್ಲಿ ಮಹಿಳೆಯರ ಮೇಲಿನ ದೌರ್ಜನ್ಯ, ಕೊಲೆ, ಅತ್ಯಾಚಾರ ಪ್ರಕರಣಗಳು ಹೆಚ್ಚಾಗಿವೆ. ಇದನ್ನು ಪ್ರತಿಯೊಬ್ಬರೂ ಪ್ರಶ್ನಿಸಬೇಕಾಗಿದೆ ಎಂದರು.

ಸುದ್ದಿ 2 ನಿಮಿಷ

ಕ್ಯಾಟಿನಾ ಹೋಮ್ಸ್ ಅರ್ಜಿ ವಜಾ

ಬೆಂಗಳೂರು: ಮನೆ ಲೀಸ್‌ಗೆ ಕೊಡಿಸುವ ಹೆಸರಿನಲ್ಲಿ ನೂರಾರು ಮಂದಿಗೆ ಕೋಟ್ಯಂತರ ರೂಪಾಯಿ ವಂಚನೆ ಮಾಡಿದ ಆರೋಪಕ್ಕೆ ಸಂಬಂಧಿಸಿದಂತೆ ತನಿಖೆ ನಡೆಸಲು ಸಿಐಡಿ ಪೊಲೀಸರಿಗೆ ಅನುಮತಿ ನೀಡಿದ್ದ ರಾಜ್ಯ ಪೊಲೀಸ್ ಮಹಾ ನಿರ್ದೇಶಕರ ಆದೇಶ ರದ್ದುಪಡಿಸಬೇಕು ಎಂದು ಕೋರಿ, 'ಕ್ಯಾಟಿನಾ ಹೋಮ್ಸ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ಕಂಪನಿ' ಸಲ್ಲಿಸಿದ್ದ ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿದೆ.

ಸಿಐಡಿ ತನಿಖೆ ರದ್ದುಗೊಳಿಸುವಂತೆ ಕೋರಿ ಕಂಪನಿಯ ನಿರ್ದೇಶಕ ವಿವೇಕ್ ಕೇಶವನ್ ಸಲ್ಲಿಸಿದ್ದ ರಿಟ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸೂರಜ್ ಗೋವಿಂದ್ ರಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ, 'ಆರೋಪಿಯೇ ತನಿಖಾ ತಂಡವನ್ನು ಆಯ್ಕೆ ಮಾಡಲಾಗದು' ಎಂದು ಕಿಡಿಕಾರುವ ಮೂಲಕ ಅರ್ಜಿ ವಜಾಗೊಳಿಸಿದೆ.

'ಕ್ಯಾಟಿನಾ ಹೋಮ್ಸ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ಕಂಪನಿ' ಮಾಲೀಕ ಹಾಗೂ ನಿರ್ದೇಶಕ ವಿವೇಕ್ ಕೇಶವನ್ ವಿರುದ್ಧ ಪರಪ್ಪನ ಅಗ್ರಹಾರ, ಹೆಬ್ಬಗೋಡಿ ಮತ್ತು ಎಲೆಕ್ಟ್ರಾನಿಕ್ ಸಿಟಿ ಪೊಲೀಸ್ ಠಾಣೆಗಳಲ್ಲಿ ಪ್ರತ್ಯೇಕ ಎಫ್‌ಐಆರ್ ದಾಖಲಾಗಿದ್ದವು. ಪ್ರಕರಣವನ್ನು ಡಿಜಿಪಿ ಸೆಪ್ಟೆಂಬರ್ 29ರಂದು ಸಿಐಡಿ ಪೊಲೀಸರ ತನಿಖೆಗೆ ಒಪ್ಪಿಸಿ ಪತ್ರ ನೀಡಿದ್ದರು.

ಲಾಟರಿ ಆಯ್ಕೆ: ನಾಟಕೀಯ ಬೆಳವಣಿಗೆ, ಪ್ರತಿಭಟನೆ

ಕೋಲಾರ: ಕೋಲಾರ ಹಾಗೂ ಚಿಕ್ಕಬಳ್ಳಾಪುರ ಸಹಕಾರ ಕೇಂದ್ರ (ಡಿಸಿಸಿ) ಬ್ಯಾಂಕ್ ಆಡಳಿತ ಮಂಡಳಿಯ ನಿರ್ದೇಶಕರಾಗಿ ಲಾಟರಿ ಪ್ರಕ್ರಿಯೆಯಲ್ಲಿ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿ ಖಾಜಿಕಲ್ಲಹಳ್ಳಿ ಮುನಿರಾಜು ಆಯ್ಕೆ ಆಗಿರುವ ಸಂಬಂಧಿಸಿದ ವಿಡಿಯೊ ನೀಡುವಂತೆ ಪರಾಜಿತ ಅಭ್ಯರ್ಥಿ ಹಾಗೂ ಜೆಡಿಎಸ್ ಮುಖಂಡರು ಆಗ್ರಹಿಸಿ ಪ್ರತಿಭಟನೆ ನಡೆಸಿದ್ದಾರೆ.

ಡಿಸಿಸಿ ಬ್ಯಾಂಕ್ ಚುನಾವಣಾಧಿಕಾರಿಯೂ ಆಗಿರುವ ಉಪ ವಿಭಾಗಾಧಿಕಾರಿ ಡಾ.ಎಚ್.ಪಿ.ಎಸ್.ಮೈತ್ರಿ ಅವರ ಕಚೇರಿ (ಜಿಲ್ಲಾಡಳಿತ ಭವನ) ಬಳಿ ಗುರುವಾರ ನಾಟಕೀಯ ಬೆಳವಣಿಗೆ ನಡೆದಿದ್ದು, ಪೊಲೀಸರು ಮಧ್ಯ ಪ್ರವೇಶಿಸಿದ್ದಾರೆ. ಚುನಾವಣಾ ಪ್ರಕ್ರಿಯೆಗೆ ಸಂಬಂಧಿಸಿದ ವಿಡಿಯೊ ನೀಡುವಂತೆ ಮನವಿ ಸಲ್ಲಿಸಿದ್ದರೂ ನಿರಾಕರಿಸಿ ಅಧಿಕಾರ ದುರುಪಯೋಗ ಮಾಡಿಕೊಂಡಿದ್ದಾರೆ ಎಂದು ಆರೋಪಿಸಿ ಕಾರ್ಯಕರ್ತರು ಆಕ್ರೋಶ ವ್ಯಕ್ತಪಡಿಸಿದರು.

ದಲಿತ ಸಮುದಾಯದವರನ್ನು ರಾಜ್ಯದ ಮುಖ್ಯಮಂತ್ರಿಯಾಗಿ ನೇಮಿಸಬೇಕು ಎಂದು ಆಗ್ರಹಿಸಿ ರಾಜ್ಯ ಆದಿಜಾಂಬವ ಸಂಘದ ಸದಸ್ಯರು ಸಮಾಜ ಕಲ್ಯಾಣ ಸಚಿವ ಎಚ್‌.ಸಿ.ಮಹದೇವಪ್ಪ ಅವರಿಗೆ ಮನವಿ ಸಲ್ಲಿಸಿದರು. ಕಾರ್ಯಾಧ್ಯಕ್ಷ ಜಂಬೂದ್ವೀಪ ಸಿದ್ದರಾಜು, ಪ್ರಧಾನ ಕಾರ್ಯದರ್ಶಿ ಸಿ.ವಿ.ರಮೇಶ್ ಕುಮಾರ್, ನಾಗಮಂಗಲ ಗೋವಿಂದ, ಅಶ್ವತ್ ಮಾದಿಹಳ್ಳಿ ಗೋವಿಂದರಾಜು, ಹನುಮಂತ ರಾಜು, ಮುನಿಯಪ್ಪ ಲಕ್ಷ್ಮೀಪುರ, ಮುನಿಸ್ವಾಮಿ, ದುರ್ಗಪ್ಪ ಕೂಡಲಗಿ ಉಪಸ್ಥಿತರಿದ್ದರು

ಕೈಗಾರಿಕಾ ವಿವಾದ ಕಾಯ್ದೆಯಡಿ ಎಸ್ಮಾ ಜಾರಿ ಪ್ರಶ್ನಿಸಿ ಸಲ್ಲಿಸಿದ್ದ ಅರ್ಜಿ ವಿಚಾರಣೆ

ಕೇಂದ್ರದ ಕೈಯಲ್ಲಿ ಬಿಎಂಆರ್‌ಸಿಎಲ್ ಜುಟ್ಟು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೆಂಗಳೂರು ಮೆಟ್ರೊ ರೈಲು ನಿಗಮ ನಿಯಮಿತ (ಬಿಎಂಆರ್ ಸಿಎಲ್) ರೈಲ್ವೆ ಕಂಪನಿಯಾಗಿದ್ದು, ಕೇಂದ್ರ ಸರ್ಕಾರದ ಒಪ್ಪಿಗೆಯ ಮೇರೆಗೆ ಕಾರ್ಯನಿರ್ವಹಿಸುತ್ತಿದೆ. ಹಾಗಾಗಿ, ಇದಕ್ಕೆ ಸಂಬಂಧಿಸಿದ ವ್ಯಾಜ್ಯಗಳು ಉಂಟಾದಲ್ಲಿ ಅವುಗಳನ್ನು ಕೈಗಾರಿಕಾ ವಿವಾದಗಳ ಕಾಯ್ದೆ ಅಡಿಯಲ್ಲಿ ಪರಿಹರಿಸುವ ಅಧಿಕಾರ ಕೇಂದ್ರ ಸರ್ಕಾರಕ್ಕೆ ಇದೆಯೇ ವಿನಃ ರಾಜ್ಯ ಸರ್ಕಾರಕ್ಕಲ್ಲ' ಎಂದು ಹೈಕೋರ್ಟ್ ಸ್ಪಷ್ಟಪಡಿಸಿದೆ.

ಕೈಗಾರಿಕಾ ವಿವಾದ ಕಾಯ್ದೆಯ ಅಡಿಯಲ್ಲಿ ಎಸ್ಮಾ ಜಾರಿ ಮಾಡಿದ್ದ ರಾಜ್ಯ ಸರ್ಕಾರದ ಕ್ರಮವನ್ನು ಪ್ರಶ್ನಿಸಿ ಬಿಎಂಆರ್‌ಸಿಎಲ್ ಮತ್ತು ಬಿಎಂಆರ್‌ಸಿಎಲ್ ನೌಕರರ ಸಂಘ ಸಲ್ಲಿಸಿದ್ದ ಅರ್ಜಿಗಳ ವಿಚಾರಣೆ ನಡೆಸಿ ಕಾಯ್ದಿರಿಸಿದ್ದ ತೀರ್ಪನ್ನು ನ್ಯಾಯಮೂರ್ತಿ ಅನಂತ ರಾಮನಾಥ ಹೆಗಡೆ ಅವರಿದ್ದ ಏಕಸದಸ್ಯ ನ್ಯಾಯಪೀಠ ಪ್ರಕಟಿಸಿದೆ.

ರಾಜ್ಯ ಸರ್ಕಾರ 2019ರಲ್ಲಿ ಬಿಎಂಆರ್‌ಸಿಎಲ್ ಸಾರ್ವಜನಿಕ ಉಪಯುಕ್ತವಾದ ಸೇವೆ ಎಂಬುದಾಗಿ ಹೊರಡಿಸಿದ್ದ ಮತ್ತು ಕರ್ನಾಟಕ ಅಗತ್ಯ ಸೇವೆಗಳ ನಿರ್ವಹಣಾ ಕಾಯ್ದೆ (ಎಸ್ಮಾ) ಅಡಿಯಲ್ಲಿ ಬಿಎಂಆರ್‌ಸಿಎಲ್ ಸೇವೆಗಳನ್ನು ಅತ್ಯವಶ್ಯಕ ಸೇವೆಗಳು ಎಂದು 2017ರಲ್ಲಿ ಹೊರಡಿಸಿದ್ದ ಅಧಿಸೂಚನೆಗಳನ್ನು ನ್ಯಾಯಪೀಠ ರದ್ದುಗೊಳಿಸಿದೆ.

'ಬಿಎಂಆರ್‌ಸಿಎಲ್‌ನಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ತಲಾ ಶೇ 50ರಷ್ಟು ಷೇರುಗಳನ್ನು ಹೊಂದಿವೆ. ಆದಾಗ್ಯೂ, ಪ್ರಮುಖ ಆಡಳಿತಾತ್ಮಕ ಕ್ರಮಗಳಲ್ಲಿ ಕೇಂದ್ರ ಸರ್ಕಾರದ ನಿರ್ಧಾರವೇ ಅಂತಿಮವಾಗಿರಲಿದೆ. ರಾಜ್ಯ ಸರ್ಕಾರ ಯಾವುದಾದರೂ ಆಡಳಿತಾತ್ಮಕ ನಿರ್ಧಾರಗಳನ್ನು ಕೈಗೊಳ್ಳಬೇಕಾದಲ್ಲಿ ಕೇಂದ್ರ ಸರ್ಕಾರದಿಂದ ಅನುಮತಿ ಪಡೆಯ ಬೇಕಾಗುತ್ತದೆ. ಆದ್ದರಿಂದ ಮೆಟ್ರೊ ಸೇವೆಯನ್ನು ಎಸ್ಮಾ ಕಾಯ್ದೆಯಡಿ ಅತ್ಯವಶ್ಯಕ ಸೇವೆ ಎಂದು ಘೋಷಣೆ ಮಾಡಲು ರಾಜ್ಯ ಸರ್ಕಾರಕ್ಕೆ ಅಧಿಕಾರವಿಲ್ಲ' ಎಂದು ನ್ಯಾಯಪೀಠ ಸ್ಪಷ್ಟಪಡಿಸಿದೆ.

CONNECT ಕ್ಲಾಸಿಫೈಡ್ಸ್

BUNGALOW FOR SALE
6000 Sq ft, Furnished 4 BHK Bungalow for sale in Baglur. It's 20 minutes drive to Airport. Price 5cr. Call owner :
9113209192

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

REAL ESTATE SELLING

Flat
Basavanagudi

FOR RENT
BASAVANAGUDI 2 BHK Flat All Amenities Ready Occupation Contact: 7353330197/ 080 26603673

Industrial & Factory
Multiple Locations

WANT TO purchase running and sick Industry properties from 10000sft to 2 acres in Bangalore city limits/ Bangalore Rural, KIADB Industrial areas. Contact Verna Developers, Barton Centre, MG Road. 9916310226.

Sites
Anjanapura

ANJANAPURA 10TH Block BDA Property 40x60, Prime Location, West Facing Site 11,500/- Contact- 9845000299/ 9980808155

Vishweshwariah Layout

BUYING/SELLING 20X30 30x40,40x60,50X80 BDA SITES VISHWESHWARAIAH KEMPEGOWDA LAYOUT. Contact:SREENIDHI PROPERTY JUNCTION. 9742681666

REAL ESTATE BUYING

House
Basavanagudi

WANTED IN BANGALORE South OLD 3/4 BHK 2000Sqft Apartment or HOUSE Near METRO Maximum 3 Crores: 9942081702

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

RENTAL PROPERTIES

Accommodation Available
Flats

BOUTIQUE FULLY furnished 2 Bhk Flat (1.10L) Studio (50k) in upmarket area, immediate occupancy for bachelor/s. Placify Ph: 9844051181

JOB OPPORTUNITIES

HRD & Admin

WANTED FEMALE Office Assistant Any Degree Knowing Tally, Fluent In English, Kannada, Hindi Around Rajajinagar Contact: 9108458798/ 9845579620

PERSONAL

Change of Name

I, ADARSH S/o.Prabhakar Residing at. No.21, 4th Main Road, Srinivasa Layout. RT Nagar, Bangalore-560032 have changed my name from ADARSH to ARSH AHMED vide affidavit dated 05-11-2025 sworn before notary Chandrashekaraiah, Bangalore.

I, R. MUNIRAJU, R/o, #5, 1st Cross, Old Tollagate, Mysore Road, Bengaluru-26 have changed my son's name from SUDARSHAN. M to M.V. HARSHIV Vide affidavit dated 14/10/2025 before XXXVIII ADDL Chief Judicial Magistrate, Bangalore City

CHANGE OF NAME
I, BINSU GEORGE R/o. #22, Ramachandrappa Garden, 2nd Cross, Shanthi Layout, Ramamurtynagar, Dooravaninagar Post, Bangalore-560016 After Marriage have changed my Name to BINSU JACOB vide affidavit dated 06.11.2025 before Notary S. Subashini, Bengaluru.

CHANGE OF NAME
I, Neethi Muralidharan, residing at # 47, Hutchins Road, 2nd Cross, JCO Colony, Cooke Town, St. Thomas Town Post, Bengaluru - 560084 have changed our minor daughter's name from AASHVEE NAIR to AVANIKA ARUN CHENAMPARA vide affidavit dated 07.10.2025 before notary Y.R. Chandrasekar, Bengaluru. Henceforth she shall be called as AVANIKA ARUN CHENAMPARA only

CHANGE OF NAME
I, SHASHIKALA NAGARAJA & KERALAPURA CHANNAKESHAVAVADHANI SHASHIKALA, residing at Flat No.K701, Mantri Alypne Apartment, Uttarahalli Main Road, Bengaluru - 560061, declare that the above names pertain to me only. Henceforth I shall be known as SHASHIKALA NAGARAJA vide affidavit 05.11.2025 before notary S.R.Thulasikrishna, Bengaluru

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

ಮೌನದ ಗಡಿ ದಾಟಿ ವಾದ: ಸಂವೇದನಾಶೀಲ ಉಲ್ಲೇಖ

'ಶ್ರವಣದೋಷವುಳ್ಳ ವಕೀಲರು ಅಲ್ಪಸಂಖ್ಯಾತರು'

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಬೆಂಗಳೂರಿನ ವಕೀಲೆ ಸಾರಾ ಸನ್ನಿ
- ಹೊಸ ದಾಖಲೆಯ ಮಜಲು
- ಇಂತಹ ಅಲ್ಪಸಂಖ್ಯಾತರಿಗೆ ವೃತ್ತಿಸಹಾಯಕವಾದ ಸೌಕರ್ಯ ಒದಗಿಸಲಿ

ಬೆಂಗಳೂರು: 'ಪತಿ-ಪತ್ನಿ ನಡುವಿನ ಕೌಟುಂಬಿಕ ಕಲಹಕ್ಕೆ ಸಂಬಂಧಿಸಿದ ಪ್ರಕರಣವೊಂದರಲ್ಲಿ ವಾಕ್ ಮತ್ತು ಶ್ರವಣದೋಷವುಳ್ಳ ವಕೀಲೆ ಸಾರಾ ಸನ್ನಿ ಮೌನದ ಗಡಿ ದಾಟಿ ವೃತ್ತಿಪರತೆ ಮೆರೆದಿದ್ದಾರೆ' ಎಂದು ಶ್ಲಾಘಿಸಿರುವ ಕರ್ನಾಟಕ ಹೈಕೋರ್ಟ್, 'ಶ್ರವಣದೋಷವುಳ್ಳ ವಕೀಲರು ಅಪರೂಪದ ಅಲ್ಪಸಂಖ್ಯಾತರು ಎಂಬುದು ನಿರ್ವಿವಾದ ಸಂಗತಿ' ಎಂದು ಅಭಿಪ್ರಾಯ ವ್ಯಕ್ತಪಡಿಸಿದೆ.

ಸ್ಕಾಟ್ಲೆಂಡ್‌ನಲ್ಲಿರುವ ಪತಿ ಮತ್ತು ಬೆಂಗಳೂರಿನಲ್ಲಿರುವ ಪತ್ನಿಯ ನಡುವಿನ ಈ ಕೌಟುಂಬಿಕ ವ್ಯಾಜ್ಯದಲ್ಲಿ ಪತಿಗೆ ಲುಕ್‌ಔಟ್ (ಎಲ್‌ಒಸಿ) ನೋಟಿಸ್ ಜಾರಿಗೊಳಿಸಲಾಗಿತ್ತು. 'ನನ್ನ ವಿರುದ್ಧ ಹೊರಡಿಸಲಾಗಿರುವ ಎಲ್‌ಒಸಿ ರದ್ದುಗೊಳಿಸಬೇಕು' ಎಂದು ಕೋರಿ ಪತಿ ಹೈಕೋರ್ಟ್ ಮೆಟ್ಟಿಲೇರಿದ್ದರು. ಈ ಪ್ರಕರಣದಲ್ಲಿ ಬೆಂಗಳೂರಿನಲ್ಲಿರುವ ಅರ್ಜಿದಾರರ ಪತ್ನಿಯ (34) ಪರವಾಗಿ ಸಾರಾ ಸನ್ನಿ ಹಾಜರಾಗಿದ್ದರು.

ತಮ್ಮ ಆಂಗಿಕ ಸಂಜ್ಞೆಗಳ ಮೂಲಕ ದುಭಾಷಿಯ ನೆರವಿನಲ್ಲಿ ಸಂಕೇತ ಭಾಷೆ ಬಳಸಿ ಸಾರಾ ಸನ್ನಿ ವಾದ ಮಂಡಿಸಿದ್ದರು. ಅಂತಿಮವಾಗಿ ಪತಿ ತಮ್ಮ ಅರ್ಜಿಯನ್ನು ಹಿಂಪಡೆದ ಹಿನ್ನೆಲೆಯಲ್ಲಿ ನ್ಯಾಯಪೀಠ ಅರ್ಜಿಯನ್ನು ವಿಲೇವಾರಿ ಮಾಡಿ ತೀರ್ಪು ಪ್ರಕಟಿಸಿದೆ.

ಶ್ಲಾಘನೆ: ತೀರ್ಪಿನಲ್ಲಿ ಸಾರಾ ಸನ್ನಿ ಅವರ ವಾದ ಮಂಡನೆಯ ಬಗ್ಗೆ ವಿಶೇಷವಾದ ಕಾಳಜಿ ಮತ್ತು ಸಂವೇದನಾಶೀಲತೆಯನ್ನು ವ್ಯಕ್ತ ಪಡಿಸಿರುವ ನ್ಯಾಯಪೀಠ, 'ಸಮಾನತೆಯ ರಕ್ಷಾಸ್ತಂಭಗಳು ಎನಿಸಿರುವ ಸಾಂವಿಧಾನಿಕ ನ್ಯಾಯಾಲಯಗಳು, ನ್ಯಾಯಾಂಗ ಪ್ರಕ್ರಿಯೆ ಯಲ್ಲಿ ಶ್ರವಣದೋಷವುಳ್ಳ ವಕೀಲರು ಮತ್ತು ಅವರ ಪೂರ್ಣ ಭಾಗವಹಿಸುವಿಕೆಯ ನಡುವೆ ಇರುವ ಅಡಚಣೆ ಒಡ್ಡುವ ಧ್ವನಿಯ ತಡೆಗೋಡೆಯನ್ನು ಮುರಿಯಬೇಕಿದೆ' ಎಂದು ಹೇಳಿದೆ.

'ಇಂತಹವರಿಗೆ ಸಹಾಯ ಒದಗಿಸಲು, ಅನುಕೂಲ ಮಾಡಿಕೊಡಲು, ವಾದ ಮಂಡನೆಗೆ ವ್ಯಾಪಕ ಅಧಿಕಾರ ನೀಡುವ ನಿಟ್ಟಿನಲ್ಲಿ ಉನ್ನತ ಕೋರ್ಟ್‌ಗಳು ಆದ್ಯತೆ ನೀಡಬೇಕಿದೆ. ಆಸ್ಟ್ರೇಲಿಯಾದ ನ್ಯಾಯಾಲಯಗಳಲ್ಲಿ ಇಂತಹ ಅಲ್ಪಸಂಖ್ಯಾತರಿಗೆ ವೃತ್ತಿಸಹಾಯಕವಾದ ಸೌಕರ್ಯ ಒದಗಿಸಲು ದಾರಿ ಮಾಡಿಕೊಡಲಾಗಿದೆ. ಅಷ್ಟೇ ಏಕೆ, ಶ್ರವಣದೋಷವುಳ್ಳ ನ್ಯಾಯಾಧೀಶರನ್ನೇ ನೇಮಕ ಮಾಡುವಂತಹ ಮಹತ್ವದ ಕೈಂಕರ್ಯ ಇಂಗ್ಲೆಂಡ್‌ನಲ್ಲಿ ಪ್ರಬುದ್ಧ ಶಾಸನದ ಮೂಲಕ ಚಾಲ್ತಿಯಲ್ಲಿದೆ' ಎಂಬ ಅಂಶವನ್ನು ಉಲ್ಲೇಖಿಸಿದೆ.

ರಿಜಿಸ್ಟ್ರಿಗೆ ಸೂಚನೆ: 'ಕ್ರಿಮಿನಲ್ ಮೊಕದ್ದಮೆಗಳು ಬಾಕಿ ಇರುವಾಗ ಯಾವುದೇ ನೆಪದಲ್ಲಿ, ಲುಕ್‌ಔಟ್ ಸುತ್ತೋಲೆಯನ್ನು (ಎಲ್‌ಒಸಿ) ಹಿಂಪಡೆಯಲು, ಅಮಾನತು ಗೊಳಿಸಲು ಅಥವಾ ಮಾರ್ಪಡಿಸಲು ಕೋರುವ ಅರ್ಜಿಗಳನ್ನು ಸ್ವೀಕರಿಸ ಬಾರದು. ಈ ನಿಟ್ಟಿನಲ್ಲಿ ವಿಚಾರಣಾ ನ್ಯಾಯಾಲಯ ಗಳು ನೀಡುವ ಯಾವುದೇ ವಿನಾಯಿತಿಯನ್ನು ನ್ಯಾಯವ್ಯಾಪ್ತಿ ಮೀರಿದ ಕೃತ್ಯ ಎಂದೇ ಪರಿಗಣಿಸಲಾಗುತ್ತದೆ' ಎಂದು ನ್ಯಾಯಪೀಠ ಎಚ್ಚರಿಸಿದೆ.

'ಈ ತೀರ್ಪಿನ ಪ್ರತಿಯನ್ನು ರಾಜ್ಯ ವ್ಯಾಪ್ತಿಯ ಎಲ್ಲಾ ಕ್ರಿಮಿನಲ್ ನ್ಯಾಯಾಲಯಗಳಿಗೆ ತಕ್ಷಣವೇ ರವಾನಿಸಬೇಕು' ಎಂದು ಹೈಕೋರ್ಟ್ ರಿಜಿಸ್ಟ್ರಿಗೆ ನಿರ್ದೇಶಿಸಿರುವ ನ್ಯಾಯಪೀಠ, 'ಯಾವುದೇ ಅರ್ಜಿದಾರ ಲುಕ್‌ಔಟ್ ಸುತ್ತೋಲೆಯನ್ನು ಪ್ರಶ್ನಿಸಲು ಅಥವಾ ದುರ್ಬಲಗೊಳಿಸಲು ಪ್ರಯತ್ನಿಸಿದಾಗ ಮತ್ತು ಈ ತೀರ್ಪಿನಲ್ಲಿ ಉಲ್ಲೇಖಿಸುವ ಅವಲೋಕನಗಳನ್ನು ಮನಸ್ಸಿನಲ್ಲಿ ಇಟ್ಟುಕೊಂಡು ಮುಂದುವರಿಯಬೇಕು' ಎಂದು ಮ್ಯಾಜಿಸ್ಟ್ರೇಟ್ ನ್ಯಾಯಾಲಯಗಳಿಗೆ ತಾಕೀತು ಮಾಡಿದೆ.

ಅಂತೆಯೇ, ಪ್ರತಿವಾದಿಯಾದ ಭಾರತದ ವಿದೇಶಾಂಗ ವ್ಯವಹಾರಗಳ ಸಚಿವಾಲಯಕ್ಕೆ, 'ಭಾರತದ ಭೂಪ್ರದೇಶದಲ್ಲಿ ಯಾರ ವಿರುದ್ಧ ಎಲ್‌ಒಸಿ ನೀಡಲಾಗುತ್ತಿದೆಯೋ ಆ ವ್ಯಕ್ತಿ ಭಾರತಕ್ಕೆ ಬಂದಾಗ ಅನುಸರಿಸಬೇಕಾದ ಕಾರ್ಯವಿಧಾನದ ಕುರಿತು ವಿವರವಾದ ಮಾರ್ಗಸೂಚಿಗಳನ್ನು ಹೊರಡಿಸಿ' ಎಂದು ನಿರ್ದೇಶಿಸಿದೆ.

ಶ್ರವಣದೋಷವುಳ್ಳ ವಕೀಲರ ವೃತ್ತಿಪರತೆಯನ್ನು ಗಂಭೀರವಾಗಿ ಪರಿಗಣಿಸಬೇಕಿದೆ. ನಮ್ಮ ಮಾನವೀಯ ಅಂತಃಕರಣ ಮಾತನಾಡಬೇಕಿದೆ. ಅದರ ಧ್ವನಿ ಸಮಾನತೆಯ ಕಡೆಗಿನ ಸಾಮೂಹಿಕ ನಡಿಗೆಗೆ ಸಾಕ್ಷಿಯಾಗುತ್ತದೆ
ಎಂ.ನಾಗಪ್ರಸನ್ನ, ನ್ಯಾಯಮೂರ್ತಿ

ಇತಿಹಾಸ ಸೃಜಿಸಿದ ಸಾರಾ ಸನ್ನಿ

'ಯಾವುದೇ ಅನುಭವಿ ವಕೀಲರಿಗೆ ಸರಿಸಮಾನವಾಗಿ ತಮ್ಮ ವಾದವನ್ನು ಶಾಂತತೆಯಿಂದ ಮಂಡಿಸಿರುವ ಸಾರಾ ಸನ್ನಿ ಪ್ರತಿ ಅವಮಾನವನ್ನೂ ಧಿಕ್ಕರಿಸಿದ್ದಾರೆ. ಧ್ವನಿ ಅಥವಾ ಸಂಕೇತಗಳ ತೀವ್ರತೆಯನ್ನು ಚಾತುರ್ಯದಿಂದ ಪ್ರಸ್ತುತಪಡಿಸಿದ್ದಾರೆ' ಎಂದು ನ್ಯಾಯಪೀಠ ಬಣ್ಣಿಸಿದೆ.

'ಸಂಸ್ಕರಣಗೊಂಡ ವಿಶಿಷ್ಟ ಲಕ್ಷಣದ ವಾದ ಮಂಡನೆಯ ಪ್ರಯತ್ನ, ಎಲ್ಲರಿಗೂ ಇದೊಂದು ಶಾಶ್ವತ ಸ್ಫೂರ್ತಿಯಾಗಿ ಉಳಿಯುತ್ತದೆ. ನ್ಯಾಯವು ತನ್ನ ನಿಜವಾದ ಅರ್ಥದಲ್ಲಿ ಹೇಗಿರುತ್ತದೆ ಎಂಬುದನ್ನು ಅವರ ಈ ಪ್ರಯತ್ನ ನ್ಯಾಯಾಂಗದ ಸ್ಮೃತಿಪಟಲದಲ್ಲಿ ದೇದೀಪ್ಯಮಾನವಾಗಿ ಉಳಿಸುತ್ತದೆ' ಎಂದು ಹೇಳಿದೆ.

ಡಾ.ವಿ.ಎನ್.ರೇಣುಕಾ ಅವರು ಸಾರಾ ಸನ್ನಿ ಅವರಿಗೆ ಸಂಕೇತ ಭಾಷೆಯ ನೆರವು ನೀಡಿದ್ದರು. ಅರ್ಜಿದಾರ ಪತಿಯ ಪರ ಹೈಕೋರ್ಟ್ ವಕೀಲ ಕೆ.ರವೀಂದ್ರನಾಥ್ ಮತ್ತು ಕೇಂದ್ರ ಸರ್ಕಾರದ ಪರ ಹೆಚ್ಚುವರಿ ಸಾಲಿಸಿಟರ್ ಜನರಲ್ ಅರವಿಂದ ಕಾಮತ್ ಹಾಗೂ ಡೆಪ್ಯುಟಿ ಸಾಲಿಸಿಟರ್ ಜನರಲ್ ಎಚ್. ಶಾಂತಿಭೂಷಣ್ ವಾದ ಮಂಡಿಸಿದ್ದರು.

ಅಂತರರಾಷ್ಟ್ರೀಯ ಸಮ್ಮೇಳನದಲ್ಲಿ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ

ಅಗರಬತ್ತಿ ಉದ್ಯಮ: ಹೊಸ ಅಧ್ಯಾಯ ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಭಾರತೀಯ ಅಗರಬತ್ತಿ ಉದ್ಯಮವು ನಮ್ಮ ಸಂಸ್ಕೃತಿ ಮತ್ತು ಕುಶಲಕರ್ಮಿಗಳ ಸಂಕೇತವಾಗಿದೆ. ಬ್ಯೂರೋ ಆಫ್ ಇಂಡಿಯನ್ ಸ್ಟಾಂಡರ್ಡ್ಸ್ (ಬಿಐಎಸ್) ಪ್ರಮಾಣೀಕರಣವನ್ನು ಪರಿಚಯಿಸುವ ಮೂಲಕ ಹೊಸ ಅಧ್ಯಾಯ ಆರಂಭಗೊಂಡಿದೆ' ಎಂದು ಕೇಂದ್ರದ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕಾ ಖಾತೆ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ ತಿಳಿಸಿದರು.

ಅಖಿಲ ಭಾರತ ಅಗರಬತ್ತಿ ತಯಾರಕರ ಸಂಘ (ಎಐಎಎಂಎ) ಗುರುವಾರ ಆಯೋಜಿಸಿದ್ದ ಅಂತರ ರಾಷ್ಟ್ರೀಯ ಸಮ್ಮೇಳನ, ಎಐಎಎಂಎ ಎಕ್ಸ್‌ಪೊ–2025 ಪ್ರದರ್ಶನ ಉದ್ಘಾಟಿಸಿ ಮಾತನಾಡಿದರು.

'ಬಿಐಎಸ್ ಪ್ರಮಾಣೀಕರಣದ ಮೂಲಕ ನಾವು ಭಾರತೀಯ ಅಗರಬತ್ತಿ ಉತ್ಪನ್ನಗಳು ಅತ್ಯುನ್ನತ ಜಾಗತಿಕ ಗುಣಮಟ್ಟ ಹೊಂದಿರುವುದನ್ನು ಖಾತ್ರಿಪಡಿಸುತ್ತಿದ್ದೇವೆ. ಇದರಿಂದ ನಮ್ಮ ರಫ್ತು ಪ್ರಮಾಣ ಹೆಚ್ಚಲಿದೆ ಮತ್ತು ಭಾರತ ಅಗರಬತ್ತಿ ವಿಭಾಗದಲ್ಲಿ ಮುಂಚೂಣಿಯಲ್ಲಿ ನಿಲ್ಲಲು ನೆರವಾಗುತ್ತದೆ' ಎಂದರು.

'ಸಾಂಪ್ರದಾಯಿಕವಾಗಿ ಆಧುನಿಕ' ಎಂಬ ವಿಷಯಾಧಾರಿತವಾಗಿ ಮೂರು ದಿನ ನಡೆಯಲಿರುವ ಈ ಸಮ್ಮೇಳನದಲ್ಲಿ ಬಿಐಎಸ್ ಪ್ರಮಾಣೀಕರಣವನ್ನು ಬಿಡುಗಡೆಗೊಳಿಸಲಾಯಿತು.

ಎಐಎಎಂಎ ಅಧ್ಯಕ್ಷ ಅಂಬಿಕಾ ರಾಮಾಂಜನೇಯಲು ಮಾತನಾಡಿ, 'ಅಗರಬತ್ತಿ ತಯಾರಕರು, ಸರಬರಾಜುದಾರರು, ಪರಿಣಿತರನ್ನು ಒಂದೇ ಕಡೆ ಸೇರಿಸಿ 25 ವರ್ಷಗಳ ಪರಂಪರೆಯನ್ನು ಸಂಭ್ರಮಿಸುವ ಸಂದರ್ಭ ಇದು' ಎಂದರು.

ಎಐಎಎಂಎ ಎಕ್ಸ್‌ಪೊ–2025ರ ಸಮಿತಿ ಅಧ್ಯಕ್ಷ ಅರ್ಜುನ್ ರಂಗಾ ಮಾತನಾಡಿ, 'ಅಗರಬತ್ತಿ ಉದ್ಯಮವು ಸಾಂಪ್ರದಾಯಿಕ ಕಲೆಯನ್ನು ಆಧುನಿಕ ಉದ್ಯಮ ಪದ್ಧತಿಗಳ ಜೊತೆ ಸಂಯೋಜಿಸಿ ಹೇಗೆ ವಿಕಸನಗೊಳ್ಳುತ್ತಿದೆ ಎಂಬುದನ್ನು ಈ ಎಕ್ಸ್‌ಪೊ ಸಾರುತ್ತಿದೆ' ಎಂದರು.

ಭಾರತೀಯ ಸಂಪ್ರದಾಯ ಮತ್ತು ಆಧ್ಯಾತ್ಮಿಕತೆಯಲ್ಲಿ ಸುಗಂಧದ ಪಾತ್ರ ಕುರಿತು ತಜ್ಞ ದೇವದತ್ತ ಪಟ್ಟನಾಯಕ್ ಒಳನೋಟಗಳನ್ನು ಹಂಚಿಕೊಂಡರು. ಸುಗಂಧ, ಸುಸ್ಥಿರತೆ ಮತ್ತು ಉದ್ಯಮಶೀಲತೆ ಕುರಿತ ಗೋಷ್ಠಿಗಳು ನಡೆಯಲಿವೆ. ತಜ್ಞರು ಮಾಹಿತಿ ಹಂಚಿಕೊಳ್ಳಲಿದ್ದಾರೆ. 'ನೋಸ್ ರಾಯಲ್' ಪರ್ಫ್ಯೂಮ್ ಸೃಷ್ಟಿ ಸ್ಪರ್ಧೆ ನಡೆಯಲಿದೆ. ಉದ್ಯೋಗ ಸೃಷ್ಟಿ, ಕಚ್ಚಾ ವಸ್ತುಗಳ ಮೂಲ, ಹೊಸ ಸುಗಂಧಗಳ ಸಂಶೋಧನೆ, ಪ್ಯಾಕೇಜಿಂಗ್ ಅಭಿವೃದ್ಧಿ, ಮಹಿಳಾ ಸಬಲೀಕರಣ, ರಫ್ತು ಅವಕಾಶಗಳು ಮತ್ತು ಹೊಸ ಯುಗದ ಮಾರ್ಕೆಟಿಂಗ್ ಇತ್ಯಾದಿ ವಿಷಯಗಳ ಕುರಿತು ಗೋಷ್ಠಿಗಳು ನಡೆಯಲಿವೆ ಎಂದು ಸಂಘಟಕರು ತಿಳಿಸಿದ್ದಾರೆ.

ಅಗರಬತ್ತಿ ತಯಾರಕರ ಅಂತರರಾಷ್ಟ್ರೀಯ ಸಮ್ಮೇಳನ ಮತ್ತು ಎಐಎಎಂಎ ಎಕ್ಸ್‌ಪೊ–2025 ಉದ್ಘಾಟನಾ ಕಾರ್ಯಕ್ರಮದಲ್ಲಿ ಅಗರಬತ್ತಿ ಹೊಸೆದ ಸಚಿವೆ ಶೋಭಾ ಕರಂದ್ಲಾಜೆ

ಸಂಸ್ಕರಿಸಿದ ನೀರಿನ ಗುಣಮಟ್ಟಕ್ಕೆ ಒಂದೇ ನೀತಿ

ನೀರಿನ ಪುನರ್‌ಬಳಕೆ ಕುರಿತ ಎರಡು ದಿನಗಳ ರಾಷ್ಟ್ರೀಯ ಕಾರ್ಯಾಗಾರ ಆರಂಭ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ರಾಷ್ಟ್ರಮಟ್ಟದಲ್ಲಿ ಏಕರೂಪದ ನೀತಿ ರೂಪಿಸಲು ಕೇಂದ್ರ ಚಿಂತನೆ
- ಭಾರತದಲ್ಲಿ ನೀರಿನ ಲಭ್ಯತೆ ಕಡಿಮೆಯಾಗಿದ್ದು, ಅಂತರ್ಜಲ ಬಳಕೆ ಹೆಚ್ಚಳ
- ಶೇ100ರಷ್ಟು ಪುನರ್ ಬಳಕೆಗೆ ದೇಶ ಹೆಜ್ಜೆ ಇಡಬೇಕಿದೆ: ವಿ.ಕೆ. ಪೌಲ್

ಬೆಂಗಳೂರು: 'ಸಂಸ್ಕರಿಸಿದ ನೀರಿನ ಗುಣಮಟ್ಟದ ಖಾತ್ರಿಗಾಗಿ ರಾಷ್ಟ್ರಮಟ್ಟದಲ್ಲಿ ಏಕ ರೂಪದ ನೀತಿ ರೂಪಿಸಲು ಕೇಂದ್ರ ಸರ್ಕಾರ ಚಿಂತನೆ ನಡೆಸಿದೆ' ಎಂದು ನೀತಿ ಆಯೋಗದ ಸದಸ್ಯ ವಿ.ಕೆ. ಪಾಲ್ ತಿಳಿಸಿದರು.

ನೀತಿ ಆಯೋಗವು ಬೆಂಗಳೂರು ಜಲ ಮಂಡಳಿಯ ಸಹಯೋಗದಲ್ಲಿ ನಗರದಲ್ಲಿ ಆಯೋಜಿಸಿರುವ ಭಾರತದಲ್ಲಿ ಸಂಸ್ಕರಿಸಿದ ನೀರಿನ ಪುನರ್‌ಬಳಕೆ ಕುರಿತ ಎರಡು ದಿನಗಳ ಕಾರ್ಯಾಗಾರವನ್ನು ಗುರುವಾರ ಉದ್ಘಾಟಿಸಿ ಅವರು ಮಾತನಾಡಿದರು.

'ನಗರೀಕರಣದ ಪ್ರಭಾವದಿಂದಾಗಿ ನೀರಿನ ಬಳಕೆ ಪ್ರಮಾಣ ಹೆಚ್ಚಳವಾಗಿದೆ. ಆದರೆ, ಭಾರತದಲ್ಲಿ ನೀರಿನ ಲಭ್ಯತೆ ಕಡಿಮೆಯಾಗಿದೆ. ಅಂತರ್ಜಲ ಹಾಗೂ ನದಿ ನೀರಿನ ಅವಲಂಬನೆ ಜತೆಗೆ ಬಳಸಿದ ನೀರಿನ ಸಂಸ್ಕರಣೆಗೆ ಒತ್ತು ನೀಡಲಾಗುತ್ತಿದೆ. ಈಗಾಗಲೇ ಕರ್ನಾಟಕವೂ ಸೇರಿ 11 ರಾಜ್ಯಗಳಲ್ಲಿ ಸಂಸ್ಕರಿಸಿದ ನೀರಿನ ಪುನರ್‌ಬಳಕೆ ನೀತಿ ಇದೆ. 2030ರೊಳಗೆ ಶೇ 50, 2045ರ ಹೊತ್ತಿಗೆ ಶೇ 100ರಷ್ಟು ನೀರಿನ ಪುನರ್ ಬಳಕೆಯನ್ನು ಮಾಡುವತ್ತ ದೇಶ ಹೆಜ್ಜೆ ಇಡಲೇಬೇಕಾಗಿರುವುದರಿಂದ ಏಕರೂಪದ ನೀತಿ ಜಾರಿಗೆ ಪ್ರಯತ್ನ ನಡೆದಿದೆ' ಎಂದು ವಿವರಿಸಿದರು.

'ಭಾರತದ ನಗರ ಪ್ರದೇಶಗಳಲ್ಲಿ ಪ್ರತಿ ನಿತ್ಯ 72,368 ಮಿಲಿಯನ್ ಲೀಟರ್ (ಎಂಎಲ್‌ಡಿ) ಕೊಳಚೆ ನೀರು ಉತ್ಪಾದನೆಯಾಗುತ್ತಿದೆ. ಇದರಲ್ಲಿ 31,885 ಎಂಎಲ್‌ಡಿ ಸಂಸ್ಕರಣೆ ಯಾಗುತ್ತಿದೆ. ಶೇ 60ರಷ್ಟು ಇನ್ನೂ ಸಂಸ್ಕರಣೆಯಾಗಬೇಕಿದೆ. ಬೆಂಗಳೂರಿನಲ್ಲಿ ನಿತ್ಯ 2,200 ಎಂಎಲ್‌ಡಿ ಕೊಳಚೆ ನೀರು ಸಂಗ್ರಹವಾಗುತ್ತಿದ್ದು 1,300 ಎಂಎಲ್‌ಡಿ ಸಂಸ್ಕರಣೆಯಾಗುತ್ತಿದೆ. ಈ ಕಾರ್ಯ ಶ್ಲಾಘನೀಯ' ಎಂದರು.

ಕೇಂದ್ರ ನಗರ ವ್ಯವಹಾರಗಳ ಸಚಿವಾಲಯದ ಹೆಚ್ಚುವರಿ ಕಾರ್ಯದರ್ಶಿ ಡಿ.ತಾರಾ ಮಾತನಾಡಿ, 'ಸಂಸ್ಕರಿಸಿದ ನೀರಿನ ಬಳಕೆಯನ್ನು ಆರ್ಥಿಕ ಲೆಕ್ಕಾಚಾರದ ನೆಲೆಯಲ್ಲೂ ನೋಡುವುದು ಅಗತ್ಯವಿದೆ. ಬೆಂಗಳೂರು ಜಲಮಂಡಳಿ ವಾರ್ಷಿಕ ಸದ್ಯ ₹190 ಕೋಟಿ ಆದಾಯ ಹೊಂದಿದೆ. ಮೀಟರಿಂಗ್ ಮತ್ತು ವ್ಯವಸ್ಥಿತ ಮರುಬಳಕೆಯಿಂದ ₹1,000 ಕೋಟಿಗೆ ಏರಿಸಲು ಅವಕಾಶವಿದೆ. ನೀರಿನ ಲೆಕ್ಕಪತ್ರ ಮತ್ತು ಪುನರ್‌ಬಳಕೆ ನಿರ್ವಹಣೆಗೆ ವೃತ್ತಿಪರ ವಿಭಾಗ ಸ್ಥಾಪಿಸಿ, ಮಹಿಳಾ ಸ್ವಸಹಾಯ ಗುಂಪುಗಳ ಮೂಲಕ ನೀರಿನ ಬಳಕೆ ಬಗ್ಗೆ ಅರಿವು ಮೂಡಿಸಬೇಕು' ಎಂದು ಸೂಚಿಸಿದರು.

ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ತುಷಾರ್ ಗಿರಿನಾಥ್ ಮಾತನಾಡಿ, 'ಬೆಂಗಳೂರಿನಲ್ಲಿ 34 ಒಳಚರಂಡಿ ನೀರು ಸಂಸ್ಕರಿಸುವ ಘಟಕಗಳಿದ್ದು (ಎಸ್‌ಟಿಪಿ), ಇನ್ನೂ 12 ಘಟಕ ನಿರ್ಮಾಣ ಮಾಡಿ ನೀರಿನ ಸಂಸ್ಕರಣೆ ಪ್ರಮಾಣ ಹೆಚ್ಚಿಸಲಾಗುತ್ತಿದೆ' ಎಂದು ತಿಳಿಸಿದರು.

ಬೆಂಗಳೂರು ಜಲಮಂಡಳಿ ಅಧ್ಯಕ್ಷ ಡಾ.ರಾಮಪ್ರಸಾತ್ ಮನೋಹರ್ ಕಾರ್ಯಾಗಾರದ ಮಾಹಿತಿ ನೀಡಿದರು.

ನಗರದಲ್ಲಿ ಗುರುವಾರ ನಡೆದ 'ಸಂಸ್ಕರಿಸಿದ ನೀರಿನ ಪುನರ್ ಬಳಕೆ' ಕುರಿತ ಕಾರ್ಯಾಗಾರದಲ್ಲಿ ಆಯೋಜಿಸಿದ್ದ ವಸ್ತುಪ್ರದರ್ಶನ ಕುರಿತು ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರು ನೀತಿ ಆಯೋಗದ ಸದಸ್ಯ ವಿ.ಕೆ.ಪಾಲ್ ಅವರಿಗೆ ಮಾಹಿತಿ ನೀಡಿದರು. ಜಲಮಂಡಳಿ ಅಧ್ಯಕ್ಷ ವಿ. ರಾಮ ಪ್ರಸಾತ್ ಮನೋಹರ್ ಪಾಲ್ಗೊಂಡಿದ್ದರು –ಪ್ರಜಾವಾಣಿ ಚಿತ್ರ

'ಕರ್ನಾಟಕದಲ್ಲಿ ಸಂಸ್ಕರಣೆ, ಬಳಕೆಗೆ ಒತ್ತು'

'ಬೆಂಗಳೂರು ನಗರದಲ್ಲಿ ಕಳೆದ ವರ್ಷ ಕುಡಿಯುವ ನೀರಿನ ಪರಿಸ್ಥಿತಿ ಸುಧಾರಿಸಲು ಸಂಸ್ಕರಿಸಿದ ನೀರನ್ನು ಕುಡಿಯುವುದಕ್ಕೆ ಹೊರತಾಗಿ ಇತರೆ ಕಾರ್ಯಗಳಿಗೆ ಬಳಸಲು ಸೂಚಿಸಲಾಗಿತ್ತು. ಇದಕ್ಕಾಗಿ ನಗರದ 110 ಕೆರೆಗಳ ಪುನರುಜ್ಜೀವನಗೊಳಿಸಲಾಯಿತು' ಎಂದು ಮುಖ್ಯ ಕಾರ್ಯದರ್ಶಿ ಡಾ.ಶಾಲಿನಿ ರಜನೀಶ್ ಹೇಳಿದರು.

'ಸಂಸ್ಕರಿಸಿದ ನೀರಿನ ಪುನರ್‌ಬಳಕೆ ಸಂಬಂಧಿತ ನಿಯಮಗಳನ್ನು ಕರ್ನಾಟಕ ಜಾರಿಗೆ ತಂದಿದ್ದು, ನಮ್ಮ ರಾಜ್ಯ ಮುಂಚೂಣಿಯಲ್ಲಿದೆ. 2028ರೊಳಗೆ ಶೇ 100ರಷ್ಟು ಸಂಸ್ಕರಿಸಿದ ನೀರಿನ ಬಳಕೆ ಮತ್ತು ಮಳೆನೀರು ಸಂಗ್ರಹಣೆಗೆ ಹೆಚ್ಚಿನ ಪ್ರಾಮುಖ್ಯತೆ ನೀಡಲಾಗುವುದು' ಎಂದರು.

ಚಿಟಿಕೆ ಸುದ್ದಿ

18ಕ್ಕೆ 'ವಚನ ದನಿ' ಏಕವ್ಯಕ್ತಿ ಪ್ರಯೋಗ

ಬೆಂಗಳೂರು: ಬೆನಕ ತಂಡವು ಇದೇ 18ರಂದು ಸಂಜೆ 6 ಗಂಟೆಗೆ ಬಿ.ಪಿ. ವಾಡಿಯಾ ರಸ್ತೆಯಲ್ಲಿರುವ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್‌ನಲ್ಲಿ ಟಿ.ಎಸ್. ನಾಗಾಭರಣ ಅವರ ನಿರ್ದೇಶನದಲ್ಲಿ 'ವಚನ ದನಿ–ಶಬ್ದದಿಂದ ನಿಶ್ಶಬ್ದದೆಡೆಗೆ' ಏಕವ್ಯಕ್ತಿ ಪ್ರಯೋಗ ಹಮ್ಮಿಕೊಂಡಿದೆ.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ತಂಡದ ನಿರ್ದೇಶಕ ಟಿ.ಎಸ್. ನಾಗಾಭರಣ, 'ರಾಷ್ಟ್ರ ಪ್ರಶಸ್ತಿ ಪುರಸ್ಕೃತ ಸಂಗೀತ ನಿರ್ದೇಶಕ ಬಾಪು ಪದ್ಮನಾಭ್ ಅವರು ಈ ಪ್ರಯೋಗ ಪ್ರಸ್ತುತಪಡಿಸುತ್ತಾರೆ. ನಾಗಿಣಿ ಭರಣ ಅವರು ವಸ್ತ್ರವಿನ್ಯಾಸ ಮಾಡಿದ್ದು, ವಿಠ್ಠಲ್ ಬಿ. ಅಪ್ಪಯ್ಯ ಅವರು ರಂಗ ವಿನ್ಯಾಸ ಮಾಡಿದ್ದಾರೆ. ಈ ಪ್ರಯೋಗವು ವಚನಗಳ ಆಂತರಿಕ ಆಧ್ಯಾತ್ಮಿಕ ತಾತ್ವಿಕತೆಯನ್ನು ಧ್ಯಾನಾತ್ಮಕ ವಚನ ಗಾಯನದ ಮೂಲಕ ಪ್ರಸ್ತುತಪಡಿಸುತ್ತದೆ' ಎಂದು ಹೇಳಿದರು.

ಬಾಪು ಪದ್ಮನಾಭ್, 'ಈ ಪ್ರಯೋಗವು ಶರಣರ ತಾತ್ವಿಕ ಸಂದೇಶವನ್ನು ಹೊಸ ರೀತಿಯಲ್ಲಿ ಜನರ ಹೃದಯಕ್ಕೆ ಹತ್ತಿರಗೊಳಿಸುವ ಒಂದು ಪ್ರಯತ್ನ ಇದಾಗಿದೆ' ಎಂದು ತಿಳಿಸಿದರು.

ಪ್ರಕಾಶಕ ಬಿ.ಎಸ್. ವಿದ್ಯಾರಣ್ಯ ಉಪಸ್ಥಿತರಿದ್ದರು. ಪ್ರದರ್ಶನದ ಟಿಕೆಟ್‌ಗಳಿಗೆ: 7760604599

ಪೈಥಿಯನ್ ಕ್ರೀಡಾಕೂಟ ಇಂದಿನಿಂದ

ಬೆಂಗಳೂರು: 2ನೇ ರಾಷ್ಟ್ರೀಯ ಸಾಂಸ್ಕೃತಿಕ ಪೈಥಿಯನ್ ಕ್ರೀಡಾಕೂಟ ಬೆಂಗಳೂರು ನಗರ ವಿಶ್ವವಿದ್ಯಾಲಯದಲ್ಲಿ ಇದೇ 7ರಿಂದ ಮೂರು ದಿನಗಳ ಕಾಲ ನಡೆಯಲಿದೆ. ದಕ್ಷಿಣ ಭಾರತದಲ್ಲಿ ಪೈಥಿಯನ್ ಕೌನ್ಸಿಲ್ ಆಫ್ ಇಂಡಿಯಾ (ಪಿಸಿಐ) ಆಯೋಜಿಸಿರುವ ಆಧುನಿಕ ಪೈಥಿಯನ್ ಕ್ರೀಡಾಕೂಟದ ರಾಷ್ಟ್ರೀಯ ಮಟ್ಟದ ಕಾರ್ಯಕ್ರಮವಾಗಿದೆ. ಕರ್ನಾಟಕದ ಸಾಂಸ್ಕೃತಿಕ ಪರಂಪರೆ, ಪರಿಸರ, ಪ್ರದರ್ಶನ ಕಲೆಗಳು ಹಾಗೂ ಸಾಂಪ್ರದಾಯಿಕ ಕ್ರೀಡೆಗಳಿಗೆ ಸಿಗುತ್ತಿರುವ ಬೆಂಬಲವನ್ನು ಗುರುತಿಸಿ ಆತಿಥೇಯ ರಾಜ್ಯವಾಗಿ ಕರ್ನಾಟಕವನ್ನು ಆಯ್ಕೆ ಮಾಡಲಾಗಿದೆ ಎಂದು ಆಯೋಜಕರು ತಿಳಿಸಿದ್ದಾರೆ.

ಕಲಾ ಪ್ರತಿಭೋತ್ಸವ ಸ್ಪರ್ಧೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಮಕ್ಕಳ ಮತ್ತು ಯುವಜನರ ಕಲಾ ಪ್ರತಿಭೆಯನ್ನು ಗುರುತಿಸಿ ಅವರಿಗೆ ಉತ್ತೇಜನ ನೀಡಲು ಜಿಲ್ಲಾ ಮಟ್ಟದಲ್ಲಿ ಕಲಾ ಪ್ರತಿಭೋತ್ಸವ ಹಮ್ಮಿಕೊಳ್ಳಲಾಗಿದೆ.

ಸ್ಪರ್ಧೆಯಲ್ಲಿ ಭಾಗವಹಿಸಲು ಬೆಂಗಳೂರು ನಗರ ಜಿಲ್ಲಾ ವ್ಯಾಪ್ತಿಯ ಅರ್ಹರಿಂದ ಅರ್ಜಿ ಆಹ್ವಾನಿಸಲಾಗಿದೆ.

ಅಭ್ಯರ್ಥಿಯು ಬಾಲ ಪ್ರತಿಭೆ (8 ವರ್ಷದಿಂದ 14 ವರ್ಷದ ಒಳಗೆ), ಕಿಶೋರ ಪ್ರತಿಭೆ (14 ವರ್ಷದಿಂದ 18 ವರ್ಷದ ಒಳಗೆ) ಯುವ ಪ್ರತಿಭೆಗೆ 18 ವರ್ಷದಿಂದ 30 ವರ್ಷದಳೊಗಿನವರಾಗಿರಬೇಕು.

ಆಸಕ್ತರು ಸ್ಪರ್ಧೆಯಲ್ಲಿ ಭಾಗವಹಿಸಲು ಜೆ.ಸಿ.ರಸ್ತೆ ಕನ್ನಡ ಭವನದಲ್ಲಿ ಅರ್ಜಿಯನ್ನು ಪಡೆದು, ನವೆಂಬರ್ 15 ರೊಳಗೆ ಸಲ್ಲಿಸಬೇಕು.

ಹೆಚ್ಚಿನ ಮಾಹಿತಿಗಾಗಿ 080-22213530 ಸಂಪರ್ಕಿಸಬಹುದು ಎಂದು ಬೆಂಗಳೂರು ನಗರ ಜಿಲ್ಲೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರು ತಿಳಿಸಿದ್ದಾರೆ.

ಅವ್ಯವಸ್ಥೆ: ಸಚಿವ ಪರಿಶೀಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೆಜೆಸ್ಟಿಕ್‌ನಲ್ಲಿರುವ ಕೆಎಸ್‌ಆರ್‌ಟಿಸಿಯ ಕೆಂಪೇಗೌಡ ಬಸ್ ನಿಲ್ದಾಣಕ್ಕೆ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಗುರುವಾರ ದಿಢೀರ್ ಭೇಟಿ ನೀಡಿ, ಅಲ್ಲಿನ ಸಮಸ್ಯೆಗಳ ಬಗ್ಗೆ ಪರಿಶೀಲಿಸಿದರು.

ಬಸ್ ನಿಲ್ದಾಣದಲ್ಲಿ ವಾಹನಗಳ ನಿಲುಗಡೆಗಾಗಿ ಮೀಸಲಿರುವ ಪ್ರದೇಶವು ಸಮತಟ್ಟಾಗಿರದೇ, ಮಳೆ ಬಂದ ಸಂದರ್ಭದಲ್ಲಿ ನೀರು ನಿಂತು ವಾಹನಗಳ ಸುಗಮ ಸಂಚಾರಕ್ಕೆ ತೊಂದರೆ ಉಂಟಾಗುತ್ತಿರುವ ಬಗ್ಗೆ ಪ್ರಯಾಣಿಕರು ಸಚಿವರ ಗಮನಕ್ಕೆ ತಂದಿದ್ದರು. ಕೂಡಲೇ ಕಾಮಗಾರಿ ಕೈಗೆತ್ತಿಕೊಳ್ಳಲು ಅಧಿಕಾರಿಗಳಿಗೆ ಸಚಿವರು ಸೂಚಿಸಿದ್ದರು.

ಈ ಬಗ್ಗೆ ಪರಿಶೀಲಿಸಲು ಸಚಿವರು ದಿಢೀರ್ ಭೇಟಿ ನೀಡಿದರು. ಮೊದಲನೇ ಹಂತದ ಕಾಮಗಾರಿಯನ್ನು ಪೂರ್ಣಗೊಳಿಸಿ, ಮುಂದಿನ ಹಂತದಲ್ಲಿ ಮಳೆಯಾದಾಗ ಜನರಿಗೆ ತೊಂದರೆ ಯಾಗುವ ಇನ್ನೆರಡು ಸ್ಥಳಗಳನ್ನು ಸರಿಪಡಿಸಲು ಸೂಚನೆ ನೀಡಿದರು.

ಮೆಜೆಸ್ಟಿಕ್‌ನಲ್ಲಿರುವ ಕೆಎಸ್‌ಆರ್‌ಟಿಸಿಯ ಕೆಂಪೇಗೌಡ ಬಸ್ ನಿಲ್ದಾಣಕ್ಕೆ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಗುರುವಾರ ದಿಢೀರ್ ಭೇಟಿ ನೀಡಿ ಪರಿಶೀಲನೆ ನಡೆಸಿದರು

ಬಸ್ ನಿಲ್ದಾಣದ ಎಲ್ಲ ಟರ್ಮಿನಲ್‌ಗಳ ಪರಿವೀಕ್ಷಣೆ ನಡೆಸಿದರು. ಪ್ರಯಾಣಿಕರಿಗೆ ಸಮರ್ಪಕ ಸಾರಿಗೆ ಸೌಲಭ್ಯ ಒದಗಿಸುವುದರ ಜೊತೆಗೆ ವಾಣಿಜ್ಯ ಮಳಿಗೆಗಳು ಖಾಲಿ ಉಳಿಯದಂತೆ ಕ್ರಮವಹಿಸಲು ಸೂಚಿಸಿದರು.

ಕುಡಿಯುವ ನೀರು, ವಿದ್ಯುತ್ ದೀಪ ಹಾಗೂ ಶೌಚಾಲಯದ ವ್ಯವಸ್ಥೆಯನ್ನು ಸಮರ್ಪಕವಾಗಿ ನಿರ್ವಹಿಸಲು ಸೂಚಿಸಿದರು. ಬಳಿಕ ಬಿಎಂಟಿಸಿ ಬಸ್ ನಿಲ್ದಾಣಕ್ಕೂ ಭೇಟಿ ನೀಡಿದರು. ಕಟ್ಟಡದ ಮೇಲೆ ಬೆಳೆದಿರುವ ಗಿಡಗಳನ್ನು ತೆಗೆಸಿ, ಸ್ವಚ್ಛಗೊಳಿಸಲು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಕೆಎಸ್‌ಆರ್‌ಟಿಸಿ, ಬಿಎಂಟಿಸಿ ಅಧಿಕಾರಿಗಳು ಉಪಸ್ಥಿತರಿದ್ದರು.

28ರಂದು ಕೃಷ್ಣಮಠಕ್ಕೆ ಪ್ರಧಾನಿ

ಪ್ರಜಾವಾಣಿ ವಾರ್ತೆ

ಉಡುಪಿ: ಪರ್ಯಾಯ ಪುತ್ತಿಗೆ ಶ್ರೀಕೃಷ್ಣ ಮಠದಿಂದ ಬೃಹತ್ ಗೀತೋತ್ಸವವು ಇದೇ 8 ರಿಂದ ಡಿಸೆಂಬರ್ 7ರ ವರೆಗೆ ನಡೆಯಲಿದೆ.

ಇದರ ಅಂಗವಾಗಿ ಇದೇ 28 ರಂದು ಪ್ರಧಾನಿ ನರೇಂದ್ರ ಮೋದಿ ಅವರು ಶ್ರೀಕೃಷ್ಣಮಠಕ್ಕೆ ಭೇಟಿ ನೀಡುವರು ಎಂದು ಪರ್ಯಾಯ ಪುತ್ತಿಗೆ ಮಠಾಧೀಶ ಸುಗುಣೇಂದ್ರ ತೀರ್ಥ ಶ್ರೀಪಾದರು ತಿಳಿಸಿದರು.

ಸುಗುಣೇಂದ್ರ ತೀರ್ಥ ಶ್ರೀಪಾದರು

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 28ರಂದು ಬೆಳಿಗ್ಗೆ 9.30ಕ್ಕೆ ಲಕ್ಷ ಕಂಠ ಗೀತಾ ಪಾರಾಯಣ ಆರಂಭವಾಗಲಿದ್ದು, ಮಧ್ಯಾಹ್ನ 12.30ಕ್ಕೆ ಕೊನೆಗೊಳ್ಳಲಿದೆ. ಅಂದು ಮಧ್ಯಾಹ್ನ 12 ಗಂಟೆಗೆ ಮೋದಿ ಅವರು ಮಠಕ್ಕೆ ಭೇಟಿ ನೀಡುವರು ಎಂದರು.

ಪ್ರಧಾನಿ ಅವರು ಇದೇ ವೇಳೆ ಸುವರ್ಣ ಮುಖಮಂಟಪ ಮತ್ತು ಕನಕನ ಕಿಂಡಿಗೆ ಅಳವಡಿಸಿರುವ ಚಿನ್ನದ ಕವಚವನ್ನು ಅನಾವರಣಗೊಳಿಸುವವರು. ಬಳಿಕ ಗೀತಾ ಮಂದಿರಕ್ಕೆ ಭೇಟಿ ನೀಡುವರು. ಮಠದ ಪಾರ್ಕಿಂಗ್ ಪ್ರದೇಶದಲ್ಲಿ ನಡೆಯುವ ಸಭಾ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವರು ಎಂದು ವಿವರಿಸಿದರು.

ಕಾರ್ಯಕ್ರಮದಲ್ಲಿ ಕೇಂದ್ರ ಸಚಿವರಾದ ನಿರ್ಮಲಾ ಸೀತಾರಾಮನ್, ಪ್ರಲ್ಹಾದ ಜೋಶಿ, ರಾಜ್ಯ ಗೃಹಸಚಿವ ಜಿ.ಪರಮೇಶ್ವರ್ ಪಾಲ್ಗೊಳ್ಳುವರು ಎಂದು ತಿಳಿಸಿದರು. ಇದೇ 8ರಂದು ಬೃಹತ್ ಗೀತೋತ್ಸವವನ್ನು ಪೇಜಾವರ ಮಠಾಧೀಶ ವಿಶ್ವಪ್ರಸನ್ನತೀರ್ಥ ಶ್ರೀಪಾದರು ಉದ್ಘಾಟಿಸುವರು. 30 ರಂದು ನಡೆಯಲಿರುವ ಸಂತ ಸಂಗಮ ಮತ್ತು ಭಜನೋತ್ಸವ ಕಾರ್ಯಕ್ರಮದಲ್ಲಿ ಉತ್ತರಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಪಾಲ್ಗೊಳ್ಳುವರು ಎಂದು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಪರ್ಯಾಯ ಪುತ್ತಿಗೆ ಮಠದ ಕಿರಿಯ ಶ್ರೀ ಸುಶ್ರೀಂದ್ರ ತೀರ್ಥ ಶ್ರೀಪಾದರು ಭಾಗವಹಿಸಿದ್ದರು.

ದತ್ತು ಮಾಸಾಚರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಕ್ಕಳ ರಕ್ಷಣಾ ನಿರ್ದೇಶನಾಲಯದ ವತಿಯಿಂದ ನವೆಂಬರ್ ತಿಂಗಳನ್ನು ಅಂತರಾಷ್ಟ್ರೀಯ ದತ್ತು ಮಾಸವಾಗಿ ಆಚರಿಸಲಾಗುತ್ತಿದೆ.

ಇದರ ಅಂಗವಾಗಿ ಕಾನೂನು ಬಾಹಿರ ದತ್ತು ಪ್ರಕ್ರಿಯೆ ಅಪರಾಧ. ಮಕ್ಕಳನ್ನು ಮಾರಾಟ ಮಾಡುವುದು ಶಿಕ್ಷಾರ್ಹ ಅಪರಾಧವಾಗಿದೆ.

ಅನಾಥ, ಪರಿತ್ಯಕ್ತ ಮತ್ತು ಒಪ್ಪಿಸಲ್ಪಟ್ಟ ಮಕ್ಕಳ ಮಾಹಿತಿ ಕಂಡುಬಂದಲ್ಲಿ ಯಲಹಂಕ ನ್ಯೂಟೌನ್‌ನಲ್ಲಿರುವ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳ ಕಚೇರಿ ದೂರವಾಣಿ ಸಂಖ್ಯೆ 080-28461452 ಸಂಪರ್ಕಿಸಿ ಮಾಹಿತಿ ನೀಡುವಂತೆ ಕೋರಲಾಗಿದೆ.

ಪಿಎಚ್.ಡಿ ಶಿಷ್ಯವೇತನ

ಬೆಂಗಳೂರು: ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಪ್ರೋತ್ಸಾಹಕ ಸೊಸೈಟಿ ವತಿಯಿಂದ 2025-26ನೇ ಸಾಲಿನಲ್ಲಿ ಶಿಷ್ಯವೇತನ ಪಡೆಯಲು ವಿಜ್ಞಾನ ಮತ್ತು ಎಂಜಿನಿಯರಿಂಗ್ ವಿಷಯಗಳಲ್ಲಿ ಕರ್ನಾಟಕದಲ್ಲಿ ಮಾನ್ಯತೆ ಪಡೆದ ವಿಶ್ವವಿದ್ಯಾಲಯ/ಸಂಸ್ಥೆ/ ಕಾಲೇಜುಗಳಲ್ಲಿ ಪಿಎಚ್.ಡಿ ಪದವಿಗೆ ಈಗಾಗಲೇ ನೋಂದಾಯಿತರಾಗಿರುವ ಅರ್ಹ ಸಂಶೋಧನಾ ವಿದ್ಯಾರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಆಸಕ್ತರು ವೆಬ್‌ಸೈಟ್ http:// ksteps.karnataka.gov.in ನಲ್ಲಿ ಡಿ.5 ರೊಳಗೆ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ 080-26711166 ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಕರ್ನಾಟಕ ಸರ್ಕಾರ
ಕರ್ನಾಟಕ ಮೋಟಾರು ರಹಿತ ಸಾರಿಗೆ ಸಂಸ್ಥೆ

ಬಿಎಂಟಿಸಿ, ಟಿಟಿಎಂಸಿ, 'ಬಿ' ಬ್ಲಾಕ್ (ಬಸ್ ಸ್ಟ್ಯಾಂಡ್ ಮೇಲ್ಭಾಗ), 4ನೇ ಮಹಡಿ, ಕೆ.ಹೆಚ್.ರಸ್ತೆ, ಶಾಂತಿನಗರ, ಬೆಂಗಳೂರು-560027, ದೂರವಾಣಿ : 080-22226627/6628, ಫ್ಯಾಕ್ಸ್ : 080-22226630, ಇಮೇಲ್ : dultbangalore@gmail.com, dult@karnataka.gov.in

ಸಂಖ್ಯೆ: KNMTA-ACT/1/2024 ದಿನಾಂಕ :06.11.2025

ಪ್ರಕಟಣೆ

ಕರ್ನಾಟಕ ಮೋಟಾರು ರಹಿತ ಸಾರಿಗೆ ಸಂಸ್ಥೆಯ ಹೆಚ್ಚುವರಿ ನಿಧಿಯ ನಿರ್ವಹಣೆಗಾಗಿ ಸಾರ್ವಜನಿಕ ವಲಯದ ಬ್ಯಾಂಕ್‌ಗಳಿಂದ ಇ-ಹರಾಜು ಬಿಡ್‌ಗಳನ್ನು ಆಹ್ವಾನಿಸಲಾಗಿದೆ. ಇ-ಹರಾಜನ್ನು (ಉಲ್ಲೇಖ ಸಂಖ್ಯೆ: KNMTA/2025-26/AUCTION4) ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ನಡೆಸಲಾಗುತ್ತದೆ. ಬಿಡ್‌ಗಳನ್ನು ಸಲ್ಲಿಸಲು ಕೊನೆಯ **ದಿನಾಂಕ :17.11.2025 ಸಂಜೆ 5.30** ಬಿಡ್‌ದಾರರು ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್‌ನಲ್ಲಿ ಹರಾಜು ದಾಖಲೆಗಳು ಮತ್ತು ವಿವರಗಳನ್ನು ಪಡೆಯಬಹುದು. https://kppp.karnataka.gov.in

ಸಹಿ/- ಮುಖ್ಯ ಕಾರ್ಯನಿರ್ವಹಣಾಧಿಕಾರಿ
ಕರ್ನಾಟಕ ಮೋಟಾರು ರಹಿತ ಸಾರಿಗೆ ಸಂಸ್ಥೆ

ವಾಸಾಸಂಇ/ವಾಪ್ರ/3624/ಎಸ್‌ಎಸ್‌ಸಿ/2025-26

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ

ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಆಡಳಿತ ಕಛೇರಿ, ರಾ.ಹೆ-75 ರಸ್ತೆ, ಕೆಫೆ ಕಾಫಿಡೇ ಹತ್ತಿರ, ನರಸಾಪುರ-563133, ಕೋಲಾರ ತಾಲ್ಲೂಕು ಮತ್ತು ಜಿಲ್ಲೆ. ಇ-ಮೇಲ್: eemidklr@rediffmail.com, eemigwddkolar@gmail.com ದೂರವಾಣಿ ಸಂಖ್ಯೆ: 08152-200049

ಸಂಖ್ಯೆ:ಕಾ.ಪಾ.ಇಂ/ಸ.ನೀ.ವಿ/ಕೋ/ತಾಂ.ಶಾ/ಸ.ಇಂ/ಟೆಂಡರ್ ಪ್ರಕಟಣೆ/1689/2025-26/ ದಿನಾಂಕ:04.11.2025

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 15/2025-26/ ದಿನಾಂಕ: 04.11.2025

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಕೋಲಾರ ರವರಿಂದ ಕೆಡಬ್ಲ್ಯೂ-1&2 ಟೆಂಡರ್ ಡಾಕ್ಯೂಮೆಂಟ್ ಅಳವಡಿಸಿಕೊಂಡು ಕೆಟಿಪಿಪಿ ನಿಯಮಾವಳಿ ಅನ್ವಯ ಎರಡು ಲಕೋಟೆ ಪದ್ಧತಿಯಲ್ಲಿ ಎಸ್.ಸಿ.ಪಿ & ಟಿ.ಎಸ್.ಪಿ ಯೋಜನೆಯಡಿಯಲ್ಲಿ 24 ಕೊಳವೆ ಬಾವಿ ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗಿದೆ. ಗರಿಷ್ಠ ಮೊತ್ತ ರೂ. 24.98 ಲಕ್ಷ ಹಾಗೂ ಕನಿಷ್ಠ ಮೊತ್ತ ರೂ. 4.99 ಲಕ್ಷ. ನಿಗಧಿತ ಇ.ಎಂ.ಡಿ ಮೊತ್ತವನ್ನು ಕೆಪಿಪಿ- ಪೋರ್ಟಲ್‌ನಲ್ಲಿದ್ದಂತೆ ಸಲ್ಲಿಸುವುದು. ಟೆಂಡರ್ ಪ್ರೊಸೆಸ್ಸಿಂಗ್ ಫೀ ಕೆಪಿಪಿ-ಪೋರ್ಟ್‌ಲ್ ನಿಯಮಾನುಸಾರ, ಟೆಂಡರ್ ಡಾಕ್ಯುಮೆಂಟ್‌ಗಳನ್ನು ವೆಬ್‌ಸೈಟ್ www.kppp.karnataka.gov.in ನಲ್ಲಿ **ದಿನಾಂಕ: 07.11.2025ರ ಸಂಜೆ: 04.30 ಗಂಟೆಯಿಂದ ಪಡೆಯಬಹುದು (Download).** ಡಾಕ್ಯುಮೆಂಟ್‌ಗಳನ್ನು ಸಲ್ಲಿಸಬೇಕಾಗಿರುವ **(Upload) ದಿನಾಂಕ: 17.11.2025 ಸಂಜೆ 04:30 ಗಂಟೆಯವರೆಗೆ,** ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 17.11.2025ರ ಸಂಜೆ 04:31 ಗಂಟೆಯ ನಂತರ.** ಮೇಲಿನ ವಿವರಗಳು ಭವಿಷ್ಯದಲ್ಲಿ ಸಂದರ್ಭೋಚಿತವಾಗಿ ಬದಲಾವಣೆಗೆ ಒಳಪಟ್ಟಿರುತ್ತವೆ. ಹೆಚ್ಚಿನ ವಿವರ ಹಾಗೂ ನಿಬಂಧನೆಗಳಿಗೆ www.kppp.karnataka.gov.in ಅಂತರ್ಜಲ ತಾಣದಲ್ಲಿ ಅಥವಾ ಈ ಕಛೇರಿಯ ಕೆಲಸದ ವೇಳೆಯಲ್ಲಿ (ರಜಾದಿನ ಹೊರತುಪಡಿಸಿ) ಪಡೆಯಬಹುದು.

ಸಹಿ/- ಕಾರ್ಯಪಾಲಕ ಇಂಜಿನಿಯರ್
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಕೋಲಾರ

ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:343/ಕೆಎಸ್‌ಎಂಸಿಎ/2025-26

ಕರ್ನಾಟಕ ಸರ್ಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ
ಕಾರ್ಯಪಾಲಕ ಇಂಜಿನೀಯರ್‌ರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿಕ್ಕಬಳ್ಳಾಪುರ-562101

ದೂರವಾಣಿ ಸಂಖ್ಯೆ: ಕಛೇರಿ: 08156-295427
ಫ್ಯಾಕ್ಸ್: 08156- 295427 ಇಮೇಲ್ - eemidcbpura@gmail.com
ಸಂಖ್ಯೆ: ಕಾಸಬ/ಸ.ನೀ ಮತ್ತು ಅ.ಅ.ವಿ/ಚಿ.ಪುರ/ತಾಂಶಾ/ತಾಂಸ/ಟೆಂಡರ್ ಪ್ರಕಟಣೆ /1812/2025-26 ದಿನಾಂಕ : 06/11/2025

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ:13/2025-26/ದಿನಾಂಕ:06/11/2025

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿಕ್ಕಬಳ್ಳಾಪುರ ರವರಿಂದ ಕೆಡಬ್ಲ್ಯೂ-4 ಟೆಂಡರ್ ಡಾಕ್ಯೂಮೆಂಟ್ ಅಳವಡಿಸಿಕೊಂಡು ಕೆಟಿಪಿಪಿ ನಿಯಮಾವಳಿ ಅನ್ವಯ ಎರಡು ಲಕೋಟೆ ಪದ್ಧತಿಯಲ್ಲಿ-4702 ಪ್ರಧಾನ ಕಾಮಗಾರಿ-ಅಣೆಕಟ್ಟು ಮತ್ತು ಪಿಕಪ್ ಮತ್ತು 4702 ಹೊಸ ಕೆರೆ ನಿರ್ಮಾಣ ಯೋಜನೆಯಡಿಯಲ್ಲಿ 06 ಕಾಮಗಾರಿಗೆ ಟೆಂಡರ್ ಕರೆಯಲಾಗಿದೆ. ಗರಿಷ್ಠ ಮೊತ್ತ 3600.00 ಲಕ್ಷ ಹಾಗೂ ಕನಿಷ್ಠ ಮೊತ್ತ ರೂ. 910.00 ಲಕ್ಷ. ನಿಗಧಿತ ಇ.ಎಂ.ಡಿ ಮೊತ್ತವನ್ನು ಕೆಪಿಪಿ-ಪೋರ್ಟ್‌ಲ್‌ನಲ್ಲಿದ್ದಂತೆ ಸಲ್ಲಿಸುವುದು. ಟೆಂಡರ್ ಪ್ರೊಸೆಸ್ಸಿಂಗ್ ಫೀ ಕೆಪಿಪಿ-ಪೋರ್ಟ್‌ಲ್ ನಿಯಮಾನುಸಾರ, ಟೆಂಡರ್ ಡಾಕ್ಯುಮೆಂಟ್‌ಗಳನ್ನು ವೆಬ್‌ಸೈಟ್ www. kppp. karnataka.gov.inನಲ್ಲಿ ದಿನಾಂಕ: 06.11.2025ರ ಸಂಜೆ 04:30 ಗಂಟೆಯಿಂದ ಪಡೆಯಬಹುದು (Download). ಪ್ರೀ ಬಿಡ್ ಸಭೆಯನ್ನು ದಿನಾಂಕ: 11-11-2025 ರಂದು ಬೆಳಗ್ಗೆ 11.30 ಗಂಟೆಗೆ ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ನಿಮ್ಮಾಕಲಕುಂಟೆ, ಎಂ.ಜಿ. ರಸ್ತೆ, ರೆಡ್ಡಿ ವುಡ್‌ವರ್ಕ್ಸ್ ಬಿಲ್ಡಿಂಗ್, ಚಿಕ್ಕಬಳ್ಳಾಪುರ-562101 ಇಲ್ಲಿ ಆಯೋಜಿಸಲಾಗಿರುತ್ತದೆ. ಡಾಕ್ಯುಮೆಂಟ್‌ಗಳನ್ನು ಸಲ್ಲಿಸಲು ಕೊನೆಯ (Upload) ದಿನಾಂಕ: 17-11-2025 ಸಂಜೆ 04:30 ಗಂಟೆಯವರೆಗೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 19-11-2025ರ ಬೆಳಿಗ್ಗೆ 11:00 ಗಂಟೆಯ ನಂತರ. ಮೇಲಿನ ವಿವರಗಳು ಭವಿಷ್ಯದಲ್ಲಿ ಸಂದರ್ಭೋಚಿತವಾಗಿ ಬದಲಾವಣೆಗೆ ಒಳಪಟ್ಟಿರುತ್ತವೆ. ಹೆಚ್ಚಿನ ವಿವರ ಹಾಗೂ ನಿಬಂಧನೆಗಳಿಗೆ www.kppp.karnataka.gov.in ಅಂತರ್ಜಲ ತಾಣದಲ್ಲಿ ಅಥವಾ ಈ ಕಛೇರಿಯ ಕೆಲಸದ ವೇಳೆಯಲ್ಲಿ (ರಜಾದಿನ ಹೊರತುಪಡಿಸಿ) ಪಡೆಯಬಹುದು. ಟೆಂಡರ್‌ನ್ನು ಯಾವುದೇ ಕಾರಣ ನೀಡದೇ ಅನುಮೋದಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಲಾಗಿದೆ.

ಸಹಿ/-ಕಾರ್ಯಪಾಲಕ ಇಂಜಿನಿಯರ್
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿಕ್ಕಬಳ್ಳಾಪುರ

ನೆಲಮಂಗಲ ಯೋಜನಾ ಪ್ರಾಧಿಕಾರ

2ನೇ ಮುಖ್ಯರಸ್ತೆ, ಸದಾಶಿವನಗರ, ನೆಲಮಂಗಲ-562123
ಇ-ಮೇಲ್: nelamangala.pa@gmail.com Phone No: 96630 46622

ಸಂಖ್ಯೆ: ನೆಯೋಪ್ರಾ: CLU:66:2025-26 ದಿನಾಂಕ: 06-11-2025

ಸಾರ್ವಜನಿಕ ಪ್ರಕಟಣೆ

ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 134 ಬೆಂರುಪ್ರಾ 2006 ದಿನಾಂಕ:13-02-2007 ರನ್ವಯ **ನೆಲಮಂಗಲ ತಾಲ್ಲೂಕು, ಕಸಬಾ ಹೋಬಳಿ, ಹ್ಯಾಡಾಳು** ಗ್ರಾಮವು "ನೆಲಮಂಗಲ ಸ್ಥಳೀಯ ಯೋಜನಾ ಪ್ರದೇಶದ" ವ್ಯಾಪ್ತಿಗೆ ಒಳಪಟ್ಟಿದ್ದು, ನೆಲಮಂಗಲ ಸ್ಥಳೀಯ ಯೋಜನಾ ಪ್ರದೇಶಕ್ಕೆ ಸರ್ಕಾರದ ಆದೇಶ ಸಂಖ್ಯೆ: ನಅಇ 150 ಬಿಎಂಆರ್ 2013, ದಿನಾಂಕ:01-06-2015 ರಲ್ಲಿ ಅನುಮೋದನೆಗೊಂಡಿರುವ ಮಹಾಯೋಜನೆಯಲ್ಲಿ ಈ ಕೆಳಕಂಡ ಜಮೀನನ್ನು **"ವ್ಯವಸಾಯ"** ವಲಯದಲ್ಲಿ ಕಾಯ್ದಿರಿಸಲಾಗಿರುತ್ತದೆ. ಈ ಹಿನ್ನೆಲೆಯಲ್ಲಿ **ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14(ಎ) ರ ಅಡಿಯಲ್ಲಿ 'ವಸತಿ'** ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಅರ್ಜಿದಾರರು ಕೋರಿರುವಂತೆ **"ವ್ಯವಸಾಯ"** ವಲಯದಿಂದ **"ವಸತಿ"** ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡುವ ಸಂಬಂಧ ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ನೆಲಮಂಗಲ ಯೋಜನಾ ಪ್ರಾಧಿಕಾರ, ನೆಲಮಂಗಲ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕ್ರ. ಸಂ	ಕಂದಾಯ ದಾಖಲಾತಿಗಳಂತೆ ಮಾಲೀಕರ ಹೆಸರು	ತಾಲ್ಲೂಕು/ ಹೋಬಳಿ/ಗ್ರಾಮ	ಸ.ನಂ	ವಿಸ್ತೀರ್ಣ (ಎ-ಗು)	ಅನುಮೋದಿತ ಮಹಾಯೋಜನೆಯಂತೆ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಮೆಸರ್ಸ್ ಜೆ.ಡಿ ಲ್ಯಾವಿಶ್ ಡೆವಲಪರ್ಸ್ ಅಂಡ್ ಪ್ರಮೋಟರ್ಸ್‌ನ ಪರವಾಗಿ ಪಾಲುದಾರರಾದ ಶ್ರೀ ಎಂ.ಜಗದೀಶ್ ಶ್ರೀ ಚಂದ್ರಶೇಖರ್. ಆರ್.ಎನ್ ಶ್ರೀ ಮರೇಶ್ ವೆಂಕಟೇಶ್	ನೆಲಮಂಗಲ, ಕಸಬಾ, ಹ್ಯಾಡಾಳು	104/1	2-33 (0-01 ಗುಂಟೆ 'ಎ' ಖರಾಬು ಸೇರಿ	ವ್ಯವಸಾಯ	ವಸತಿ
2			104/2	0-32		

ಷರಾ:- ಪ್ರಶ್ನಿತ ಜಮೀನುಗಳ ಪರಿಸರದಲ್ಲಿ ವಸತಿ ಬೆಳವಣಿಗೆಗಳು ಬಂದಿದ್ದು, ಪ್ರಶ್ನಿತ ಜಮೀನಿನಲ್ಲಿ ವಸತಿ ವಿನ್ಯಾಸ ನಕ್ಷೆ ಅನುಮೋದನೆ ಪಡೆದು ಅಭಿವೃದ್ಧಿಪಡಿಸುವುದರಿಂದ ಕೂಲಿ ಕಾರ್ಮಿಕರಿಗೆ ಉದ್ಯೋಗವಕಾಶ ಸಿಗುತ್ತದೆ. ಹಾಗೂ ಯೋಜನಾ ಬದ್ಧ ಬೆಳವಣಿಗೆಯಾಗುವುದು ಎಂದು ತಿಳಿಸುತ್ತಾ ಸದರಿ ಪ್ರದೇಶವನ್ನು **"ವ್ಯವಸಾಯ"** ವಲಯದಿಂದ **"ವಸತಿ"** ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/- ಜಂಟಿ ನಿರ್ದೇಶಕರು,
ನಗರ ಮತ್ತು ಗ್ರಾಮಾಂತರ ಯೋಜನೆ ಹಾಗೂ ಸದಸ್ಯ-ಕಾರ್ಯದರ್ಶಿ,
ನೆಲಮಂಗಲ ಯೋಜನಾ ಪ್ರಾಧಿಕಾರ, ನೆಲಮಂಗಲ.

ವಾ.ಸಾ.ಸಂ.ಇ/ವಾಪ್ರ/3631/2025-26

AstraZeneca
ಆಸ್ಟ್ರಾಜೆನೆಕ ಫಾರ್ಮಾ ಇಂಡಿಯಾ ಲಿಮಿಟೆಡ್
(CIN: L24231KA1979PLC003563)
ರಿಜಿಸ್ಟರ್ಡ್ ಆಫೀಸ್: ಬ್ಲಾಕ್ ಎನ್1, 12ನೇ ಮಹಡಿ, ಮಾನ್ಯತಾ ಎಂಬಸಿ ಬಿಸಿನೆಸ್ ಪಾರ್ಕ್, ರಾಚೇನಹಳ್ಳಿ, ಔಟರ್ ರಿಂಗ್ ರೋಡ್, ಬೆಂಗಳೂರು - 560 045
ಈಮೇಲ್: comp.secy@astrazeneca.com, ವೆಬ್: www.astrazeneca.com/india
ದೂ.: +91 80 6774 8000, ಫ್ಯಾಕ್ಸ್: 080 6774 8857

ಷೇರುದಾರರಿಗೆ ಸೂಚನೆ
ಭೌತಿಕ ರೂಪದಲ್ಲಿರುವ ಷೇರುಗಳ ವರ್ಗಾವಣೆ ಕೋರಿಕೆಗಳನ್ನು ಮತ್ತೆ ದಾಖಲಿಸಲು (Re-Lodgement) ವಿಶೇಷ ಗವಾಕ್ಷಿ

ದಿನಾಂಕ 02 ಜುಲೈ 2025ರ ಸೆಬಿ ಸರ್ಕ್ಯುಲರ್ ಸಂಖ್ಯೆ SEBI/HO/MIRSD/MIRSD-PoD/P/CIR/2025/97ರ ಪ್ರಕಾರ, ಕಂಪನಿಯು ಹಸ್ತಾಂತರ ದಾಖಲೆಗಳ ಪುನಃ ಸಲ್ಲಿಕೆಗಾಗಿ ವಿಶೇಷ ವಿಂಡೋವನ್ನು ತೆರೆಯಲಾಗಿದೆ. ಈ ವಿಂಡೋವನ್ನು 2019ರ ಏಪ್ರಿಲ್ 1ರ ಗಡುವಿನ ಮೊದಲು ಸಲ್ಲಿಸಲಾದ, ಆದರೆ ದಾಖಲೆಗಳಲ್ಲಿ ಅಥವಾ ಪ್ರಕ್ರಿಯೆಯಲ್ಲಿ ಕೊರತೆಗಳಿದ್ದರಿಂದ ಅಥವಾ ಇತರ ಕಾರಣಗಳಿಂದ ತಿರಸ್ಕರಿಸಲ್ಪಟ್ಟ / ಹಿಂತಿರುಗಿಸಲ್ಪಟ್ಟ / ಪ್ರಕ್ರಿಯೆಯಾಗದ ಹಸ್ತಾಂತರ ಅರ್ಜಿಗಳ ಪುನಃ ಸಲ್ಲಿಕೆಗೆ ಮಾತ್ರ ಮೀಸಲಿಡಲಾಗಿದೆ. ಈ ವಿಶೇಷ ವಿಂಡೋ ಜನವರಿ 6, 2026ರವರೆಗೆ ತೆರೆದಿರುತ್ತದೆ. ಈ ಕ್ರಮವು ಹೂಡಿಕೆದಾರರ ಪ್ರಕ್ರಿಯೆ ಸುಗಮಗೊಳಿಸಲು ಮತ್ತು ಮುಂಚಿತವಾಗಿ ಅವರು ಖರೀದಿಸಿದ್ದ ಸಾಕ್ಷ್ಯಪತ್ರಗಳ ಮೇಲಿನ ಅವರ ಹಕ್ಕುಗಳನ್ನು ಸಂರಕ್ಷಿಸಲು ಕೈಗೊಳ್ಳಲಾಗಿದೆ.

ಸಂಬಂಧಪಟ್ಟ ಹೂಡಿಕೆದಾರರು ಈ ಒಂದು-ಸಲದ ಅವಕಾಶದ ಲಾಭವನ್ನು ಪಡೆದುಕೊಳ್ಳಬೇಕಾಗಿ ವಿನಂತಿ. ಭೌತಿಕ ಷೇರುಗಳ ವರ್ಗಾವಣೆ ಕೋರಿಕೆಯನ್ನು ನಮ್ಮ ರಿಜಿಸ್ಟ್ರಾರ್ ಮತ್ತು ಷೇರು ವರ್ಗಾವಣೆ ಏಜೆಂಟರಲ್ಲಿ (ಆರ್‌ಟಿಎ) ಮೇಲೆ ಹೇಳಿರುವ ಅವಧಿಯ ಒಳಗೆ ಇಲ್ಲಿ ಕೆಳಗೆ ನೀಡಿರುವ ವಿಳಾಸದಲ್ಲಿ ಮತ್ತೆ ದಾಖಲಿಸಬಹುದು:

ಇಂಟೆಗ್ರೇಟೆಡ್ ರಿಜಿಸ್ಟ್ರಿ ಮ್ಯಾನೇಜ್ಮೆಂಟ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್,
30, ರಮಣ ರೆಸಿಡೆನ್ಸಿ, 4ನೇ ಕ್ರಾಸ್,
ಸಂಪಿಗೆ ರಸ್ತೆ, ಮಲ್ಲೇಶ್ವರಂ,
ಬೆಂಗಳೂರು-560 003
ದೂರವಾಣಿ: (080) 23460815-8, ಫ್ಯಾಕ್ಸ್: (080) 23460819
ಇಮೇಲ್: irg@integratedindia.in

ಈ ಅವಧಿಯಲ್ಲಿ ವರ್ಗಾವಣೆಗಾಗಿ ರೀ-ಲಾಡ್ಜ್ ಆದ ಸೆಕ್ಯುರಿಟಿಗಳನ್ನು ಡೀಮ್ಯಾಟ್ ರೂಪದಲ್ಲೇ ನೀಡಲಾಗುತ್ತದೆ. ಹೂಡಿಕೆದಾರರು ಡೀಮ್ಯಾಟ್ ಖಾತೆಯೊಂದನ್ನು ಹೊಂದಿರಬೇಕು ಮತ್ತು ಆರ್‌ಟಿಎ ಅವರಲ್ಲಿ ವರ್ಗಾವಣೆ ಕೋರಿಕೆಯನ್ನು ರೀ-ಲಾಡ್ಜ್ ಮಾಡುವಾಗ ತಮ್ಮ ಡೀಮ್ಯಾಟ್ ಖಾತೆಯ ಕ್ಲೈಂಟ್ ಮಾಸ್ಟರ್ ಲಿಸ್ಟ್ (ಸಿಎಂಎಲ್), ಜೊತೆಗೆ ವರ್ಗಾವಣೆ ದಾಖಲೆಗಳು ಮತ್ತು ಷೇರು ಸರ್ಟಿಫಿಕೇಟನ್ನೂ ಒದಗಿಸಬೇಕು. ಅಂತಹ ವರ್ಗಾವಣೆ-ಸಹಿತವಾದ-ಡೀಮ್ಯಾಟ್ ಕೋರಿಕೆಗಳ ವಿಷಯದಲ್ಲಿ ವಿಧ್ಯುಕ್ತ ಪ್ರಕ್ರಿಯೆಯನ್ನು ಅನುಸರಿಸಲಾಗುವುದು.

ಆಸ್ಟ್ರಾಜೆನೆಕ ಫಾರ್ಮ ಇಂಡಿಯಾ ಲಿಮಿಟೆಡ್‌ಗಾಗಿ

ಸ್ಥಳ: ಬೆಂಗಳೂರು
ದಿನಾಂಕ: ನವೆಂಬರ್ 6, 2025

ಮಾನಸ ಆರ್
ಕಂಪನಿ ಸೆಕ್ರೆಟರಿ

ನೈಋತ್ಯ ರೈಲ್ವೆ
ಪ್ರೊಫಾರ್ಮಾ 10-01
ಸಾರ್ವಜನಿಕ ಅಧಿಸೂಚನೆ
ಬೆಂಗಳೂರು, 26 ಅಕ್ಟೋಬರ್ 2025

ನೈಋತ್ಯ ರೈಲ್ವೆ ಅಡಿಯಲ್ಲಿ ಪೂರ್ಣಗೊಂಡ ಈ ಕೆಳಗೆ ತಿಳಿಸಿರುವ ವಿಭಾಗದಲ್ಲಿ, ರೈಲ್ವೆ ಮಾರ್ಗಗಳು ಮತ್ತು ಅವರಣದ ಬಳಕೆದಾರರಿಗೆ ಈ ಮೂಲಕ ತಿಳಿಸುವುದೇನೆಂದರೆ 25000 ವೋಲ್ಟ್‌ಗಳು, 50 ಎಚ್ ಜಡ್ ಎಸಿ, ಓವರ್ ಹೆಡ್ ಟ್ರ್ಯಾಕ್ಸನ್ ವೈರ್ ಗಳನ್ನು ಕೆಳಗೆ ತಿಳಿಸಿರುವ ದಿನಾಂಕ ಅಥವಾ ತದನಂತರ ಶಕ್ತಿಯುತಗೊಳಿಸಲಾಗುತ್ತದೆ. ಅದೇ ದಿನಾಂಕದಂದು ಮತ್ತು ತದನಂತರ ಓವರ್ ಹೆಡ್ ಟ್ರ್ಯಾಕ್ಷನ್ ವೈರ್ ಗಳನ್ನು ಎಲ್ಲಾ ಸಮಯದಲ್ಲೂ ಲೈವ್ ಎಂದು ಪರಿಗಣಿಸಲಾಗುತ್ತದೆ ಮತ್ತು ಮಾರಿಕುಪ್ಪಂ ನಿಲ್ದಾಣ ನಡುವಿನ ವಿಭಾಗದಲ್ಲಿ ಯಾವುದೇ ಅನಧಿಕೃತ ವ್ಯಕ್ತಿಗಳು ಆ ಓವರ್‌ಹೆಡ್ ವೈರ್‌ಗಳ ಸಮೀಪದಲ್ಲಿ ಕೆಲಸ ಮಾಡಬಾರದು ಅಥವಾ ಸಂಪರ್ಕಕ್ಕೆ ಬರಬಾರದೆಂದು ಸೂಚಿಸಲಾಗಿದೆ.

ಕ್ರ. ಸಂ.	ವಿಭಾಗ	ಚೈನೇಜ್ (ಕಿ.ಮೀ) ಇಂದ	ಚೈನೇಜ್ (ಕಿ.ಮೀ) ವರೆಗೆ	ಶಕ್ತಿಯುತಗೊಳಿಸಲು ಪ್ರಸ್ತಾಪಿಸಿದ ದಿನಾಂಕ
1.	ಮಾರಿಕುಪ್ಪಂ ನಿಲ್ದಾಣ ಹಂತ-1 ಲೂಪ್ ಲೈನ್ ರಸ್ತೆ -3	15/823.40 (-823.40)	1/0.90	17.11.2025

ಹೆಚ್ಚಿನ ಮಾಹಿತಿಗಳಿಗಾಗಿ: www.ireps.gov.in ಲಾಗಿನ್ ಮಾಡಿ

ಉಪ ಮುಖ್ಯ ವಿದ್ಯುತ್ ಅಭಿಯಂತರರು, ಟ್ರ್ಯಾಕ್ಷನ್ ಡಿಸ್ಟ್ರಿಬ್ಯುಷನ್, ನಿರ್ಮಾಣ ಬೆಂಗಳೂರು ದಂಡು

ಪಿಯುಬಿ/617/ಎಎಡಿ360/ಪಿಆರ್ ಬಿ/ಎಸ್ ಡಬ್ಲ್ಯೂ ಆರ್/2025-26

ಕಾಯ್ದಿರಿಸದ ಟಿಕೆಟ್‌ಗಳನ್ನು ಸುಲಭವಾಗಿ ಬುಕ್ ಮಾಡಲು Google Play Store ನಿಂದ UTS Moblie ಅಪ್ಲಿಕೇಶನ್ ಡೌನ್‌ಲೋಡ್ ಮಾಡಿ.

South Western Railway - SWR | SWRRLY | @SWRAILWAYHQ | @sw_railways

ಸ್ಪಂದನ ಕ್ರೆಡಿಟ್ ಸೌಹಾರ್ದ ಸಹಕಾರ ಸಂಘ ನಿಯಮಿತ
SPANDANA CREDIT SOUHARDA SAHAKARA SANGHA NIYAMITHA
ನೋಂದಣಿ: RSR.37/ಸೌಕ್ರಾ/ನೋಂದಣಿ 2297/2010-11
"ಪುಣ್ಯಕೋಟ", ನಂ.1587, 3ನೇ ಮುಖ್ಯರಸ್ತೆ, ಚಂದ್ರಾ ಬಡಾವಣೆ, ಬೆಂಗಳೂರು-560 040. ದೂರವಾಣಿ:080-23185584

ಪತ್ರಿಕಾ ಪ್ರಕಟಣೆ

ರಿಟರ್ನಿಂಗ್ ಅಧಿಕಾರಿ, ಸ್ಪಂದನ ಕ್ರೆಡಿಟ್ ಸೌಹಾರ್ದ ಸಹಕಾರ ಸಂಘ ನಿಯಮಿತ, ಚಂದ್ರ ಬಡಾವಣೆ, ಬೆಂಗಳೂರು-560 040 ಇವರ ನಡವಳಿಗಳು.

* * * * *

ಮೇಲ್ಕಂಡ ಸಹಕಾರಿಯ ಮುಂದಿನ ಐದು ವರ್ಷಗಳ ಅವಧಿಗೆ ಆಡಳಿತ ಮಂಡಲಿ ನಿರ್ದೇಶಕರ ಚುನಾವಣೆಯು ದಿನಾಂಕ:23-11-2025 ರಂದು ಬೆಳಿಗ್ಗೆ 09:00 ಗಂಟೆಯಿಂದ ಮಧ್ಯಾಹ್ನ 3:00 ಗಂಟೆಯವರೆಗೆ ಸಹಕಾರಿಯ ಆವರಣದಲ್ಲಿ ನಡೆಯಲಿದ್ದು, ಸದರಿ ಚುನಾವಣೆಯ ಸಂಬಂಧ ಚುನಾವಣೆಗೆ ಸ್ಪರ್ಧಿಸಲು ದಿನಾಂಕ:15-11-2025 ರಂದು ಬೆಳಿಗ್ಗೆ 11:00 ರಿಂದ ಮಧ್ಯಾಹ್ನ 3.00 ಗಂಟೆಯವರೆಗೆ ನಾಮಪತ್ರಗಳನ್ನು ಸಹಕಾರಿಯ ಆಡಳಿತ ಕಛೇರಿಯಲ್ಲಿ ಸಲ್ಲಿಸಬಹುದಾಗಿರುತ್ತದೆ. ಹಾಗೂ ದಿನಾಂಕ:16-11-2025 ರಂದು ಬೆಳಿಗ್ಗೆ 11:30 ಗಂಟೆಗೆ ರಿಟರ್ನಿಂಗ್ ಅಧಿಕಾರಿಯವರಿಂದ ನಾಮಪತ್ರಗಳ ಪರಿಶೀಲನೆ ನಡೆಯಲಿದ್ದು, ದಿನಾಂಕ: 17-11-2025 ರಂದು ಮಧ್ಯಾಹ್ನ: 03:00 ಗಂಟೆಯವರೆಗೆ ಅಭ್ಯರ್ಥಿಗಳು ನಾಮಪತ್ರಗಳನ್ನು ಹಿಂಪಡೆಯಲು ಅವಕಾಶವಿರುತ್ತದೆ.

ಸಹಿ/- (ಎಸ್.ಎಸ್.ಮಂಜುನಾಥ್)
ರಿಟರ್ನಿಂಗ್ ಅಧಿಕಾರಿ
ಸ್ಪಂದನ ಕ್ರೆಡಿಟ್ ಸೌಹಾರ್ದ ಸಹಕಾರ ಸಂಘ ನಿಯಮಿತ, ಚಂದ್ರ ಬಡಾವಣೆ, ಬೆಂಗಳೂರು-560 040.

ಸ್ಥಳ: ಬೆಂಗಳೂರು
ದಿನಾಂಕ:06-11-2025

ನೈಋತ್ಯ ರೈಲ್ವೆ
ರೈಲ್ವೆ ಸಚಿವಾಲಯ
ಅಧಿಸೂಚನೆ
ಬೆಂಗಳೂರು, 26 ಅಕ್ಟೋಬರ್ 2025

ಎಸ್. ಓ. 4914 (ಅ). ರೈಲ್ವೆ ಕಾಯ್ದೆ, 1989 (1989 ರ 24) ರ ಸೆಕ್ಷನ್ 20 F ನ ಷರತ್ತು (6) ಮತ್ತು ಸೆಕ್ಷನ್ 2 ರ ಷರತ್ತು 7A ಯಿಂದ ನೀಡಲಾದ ಅಧಿಕಾರಗಳನ್ನು ಚಲಾಯಿಸುವಾಗ, ರೈಲ್ವೆ ಸಚಿವಾಲಯ (ನೈಋತ್ಯ ರೈಲ್ವೆ ನಿರ್ಮಾಣ ಸಂಸ್ಥೆ, ಬೆಂಗಳೂರು ಕಂಟೋನ್ಮೆಂಟ್) ಕೆಳಗಿನ ಕೋಷ್ಟಕದ (4) ನೇ ಕಾಲಂನಲ್ಲಿ ಉಲ್ಲೇಖಿಸಲಾದ ಅಧಿಕಾರಿಯನ್ನು 'ಸಕ್ಷಮ ಪ್ರಾಧಿಕಾರ' ಎಂದು ಮತ್ತು ಕೆಳಗಿನ ಕೋಷ್ಟಕದ (5) ನೇ ಕಾಲಂನಲ್ಲಿ ಉಲ್ಲೇಖಿಸಲಾದ ಅಧಿಕಾರಿಯನ್ನು 'ಮಧ್ಯಸ್ಥಗಾರ' ಎಂದು ಈ ಮೂಲಕ ಅಧಿಕಾರ ನೀಡುತ್ತದೆ, ಈ ಅಧಿಸೂಚನೆಯನ್ನು ಅಧಿಕೃತ ಗೆಜೆಟ್‌ನಲ್ಲಿ ಪ್ರಕಟಿಸಿದ ದಿನಾಂಕದಿಂದ ಜಾರಿಗೆ ಬರುವಂತೆ, ಸಾರ್ವಜನಿಕ ಉದ್ದೇಶಕ್ಕಾಗಿ ಅಗತ್ಯವಿರುವ ಭೂಸ್ವಾಧೀನಕ್ಕಾಗಿ ಕೆಳಗಿನ ಕೋಷ್ಟಕದ (2) ನೇ ಕಾಲಂನಲ್ಲಿ ಉಲ್ಲೇಖಿಸಲಾದ ಜಿಲ್ಲೆಗಳಿಗೆ ಸಂಬಂಧಿಸಿದಂತೆ.

ಟೇಬಲ್

ಕ್ರ. ಸಂ.	ಯೋಜನೆಯ ಹೆಸರು	ಜಿಲ್ಲೆ	ಸಕ್ಷಮ ಪ್ರಾಧಿಕಾರ	ಮಧ್ಯಸ್ಥಗಾರ
1.	ಥಣಿಸಂದ್ರದಲ್ಲಿರುವ ವಂದೇ ಭಾರತ್ ನಿರ್ವಹಣಾ ಡಿಪೋದ ಉನ್ನತೀಕರಣ/ಅಭಿವೃದ್ಧಿ	ಬೆಂಗಳೂರು ಪೂರ್ವ	ವಿಶೇಷ ಭೂಸ್ವಾಧೀನ ಅಧಿಕಾರಿ, ಬೆಂಗಳೂರು	ಪ್ರಾದೇಶಿಕ ಆಯುಕ್ತರು, ಬೆಂಗಳೂರು

ನಂ.ಡಬ್ಲ್ಯೂ.271/ಸಿಎನ್/ಬಿಎನ್‌ಸಿ/2025-26/ಲ್ಯಾಂಡ್ ಎಸ್‌ಆರ್‌ಪಿ/1727

ಹೆಚ್ಚಿನ ಮಾಹಿತಿಗಳಿಗಾಗಿ: https://egazette.gov.in ಲಾಗಿನ್ ಮಾಡಿ

ಪರದೀಪ ಪುರಿ
ಮುಖ್ಯ ಅಭಿಯಂತರರು/ನಿರ್ಮಾಣ/
ಬೆಂಗಳೂರು ದಂಡು

ಪಿಯುಬಿ/614/ಎಎಡಿ360/ಪಿಆರ್ ಬಿ/ಎಸ್ ಡಬ್ಲ್ಯೂ ಆರ್/2025-26

ಕಾಯ್ದಿರಿಸದ ಟಿಕೆಟ್‌ಗಳನ್ನು ಸುಲಭವಾಗಿ ಬುಕ್ ಮಾಡಲು Google Play Store ನಿಂದ UTS Moblie ಅಪ್ಲಿಕೇಶನ್ ಡೌನ್‌ಲೋಡ್ ಮಾಡಿ.

South Western Railway - SWR | SWRRLY | @SWRAILWAYHQ | @sw_railways

ಸಾರ್ವಜನಿಕ ಪ್ರಕಟಣೆ

ನಮ್ಮ ಕಕ್ಷಿದಾರರು, ಈ ಕೆಳಕಂಡ **'ಷೆಡ್ಯೂಲ್'** ನಲ್ಲಿ ವಿವರವಾಗಿ ವಿವರಿಸಿರುವ ಮತ್ತು ಇದನ್ನು ಇನ್ನು ಮುಂದೆ **"ಷೆಡ್ಯೂಲ್ ಸ್ವತ್ತುಗಳು"** ಎಂದು ಕರೆಯಲ್ಪಡುವ, ಸದರಿ ಸ್ವತ್ತುಗಳ ಪ್ರಸ್ತುತ ಮಾಲೀಕರಾದ **ಶ್ರೀ ಬಿ.ಆರ್. ವಿಶ್ವಾಸ್ ಅಲಿಯಾಸ್ ಬಾದಮ್ ರಾಜಶೇಖರ್ ವಿಶ್ವಾಸ್ ಬಿನ್ ಲೇಟ್ ಬಿ.ವಿ. ರಾಜಶೇಖರ ರೆಡ್ಡಿ** (ಇನ್ನು ಮುಂದೆ **'ಮಾಲೀಕರು'** ಎಂದು ಕರೆಯಲಾಗುತ್ತದೆ) ಇವರೊಂದಿಗೆ ಈ ಸ್ಥಿರಾಸ್ತಿ ಸ್ವತ್ತಿಗೆ ಸಂಬಂಧಿಸಿದಂತೆ ವ್ಯವಹಾರ ನಡೆಸಲು ಅಪೇಕ್ಷಿಸಿರುತ್ತಾರೆ, ಹಾಗೂ ಇವರ ಮಾಲೀಕತ್ವದ ಹಕ್ಕನ್ನು ಪರಿಶೀಲನೆ ನಡೆಸಲು ಇಚ್ಛಿಸಿರುತ್ತಾರೆ. ಮತ್ತು ಮಾಲೀಕರು ತಾವುಗಳೇ ಷೆಡ್ಯೂಲ್ ಸ್ವತ್ತಿಗೆ ಏಕಮೇವ ಮಾಲೀಕರೆಂದು ಹಾಗೂ ಷೆಡ್ಯೂಲ್ ಸ್ವತ್ತುಗಳ ಮಾರಾಟ ಮಾಡುವ ನಿರ್ಬಂಧರಹಿತ ಹಕ್ಕುಗಳನ್ನು ಹೊಂದಿರುತ್ತೇವೆ ಎಂಬುದಾಗಿ ನಮ್ಮ ಕಕ್ಷಿದಾರರಿಗೆ ತಿಳಿಸಿರುತ್ತಾರೆ.

ಈ ಮೂಲಕ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ ಮೇಲ್ಕಂಡ ಮಾಲೀಕರನ್ನು ಹೊರತುಪಡಿಸಿ ಮತ್ತಾವುದೇ ವ್ಯಕ್ತಿ/ವ್ಯಕ್ತಿಗಳು ಸದರಿ ಷೆಡ್ಯೂಲ್ ಸ್ವತ್ತಿನ ಮೇಲೆ ಯಾವುದೇ ರೀತಿಯ ಹಕ್ಕು, ಹಿತಾಸಕ್ತಿ, ಋಣಬಾಧ್ಯತೆ, ಹೋಣೆಗಾರಿಕೆ, ಕ್ಲೇಮ್‌ಗಳು ಅಥವಾ ಷೆಡ್ಯೂಲ್ ಸ್ವತ್ತಿನ ಬಗ್ಗೆ ಆಸಕ್ತಿಯನ್ನು ಹೊಂದಿದ್ದಲ್ಲಿ, ಅಥವಾ ಯಾವುದೇ ಸ್ವರೂಪದ ಷೆಡ್ಯೂಲ್ ಸ್ವತ್ತಿನ ಮೇಲೆ ಯಾವುದೇ ಕ್ಲೇಮುಗಳನ್ನು ಅಥವಾ ವ್ಯವಹಾರಕ್ಕೆ ಸಂಬಂಧಿಸಿದಂತೆ ಆಕ್ಷೇಪಣೆಗಳು ಹೊಂದಿದ್ದರೆ, ಅಂತಹ ಕ್ಲೇಮುಗಳನ್ನು ಅಥವಾ ಆಕ್ಷೇಪಣೆಗಳನ್ನು ಸೂಕ್ತ ಸಾಕ್ಷಾಧಾರ ಹಾಗೂ ಕಾಗದಪತ್ರಗಳೊಡನೆ, ಲಿಖಿತರೂಪದಲ್ಲಿ ಈ ತಿಳುವಳಿಕೆ ಪ್ರಕಟವಾದ **10 (ಹತ್ತು)** ದಿನಗಳ ಕಾಲಾವಧಿಯ ಒಳಗೆ ಈ ಕೆಳಕಂಡ ವಿಳಾಸಕ್ಕೆ ತಲುಪುವಂತೆ ಈ ಮೂಲಕ ಕರೆ ನೀಡಲಾಗಿದೆ. ತಿಳಿಸಿದ ಕಾಲಾವಧಿಯ ಒಳಗೆ ಯಾವುದೇ ಕ್ಲೇಮುಗಳು ಅಥವಾ ಆಕ್ಷೇಪಣೆಗಳು ಸಲ್ಲಿಕೆಯಾಗದಿದ್ದಲ್ಲಿ, ಮೇಲೆ ತಿಳಿಸಿರುವ ಮಾಲೀಕರನ್ನು ಹೊರತುಪಡಿಸಿ ಮತ್ತಾರೂ ಕೂಡ ಷೆಡ್ಯೂಲ್ ಸ್ವತ್ತಿನ ಮೇಲೆ ಹಕ್ಕು, ಋಣಬಾಧ್ಯತೆ, ಹಿತಾಸಕ್ತಿ ಅಥವಾ ಕ್ಲೇಮುಗಳನ್ನು ಹೊಂದಿರುವುದಿಲ್ಲ ಎಂದು ತಿಳಿಯಲಾಗುವುದು ಮತ್ತು ಎಲ್ಲಾ ಉದ್ದೇಶಗಳು ಮತ್ತು ಉದ್ದೇಶಗಳಿಗಾಗಿ ಉದ್ದೇಶಪೂರ್ವಕವಾಗಿ ಮನ್ನಾ ಮಾಡಲಾಗಿದೆ/ ನಿರ್ಲಕ್ಷಿಸಲಾಗಿದೆ ಎಂದು ಪರಿಗಣಿಸಲಾಗುತ್ತದೆ ಮತ್ತು ತಿಳಿಸಿದ ಕಾಲಾವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳು ನಮ್ಮ ಕಕ್ಷಿದಾರರು ಬದ್ಧವಾಗಿರುವುದಿಲ್ಲ ಮತ್ತು ನಮ್ಮ ಕಕ್ಷಿದಾರರು ಷೆಡ್ಯೂಲ್ ಸ್ವತ್ತಿನ ಮೇಲೆ ವ್ಯವಹಾರ ನಡೆಸಲು ಸ್ವತಂತ್ರರಾಗಿರುತ್ತಾರೆ ಎಂದು ತಿಳಿಯಲಾಗುವುದು.

ಷೆಡ್ಯೂಲ್
(ಷೆಡ್ಯೂಲ್ ಸ್ವತ್ತುಗಳ ವಿವರ)

ಬೆಂಗಳೂರು ನಗರ ಜಿಲ್ಲೆ, ಆನೇಕಲ್ ತಾಲ್ಲೂಕು, ಸರ್ಜಾಪುರ ಹೋಬಳಿ, ತಿಗಲಚೌಡೇನಹಳ್ಳಿ ಗ್ರಾಮದಲ್ಲಿರುವ ಸರ್ವೆ ನಂ. 90/2 ಮತ್ತು 91/1 ರಲ್ಲಿ ಮತ್ತು ಬೆಂಗಳೂರು ನಗರ ಜಿಲ್ಲೆ, ಆನೇಕಲ್ ತಾಲ್ಲೂಕು, ಸರ್ಜಾಪುರ ಹೋಬಳಿ, ಯಾಮರೆ ಗ್ರಾಮದಲ್ಲಿರುವ ಸರ್ವೆ ನಂ. 130/1 ಮತ್ತು 130/2ರಲ್ಲಿ ರಚಿಸಿರುವ, ವಸತಿ ಉದ್ದೇಶಕ್ಕಾಗಿ ಪರಿವರ್ತಿಸಲಾದ ಜಮೀನಿನ ಒಟ್ಟಾರೆ ವಿಸ್ತೀರ್ಣ 6 ಎಕರೆ 1.7 ಗುಂಟೆಗಳು ('ಬಿ' ಖರಾಬ್ ಭೂಮಿಯ 3 ಗುಂಟೆ ಹೊರತುಪಡಿಸಿ) ಈ ಸ್ಥಿರಾಸ್ತಿ ಸ್ವತ್ತುಗಳನ್ನು ಈ ಕೆಳಕಂಡ ಟೇಬಲ್‌ನಲ್ಲಿ ವಿವರವಾಗಿ ವಿವರಿಸಲಾಗಿದೆ.

ಕ್ರಮ ಸಂ	ಸರ್ವೆ ನಂ.	ವಿಸ್ತೀರ್ಣ ('ಬಿ' ಖರಾಬ್ ಭೂಮಿಯನ್ನು ಹೊರತುಪಡಿಸಿ)		ಚೆಕ್ಕುಬಂಧಿಗಳು
ತಿಗಳಚೌಡನಹಳ್ಳಿ ಗ್ರಾಮ				
1.	90/2	1 ಎಕರೆ 17 ಗುಂಟೆಗಳು	ಪೂರ್ವಕ್ಕೆ	ಸರ್ವೆ ನಂ. 91ರ ಜಮೀನು;
			ಪಶ್ಚಿಮಕ್ಕೆ	ಸರ್ವೆ ನಂ. 91/1ರ ಜಮೀನು;
			ಉತ್ತರಕ್ಕೆ	ಬೆಂಗಳೂರು-ಸರ್ಜಾಪುರ ಮುಖ್ಯರಸ್ತೆ; ಮತ್ತು
			ದಕ್ಷಿಣಕ್ಕೆ	ಯಾಮರೆ ಗ್ರಾಮದ ಗಡಿ;
2.	91/1	2 ಎಕರೆ 20.7 ಗುಂಟೆಗಳು	ಪೂರ್ವಕ್ಕೆ	ಸರ್ವೆ ನಂ. 91/1 ರ ಜಮೀನಿನ ಉಳಿದ ಭಾಗ;
			ಪಶ್ಚಿಮಕ್ಕೆ	ಸರ್ವೆ ನಂ. 90/2ರ ಜಮೀನು;
			ಉತ್ತರಕ್ಕೆ	ಬೆಂಗಳೂರು-ಸರ್ಜಾಪುರ ಮುಖ್ಯರಸ್ತೆ; ಮತ್ತು
			ದಕ್ಷಿಣಕ್ಕೆ	ಯಾಮರೆ ಗ್ರಾಮದ ಗಡಿ;
ಯಮರೆ ಗ್ರಾಮ				
3.	130/1	22 ಗುಂಟೆಗಳು	ಪೂರ್ವಕ್ಕೆ	ಸರ್ವೆ ನಂ. 130/2ರ ಜಮೀನು;
			ಪಶ್ಚಿಮಕ್ಕೆ	ರಸ್ತೆ ಮತ್ತು ಟಿ.ಸಿ. ಹಳ್ಳಿ ಗ್ರಾಮದ ಗಡಿ;
			ಉತ್ತರಕ್ಕೆ	ಸರ್ವೆ ನಂ. 130/2ರ ಜಮೀನು; ಮತ್ತು
			ದಕ್ಷಿಣಕ್ಕೆ	ಸರ್ವೆ ನಂ. 127ರ ಜಮೀನು.
4.	130/2	1 ಎಕರೆಗಳು 1.12 ಗುಂಟೆಗಳು	ಪೂರ್ವಕ್ಕೆ	ಸರ್ವೆ ನಂ. 130/2ರ ಜಮೀನಿನ ಉಳಿದ ಭಾಗ;
			ಪಶ್ಚಿಮಕ್ಕೆ	ರಸ್ತೆ ಮತ್ತು ಟಿ.ಸಿ. ಹಳ್ಳಿ ಗ್ರಾಮದ ಗಡಿ;
			ಉತ್ತರಕ್ಕೆ	ಟಿ.ಸಿ. ಹಳ್ಳಿ ಗ್ರಾಮದ ಗಡಿ; ಮತ್ತು
			ದಕ್ಷಿಣಕ್ಕೆ	ಸರ್ವೆ ನಂ. 130/1ರ ಜಮೀನು; ಮತ್ತು ಸರ್ವೆ ನಂ. 130/2ರ ಜಮೀನಿನ ಉಳಿದ ಭಾಗ;
5.	130/2	20.04 ಗುಂಟೆಗಳು	ಪೂರ್ವಕ್ಕೆ	ಸರ್ವೆ ನಂ. 130/3ರ ಜಮೀನು;
			ಪಶ್ಚಿಮಕ್ಕೆ	ಸರ್ವೆ ನಂ. 130/2ರ ಜಮೀನಿನ ಉಳಿದ ಭಾಗ;
			ಉತ್ತರಕ್ಕೆ	ಸರ್ವೆ ನಂ. 91ರ ಜಮೀನು; ಮತ್ತು
			ದಕ್ಷಿಣಕ್ಕೆ	ಸರ್ವೆ ನಂ. 130/2ರ ಜಮೀನಿನ ಉಳಿದ ಭಾಗ;

ಸಹಿ/-
ಶ್ರೀ. ಶ್ರೀನಿವಾಸ್ ಬಿ.ಆರ್., ಪಾಲುದಾರರು
ಡಿಎಸ್‌ಕೆ ಲೀಗಲ್,
ಪ್ರೆಸ್ಟೀಜ್ ಲೋಕ, ನಂ.201, 2ನೇ ಮಹಡಿ, ನಂ. 7/1 & 7/7, ಬ್ರುಂಟನ್ ರಸ್ತೆ, ಬೆಂಗಳೂರು - 560025, ದೂ. ಸಂ. 080-69548770.

ದಿನಾಂಕ: 07.11.2025
ಸ್ಥಳ : ಬೆಂಗಳೂರು

ಚಿಟಿಕೆ ಸುದ್ದಿ

ರೈತರಿಗೆ ಭೂಮಿ ಪ್ರಶಸ್ತಿ

ಬೆಂಗಳೂರು: ಭೂಮಿ ಸಂಸ್ಥೆಯ 2ನೇ ವರ್ಷದ ರೈತ ಪ್ರಶಸ್ತಿ ಪ್ರದಾನ ಸಮಾರಂಭ ಡಿ.23ರಂದು ನಗರದಲ್ಲಿ ನಡೆಯಲಿದೆ.

ಐದು ವಿಭಾಗಗಳಲ್ಲಿ ಇನ್ನೂರಕ್ಕೂ ಹೆಚ್ಚು ರೈತರಿಗೆ 'ಭೂಮಿ' ರೈತ ಪ್ರಶಸ್ತಿ ಪ್ರದಾನ ಮಾಡಲಾಗುವುದು. ಪ್ರಗತಿಪರ ರೈತರು, ಉದ್ಯಮಶೀಲ ರೈತರು ಸೇರಿದಂತೆ ಹಲವು ವಿಭಾಗಗಳಲ್ಲಿ ರೈತರನ್ನು ಗುರುತಿಸಿ, ಪ್ರಶಸ್ತಿಗೆ ಆಯ್ಕೆ ಮಾಡಲಾಗುತ್ತದೆ ಎಂದು ಭೂಮಿ ಸಂಸ್ಥೆಯ ಮಾಧ್ಯಮ ಸಲಹೆಗಾರ ಹನುಮೇಶ್ ಕೆ.ಯಾವಗಲ್ ತಿಳಿಸಿದ್ದಾರೆ.

ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು www.bhoomeeawards.comಗೆ ಭೇಟಿ ಮಾಡಬಹುದು ಅಥವಾ 7483074266 ಸಂಖ್ಯೆಗೆ ಕರೆ ಮಾಡುವಂತೆ ತಿಳಿಸಲಾಗಿದೆ.

ಕಸಾಪ: ಪುಸ್ತಕಗಳಿಗೆ ರಿಯಾಯಿತಿ ಘೋಷಣೆ

ಬೆಂಗಳೂರು: ಕರ್ನಾಟಕ ರಾಜ್ಯೋತ್ಸವ ಪ್ರಯುಕ್ತ ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ತನ್ನ ಪ್ರಕಟಣೆಯ ಎಲ್ಲ ಪುಸ್ತಕಗಳಿಗೆ ಶೇ 10ರಿಂದ ಶೇ 75ರವರೆಗೆ ರಿಯಾಯಿತಿ ಘೋಷಿಸಿದೆ. ಇದೇ 30ರವರೆಗೆ ಈ ರಿಯಾಯಿತಿ ಲಭ್ಯವಿರಲಿದೆ. ರಜಾ ದಿನಗಳು ಸೇರಿ ವಾರದ ಎಲ್ಲ ದಿನಗಳು ಬೆಳಿಗ್ಗೆ 10ರಿಂದ ಸಂಜೆ 6.30ರವರೆಗೆ ಪರಿಷತ್ತಿನ ಪುಸ್ತಕ ಮಾರಾಟ ಮಳಿಗೆಯಲ್ಲಿ ಪುಸ್ತಕಗಳನ್ನು ಮಾರಾಟ ಮಾಡಲಾಗುತ್ತದೆ. ಸಾಹಿತ್ಯಾಸಕ್ತರು ಇದರ ಪ್ರಯೋಜನ ಪಡೆದುಕೊಳ್ಳಬೇಕು ಎಂದು ಕಸಾಪ ಆಡಳಿತಾಧಿಕಾರಿ ಕೆ.ಎಂ. ಗಾಯಿತ್ರಿ ತಿಳಿಸಿದ್ದಾರೆ.

ವಾರದೊಳಗೆ ದರ ನಿಗದಿ; ಮಾರ್ಚ್‌ಗೆ ಪರಿಹಾರ

ರಾಮನಗರ: ತಾಲ್ಲೂಕಿನ ಬಿಡದಿ ಹೋಬಳಿಯ ಭೈರಮಂಗಲ ಮತ್ತು ಕಂಚುಗಾರನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ನಿರ್ಮಾಣವಾಗಲಿರುವ ಗ್ರೇಟರ್ ಬೆಂಗಳೂರು ಸಮಗ್ರ ಉಪನಗರ (ಜಿಬಿಐಟಿ) ಯೋಜನೆಗೆ ಸ್ವಾಧೀನ ವಾಗಲಿರುವ ಭೂಮಿಗೆ ಒಂದು ವಾರದೊಳಗೆ ಪರಿಹಾರ ದರ ನಿಗದಿಪಡಿಸಲಾಗುವುದು ಎಂದು ಜಿಲ್ಲಾಧಿಕಾರಿ ಯಶವಂತ್ ವಿ. ಗುರುಕರ್ ಹೇಳಿದರು.

ಜಿಬಿಐಟಿಗೆ ಸಂಬಂಧಿಸಿದಂತೆ ಯೋಜನಾ ಪ್ರದೇಶದ ಜಮೀನುಗಳ ಮಾಲೀಕರ ಜೊತೆ ಭೂ ಪರಿಹಾರದ ಕುರಿತು ಜಿಲ್ಲಾಧಿಕಾರಿ ಕಚೇರಿಯಲ್ಲಿ ಗುರುವಾರ ಸಭೆ ನಡೆಸಿದ ಅವರು, ಯೋಜನಾ ಪ್ರದೇಶದ 9 ಗ್ರಾಮಗಳಲ್ಲಿ ಜೆಎಂಸಿ (ಜಂಟಿ ಅಳತೆ ಪ್ರಮಾಣೀಕರಣ) ಪ್ರಕ್ರಿಯೆಯನ್ನು 2026ರ ಮಾರ್ಚ್ ಮೊದಲ ವಾರದೊಳಗೆ ಮುಗಿಸಿ, ತಿಂಗಳಾಂತ್ಯದೊಳಗೆ ಎಲ್ಲರಿಗೂ ಪರಿಹಾರ ಪಾವತಿಸಲಾಗುವುದು ಎಂದು ಭರವಸೆ ನೀಡಿದರು.

ಸಿವಿಲ್ ಕಾಮಗಾರಿ ಸೇರಿದಂತೆ ಯೋಜನೆಯು 3 ವರ್ಷದಲ್ಲಿ ಪೂರ್ಣಗೊಳ್ಳಲಿದೆ. ಆ್ಯಪ್ ಆಧರಿಸಿ ನಿತ್ಯ 90 ಎಕರೆ ಜೆಎಂಸಿ ಜೊತೆಗೆ ಸಂಗ್ರಹಿಸಿದ ಅಂಕಿಅಂಶಗಳ ಮೌಲ್ಯಮಾಪನವೂ ನಡೆಯುತ್ತಿದೆ. ಇಷ್ಟೊಂದು ತ್ವರಿತವಾಗಿ ಬೇರೆಲ್ಲೂ ಜೆಎಂಸಿ ನಡೆದಿಲ್ಲ ಎಂದರು.

ಸ್ವಾಧೀನವಾಗಲಿರುವ ಜಮೀನಿಗೆ ಪ್ರತಿ ಎಕರೆಗೆ ಕನಿಷ್ಠ ಮತ್ತು ಗರಿಷ್ಠ ಪರಿಹಾರ ಎಷ್ಟು ಸಿಗಲಿದೆ ಎಂದು ಉಪ ಮುಖ್ಯಮಂತ್ರಿ ಅವರು ಈಗಾಗಲೇ ತಿಳಿಸಿದ್ದಾರೆ. ಆದರೂ, ಭೂಮಿ ನೋಂದಣಿ ಮತ್ತು ಮುದ್ರಾಂಕ (ಎಸ್.ಆರ್) ಮೌಲ್ಯ ಆಧರಿಸಿ ಕಡಿಮೆ ಪರಿಹಾರ ಸಿಗಲಿದೆ ಎಂದು ಅಪಪ್ರಚಾರ ಮಾಡಲಾಗಿದೆ. ಮಾಲೀಕರು ಇಂತಹ ಸುಳ್ಳು ವಿಷಯಗಳನ್ನು ನಂಬಬಾರದು ಎಂದು ಮನವಿ ಮಾಡಿದರು.

'5 ವರ್ಷಗಳಲ್ಲಿ 25 ಸಾವಿರ ನವೋದ್ಯಮ'

'ಕರ್ನಾಟಕ ನವೋದ್ಯಮ ನೀತಿ 2025– 2030'ಕ್ಕೆ ಸಂಪುಟ ಸಭೆ ಒಪ್ಪಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಂದಿನ ಐದು ವರ್ಷಗಳಲ್ಲಿ ಬೆಂಗಳೂರು ಮತ್ತು ರಾಜ್ಯದ ಇತರ ನಗರಗಳಲ್ಲಿ ಒಟ್ಟು 25,000 ಹೆಚ್ಚುವರಿ ನವೋದ್ಯಮಗಳನ್ನು ಸ್ಥಾಪಿಸುವ ಉದ್ದೇಶದ 'ಕರ್ನಾಟಕ ನವೋದ್ಯಮ ನೀತಿ 2025– 2030'ಕ್ಕೆ ಗುರುವಾರ ನಡೆದ ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿದೆ.

ಕಾನೂನು ಸಚಿವ ಎಚ್.ಕೆ.ಪಾಟೀಲ ಅವರು ಸುದ್ದಿಗೋಷ್ಠಿಯಲ್ಲಿ ಈ ಕುರಿತು ಮಾಹಿತಿ ನೀಡಿದರು. ಇದಕ್ಕಾಗಿ ಐದು ವರ್ಷಗಳಿಗೆ ₹518.27 ಕೋಟಿ ನಿಗದಿ ಮಾಡಲಾಗಿದೆ. ಬೆಂಗಳೂರಿನಲ್ಲಿ 15 ಸಾವಿರ ಮತ್ತು ರಾಜ್ಯದ ಇತರ ನಗರಗಳಲ್ಲಿ 10 ಸಾವಿರ ನವೋದ್ಯಮಗಳು ಸ್ಥಾಪನೆಗೊಳ್ಳಲಿವೆ.

ರಾಜ್ಯದಲ್ಲಿ ನವೋದ್ಯಮ ವ್ಯವಸ್ಥೆಯನ್ನು ಬಲಪಡಿಸುವ ಗುರಿಯನ್ನು ಸರ್ಕಾರ ಹೊಂದಿದೆ. ಅನುದಾನ, ಇನ್‌ಕ್ಯುಬೇಷನ್, ಮೂಲಸೌಕರ್ಯ, ಮಾರ್ಗದರ್ಶನ, ಕೌಶಲ ಅಭಿವೃದ್ಧಿ, ಮಾರುಕಟ್ಟೆ ಪ್ರವೇಶ, ವಿಸ್ತರಣೆ, ಅಂತರರಾಷ್ಟ್ರೀಯ ಸಹಯೋಗವನ್ನು ನವೋದ್ಯಮ ನೀತಿ ಒಳಗೊಂಡಿದೆ ಎಂದರು.

ಉದಯೋನ್ಮುಖ ಮತ್ತು ಮುಂದುವರಿದ ತಂತ್ರಜ್ಞಾನಗಳಲ್ಲಿ ರಾಜ್ಯವನ್ನು ಮುಂಚೂಣಿಗೆ ತರಲು ಕೃತಕ ಬುದ್ಧಿಮತ್ತೆ, ಬ್ಲಾಕ್‌ಚೈನ್, ಕ್ವಾಂಟಮ್ ಕಂಪ್ಯೂಟಿಂಗ್ ಮತ್ತು ಇತರ ಆಳವಾದ ತಂತ್ರಜ್ಞಾನ ಕ್ಷೇತ್ರಗಳಲ್ಲಿ ನಾವೀನ್ಯವನ್ನು ಪ್ರೋತ್ಸಾಹಿಸಲಾಗುವುದು. ರಾಜ್ಯದ ವಿವಿಧ ನಗರಗಳಲ್ಲಿ ಉದ್ಯಮಿಗಳನ್ನು ಬೆಂಬಲಿಸಲು ನಾವೀನ್ಯ ಕೇಂದ್ರಗಳು, ಇನ್‌ಕ್ಯುಬೇಶನ್ ಕೇಂದ್ರಗಳನ್ನು ವಿಸ್ತರಿಸಲು ನಿರ್ಧರಿಸಲಾಗಿದೆ ಎಂದು ಅವರು ತಿಳಿಸಿದರು

ನ್ಯಾಯಾಂಗ ವಸತಿ ಗೃಹ ನಿರ್ಮಾಣ

ಬೆಂಗಳೂರಿನ ಹೆಬ್ಬಾಳದಲ್ಲಿರುವ ಕರ್ನಾಟಕ ಪಶು ಮತ್ತು ಪಶು ವೈದ್ಯಕೀಯ, ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯಕ್ಕೆ ಸೇರಿದ 4 ಎಕರೆ ಜಾಗವನ್ನು ಹೈಕೋರ್ಟ್ ಅಧಿಕಾರಿಗಳ ವಸತಿ ಗೃಹ ನಿರ್ಮಾಣಕ್ಕಾಗಿ ಹಸ್ತಾಂತರಿಸಲು ಸಚಿವ ಸಂಪುಟ ಸಭೆ ತೀರ್ಮಾನ.

ಪ್ರಮುಖ ತೀರ್ಮಾನಗಳು

- ಮೈಸೂರಿನ ಪಿಕೆಟಿಬಿ ಆಸ್ಪತ್ರೆಯ ಆವರಣದಲ್ಲಿ ಪೆರಿಫೆರಲ್ ಕ್ಯಾನ್ಸರ್ ಕೇಂದ್ರ ನಿರ್ಮಿಸಲು ಮೊದಲನೇ ಹಂತದಲ್ಲಿ ಅಗತ್ಯವಿರುವ ಉಪಕರಣ ಖರೀದಿಗೆ ₹36.50 ಕೋಟಿ, ಎರಡನೇ ಹಂತದಲ್ಲಿ ಅಗತ್ಯವಿರುವ ಉಪಕರಣ ಖರೀದಿಗೆ ₹58.00 ಕೋಟಿ, ಒಟ್ಟು ₹94.50 ಕೋಟಿ ನೀಡಲು ಒಪ್ಪಿಗೆ
- ಹಿಂದುಳಿದ ವರ್ಗಗಳಿಗೆ ಮೀಸಲಿರುವ ಆದರೆ ಅರ್ಹ ಅಭ್ಯರ್ಥಿಗಳ ಲಭ್ಯತೆ ಇಲ್ಲದ ಕಾರಣ ಭರ್ತಿಯಾಗದೇ ಉಳಿದಿರುವ 67 ಉರ್ದು ಮಾಧ್ಯಮ ಶಿಕ್ಷಕರ ಹುದ್ದೆಗಳನ್ನು ಸಾಮಾನ್ಯ ವರ್ಗಕ್ಕೆ ಪರಿವರ್ತಿಸಿ, ಭರ್ತಿ ಮಾಡಲು ಒಪ್ಪಿಗೆ
- ಮಂಗಳೂರಿನ ಬಜ್ಪೆ ಗ್ರಾಮದಲ್ಲಿ ಹಜ್ ಭವನ ನಿರ್ಮಾಣಕ್ಕಾಗಿ ₹20 ಕೋಟಿ
- ತುಮಕೂರು ಜಿಲ್ಲೆ ಕೊರಟಗೆರೆ ಪುರಸಭೆಯಾಗಿ ಮೇಲ್ದರ್ಜೆಗೆ ಏರಿಕೆ
- ವಿಜಯಪುರ ನಗರದ ಸುತ್ತಲಿನ ಕೆಲವು ಕಂದಾಯ ಗ್ರಾಮಗಳನ್ನು ಮಹಾನಗರ ಪಾಲಿಕೆ ವ್ಯಾಪ್ತಿಗೆ ಸೇರಿಸಿ ವಿಜಯಪುರ ಮಹಾನಗರ ಪಾಲಿಕೆ ಎಂದು ಘೋಷಣೆ
- ಯಾದಗಿರಿ ಜಿಲ್ಲೆಯ ದೋರನಹಳ್ಳಿ ಗ್ರಾಮ ಪಂಚಾಯಿತಿಯನ್ನು ಪಟ್ಟಣ ಪಂಚಾಯಿಯಾಗಿ ಮೇಲ್ದರ್ಜೆಗೆ ಏರಿಕೆ
- ಬೀದರ್ ಜಿಲ್ಲೆಯ ರಾಜೇಶ್ವರ ಗ್ರಾಮ ಪಂಚಾಯಿತಿಯನ್ನು ಪಟ್ಟಣ ಪಂಚಾಯಿತಿಯಾಗಿ ಮೇಲ್ದರ್ಜೆಗೆ ಏರಿಕೆ

'ಇಂದಿರಾ ಕಿಟ್' ಪದಾರ್ಥ ಮಾರ್ಪಾಡು



ಇಂದಿರಾ ಆಹಾರ ಕಿಟ್‌ನಲ್ಲಿ ಫಲಾನುಭವಿಗಳಿಗೆ ತೊಗರಿ ಬೇಳೆ 1 ಕೆ.ಜಿ, ಅಡುಗೆ ಎಣ್ಣೆ 1 ಲೀಟರ್, ಸಕ್ಕರೆ 1 ಕೆ.ಜಿ, ಉಪ್ಪು 1 ಕೆ.ಜಿ ನೀಡಲಾಗುತ್ತದೆ. 1 ಕೆ.ಜಿ ಹೆಸರು ಕಾಳಿನ ಬದಲಿಗೆ ಅದರ ವೆಚ್ಚಕ್ಕನುಗುಣವಾಗಿ 1ರಿಂದ 3 ಸದಸ್ಯರಿಗೆ 1/4 ಕೆ.ಜಿ, 3 ರಿಂದ 4 ಸದಸ್ಯರಿರುವ ಕುಟುಂಬಕ್ಕೆ 1/2 ಕೆ.ಜಿ ಹಾಗೂ 5 ಕ್ಕೂ ಹೆಚ್ಚು ಸದಸ್ಯರಿರುವ ಕುಟುಂಬಕ್ಕೆ 3/4 ಕೆ.ಜಿ ತೊಗರಿ ಬೇಳೆಯನ್ನು ವಿತರಿಸಲು ತೀರ್ಮಾನಿಸಲಾಗಿದೆ ಎಂದು ಸಚಿವ ಎಚ್.ಕೆ.ಪಾಟೀಲ ತಿಳಿಸಿದರು.

ಭಾರತದ ಉತ್ಪಾದನಾ ಪ್ರದರ್ಶನ–7ನೇ ಆವೃತ್ತಿ ಉದ್ಘಾಟನೆ

'ರಕ್ಷಣಾ ಉತ್ಪಾದನೆ: ಸ್ವಾವಲಂಬನೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಕ್ಷಣಾ ಕ್ಷೇತ್ರದಲ್ಲಿ ಅತಿ ದೊಡ್ಡ ಆಮದು ರಾಷ್ಟ್ರವಾಗಿದ್ದ ಭಾರತವು, ಸದ್ಯ ತನ್ನ ಅಗತ್ಯದ ಶೇಕಡ 90ರಷ್ಟು ಸಾಮಗ್ರಿಗಳನ್ನು ತಾನೇ ಉತ್ಪಾದಿಸಿಕೊಳ್ಳುವ ಮೂಲಕ ಆತ್ಮನಿರ್ಭರ ರಾಷ್ಟ್ರವಾಗಿ ಹೊರ ಹೊಮ್ಮಿದೆ ಎಂದು ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಹೇಳಿದರು.

ಐಎಂಎಸ್ ಫೌಂಡೇಷನ್, ಲಘು ಉದ್ಯೋಗ ಭಾರತಿ–ಕರ್ನಾಟಕ ಸಹಯೋಗದೊಂದಿಗೆ ಬೆಂಗಳೂರು ಅಂತರರಾಷ್ಟ್ರೀಯ ಪ್ರದರ್ಶನ ಕೇಂದ್ರದಲ್ಲಿ ಗುರುವಾರ ಆಯೋಜಿಸಿದ್ದ ಭಾರತದ ಉತ್ಪಾದನಾ ಪ್ರದರ್ಶನ–7ನೇ ಆವೃತ್ತಿ ಉದ್ಘಾಟಿಸಿ ಮಾತನಾಡಿದರು.

'ಈ ಹಿಂದೆ ಶೇಕಡ 70ರಷ್ಟು ರಕ್ಷಣಾ ಸಾಮಗ್ರಿಗಳು ಆಮದು ಆಗುತ್ತಿದ್ದವು. ಈಗ ಎಲ್ಲವೂ ಸ್ವದೇಶದಲ್ಲೇ ತಯಾರಾಗುತ್ತಿವೆ. ಇದು ದೇಶದ ಸೌರ್ವಭೌಮತ್ವಕ್ಕೆ ಹಿಡಿದ ಕನ್ನಡಿ. ಈ ಎಲ್ಲಾ ಬೆಳವಣಿಗೆಗೂ ಸೂಕ್ಷ್ಮ, ಸಣ್ಣ ಹಾಗೂ ಮಧ್ಯಮ ಕೈಗಾರಿಕೆ, ಸ್ಟಾರ್ಟ್‌ಅಪ್‌ಗಳು ಹಾಗೂ ಖಾಸಗಿ ಅನ್ವೇಷಕರ ಕೊಡುಗೆ ಬಹು ದೊಡ್ಡದು' ಎಂದರು.

'ಬೆಳವಣಿಗೆ ಹಾದಿಯಲ್ಲಿದ್ದರೂ ಕೈಗಾರಿಕೆಗಳನ್ನು ಅನುಮಾನಗಳಿಂದ ನೋಡುವ ಕಾಲವಿತ್ತು. ಆದರೆ, ಇಂದು ಪ್ರಧಾನಿ ನರೇಂದ್ರ ಮೋದಿ ನಾಯಕತ್ವದಲ್ಲಿ ದೇಶ ಪ್ರಗತಿಯತ್ತ ಸಾಗುತ್ತಿದೆ' ಎಂದು ಹೇಳಿದರು.

80ರ ದಶಕದ ಘಟನೆ ನೆನಪಿಸಿಕೊಂಡ ಸಚಿವರು, '1984ರಲ್ಲಿ ನನ್ನ ತಂದೆ ಒಂದು ಚೀಲ ಸಿಮೆಂಟ್‌ಗಾಗಿ ದಿನವಿಡೀ ಸರದಿ ಸಾಲಿನಲ್ಲಿ ನಿಂತಿದ್ದರು. ಅಂದು ಅಷ್ಟು ಅಭಾವವಿತ್ತು. ಇಂದು ಪರಿಸ್ಥಿತಿ ಬದಲಾಗಿದ್ದು, ಇಸ್ರೊ ಅಗ್ಗದ ವೆಚ್ಚದಲ್ಲಿ ಉಪಗ್ರಹಗಳನ್ನು ಉಡಾವಣೆ ಮಾಡುತ್ತಿದೆ. ಇದು ನವ ಭಾರತ' ಎಂದರು.

ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಮಾತನಾಡಿ, 'ಸೂಕ್ಷ್ಮ, ಸಣ್ಣ ಹಾಗೂ ಮಧ್ಯಮ ಕೈಗಾರಿಕೆ ಉದ್ಯಮವು ದೇಶದ ಆರ್ಥಿಕತೆಯ ಬೆನ್ನೆಲುಬು ಆಗಿದೆ. ಈ ಕ್ಷೇತ್ರದಲ್ಲಿ 30 ಕೋಟಿ ಜನರು ಕೆಲಸ ಮಾಡುತ್ತಿದ್ದು, ದೇಶದ ಆರ್ಥಿಕತೆಗೆ ಶೇಕಡ 30ರಷ್ಟು ಕೊಡುಗೆ ಇದೆ. ತಯಾರಿಕಾ ವಲಯದಲ್ಲಿ ಶೇಕಡ 45 ಹಾಗೂ ರಫ್ತು ಕ್ಷೇತ್ರದಲ್ಲಿ ಶೇಕಡ 40 ರಷ್ಟು ಕೊಡುಗೆ ನೀಡಿದೆ. ಇಸ್ರೊ, ಡಿಆರ್‌ಡಿಒ, ಎಚ್‌ಎಎಲ್, ಬಿಎಚ್‌ಇಎಲ್ ಸಂಸ್ಥೆಗಳು ತಮ್ಮ ಪೂರೈಕೆ ಸರಪಳಿಯಲ್ಲಿ ಸಣ್ಣ ಮತ್ತು ಕೈಗಾರಿಕಾ ವಲಯವನ್ನು ಸೇರಿಸಿಕೊಂಡು ಬೆಳೆಯಬೇಕು' ಎಂದು ಹೇಳಿದರು.

ಇಸ್ರೊ ನಡೆದು ಬಂದ ಹಾದಿಯನ್ನು ವಿವರಿಸಿದ ಅಧ್ಯಕ್ಷ ವಿ.ನಾರಾಯಣನ್, 'ಕೆಲ ದಿನಗಳ ಹಿಂದೆ ಸ್ವದೇಶಿ ನಿರ್ಮಿತ 'ಬಾಹುಬಲಿ' ರಾಕೆಟ್ ಮೂಲಕ ಅತ್ಯಂತ ಭಾರವಾದ ಉಪಗ್ರಹವನ್ನು ಕಕ್ಷೆಗೆ ಸೇರಿಸುವುದರೊಂದಿಗೆ ಚಾರಿತ್ರಿಕ ಸಾಧನೆ ಮಾಡಿದ್ದೇವೆ. 4,410 ಕೆ.ಜಿ ತೂಕದ ಸಂವಹನ ಉಪಗ್ರಹವನ್ನು (ಸಿಎಂಎಸ್–03) ಹೊತ್ತು ನಭಕ್ಕೆ ಚಿಮ್ಮಿದ ಲಾಂಚ್ ವೆಹಿಕಲ್ ಮಾರ್ಕ್–3 (ಎಲ್‌ವಿಎಂ03-ಎಂ5) 'ಬಾಹುಬಲಿ'ಯು 'ಆತ್ಮನಿರ್ಭರ ಭಾರತ'ದ ಸಾಧನೆಗೆ ಸಾಕ್ಷಿ. ಪ್ರಸ್ತುತ 450 ಕ್ಕೂ ಹೆಚ್ಚು ದೇಶಿಯ ಕಂಪನಿಗಳೊಂದಿಗೆ ಇಸ್ರೊ ಪಾಲುದಾರಿಕೆ ಹೊಂದಿದೆ' ಎಂದು ತಿಳಿಸಿದರು. ಸಂಸದ ತೇಜಸ್ವಿ ಸೂರ್ಯ, ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ (ಡಿಆರ್‌ಡಿಒ) ಅಧ್ಯಕ್ಷ ಸಮೀರ್ ವಿ.ಕಾಮತ್, ಎಲ್ ಆ್ಯಂಡ್ ಟಿ ರಕ್ಷಣಾ ವಿಭಾಗದ ಮುಖ್ಯಸ್ಥ ಅರುಣ್ ರಾಮಚಾಂದಿನಿ, ಭಾರತ ಫೋರ್ಜ್ ಲಿಮಿಟೆಡ್ ವ್ಯವಸ್ಥಾಪಕ ನಿರ್ದೇಶಕ ಬಾಬಾ ಕಲ್ಯಾಣಿ, ಲಘು ಉದ್ಯೋಗ ಭಾರತಿ– ಕರ್ನಾಟಕ ಘಟಕದ ಅಧ್ಯಕ್ಷ ಕೆ. ನಾರಾಯಣ ಪ್ರಸನ್ನ, ಐಎಂಎಸ್ ಫೌಂಡೇಷನ್ ಅಧ್ಯಕ್ಷ ಎಚ್.ವಿ.ಎಸ್.ಕೃಷ್ಣ ಹಾಜರಿದ್ದರು.

ಮುಖ್ಯಾಂಶಗಳು

- ಸೂಕ್ಷ್ಮ, ಸಣ್ಣ ಉದ್ದಿಮೆಗಳಿಂದ 30 ಕೋಟಿ ಜನರಿಗೆ ಉದ್ಯೋಗ: ಕರಂದ್ಲಾಜೆ
- 450 ಕ್ಕೂ ಹೆಚ್ಚು ದೇಶಿಯ ಕಂಪನಿಗಳೊಂದಿಗೆ ಇಸ್ರೊ ಪಾಲುದಾರಿಕೆ

ಸಣ್ಣ ಮತ್ತು ಮಧ್ಯಮ ಕೈಗಾರಿಕೆ ಅಂದರೆ ಬಡವರ ಸಬಲೀಕರಣ ಮತ್ತು ದೇಶದ ಬಲವರ್ಧನೆ ಎಂದರ್ಥ

ಪ್ರಲ್ಹಾದ ಜೋಶಿ, ಕೇಂದ್ರ ಸಚಿವ

ಭಾರತದ ಉತ್ಪಾದನಾ ಪ್ರದರ್ಶನದಲ್ಲಿ ವಾಯು ಸೇನೆಗೆ ಸೇರಿದ ಹೆಲಿಕಾಪ್ಟರ್ ಮಾದರಿಯನ್ನು ಜನರು ವೀಕ್ಷಿಸಿದರು —ಪ್ರಜಾವಾಣಿ ಚಿತ್ರ

ಚಿತ್ತಾಪುರ ಪಥಸಂಚಲನ: 'ಹೈ' ವಿಚಾರಣೆ ಇಂದು

ಪ್ರಜಾವಾಣಿ ವಾರ್ತೆ

ಕಲಬುರಗಿ: ರಾಜ್ಯದ ಗಮನ ಸೆಳೆದಿರುವ 'ಚಿತ್ತಾಪುರ ಪಥಸಂಚಲನ' ಕುರಿತ ಅರ್ಜಿ ಹೈಕೋರ್ಟ್‌ನ ಕಲಬುರಗಿ ಪೀಠದಲ್ಲಿ ಶುಕ್ರವಾರ ಮತ್ತೆ ವಿಚಾರಣೆಗೆ ಬರಲಿದೆ. ಪಥಸಂಚಲನಕ್ಕೆ ಅನುಮತಿ ಸಂಬಂಧ ನ.5ರಂದು ಮತ್ತೊಮ್ಮೆ ಶಾಂತಿ ಸಭೆ ನಡೆಸಿ ಸೌಹಾರ್ದಯುತ ಪರಿಹಾರ ಕಂಡುಕೊಳ್ಳಬೇಕು' ಎಂದು ಹೈಕೋರ್ಟ್ ಅ.30ರಂದು ಹೇಳಿತ್ತು. ಅದರಂತೆ ನ.5ರಂದು ಬೆಂಗಳೂರಿನಲ್ಲಿ ಸರ್ಕಾರದ ಅಡ್ವೋಕೇಟ್ ಜನರಲ್ ಶಶಿಕಿರಣ ಶೆಟ್ಟಿ ಕಚೇರಿಯಲ್ಲಿ ಶಾಂತಿಸಭೆ ನಡೆದಿತ್ತು. ಸಭೆಯಲ್ಲಿ ಆರ್‌ಎಸ್‌ಎಸ್ ಪರ ಅರ್ಜಿದಾರ ಚಿಂಚೋಳಿಯ ಅಶೋಕ ಪಾಟೀಲ ನೇತೃತ್ವದ ತಂಡ ಹಾಗೂ ವಕೀಲರು ತಮ್ಮ ನಿಲುವನ್ನು ಪ್ರತಿಪಾದಿಸಿದ್ದರು. 'ನ.13 ಅಥವಾ ನ.16ರಂದು ಪಥಸಂಚಲನ ನಡೆಸಲು ಅವಕಾಶ ನೀಡಬೇಕು. ಜಿಲ್ಲಾಡಳಿತ ವಿಧಿಸುವ ಷರತ್ತು ಪಾಲಿಸಲಾಗುವುದು' ಎಂದು ಸಭೆಯಲ್ಲಿ ಹೇಳಿದ್ದರು. ಶುಕ್ರವಾರದ ವಿಚಾರಣೆಯಲ್ಲಿ 2ನೇ ಸುತ್ತಿನ ಶಾಂತಿ ಸಭೆಯ ವರದಿಯನ್ನು ಸರ್ಕಾರವು ನ್ಯಾಯಾಲಯಕ್ಕೆ ಸಲ್ಲಿಸಲಿದೆ. ಪಥಸಂಚಲನಕ್ಕೆ ಅನುಮತಿ ಸಂಬಂಧ ಕೋರ್ಟ್ ಏನು ನಿರ್ಧಾರ ಪ್ರಕಟಿಸಬಹುದು ಎಂಬ ಕುತೂಹಲ ಗರಿಗೆದರಿದೆ.

ಸುದ್ದಿ 2 ನಿಮಿಷ

ಎತ್ತಿನಹೊಳೆ: ಕೇಂದ್ರ ಮತ್ತೆ ತಕರಾರು

ನವದೆಹಲಿ: ಎತ್ತಿನಹೊಳೆ ಯೋಜನೆಯ ಕಾಮಗಾರಿಗೆ ಹಾಸನ ಹಾಗೂ ತುಮಕೂರು ಜಿಲ್ಲೆಗಳ 432 ಎಕರೆ ಅರಣ್ಯ ಬಳಸಲು ಕೇಂದ್ರ ಅರಣ್ಯ ಸಚಿವಾಲಯದ ತಜ್ಞರ ಸಮಿತಿ ತಾತ್ವಿಕ ಅನುಮೋದನೆ ನೀಡಲು ಒಪ್ಪಿಲ್ಲ.

ಹಾಸನ, ತುಮಕೂರು ಜಿಲ್ಲೆಗಳಲ್ಲಿ ಗುರುತ್ವಾಕರ್ಷಣೆ ಕಾಲುವೆ ನಿರ್ಮಿಸಲು ತುಮಕೂರಿನ ಬೆಣ್ಣೆಹಳ್ಳದ ಕಾವಲ್, ಕಂಚಿಗಾನಹಳ್ಳಿ ಹಾಗೂ ಹಾಸನದ ಐದಹಳ್ಳಿ ಕಾವಲ್, ಕುಮರಿಹಳ್ಳಿ ಗ್ರಾಮದ ಅರಣ್ಯ ಭೂಮಿ ಬಳಸಲು ಒಪ್ಪಿಗೆ ನೀಡುವಂತೆ ಕರ್ನಾಟಕ ಅರಣ್ಯ ಇಲಾಖೆಯು ಅಕ್ಟೋಬರ್ 8ರಂದು ಪ್ರಸ್ತಾವ ಸಲ್ಲಿಸಿತ್ತು. ಪ್ರಸ್ತಾವದ ಪರಾಮರ್ಶೆಗೆ ಕೇಂದ್ರ ಅರಣ್ಯ ಸಲಹಾ ಸಮಿತಿಗೆ ಸಚಿವಾಲಯ ಕಳುಹಿಸಿತ್ತು. ಸಮಿತಿಯು ಯೋಜನೆಯ ಕಾಮಗಾರಿಗೆ ಮತ್ತೆ ತರಕಾರು ಎತ್ತಿದೆ.

'ಯೋಜನೆಯ ಕಾಲುವೆ ನಿರ್ಮಾಣಕ್ಕೆ ಅಕ್ರಮವಾಗಿ 107 ಹೆಕ್ಟೇರ್ ಬಳಕೆ ಮಾಡಿರುವುದನ್ನು ಸಚಿವಾಲಯದ ಉನ್ನತ ಅಧಿಕಾರಿಗಳ ಸಮಿತಿ ಪತ್ತೆ ಹಚ್ಚಿ ವರದಿ ಸಲ್ಲಿಸಿದೆ. ಆದರೆ, ರಾಜ್ಯ ಸರ್ಕಾರವು 0.04 ಹೆಕ್ಟೇರ್ ಉಲ್ಲಂಘನೆ ಪ್ರಕರಣದಲ್ಲಷ್ಟೇ ಎಫ್‌ಐಆರ್ ದಾಖಲಿಸಿದೆ. ಇದು ಗಂಭೀರ ಲೋಪ' ಎಂದು ಸಮಿತಿ ಅಭಿಪ್ರಾಯಪಟ್ಟಿದೆ.

'ಯೋಜನೆ ಅನುಷ್ಠಾನಗೊಳಿಸುತ್ತಿರುವ ವಿಶ್ವೇಶ್ವರಯ್ಯ ಜಲ ನಿಗಮದಿಂದ ಈ ಲೋಪ ಆಗಿದೆಯೇ ಎಂಬ ಬಗ್ಗೆ ರಾಜ್ಯ ಅರಣ್ಯ ಇಲಾಖೆ ಹಾಗೂ ಸಚಿವಾಲಯದ ಪ್ರಾದೇಶಿಕ ಕಚೇರಿ ಜಂಟಿ ವರದಿ ಸಲ್ಲಿಸಬೇಕು. ಪ್ರಾದೇಶಿಕ ಕಚೇರಿಯು ಪ್ರತ್ಯೇಕವಾಗಿ ವರದಿ ಸಲ್ಲಿಸಲು ಅವಕಾಶ ಇದೆ. ಈ ಸಂಬಂಧ ಪ್ರಾದೇಶಿಕ ಕಚೇರಿಯು ಅಗತ್ಯ ಕ್ರಮ ಕೈಗೊಳ್ಳಬೇಕು' ಎಂದು ಸಮಿತಿ ನಿರ್ದೇಶನ ನೀಡಿದೆ.

432 ಎಕರೆ ಅರಣ್ಯ ಬಳಕೆಗೆ ಒಪ್ಪಿಗೆ ಕೋರಿ ರಾಜ್ಯ ಸರ್ಕಾರ ಈ ಹಿಂದೆ ಪ್ರಸ್ತಾವ ಸಲ್ಲಿಸಿತ್ತು. ಯೋಜನೆಯ ಅನುಷ್ಠಾನದ ಸಂದರ್ಭದಲ್ಲಿ ವ್ಯಾಪಕ ಪ್ರಮಾಣದಲ್ಲಿ ನಿಯಮ ಉಲ್ಲಂಘನೆ ಆಗಿದೆ ಎಂಬ ಕಾರಣ ನೀಡಿ ಕೇಂದ್ರ ಅರಣ್ಯ ಸಲಹಾ ಸಮಿತಿ ಅನುಮೋದನೆ ಕೊಟ್ಟಿರಲಿಲ್ಲ. ನಿಯಮ ಉಲ್ಲಂಘಿಸಿದ ಅಧಿಕಾರಿಗಳ ವಿರುದ್ಧ ಶಿಸ್ತುಕ್ರಮ ಕೈಗೊಳ್ಳಬೇಕು ಹಾಗೂ ದಂಡ ವಿಧಿಸಬೇಕು ಎಂದು ತಾಕೀತು ಮಾಡಿತ್ತು. ಇದರಿಂದಾಗಿ, ಎತ್ತಿನಹೊಳೆ ಕಾಮಗಾರಿ ಸ್ಥಗಿತವಾಗಿತ್ತು.

ಕ್ರೀಡೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಲು ಸಲಹೆ

ಬೆಂಗಳೂರು: ಪ್ರತಿಯೊಬ್ಬರೂ ಕ್ರೀಡೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಿ ಪ್ರಗತಿ ಸಾಧಿಸಬೇಕು ಎಂದು ಬೀದರ್‌ನಲ್ಲಿರುವ ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ಕುಲಪತಿ ಕೆ.ಸಿ.ವೀರಣ್ಣ ಕರೆ ನೀಡಿದರು.

ಹೆಬ್ಬಾಳದ ಹೈನುಗಾರಿಕಾ ಮಹಾವಿದ್ಯಾಲಯ ಮೈದಾನದಲ್ಲಿ ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಹಾಗೂ ಪಶುವೈದ್ಯಕೀಯ ಮಹಾವಿದ್ಯಾಲಯದ ಸಂಯುಕ್ತಾಶ್ರಯದಲ್ಲಿ ಆಯೋಜಿಸಲಾಗಿದ್ದ 19ನೇ ಅಂತರ ಮಹಾವಿದ್ಯಾಲಯಗಳ ಕ್ರೀಡಾಕೂಟ-2025 ಉದ್ಘಾಟಿಸಿ ಮಾತನಾಡಿದರು.

ಬೆಂಗಳೂರು ಪಶುವೈದ್ಯಕೀಯ ಮಹಾವಿದ್ಯಾಲಯದ ಡೀನ್ ಎನ್.ಕೆ. ಶಿವಕುಮಾರ್ ಗೌಡ, ವಿಶ್ವವಿದ್ಯಾಲಯ ವ್ಯವಸ್ಥಾಪನ ಮಂಡಳಿ ಸದಸ್ಯರಾದ ಎಚ್.ಎಂ. ಜಯಪ್ರಕಾಶ್, ಬಸವರಾಜ ಪಿ. ಭತಮುರ್ಗೆ ಉಪಸ್ಥಿತರಿದ್ದರು.

ಸಹಿ ಸಂಗ್ರಹಿಸದ ಬ್ಲಾಕ್ ಅಧ್ಯಕ್ಷರ ವಜಾ: ಡಿಕೆಶಿ

ಪ್ರಜಾವಾಣಿ ವಾರ್ತೆ

ನವದೆಹಲಿ: 'ಮತಗಳ್ಳತನ ವಿರುದ್ಧ ಕರ್ನಾಟಕದಲ್ಲಿ ಸಹಿಸಂಗ್ರಹ ಅಭಿಯಾನದಲ್ಲಿ ಸಕ್ರಿಯರಾಗದವರನ್ನು ಹುದ್ದೆಯಿಂದ ಕಿತ್ತು ಹಾಕಲಾಗುವುದು' ಎಂದು ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಎಚ್ಚರಿಸಿದರು.

ಗುರುವಾರ ಇಲ್ಲಿ ಸುದ್ದಿಗಾರರ ಜತೆಗೆ ಮಾತನಾಡಿದ ಅವರು, 'ಮತಕಳವಿನ ವಿರುದ್ಧ ರಾಜ್ಯದಲ್ಲಿ ಅಭಿಯಾನ ನಡೆಸುತ್ತಿದ್ದೇವೆ. ಇದೇ 9ರಂದು ಜಿಲ್ಲಾ ಘಟಕದ ಅಧ್ಯಕ್ಷರ ಜತೆಗೆ ದೆಹಲಿಗೆ ಬಂದು ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರಿಗೆ ಸಲ್ಲಿಸುತ್ತೇವೆ' ಎಂದರು.

'ಈ ಅಭಿಯಾನದಲ್ಲಿ ಯಾರು ಕೆಲಸ ಮಾಡಿಲ್ಲವೋ ಅವರ ವಿರುದ್ಧ ನಿರ್ದಾಕ್ಷಿಣ್ಯವಾಗಿ ಕ್ರಮ ಕೈಗೊಳ್ಳುತ್ತೇವೆ. ಸಹಿಸಂಗ್ರಹ ಅಭಿಯಾನದಲ್ಲಿ ಸರಿಯಾಗಿ ಜವಾಬ್ದಾರಿ ನಿಭಾಯಿಸದವರನ್ನು ಅವರ ಹುದ್ದೆಯಿಂದ ಕಿತ್ತೊಗೆಯುತ್ತೇವೆ' ಎಂದರು.

'ಮತಗಳ್ಳತನ ಗಂಭೀರ ವಿಚಾರವಾಗಿದ್ದು, ನಮ್ಮ ರಾಜ್ಯದಲ್ಲಿ ಈಗಾಗಲೇ 80 ಲಕ್ಷ ಸಹಿ ಸಂಗ್ರಹ ಮಾಡಲಾಗಿದೆ. ಕೆಲವು ಶಾಸಕರು ಹಾಗೂ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರು ಗಂಭೀರವಾಗಿ ಪರಿಗಣಿಸಿಲ್ಲ, ಅಂತಹವರ ವಿರುದ್ಧ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುತ್ತೇವೆ. ಬ್ಲಾಕ್ ಅಧ್ಯಕ್ಷರನ್ನು ವಜಾಗೊಳಿಸಲು ನನಗೆ ಅಧಿಕಾರವಿದೆ. ಶಾಸಕರ ವಿಚಾರವಾಗಿ ಮುಖ್ಯಮಂತ್ರಿಗಳಿಗೆ ತಿಳಿಸುತ್ತೇವೆ. ಕ್ರಮಕ್ಕೆ ಎಐಸಿಸಿ ನಾಯಕರು ಸೂಚನೆ ನೀಡುತ್ತಾರೆ' ಎಂದರು.

'ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಜನರೇ ದೇವರು. ನಾವು ಈ ವಿಚಾರವನ್ನು ಜನರಿಗೆ ತಿಳಿಸುತ್ತಿದ್ದು, ಅವರು ಸೂಕ್ತ ಸಂದರ್ಭದಲ್ಲಿ ತೀರ್ಮಾನ ಮಾಡಲಿದ್ದಾರೆ. ದೇಶದಲ್ಲಿ ಏನಾಗುತ್ತಿದೆ ಎಂದು ಜನರಿಗೆ ಮನದಟ್ಟು ಮಾಡುತ್ತಿದ್ದೇವೆ. ಬೆಂಗಳೂರು ಗ್ರಾಮಾಂತರ ಕ್ಷೇತ್ರದಲ್ಲಿ ಏನಾಗಿದೆ ಎಂದು ನಮಗೆ ಗೊತ್ತಿದೆ. ನಾವು ಅಲ್ಲಿ ಸೋತಾಗಿದೆ. ಈಗ ನನ್ನ ಕ್ಷೇತ್ರದ ಬಗ್ಗೆ ಚರ್ಚೆ ಬೇಡ. ಈಗ ಬೇರೆ ಕ್ಷೇತ್ರಗಳಲ್ಲಿನ ಅಕ್ರಮದ ಬಗ್ಗೆ ರಾಹುಲ್ ಗಾಂಧಿ ಅವರೇ ಸಾಕ್ಷ್ಯ ಸಮೇತ ಜನರ ಮುಂದೆ ಇಡುತ್ತಿದ್ದಾರೆ' ಎಂದು ತಿಳಿಸಿದರು.

'ಖಾಸಗಿ ಸಂಘ ಸಂಸ್ಥೆಗಳು, ಸಂಘಟನೆಗಳು ಸರ್ಕಾರದ ಸ್ಥಳ, ಆವರಣ ಹಾಗೂ ಸಾರ್ವಜನಿಕ ಆಸ್ತಿಗಳನ್ನು ಬಳಸುವ ಮುನ್ನ ಕಡ್ಡಾಯವಾಗಿ ಪೂರ್ವಾನುಮತಿ ಪಡೆಯಬೇಕು' ಎಂಬ ರಾಜ್ಯ ಸರ್ಕಾರದ ಆದೇಶಕ್ಕೆ ಹೈಕೋರ್ಟ್ ತಡೆ ನೀಡಿರುವ ಬಗ್ಗೆ ಪ್ರತಿಕ್ರಿಯಿಸಿದ ಅವರು, 'ಆರ್‌ಎಸ್‌ಎಸ್ ಅನ್ನು ನಿಯಂತ್ರಿಸುತ್ತೇವೆ ಎಂದು ನಾವು ಎಲ್ಲಿ ಹೇಳಿದ್ದೇವೆ? ಸಾರ್ವಜನಿಕ ಸ್ಥಳಗಳಲ್ಲಿ ಕಾರ್ಯಕ್ರಮಕ್ಕೆ ಅನುಮತಿ ಪಡೆಯಬೇಕು ಎಂದು ಹೇಳಿದ್ದೇವೆ. ಇದು ಎಲ್ಲರಿಗೂ ಅನ್ವಯವಾಗಲಿದೆ. ಈ ವಿಚಾರ ಚರ್ಚೆಯಲ್ಲಿತ್ತು. ಜಗದೀಶ್ ಶೆಟ್ಟರ್ ನೇತೃತ್ವದ ಬಿಜೆಪಿ ಸರ್ಕಾರದ ಆದೇಶದ ಪ್ರಕಾರ ನಮ್ಮ ಸರ್ಕಾರ ಈಗ ಕ್ರಮ ಕೈಗೊಂಡಿದೆ. ಆರ್‌ಎಸ್‌ಎಸ್‌ನವರು ಕಾರ್ಯಕ್ರಮ ಮಾಡಬಾರದು ಎಂದು ಎಲ್ಲಿ ಹೇಳಿದ್ದೇವೆ?' ಎಂದರು.

'ಪ್ರಸ್ತಾವಿತ ಮೇಕೆದಾಟು ಯೋಜನೆಯ ಪ್ರಕರಣದ ವಿಚಾರಣೆಗೆ ಪ್ರತ್ಯೇಕ ಪೀಠ ರಚಿಸುವುದಾಗಿ ಸುಪ್ರೀಂ ತಿಳಿಸಿದೆ. ಕೋರ್ಟ್ ಇದಕ್ಕೆ ದಿನಾಂಕ ನಿಗದಿ ಮಾಡಲಿದ್ದು, ರಾಜ್ಯಕ್ಕೆ ನ್ಯಾಯ ಸಿಗುವ ವಿಶ್ವಾಸ ಇದೆ' ಎಂದರು.

ರಿಲೆ: ಮೈಸೂರು ಬಾಲಕರ ಪಾರಮ್ಯ

ಕರ್ನಾಟಕ ಮಿನಿ ಗೇಮ್ಸ್: ಅಮಿತ್‌ಗೆ ಜಾವೆಲಿನ್ ಚಿನ್ನ

ಪ್ರಜಾವಾಣಿ ವಾರ್ತೆ

ಬಾಲಕರ 4x100 ಮೀಟರ್ ರಿಲೆನಲ್ಲಿ ಸ್ಪರ್ಧಿಗಳು ಗುರಿಯತ್ತ ಧಾವಿಸಿದರು

ಬೆಂಗಳೂರು: ಮೈಸೂರು ಮತ್ತು ದಕ್ಷಿಣ ಕನ್ನಡ ಜಿಲ್ಲಾ ತಂಡಗಳು ನಗರದಲ್ಲಿ ನಡೆಯುತ್ತಿರುವ ಕರ್ನಾಟಕ ಮಿನಿ ಗೇಮ್ಸ್‌ನಲ್ಲಿ ಕ್ರಮವಾಗಿ ಬಾಲಕರ ಮತ್ತು ಬಾಲಕಿಯರ 4x100 ಮೀಟರ್ ಸ್ಪರ್ಧೆಯಲ್ಲಿ ಚಿನ್ನದ ಸಾಧನೆ ಮೆರೆದವು.

ಕರ್ನಾಟಕ ಒಲಿಂಪಿಕ್ ಸಂಸ್ಥೆಯ ಆಶ್ರಯದಲ್ಲಿ ಕಂಠೀರವ ಕ್ರೀಡಾಂಗಣದಲ್ಲಿ ಗುರುವಾರ ನಡೆದ ಸ್ಪರ್ಧೆಯಲ್ಲಿ ಮೈಸೂರಿನ ಬಾಲಕರು 49.69 ಸೆಕೆಂಡ್‌ಗಳಲ್ಲಿ ಗುರಿ ತಲುಪಿ, ಅಗ್ರಸ್ಥಾನಿಯಾದರು. ದಕ್ಷಿಣ ಕನ್ನಡ (50.10ಸೆ) ಮತ್ತು ಬೆಳಗಾವಿ (51.44ಸೆ) ತಂಡಗಳು ಕ್ರಮವಾಗಿ ನಂತರದ ಸ್ಥಾನ ಗಳಿಸಿದವು.

ದಕ್ಷಿಣ ಕನ್ನಡದ ಬಾಲಕಿಯರು 53.19 ಸೆಕೆಂಡ್‌ಗಳಲ್ಲಿ ಗುರಿ ಮುಟ್ಟಿದರು. ಬೆಂಗಳೂರು ದಕ್ಷಿಣ ತಂಡ (54.91ಸೆ) ಬೆಳ್ಳಿ ಮತ್ತು ಉತ್ತರ ಕನ್ನಡ ತಂಡ (55.18ಸೆ) ಕಂಚಿನ ಪದಕ ಗೆದ್ದುಕೊಂಡಿತು.

ಬಾಲಕರ 60 ಮೀಟರ್ ಸ್ಪ್ರಿಂಟ್ ಸ್ಪರ್ಧೆಯಲ್ಲಿ ಉಡುಪಿಯ ಪ್ರಕುಲ್ ಕೆ. ಕುಂದರ್ (7.32ಸೆ) ಚಾಂಪಿಯನ್ ಆದರು. ಬಾಲಕಿಯರ ವಿಭಾಗದಲ್ಲಿ ದಕ್ಷಿಣ ಕನ್ನಡದ ಅದ್ವಿಕಾ (8.29ಸೆ) ಚಿನ್ನ ಗೆದ್ದರು.

ಬಾಲಕರ 200 ಮೀ. ಓಟದಲ್ಲಿ ಮೈಸೂರಿನ ಆದರ್ಶ್ ಆರ್. (24.18 ಸೆ) ಪ್ರಶಸ್ತಿ ಗೆದ್ದರು. ಬಾಲಕಿಯರ 400 ಮೀ. ಓಟದಲ್ಲಿ ಉತ್ತರ ಕನ್ನಡದ ಪೂರ್ವಿ ಟಿ. ಹರಿಕಾಂತರ (1ನಿ.0.47ಸೆ) ಸ್ವರ್ಣ ಗೆದ್ದರು.

ಬಾಲಕರ 600 ಮೀಟರ್ ಓಟದಲ್ಲಿ ಧಾರವಾಡದ ಸಂದೀಪ್ ಯಲ್ಲಪ್ಪ ವಡ್ಡರ್ (1ನಿ.29ಸೆ) ಚಿನ್ನ ಗೆದ್ದರು. ಬಾಲಕಿಯರ ವಿಭಾಗದಲ್ಲಿ ಬಾಗಲಕೋಟೆಯ ಮೇಘಾ ಅಶೋಕ್ ಪೂಜಾರಿ (1ನಿ.42ಸೆ) ಚಾಂಪಿಯನ್ ಆದರು.

ಬಾಲಕಿಯರ ಶಾಟ್‌ಪುಟ್‌ನಲ್ಲಿ ಹಾಸನದ ಶರಣ್ಯಾ (8.7 ಮೀ) ಸ್ವರ್ಣ ಗೆದ್ದರು. ಬಾಲಕರ ಲಾಂಗ್ ಜಂಪ್‌ನಲ್ಲಿ ದಕ್ಷಿಣ ಕನ್ನಡದ ಪ್ರಣವ್ ಎಸ್. 5.52 ಮೀ. ದೂರ ಜಿಗಿದು ಚಿನ್ನ ಗೆದ್ದರು. ಜಾವೆಲಿನ್ ಥ್ರೋದಲ್ಲಿ ಶಿವಮೊಗ್ಗ ಅಮಿತ್ ಎಸ್.ಪಿ. (33.66 ಮೀ) ಸ್ವರ್ಣ ತಮ್ಮದಾಗಿಸಿಕೊಂಡರು.

ಕೇಂದ್ರ ಸಚಿವ ಎಚ್‌.ಡಿ. ಕುಮಾರಸ್ವಾಮಿ ಆರೋಪ

'ಟೌನ್‌ಶಿಪ್ ಹೆಸರಿನಲ್ಲಿ ಲೂಟಿ'

ಪ್ರಜಾವಾಣಿ ವಾರ್ತೆ

ಮಂಡ್ಯ: 'ಬಿಡದಿ ಟೌನ್‌ಶಿಪ್ ಹೆಸರಿನಲ್ಲಿ ರಾಜ್ಯ ಸರ್ಕಾರ 9 ಸಾವಿರ ಎಕರೆ ಫಲವತ್ತಾದ ಭೂಮಿಯನ್ನು ಲೂಟಿ ಹೊಡೆಯಲು ಹೊರಟಿದೆ. ಯಾರೂ ಒಂದು ಇಂಚು ಭೂಮಿ ಕೊಡಬೇಡಿ. ಹೆದರುವ ಅಗತ್ಯವಿಲ್ಲ. ಜನರೊಂದಿಗೆ ನಾನಿದ್ದೇನೆ' ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಹೇಳಿದರು.

ಗುರುವಾರ ಮಾಧ್ಯಮದವರೊಂದಿಗೆ ಮಾತನಾಡಿ, 'ಟೌನ್‌ಶಿಪ್ ಅನ್ನು ರೈತರು ವಿರೋಧಿಸುತ್ತಿದ್ದರೂ ಸರ್ಕಾರ ಸ್ಪಂದಿಸದೆ, ರಿಯಲ್ ಎಸ್ಟೇಟ್ ಕುಳಗಳಿಗೆ ಮಿಡಿಯುತ್ತಿದೆ' ಎಂದು ಆರೋಪಿಸಿದರು.

'ಟೌನ್‌ಶಿಪ್ ಬಗ್ಗೆ ನನ್ನ ಕಾಲದಲ್ಲಿ ಆದ ತೀರ್ಮಾನವೇ ಬೇರೆ, ಇವತ್ತಿನ ತೀರ್ಮಾನಗಳೇ ಬೇರೆ. ಅಂದು ಭೂಮಿ ಬೆಲೆ ದೊಡ್ಡ ಮಟ್ಟದಲ್ಲಿರಲಿಲ್ಲ. ಆದರೆ, ಇವತ್ತು ಭಾರಿ ಬೆಲೆ ಬಂದಿದೆ' ಎಂದರು.

'ಸರ್ಕಾರ ಸ್ವಾಧೀನಪಡಿಸಿಕೊಳ್ಳಲು ಹೊರಟಿರುವ ಭೂಮಿಯ ವ್ಯಾಪ್ತಿಯಲ್ಲಿಯೇ ಈಗಲ್‌ಟನ್ ಗಾಲ್ಫ್ ಕ್ಲಬ್ ಇದೆ. ಅದು ಸರ್ಕಾರಿ ಕರಾಬು ಭೂಮಿ ಅತಿಕ್ರಮಿಸಿದೆ ಎಂದು ಆರೋಪಿಸಿ 2018ರಲ್ಲಿ ಚದರ ಅಡಿ ಲೆಕ್ಕದಲ್ಲಿ ದಂಡವನ್ನೂ ವಿಧಿಸಿದ್ದಾರೆ. ಹಿಂದೆ, ಡಿ.ಕೆ. ಶಿವಕುಮಾರ್ ಅವರು ಅಲ್ಲಿಗೆ ಊಟಕ್ಕೆ ಹೋದಾಗ ಅಲ್ಲಿನ ಸಿಬ್ಬಂದಿ ₹98 ಸಾವಿರ ಬಿಲ್ ಕೊಟ್ಟಿದ್ದರು. ನನಗೇ ಬಿಲ್ ಕೊಡುತ್ತೀರಾ ಎಂದು 70 ಎಕರೆ ಕರಾಬು ಭೂಮಿಗೆ ₹984 ಕೋಟಿ ದಂಡ ವಿಧಿಸಿದ್ದರು' ಎಂದು ಆರೋಪಿಸಿದರು.

'ಪ್ರತಿ ಎಕರೆಗೆ ₹13 ಕೋಟಿ ದಂಡ ವಿಧಿಸಬೇಕು ಎಂದು ಸಂಪುಟ ಸಭೆ ತೀರ್ಮಾನಿಸಿತ್ತು. ಅದರಂತೆ ರೈತರಿಗೆ 1:3 ಅನುಪಾತದಲ್ಲಿ ಪರಿಹಾರ ಕೊಟ್ಟುಬಿಡಿ' ಎಂದು ಒತ್ತಾಯಿಸಿದರು.

'ಕನಕಪುರದಲ್ಲಿ ಒಣ ಬೇಸಾಯದ ಭೂಮಿ ಇದೆ. ಅದನ್ನೇ ವಶಕ್ಕೆ ತೆಗೆದುಕೊಂಡು ಟೌನ್‌ಶಿಪ್ ಮಾಡಬಹುದಲ್ಲವೇ? ಬಿಡದಿಯ ಮೇಲೆಯೇ ಯಾಕೆ ಬಿದ್ದಿದ್ದೀರಿ? ಕೃಷಿಗೆ ಉತ್ತಮವಾದ ವಾತಾವರಣವಿರುವ ಕಡೆ ರೈತರನ್ನು ಒಕ್ಕಲೆಬ್ಬಿಸಬೇಡಿ' ಎಂದು ಕುಮಾರಸ್ವಾಮಿ ಅವರು ಹೇಳಿದರು.

'ರೈತರ ಕಾಳಜಿ ಇಲ್ಲದ ದರಿದ್ರ ಸರ್ಕಾರ'

ಎಚ್‌.ಡಿ. ಕುಮಾರಸ್ವಾಮಿ

'ಸ್ವತಂತ್ರ ಸರ್ಕಾರ ಇಲ್ಲದ ವೇಳೆಯೂ ರೈತರ ಉಳಿವಿಗಾಗಿ ಶ್ರಮವಹಿಸಿದ್ದೆ. 136 ಸೀಟಿನ ಸ್ವತಂತ್ರ ಸರ್ಕಾರ, ಇವರಿಗೇನಾಗಿದೆ ದರಿದ್ರ? ರೈತರನ್ನು 7 ದಿನದಿಂದ ರಸ್ತೆಯಲ್ಲಿ ಮಲಗಿಸಬೇಕಿತ್ತಾ? ಕಾಳಜಿ ಇದ್ದಿದ್ದರೆ ಈ ರೀತಿ ಮಾಡುತ್ತಿರಲಿಲ್ಲ' ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಹೇಳಿದರು.

'ಶಾಸಕ ಮೇಟಿಯವರ ಅಂತಿಮ ದರ್ಶನಕ್ಕೆ ಹೋಗಿದ್ದ ಮುಖ್ಯಮಂತ್ರಿಯವರು ಅಲ್ಲೇ ಪಕ್ಕದಲ್ಲೇ ನಡೆಯುತ್ತಿದ್ದ ಪ್ರತಿಭಟನೆ ಜಾಗಕ್ಕೆ ಹೋಗಬಹುದಿತ್ತಲ್ಲವೇ? ಅಹಿಂದಾ ಹೆಸರಲ್ಲಿ ದೊಡ್ಡ ರ‍್ಯಾಲಿ ಮಾಡುವೆ ಎನ್ನುತ್ತಾರೆ. ಅದೆಲ್ಲಾ ಯಾವ ಪುರುಷಾರ್ಥಕ್ಕೆ' ಎಂದು ಪ್ರಶ್ನಿಸಿದರು.

'ರೈತರು ಬೆಲೆ ನಿಗದಿ ಮಾಡಿ ಎಂದರೆ ಕೇಂದ್ರ ಸರ್ಕಾರ ಹಣ ಕೊಡಬೇಕೆನ್ನುತ್ತಾರೆ. ಸಾಲ ಮನ್ನಾ ಮಾಡುವಾಗ ನಾನೇನು ಕೇಂದ್ರ ಸರ್ಕಾರದ ಬಳಿಗೆ ಹೋಗಿದ್ದೆನೆ? ಸರ್ಕಾರದ ನಿರ್ಧಾರ ನೋಡಿ ಮುಂದಿನ ತೀರ್ಮಾನ ಮಾಡುತ್ತೇವೆ. ರೈತರ ಬದುಕಿನ ಜತೆ ಕಾಂಗ್ರೆಸ್ ಸರ್ಕಾರ ಚೆಲ್ಲಾಟ ಆಡುತ್ತಿದೆ' ಎಂದು ಆರೋಪಿಸಿದರು.

ನಗರದಲ್ಲಿ ಇಂದು

ತತ್ವಜ್ಞಾನಿಗಳ ದಿನಾಚರಣೆ ಪ್ರಯುಕ್ತ ಆಚಾರ್ಯತ್ರಯರ ಜಯಂತ್ಯುತ್ಸವ: ಉದ್ಘಾಟನೆ: ಕೃಷ್ಣ ಬೈರೇಗೌಡ, ಅಧ್ಯಕ್ಷತೆ: ದಿನೇಶ್ ಗುಂಡೂರಾವ್, ತರಬೇತಿ ಯೋಜನೆಗೆ ಚಾಲನೆ: ಆರ್.ವಿ. ದೇಶಪಾಂಡೆ, ಅತಿಥಿಗಳು: ವಿಶ್ವಾಸ ವೈದ್ಯ, ಯು.ಬಿ. ವೆಂಕಟೇಶ್, ಎಸ್. ರಘುನಾಥ್, ಅಶೋಕ್ ಹಾರನಹಳ್ಳಿ, ರಾಜೇಂದರ್ ಕುಮಾರ್ ಕಟಾರಿಯಾ, ಆಯೋಜನೆ: ಕರ್ನಾಟಕ ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿ, ಸ್ಥಳ: ಬಬ್ಬೂರುಕಮ್ಮೆ ಸೇವಾ ಸಮಿತಿ ಸಭಾಂಗಣ, ಶೇಷಾದ್ರಿ ರಸ್ತೆ, ಬೆಳಿಗ್ಗೆ 10.30

ಕೈಮಗ್ಗ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟ ಮೇಳ: ಉದ್ಘಾಟನೆ: ಸೌಮ್ಯಾ ರೆಡ್ಡಿ, ಅತಿಥಿ: ಜ್ಯೋತಿ ಕೆ., 'ದಿ ಚರಕ ಸ್ಟೋರಿ' ಬಿಡುಗಡೆ: ಸಾಧನಾ ರಾವ್, ಅಧ್ಯಕ್ಷತೆ: ಮಹಾಲಕ್ಷ್ಮಿ, ಆಯೋಜನೆ: ಚರಕ ಮಹಿಳಾ ವಿವಿಧೋದ್ದೇಶ ಕೈಗಾರಿಕಾ ಸಹಕಾರ ಸಂಘ, ಸ್ಥಳ: ಚಿತ್ರಕಲಾ ಪರಿಷತ್ತು, ಕುಮಾರಕೃಪಾ ರಸ್ತೆ, ಬೆಳಿಗ್ಗೆ 10.30

'ಹಣಕಾಸು ತಂತ್ರಜ್ಞಾನದಲ್ಲಿ ಆವಿಷ್ಕಾರಗಳು ಮತ್ತು ಸವಾಲುಗಳು' ಅಂತರರಾಷ್ಟ್ರೀಯ ಸಮ್ಮೇಳನ: ಅತಿಥಿಗಳು: ಭೀಮರಾಯ ಮೇತ್ರಿ, ಕೆ.ಒ. ರಾಮಮೂರ್ತಿ, ಸುಧಾಕರ್ ಪಾಂಡೆ, ವಿನೀತ್ ಕುಮಾರ್ ಶ್ರೀವಾಸ್ತವ, ಮುಖ್ಯ ಭಾಷಣ: ಜೋಗೇಂದ್ರ ಸಿಂಗ್, ಅಧ್ಯಕ್ಷತೆ: ಸಬಿತಾ ರಾಮಮೂರ್ತಿ, ಆಯೋಜನೆ ಹಾಗೂ ಸ್ಥಳ: ಸಿಎಂಆರ್ ವಿಶ್ವವಿದ್ಯಾಲಯ, ಒಎಂಬಿಆರ್ ಕ್ಯಾಂಪಸ್, ಬೆಳಿಗ್ಗೆ 10.30

ಕನ್ನಡ ಜಾಗೃತಿ ಸಮಿತಿ ಸದಸ್ಯರ ರಾಜ್ಯಮಟ್ಟದ ಕಾರ್ಯಾಗಾರ: ಉದ್ಘಾಟನೆ: ಶಿವರಾಜ ತಂಗಡಗಿ, ಅಧ್ಯಕ್ಷತೆ: ಪುರುಷೋತ್ತಮ ಬಿಳಿಮಲೆ, ಅತಿಥಿ: ಬರಗೂರು ರಾಮಚಂದ್ರಪ್ಪ, ಉಪಸ್ಥಿತಿ: ಸಂತೋಷ ಹಾನಗಲ್, ಆಯೋಜನೆ: ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಸ್ಥಳ: ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಭಾಗಣ, ಕಬ್ಬನ್ ಉದ್ಯಾನ, ಬೆಳಿಗ್ಗೆ 11



ಪುರುಷೋತ್ತಮ ಬಿಳಿಮಲೆ

2ನೇ ರಾಷ್ಟ್ರೀಯ ಸಾಂಸ್ಕೃತಿಕ ಪೈಥಿಯನ್ ಕ್ರೀಡಾಕೂಟ ಉದ್ಘಾಟನೆ: ಡಿ.ಕೆ. ಶಿವಕುಮಾರ್, ಉಪಸ್ಥಿತಿ: ಶಾಂತನು ಅಗ್ರಹಾರಿ, ಆಯೋಜನೆ: ಪೈಥಿಯನ್ ಕೌನ್ಸಿಲ್ ಆಫ್ ಇಂಡಿಯಾ, ಸ್ಥಳ: ಬೇಸ್ ಕ್ಯಾಂಪಸ್, ಬೆಂಗಳೂರು ನಗರ ವಿಶ್ವವಿದ್ಯಾಲಯ, ಬೆಳಿಗ್ಗೆ 11

ನಾಟಕೋತ್ಸವ ಸಮಾರೋಪ ಸಮಾರಂಭ: ಅತಿಥಿಗಳು: ಹೆಲನ್ ಮೈಸೂರು, ನಾಗಲಕ್ಷ್ಮಿ, ಬೇಲೂರು ರಘುನಂದನ್, ದಿನೇಶ್, ಮಾಗಡಿ ಗಿರೀಶ್, ಜೆಪಿಒ ಚಂದ್ರು, ಆಯೋಜನೆ: ರಂಗಪಯಣ, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಮಧ್ಯಾಹ್ನ 3

ರಜತ ಮಹೋತ್ಸವ ಸಮಾರೋಪ ಸಮಾರಂಭ: ಅತಿಥಿ: ಮೋಹನ್ ಭಾಗವತ್, ಪ್ರಾಸ್ತಾವಿಕ: ಶ್ರೀನಾಥ್ ಬೈಸಾನಿ, ಅಧ್ಯಕ್ಷತೆ: ಶಿವಕುಮಾರ್ ಡಿ., ಆಯೋಜನೆ: ನೆಲೆ ಫೌಂಡೇಷನ್, ಸ್ಥಳ: ಆರ್.ವಿ. ಡೆಂಟಲ್ ಕಾಲೇಜು, ಜೆ.ಪಿ. ನಗರ 2ನೇ ಹಂತ, ಸಂಜೆ 4.30

ಹಳಗನ್ನಡ ಕಾವ್ಯ ರಸಗ್ರಹಣ ತರಗತಿಗಳ ಉದ್ಘಾಟನೆ: ಉಪಸ್ಥಿತಿ: ರಾಜಪ್ಪ ದಳವಾಯಿ, ಕೆ.ಆರ್. ಗಣೇಶ್, ಶ್ಯಾಮಲ ಪ್ರಕಾಶ್, ಸುರೇಶ್ ಪಾಟೀಲ, ಚಂದ್ರಶೇಖರ್ ನಾದೂರು, ಎನ್.ಆರ್. ಲಲಿತಾಂಬ, ಶಾಂತರಾಜು, ಬೈರಮಂಗಲ ರಾಮೇಗೌಡ, ಅಧ್ಯಕ್ಷತೆ: ಆರ್. ಲಕ್ಷ್ಮೀನಾರಾಯಣ, ಆಯೋಜನೆ: ಬಿ.ಎಂ.ಶ್ರೀ. ಪ್ರತಿಷ್ಠಾನ, ಸ್ಥಳ: ಎಂ.ವಿ.ಸೀ. ಸಭಾಂಗಣ, ಬಿ.ಎಂ.ಶ್ರೀ. ಕಲಾಭವನ, ಎನ್.ಆರ್. ಕಾಲೊನಿ, ಸಂಜೆ 5

'ಚಿತ್ರಕೂಟೇ ಧರ್ಮವೈಭವಂ' ನೃತ್ಯ ರೂಪಕ ಪ್ರದರ್ಶನ: ನಿರ್ದೇಶನ: ಎಂ.ಆರ್. ಕೃಷ್ಣಮೂರ್ತಿ, ಎ. ಜನಾರ್ದನನ್, ಸಂಗೀತ ಸಂಯೋಜನೆ: ಕೆ. ಹರಿಪ್ರಸಾದ್, ಆಯೋಜನೆ: ಕಲಾಕ್ಷಿತಿ ಕಲಾ ಸಂಸ್ಥೆ, ಸ್ಥಳ: ಜೆ.ಎಸ್.ಎಸ್. ಸಭಾಂಗಣ, ಜಯನಗರ, ಸಂಜೆ 5.30

ರಜತ ಮಹೋತ್ಸವ: ಸಾಕ್ಷ್ಯಚಿತ್ರ ಹಾಗೂ ಕಾಫಿ ಟೇಬಲ್ ಪುಸ್ತಕ ಬಿಡುಗಡೆ: ಉಮಾ ಮಹಾದೇವನ್, ಸಂಸ್ಥೆ ವೆಬ್‌ಸೈಟ್ ಹಾಗೂ ಆ್ಯಪ್ ಜನಾರ್ಪಣೆ: ಜಿ.ವಿಜಯರಾಘವನ್, ಉಪಸ್ಥಿತಿ: ಡಾ.ಪ್ರತಿಭಾ ಕಾರಂತ್, ಆಯೋಜನೆ: ದಿ ಕಾಂ ಡೀಲ್ ಟ್ರಸ್ಟ್ (ಟಿಸಿಡಿಟಿ), ಸ್ಥಳ: ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರ (ಬಿಐಸಿ), ದೊಮ್ಮಲೂರು, ಸಂಜೆ 5.30

ಕೆ.ಕೆ.ಮೂರ್ತಿ ಸ್ಮಾರಕ ಸಂಗೀತೋತ್ಸವ: ಕರ್ನಾಟಕ ಸಂಗೀತ ಗಾಯನ: ಭಾರ್ಗವಿ ವೆಂಕಟರಾಮ್, ಹರಿಕಥೆ: ವಿಶಾಖಾ ಹರಿ, ಆಯೋಜನೆ: ಅಕಾಡೆಮಿ ಆಫ್ ಮ್ಯೂಸಿಕ್, ಸ್ಥಳ: ಚೌಡಯ್ಯ ಸ್ಮಾರಕ ಭವನ, ಮಲ್ಲೇಶ್ವರ, ಸಂಜೆ 6

'ಹೋಮ್‌ಕಮಿಂಗ್' ಪುಸ್ತಕ ಬಿಡುಗಡೆ ಹಾಗೂ ಸಂವಾದ: ಲೇಖಕರು: ನೇಹಾ ಕೃಪಾಲ್, ನಂದಿನಿ ಮುರಳಿ, ಆಯೋಜನೆ: ಇಂಡಿಯಾ ಮೆಂಟಲ್ ಹೆಲ್ತ್ ಅಲೈಯನ್ಸ್, ವೆಸ್ಟ್‌ಲ್ಯಾಂಡ್ ಬುಕ್ಸ್, ಸ್ಥಳ: ಸಮ್ಮೇಳನ ಸಭಾಂಗಣ, ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರ (ಬಿಐಸಿ), ದೊಮ್ಮಲೂರು, ಸಂಜೆ 6.30

ಕಾರ್ತಿಕ ಸಂಗೀತ ಸಂಭ್ರಮ: ಗಾಯನ: ಎಸ್.ಸಿ. ಶರ್ಮ, ಪಿಟೀಲು: ಅನಂತ ಪದ್ಮನಾಭ, ಮೃದಂಗ: ಸಿ. ಚೆಲುವರಾಜ್, ಘಟ: ಎನ್. ಗುರುಮೂರ್ತಿ, ಮೋರ್ಸಿಂಗ್: ಮೇಲುಕೋಟೆ ಶ್ರೀನಿವಾಸ್, ಆಯೋಜನೆ: ನಾದಜ್ಯೋತಿ ಸಂಗೀತ ಸಭಾ ಟ್ರಸ್ಟ್, ಸ್ಥಳ: ಶ್ರೀರಾಮಮಂದಿರ, ಸಂಜೆ 6

'ಶ್ರೀರಾಮ ಚರಿತಾಮೃತಂ' ನೃತ್ಯ ಪ್ರದರ್ಶನ: ತೇಜಸ್ವಿನಿ ಗಾಜನೂರು, ಯಶಸ್ವಿನಿ ಗಾಜನೂರು, ಆಯೋಜನೆ: ಇಂಡಿಯನ್ ಕೌನ್ಸಿಲ್ ಫಾರ್ ಕಲ್ಚರಲ್ ರಿಲೇಷನ್ಸ್, ಸ್ಥಳ: ಭಾರತೀಯ ವಿದ್ಯಾಭವನ, ರೇಸ್‌ಕೋರ್ಸ್ ರಸ್ತೆ, ಸಂಜೆ 6.30

2 ತಿಂಗಳಲ್ಲಿ 25 ಪೊಲೀಸರ ಅಮಾನತು

ಡ್ರಗ್ಸ್ ಪೆಡ್ಲರ್‌ಗಳೊಂದಿಗೆ ನಂಟು, ಹಣ ಸುಲಿಗೆ, ಅತ್ಯಾಚಾರದಂತಹ ಆರೋಪ

• ಆದಿತ್ಯ ಕೆ.ಎ.

ಬೆಂಗಳೂರು: ಆರೋಪಿಗಳ ಪತ್ತೆ, ಅನ್ಯಾಯಕ್ಕೆ ಒಳಗಾದವರಿಗೆ ನ್ಯಾಯ ಕಲ್ಪಿಸುವ ಹಾಗೂ ಕಾನೂನು ಸುವ್ಯವಸ್ಥೆಗೆ ಧಕ್ಕೆಯಾಗದಂತೆ ನೋಡಿಕೊಳ್ಳುವ ಜವಾಬ್ದಾರಿ ಹೊತ್ತಿರುವ ಪೊಲೀಸರೇ ಬೇರೆ ಬೇರೆ ಅಪರಾಧ ಪ್ರಕರಣಗಳಲ್ಲಿ ಸಿಲುಕಿಕೊಂಡು ಅಮಾನತು ಆಗುತ್ತಿರುವುದು ನಗರದಲ್ಲಿ ಕೆಲವು ದಿನಗಳಿಂದ ಹೆಚ್ಚುತ್ತಿದೆ.

ಎರಡು ತಿಂಗಳಲ್ಲಿ ಐವರು ಇನ್‌ಸ್ಪೆಕ್ಟರ್, ಒಬ್ಬ ಪಿಎಸ್‌ಐ, ಮೂವರು ಎಎಸ್‌ಐ, ಇಬ್ಬರು ಹೆಡ್‌ಕಾನ್‌ಸ್ಟೆಬಲ್ ಹಾಗೂ 14 ಮಂದಿ ಕಾನ್‌ಸ್ಟೆಬಲ್‌ಗಳು ಸೇರಿ 25 ಮಂದಿಯನ್ನು ಅಮಾನತುಗೊಳಿಸಿ, ಇಲಾಖಾ ತನಿಖೆಗೆ ಆದೇಶಿಸಲಾಗಿದೆ.

ಡ್ರಗ್ಸ್ ಪೆಡ್ಲರ್‌ಗಳೊಂದಿಗೆ ಶಾಮೀಲಾಗಿ ಪಾರ್ಟಿ ನಡೆಸಿರುವುದು, ದೂರು ನೀಡಲು ಬಂದಿದ್ದ ಯುವತಿಯ ಸ್ನೇಹ ಸಂಪಾದಿಸಿ ಅತ್ಯಾಚಾರ–ಲೈಂಗಿಕ ದೌರ್ಜನ್ಯ ಎಸಗಿರುವ ಹಾಗೂ ಉದ್ಯಮಿಯಿಂದ ಕೋಟ್ಯಂತರ ರೂಪಾಯಿ ಸುಲಿಗೆ ಮಾಡಿರುವುದು, ಪ್ರಕರಣ ದಾಖಲಿಸಲು ಲಂಚ ಪಡೆದುಕೊಂಡಿರುವ ಪ್ರಕರಣವೂ ಸೇರಿ ಹಲವು ಆರೋಪಗಳ ಅಡಿ ಐವರು ಇನ್‌ಸ್ಪೆಕ್ಟರ್‌ಗಳನ್ನು ನಗರ ಪೊಲೀಸ್ ಕಮಿಷನರ್ ಸೀಮಾಂತ್‌ಕುಮಾರ್ ಸಿಂಗ್ ಅಮಾನತು ಮಾಡಿದ್ದಾರೆ.

ಇತರೆ ಅಪರಾಧ ಕೃತ್ಯಗಳಲ್ಲಿ ಭಾಗಿಯಾದ ಆರೋಪದಲ್ಲಿ ಪಿಎಸ್‌ಐ ಹಾಗೂ ಪೊಲೀಸ್ ಕಾನ್‌ಸ್ಟೆಬಲ್‌ಗಳ ವಿರುದ್ಧ ಆಯಾ ವಿಭಾಗದ ಡಿಸಿಪಿಯವರು ಶಿಸ್ತು ಕ್ರಮ ತೆಗೆದುಕೊಂಡಿದ್ದಾರೆ.

ಆರೋಪಿಗಳ ಜತೆಗೆ ಪಾರ್ಟಿ: ಕಾಲೇಜು ವಿದ್ಯಾರ್ಥಿಗಳಿಗೆ 'ಮತ್ತು' ಬರುವ ಮಾತ್ರೆ ಮಾರಾಟ ಮಾಡಿದ್ದ ಆರೋಪದಲ್ಲಿ ನಾಲ್ವರು ಆರೋಪಿಗಳನ್ನು ಬಂಧಿಸಲಾಗಿತ್ತು. ಆರೋಪಿಗಳ ಮೊಬೈಲ್ ವಶಕ್ಕೆ ಪಡೆದು ಪರಿಶೀಲಿಸಿದಾಗ ಪೊಲೀಸರ ಜತೆಗೆ ಆರೋಪಿಗಳು ಸಂಪರ್ಕದಲ್ಲಿ ಇದ್ದದ್ದು, ಹಣಕಾಸು ವಹಿವಾಟು ನಡೆಸಿರುವುದು ಪತ್ತೆಯಾಗಿತ್ತು. ಆರೋಪಿಗಳ ಜತೆಗೆ ಪೊಲೀಸರು ಪಾರ್ಟಿ ಮಾಡಿರುವ ಫೋಟೊಗಳು ಸಹ ಮೊಬೈಲ್‌ನಲ್ಲಿ ಸಿಕ್ಕಿದ್ದವು.

ಆಂತರಿಕ ತನಿಖೆ ನಡೆಸಿದಾಗ ಪೊಲೀಸರು ಆರೋಪಿಗಳ ಜತೆಗೆ ಸ್ನೇಹ ಸಂಪಾದಿಸಿರುವುದು ಗೊತ್ತಾಗಿ, ಚಾಮರಾಜಪೇಟೆ ಠಾಣೆಯ ಇನ್‌ಸ್ಪೆಕ್ಟರ್ ಟಿ.ಮಂಜಣ್ಣ, ಹೆಡ್ ಕಾನ್‌ಸ್ಟೆಬಲ್‌ಗಳಾದ ರಮೇಶ್, ಶಿವರಾಜ್, ಕಾನ್‌ಸ್ಟೆಬಲ್‌ಗಳಾದ ಮಧುಸೂದನ್, ಪ್ರಸನ್ನ, ಶಂಕರ್ ಬೆಳಗಲಿ, ಆನಂದ್, ಜೆ.ಜೆ. ನಗರ ಠಾಣೆಯ ಎಎಸ್‌ಐ ಕುಮಾರ್, ಹೆಡ್‌ಕಾನ್‌ಸ್ಟೆಬಲ್ ಆನಂದ್, ಸಿಬ್ಬಂದಿ ಬಸವನಗೌಡ ಸೇರಿ 11 ಮಂದಿಯನ್ನು ಅಮಾನತು ಮಾಡಲಾಗಿತ್ತು ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಚಿನ್ನಾಭರಣ ಮಾರಾಟಗಾರರಿಂದ ಲಂಚ ತೆಗೆದುಕೊಂಡ ಆರೋಪದಡಿ ಹಲಸೂರು ಗೇಟ್ ಠಾಣೆಯ ಇನ್‌ಸ್ಪೆಕ್ಟರ್ ಹನುಮಂತ ಭಜಂತ್ರಿ, ಎಎಸ್‌ಐ ಹಾಗೂ ಕಾನ್‌ಸ್ಟೆಬಲ್ ಅವರು ಸೆ.23ರಂದು ಅಮಾನತುಗೊಂಡಿದ್ದರು. ಕರ್ತವ್ಯ ಲೋಪ ಆರೋಪದಲ್ಲಿ ಕೋರಮಂಗಲ ಠಾಣೆಯ ಇನ್‌ಸ್ಪೆಕ್ಟರ್ ಲೂಯಿರಾಮ ರೆಡ್ಡಿ ಅವರನ್ನೂ ಅಂದೇ ಅಮಾನತು ಮಾಡಿ ಕಮಿಷನರ್ ಆದೇಶಿಸಿದ್ದರು.

ಅತ್ಯಾಚಾರ ಹಾಗೂ ಲೈಂಗಿಕ ದೌರ್ಜನ್ಯ ಆರೋಪದಲ್ಲಿ ದೇವರಜೀವನಹಳ್ಳಿ (ಡಿ.ಜೆ ಹಳ್ಳಿ) ಪೊಲೀಸ್ ಠಾಣೆಯ ಇನ್‌ಸ್ಪೆಕ್ಟರ್ ಸುನಿಲ್ ಮತ್ತು ಸಹಾಯಕ ಸಬ್ ಇನ್‌ಸ್ಪೆಕ್ಟರ್ ಪ್ರಕಾಶ್ ಅವರ ವಿರುದ್ಧ ಅಕ್ಟೋಬರ್ 27ರಂದು ಕ್ರಮ ತೆಗೆದುಕೊಳ್ಳಲಾಗಿದೆ.

'ಮದುವೆ ಆಗುವುದಾಗಿ ಸುನಿಲ್ ಅವರು ನಂಬಿಸಿ ಲೈಂಗಿಕ ದೌರ್ಜನ್ಯ ಎಸಗಿದ್ದರು. ಫೋಟೊ ಹಾಗೂ ವಿಡಿಯೊ ಇಟ್ಟುಕೊಂಡು ಹೆದರಿಸುತ್ತಿದ್ದಾರೆ. ವಿಷಯ ಬಹಿರಂಗ ಪಡಿಸಿದರೆ ಕೊಲೆ ಮಾಡುವುದಾಗಿ ಬೆದರಿಕೆ ಹಾಕುತ್ತಿದ್ದಾರೆ' ಎಂದು ಆರೋಪಿಸಿ, ಮಹಿಳೆ ದೂರು ನೀಡಿದ್ದರು. ದೂರು ಆಧರಿಸಿ ಇನ್‌ಸ್ಪೆಕ್ಟರ್ ಹಾಗೂ ಎಎಸ್‌ಐ ವಿರುದ್ಧ ಗೋವಿಂದಪುರ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿತ್ತು.

ಯುವತಿಯ ಮರಣೋತ್ತರ ಪರೀಕ್ಷೆ ಮಾಡಿಸಲು ಲಂಚ ಪಡೆದಿದ್ದ ಆರೋಪದಲ್ಲಿ ಬೆಳ್ಳಂದೂರು ಠಾಣೆ ಇನ್‌ಸ್ಪೆಕ್ಟರ್ ರಮೇಶ್ ರೊಟ್ಟಿ, ಪಿಎಸ್‌ಐ ಸಂತೋಷ್, ಕಾನ್‌ಸ್ಟೆಬಲ್ ಗೋರಕ್ ನಾಥ್ ಅವರು ಮೂರು ದಿನಗಳ ಹಿಂದಷ್ಟೇ ಅಮಾನತುಗೊಂಡಿದ್ದಾರೆ.

ಕಳ್ಳತನ ಪ್ರಕರಣದಲ್ಲಿ ಮಹಿಳೆಯನ್ನು ಠಾಣೆಗೆ ಕರೆದೊಯ್ದು ಹಲ್ಲೆ ನಡೆಸಿದ್ದ ಪ್ರಕರಣದಲ್ಲಿ ವರ್ತೂರು ಪೊಲೀಸ್ ಠಾಣೆಯ ಅಪರಾಧ ವಿಭಾಗದ ಸಂಜಯ್ ರಾಥೋಡ್, ಸಂತೋಷ್ ಕುದ್ರಿ ಹಾಗೂ ಅರ್ಚನಾ ಅವರ ವಿರುದ್ಧ ಸೆ.4ರಂದು ಶಿಸ್ತು ಕ್ರಮ ತೆಗೆದುಕೊಳ್ಳಲಾಗಿದೆ. ಎನ್‌ಸಿಆರ್ ದಾಖಲಿಸಿಕೊಂಡು ಠಾಣೆಯಿಂದ ಹೊರಹೋಗಿ ಲೋಪ ಎಸಗಿದ್ದ ಪಿಎಸ್‌ಐ ಮೌನೇಶ್ ದೊಡ್ಡಮನಿ ಅವರ ವಿರುದ್ಧವೂ ರೂಲ್ಸ್ 7 ಜಾರಿ ಮಾಡಲಾಗಿದೆ ಎಂದು ಮೂಲಗಳು ಹೇಳಿವೆ.

ರಿಯಲ್ ಎಸ್ಟೇಟ್: ಪೊಲೀಸರ ಮಧ್ಯಸ್ಥಿಕೆ

ನಗರದಲ್ಲಿ ರಿಯಲ್ ಎಸ್ಟೇಟ್ ಚಟುವಟಿಕೆಗಳು ಏರುಗತಿಯಲ್ಲಿವೆ. ಅದೇ ರೀತಿ ಸಿವಿಲ್ ವ್ಯಾಜ್ಯಗಳೂ ಹೆಚ್ಚುತ್ತಿವೆ. ಈ ಪ್ರಕರಣಗಳಲ್ಲಿ ಪೊಲೀಸರು ಮಧ್ಯಸ್ಥಿಕೆ ವಹಿಸುತ್ತಿರುವುದು ಕಂಡುಬಂದಿದೆ ಎಂದು ಮೂಲಗಳು ಹೇಳಿವೆ.

'ಸಿವಿಲ್ ಸ್ವರೂಪದ ವ್ಯಾಜ್ಯಗಳು ಠಾಣೆಗೆ ಬಂದಾಗ ರಾಜ್ಯದ ಎಲ್ಲ ಪೊಲೀಸ್ ಅಧಿಕಾರಿಗಳು ಅನುಸರಿಸಬೇಕಾದ ಮಾರ್ಗಸೂಚಿ ಕುರಿತು ರಾಜ್ಯ ಪೊಲೀಸ್ ಮಹಾನಿರ್ದೇಶಕ ಎಂ.ಎ.ಸಲೀಂ ಅವರು ಈಚೆಗೆ ಸುತ್ತೋಲೆ ಹೊರಡಿಸಿದ್ದರು. ಆದರೆ, ಪೊಲೀಸರು ಮಾರ್ಗಸೂಚಿ ಪಾಲನೆ ಮಾಡುತ್ತಿಲ್ಲ' ಎಂಬ ಆರೋಪವಿದೆ.

ಅಂಕಿ ಅಂಶಗಳು

11 ಒಟ್ಟು ವಿಭಾಗಗಳು

130 ಕಾನೂನು ಸುವ್ಯವಸ್ಥೆ ಠಾಣೆಗಳು

ಪೊಲೀಸ್ ಅಧಿಕಾರಿ ಹಾಗೂ ಸಿಬ್ಬಂದಿಯದ್ದು ತಪ್ಪು ಎಂಬುದು ಸಾಬೀತಾದಾದರೆ ಅವರ ವಿರುದ್ಧ ಕ್ರಮ ತೆಗೆದುಕೊಂಡು ಇಲಾಖಾ ತನಿಖೆಗೆ ಆದೇಶಿಸಲಾಗುತ್ತಿದೆ

ಸೀಮಾಂತ್‌ಕುಮಾರ್ ಸಿಂಗ್, ಪೊಲೀಸ್ ಕಮಿಷನರ್, ಬೆಂಗಳೂರು

ಕಳ್ಳನಿಗೆ ಆಶ್ರಯ ನೀಡಿದ್ದ ಪೊಲೀಸ್

ಕುಖ್ಯಾತ ಕಳ್ಳ ಬಾಂಬೆ ಸಲೀಂಗೆ ತನ್ನ ಮನೆಯಲ್ಲಿ ಆಶ್ರಯ ನೀಡಿದ್ದ ಗೋವಿಂದಪುರ ಠಾಣೆಯ ಕಾನ್‌ಸ್ಟೆಬಲ್ ಎಚ್.ಆರ್. ಸೋನಾರ ಅವರನ್ನು ಕೆಲವು ದಿನಗಳ ಹಿಂದೆ ಅಮಾನತು ಮಾಡಲಾಗಿತ್ತು. ಅಂಗವಿಕಲ ವ್ಯಕ್ತಿಯಿಂದ ₹37 ಸಾವಿರ ಸುಲಿಗೆ ಮಾಡಿದ್ದ ಆರೋಪದಲ್ಲಿ ಇಂದಿರಾನಗರ ಠಾಣೆಯ ಹೆಡ್ ಕಾನ್‌ಸ್ಟೆಬಲ್ ಶರಣ ಬಸಪ್ಪ ಪೂಜಾರಿ ಮತ್ತು ಕಾನ್‌ಸ್ಟೆಬಲ್ ಪರಮೇಶ್ವರ ನಾಯಕ್ ಅವರೂ ಅಮಾನತು ಆಗಿದ್ದರು.

ಗ್ರಾ.ಪಂ. ಸದಸ್ಯನ ಮೇಲೆ ಗುಂಡಿನ ದಾಳಿ: ನಾಲ್ವರ ಸೆರೆ

ಪ್ರಜಾವಾಣಿ ವಾರ್ತೆ

ನೆಲಮಂಗಲ: ತಾಲ್ಲೂಕಿನ ಕಣೇಗೌಡನಹಳ್ಳಿ ಗ್ರಾಮ ಪಂಚಾಯಿತಿ ಸದಸ್ಯ ಸಲೀಂ ಪಾಷಾ ಅವರ ಮೇಲೆ ಗುಂಡಿನ ದಾಳಿ ನಡೆಸಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ನಾಲ್ವರನ್ನು ನೆಲಮಂಗಲ ಗ್ರಾಮಾಂತರ ಪೊಲೀಸರು ಬಂಧಿಸಿದ್ದಾರೆ.

ಸಾದಿಕ್

ಮುಬಾರಕ್

ಮುಬಾರಕ್ (36), ಸಾದಿಕ್(29), ಆಸೀಫ್‌ಖಾನ್(34) ಹಾಗೂ ನಗೀನಾ ಬಂಧಿತರು.

ಮುಂಬರುವ ಗ್ರಾಮ ಪಂಚಾಯಿತಿ ಚುನಾವಣೆಯಲ್ಲಿ ಸಲೀಂ ಪಾಷಾ ಸ್ಪರ್ಧೆಯನ್ನು ತಡೆಯಲು ಕೊಲೆ ಸಂಚು ರೂಪಿಸಲಾಗಿತ್ತು ಎನ್ನುವುದು ಪೊಲೀಸ್ ತನಿಖೆ ವೇಳೆ ಬಯಲಾಗಿದೆ.

ಆರೋಪಿಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲಾಗಿದ್ದು, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ತಲೆಮರೆಸಿಕೊಂಡಿರುವ ಇತರ ಆರೋಪಿಗಳ ಪತ್ತೆಗೆ ಶೋಧ ನಡೆಯುತ್ತಿದೆ ಎಂದು ಪೊಲೀಸರು ತಿಳಿಸಿದರು.

ಸಲೀಂ ಪಾಷಾ ಅವರನ್ನು ಮನೆಯ ಬಳಿ ಮಾತನಾಡಿಸುವ ನೆಪದಲ್ಲಿ ಅಪರಿಚಿತರು ಗುಂಡು ಹಾರಿಸಿ ಪರಾರಿಯಾಗಿದ್ದರು. ಸಲೀಂ ಅವರ ಕೈಗೆ ಗುಂಡು ತಗುಲಿತ್ತು. ಅವರು ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಪೊಲೀಸ್ ಮೇಲೆ ಹಲ್ಲೆ ರೌಡಿಶೀಟರ್ ಸೇರಿ ನಾಲ್ವರ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೊಲೀಸರ ಮೇಲೆ ಹಲ್ಲೆ ನಡೆಸಿದ್ದ ಎರಡು ಪ್ರತ್ಯೇಕ ಪ್ರಕರಣಗಳಲ್ಲಿ ರೌಡಿಶೀಟರ್ ಸೇರಿ ನಾಲ್ವರು ಆರೋಪಿಗಳನ್ನು ತಿಲಕನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ರೌಡಿಶೀಟರ್ ಶಾಜದ್ ಪಾಷಾ (25), ಈತನ ಸಹಚರರಾದ ಅನೀಸ್ ಪಾಷ, ಯಾಸೀನ್ ಅಹ್ಮದ್ ಶರೀಫ್ ಬಂಧಿತರು.

ಹಲವು ಪ್ರಕರಣಗಳಲ್ಲಿ ಭಾಗಿಯಾಗಿದ್ದ ಆರೋಪಿಗಳ ವಿರುದ್ಧ ನ್ಯಾಯಾಲಯ ಬಂಧನದ ವಾರಂಟ್ ಹೊರಡಿಸಿತ್ತು. ಆರೋಪಿಗಳು ತಿಲಕನಗರದ ಕೃಷ್ಣಪ್ಪ ಗಾರ್ಡನ್‌ನಲ್ಲಿ ಇರುವ ಮಾಹಿತಿ ಸಂಗ್ರಹಿಸಿದ್ದ ಕಲಾಸಿಪಾಳ್ಯ ಠಾಣೆಯ ಹೆಡ್ ಕಾನ್‌ಸ್ಟೆಬಲ್‌ಗಳಾದ ಶಶಿಧರ್ ಮೊಕಾಶಿ, ಹರೀಶ್, ವೈ.ಬಿ. ರಂಗನಾಥ್ ಹಾಗೂ ಕಾನ್‌ಸ್ಟೆಬಲ್ ಮೌನೇಶ್ ಸ್ಥಳಕ್ಕೆ ತೆರಳಿದ್ದರು. ಆ ಸಂದರ್ಭದಲ್ಲಿ ಪೊಲೀಸರ ಮೇಲೆ ಆರೋಪಿಗಳು ಹಲ್ಲೆ ನಡೆಸಿದ್ದರು ಎಂದು ಮೂಲಗಳು ಹೇಳಿವೆ.

ಮತ್ತೊಂದು ಪ್ರಕರಣದಲ್ಲಿ ಜಯನಗರ ಸಂಚಾರ ಠಾಣೆಯ ಸಿಬ್ಬಂದಿ ಉಮಾಶಂಕರ್ ಮೇಲೆ ಹಲ್ಲೆ ನಡೆಸಿದ ಆರೋಪಿಯನ್ನು ತಿಲಕನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ತಿಲಕನಗರ ನಿವಾಸಿ ಪ್ರವೀಣ್(34) ಬಂಧಿತ ಆರೋಪಿ. ಆರೋಪಿ ನ.5ರಂದು ಜಯನಗರ ಸಂಚಾರ ಠಾಣೆಯ ಹೆಡ್‌ಕಾನ್‌ಸ್ಟೆಬಲ್ ಉಮಾಶಂಕರ್ ಮೇಲೆ ಹಲ್ಲೆ ನಡೆಸಿದ್ದ. ಈ ಸಂಬಂಧ ಅವರು ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ಆರೋಪಿಯನ್ನು ಬಂಧಿಸಲಾಗಿದೆ ಎಂದು ಪೊಲೀಸರು ಮಾಹಿತಿ ನೀಡಿದರು.

ಪತ್ನಿಯ ಖಾಸಗಿ ಫೋಟೊ ಜಾಲತಾಣದಲ್ಲಿ ಅಪ್‌ಲೋಡ್: ಪತಿ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪತ್ನಿಯ ಖಾಸಗಿ ಫೋಟೊಗಳನ್ನು ಸಾಮಾಜಿಕ ಜಾಲತಾಣದಲ್ಲಿ ಅಪ್‌ಲೋಡ್ ಮಾಡುತ್ತಿದ್ದ ಪತಿಯನ್ನು ಅಮೃತಹಳ್ಳಿ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಗೋವಿಂದ ರಾಜ್(27) ಬಂಧಿತ ಆರೋಪಿ. 'ನಿತ್ಯ ಮದ್ಯ ಸೇವಿಸಿ ಮನೆಗೆ ಬಂದು ಪತ್ನಿಯ ಜತೆಗೆ ಗೋವಿಂದರಾಜು ಅವರು ಗಲಾಟೆ ಮಾಡುತ್ತಿದ್ದುದರಿಂದ ಬೇಸತ್ತಿದ್ದ ಪತ್ನಿ ವಿಚ್ಛೇದನ ಕೋರಿದ್ದರು. ಇದರಿಂದ ಸಿಟ್ಟಿಗೆದ್ದ ಗೋವಿಂದರಾಜು ಪತ್ನಿಯ ಖಾಸಗಿ ಫೋಟೊಗಳನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಹಾಕಿದ್ದರು' ಎಂದು ಪೊಲೀಸರು ತಿಳಿಸಿದ್ದಾರೆ.

'ಆರೋಪಿಗೆ ಆನ್‌ಲೈನಲ್ಲಿ ಬೆಟ್ಟಿಂಗ್ ಆಡುವ ಹಾಗೂ ವಿಪರೀತ ಮದ್ಯ ಸೇವನೆ ಅಭ್ಯಾಸವಿತ್ತು. ದಂಪತಿ ಮಧ್ಯೆ ನಿತ್ಯ ಜಗಳ ನಡೆಯುತ್ತಿತ್ತು. ಪತ್ನಿಗೆ ಮಾನಸಿಕ ಕಿರುಕುಳ ನೀಡುತ್ತಿದ್ದರು' ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಚಿಟಿಕೆ ಸುದ್ದಿ

ಶಾಸ್ತ್ರ ಹೇಳುವ ನೆಪದಲ್ಲಿ ₹5 ಲಕ್ಷ ದೋಚಿ ಪರಾರಿ

ಹೊಸಕೋಟೆ: ಇಲ್ಲಿನ ಪೊಲೀಸ್ ಠಾಣಾ ವ್ಯಾಪ್ತಿಯ ಚನ್ನಬೈರೇಗೌಡ ನಗರದಲ್ಲಿ ಗುರುವಾರ ಬೆಳಗ್ಗೆ ಶಾಸ್ತ್ರ ಹೇಳುವ ನೆಪದಲ್ಲಿ ಬಂದ ಬುಡುಬುಡಿಕೆ ದಾಸಯ್ಯ ವೇಷಾಧಾರಿ ₹5 ಲಕ್ಷ ನಗದು ಹಾಗೂ 20 ಗ್ರಾಂ ಚಿನ್ನ ದೋಚಿ ಪರಾರಿಯಾಗಿದ್ದಾರೆ.

ಈ ಸಂಬಂಧ ಸೂಲಿಬೆಲೆ ಪೊಲೀಸ್ ಠಾಣೆಯಲ್ಲಿ ದಾಖಲಾಗಿದೆ. ಸೂಲಿಬೆಲೆ ನಿವಾಸಿ ಲೀಲಾವತಿ ಎಂಬುವವರು ಚಿನ್ನ ಕಳೆದುಕೊಂಡವರು. ಗುರುವಾರ ಬೆಳಗ್ಗೆ ಬುಡುಬುಡುಕೆ ದಾಸಯ್ಯನ ಬಳಿ ಶಾಸ್ತ್ರ ಕೇಳುವ ಸಮಯದಲ್ಲಿ ಇಬ್ಬರು ಮಕ್ಕಳು ಹಾಗೂ ಲೀಲಾವತಿ ಮನೆಯಲ್ಲಿ ಇದ್ದರು. ಬುಡುಬುಡುಕೆ ದಾಸಯ್ಯ ಶಾಸ್ತ್ರ ಹೇಳಲು ಹಣ ಕೇಳಿದಾಗ ಪಕ್ಕದ ಮನೆಯವರಿಗೆ ಹಣ ಕೇಳಲು ಫೋನ್ ಮಾಡಿದ ಸಮಯದಲ್ಲಿ ಮನೆಯ ಬೀರುವಿನಲ್ಲಿ ₹5 ಲಕ್ಷ ಹಣ, 20 ಗ್ರಾಂ ಚಿನ್ನವನ್ನು ಹಾಡು ಹಗಲೇ ದೋಚಿ ಪರಾರಿಯಾಗಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಸೂಲಿಬೆಲೆ ಪೊಲಿಸರು ಸ್ಥಳ ಪರಿಶೀಲನೆ ನೆಡೆಸಿ ದೂರು ದಾಖಲಿಸಿಕೊಂಡು ತನಿಖೆ ನಡೆಸುತ್ತಿರುವುದಾಗಿ ತಿಳಿಸಿದ್ದಾರೆ.

₹70 ಕೋಟಿ ದುರ್ಬಳಕೆ ಸಿಐಡಿ ತನಿಖೆ ಸಾಧ್ಯತೆ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ರಾಜಾರಾಮ್ ಮೋಹನರಾಯ್ ರಸ್ತೆಯಲ್ಲಿ ಇರುವ ಉದ್ಯೋಗಿಗಳ ಭವಿಷ್ಯ ನಿಧಿ ಸಂಸ್ಥೆಯ (ಇಪಿಎಫ್‌ಒ) ಸ್ಟಾಫ್ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿಯಲ್ಲಿ ನಡೆದಿರುವ ₹70 ಕೋಟಿ ದುರ್ಬಳಕೆ ಪ್ರಕರಣದ ತನಿಖೆಯನ್ನು ಸಿಐಡಿಗೆ ಹಸ್ತಾಂತರಿಸುವ ಸಾಧ್ಯತೆಯಿದೆ.

ಸೊಸೈಟಿ ಅಧ್ಯಕ್ಷ ಸಿ.ಜೆ. ಮುರುಳೀಧರ್ ನೀಡಿದ ದೂರಿನ ಮೇರೆಗೆ ಅ.31ರಂದು ಕಬ್ಬನ್‌ಪಾರ್ಕ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಸೊಸೈಟಿಯ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ (ಸಿಇಒ) ಗೋಪಿನಾಥ್ ಹಾಗೂ ಸಿಬ್ಬಂದಿ ಲಕ್ಷ್ಮೀ ಅವರನ್ನು ಬಂಧಿಸಿದ್ದ ಪೊಲೀಸರು, ಆರೋಪಿಗಳ ಮನೆ ಮೇಲೆ ದಾಳಿ ನಡೆಸಿ ಚಿನ್ನಾಭರಣ, ಆಸ್ತಿ ಖರೀದಿಗೆ ಸಂಬಂಧಿಸಿದ ದಾಖಲೆಗಳು, ಕಾರು, ದ್ವಿಚಕ್ರ ವಾಹನಗಳನ್ನು ಜಪ್ತಿ ಮಾಡಿಕೊಂಡಿದ್ದರು.

'ದೊಡ್ಡ ಮೊತ್ತದ ಹಣ ದುರುಪಯೋಗ ಆಗಿರುವುದು ಪತ್ತೆ ಯಾಗಿರುವ ಕಾರಣಕ್ಕೆ ಪ್ರಕರಣವನ್ನು ಸಿಐಡಿಗೆ ಹಸ್ತಾಂತರ ಮಾಡಲಾಗುವುದು. ಅಧಿಕೃತ ಆದೇಶವಾದ ಬಳಿಕ ಕಡತಗಳನ್ನು ಸಿಐಡಿಗೆ ಹಸ್ತಾಂತರ ಮಾಡಲಾಗುವುದು' ಎಂದು ಪೊಲೀಸ್ ಮೂಲಗಳು ಹೇಳಿವೆ.

ತಲೆಮರೆಸಿಕೊಂಡಿರುವ ಲೆಕ್ಕಾಧಿಕಾರಿ ಬಿ.ಎಲ್. ಜಗದೀಶ್ ಇನ್ನೂ ಪತ್ತೆಯಾಗಿಲ್ಲ. ಹೂಡಿಕೆದಾರರ ಹಣವನ್ನು ನಿಶ್ಚಿತ ಠೇವಣಿ ರೂಪದಲ್ಲಿ ಇಡಲಾಗಿತ್ತು.

ಅದರಿಂದ ₹60 ಕೋಟಿಗೂ ಹೆಚ್ಚು ಹಣವನ್ನು ಆರೋಪಿಗಳು ಬಿಡಿಸಿ ಕೊಂಡು ದುರುಪಯೋಗ ಮಾಡಿಕೊಂಡಿರುವುದು ತನಿಖೆಯಿಂದ ಪತ್ತೆಯಾಗಿದೆ. ಚಾಲ್ತಿ ಖಾತೆಯಲ್ಲಿದ್ದ ಹಣ ಮಾತ್ರ ಉಳಿದಿದೆ' ಎಂದು ಮೂಲಗಳು ಹೇಳಿವೆ.

ನಗರದ ಏಳು ಶಾಲೆಗಳಿಗೆ ಸಂದೇಶ ಕಳುಹಿಸಿದ್ದ ಯುವತಿಯ ಬಂಧನ

ಪ್ರಿಯಕರನ ವಿರುದ್ಧ ಸೇಡಿಗಾಗಿ ಬಾಂಬ್ ಬೆದರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಿಯಕರನ ವಿರುದ್ಧ ಸೇಡು ತೀರಿಸಿಕೊಳ್ಳಲು ನಗರದ ಏಳು ಶಾಲೆಗಳಿಗೆ ಇ–ಮೇಲ್ ಮೂಲಕ ಬಾಂಬ್ ಬೆದರಿಕೆ ಸಂದೇಶ ಕಳುಹಿಸಿದ್ದ ಯುವತಿಯನ್ನು ಉತ್ತರ ವಿಭಾಗದ ಸೈಬರ್ ಅಪರಾಧ ಠಾಣೆಯ ಪೊಲೀಸರು ಗುರುವಾರ ಬಂಧಿಸಿದ್ದಾರೆ.

ರೆನೆ ಜೋಶಿಲ್ಡಾ

ತಮಿಳುನಾಡಿನ ರೆನೆ ಜೋಶಿಲ್ಡಾ(30) ಬಂಧಿತೆ.

ಆರೋಪಿಯ ವಿರುದ್ಧ ನಗರದ ವಿವಿಧ ಠಾಣೆಗಳಲ್ಲಿ 7 ಪ್ರಕರಣಗಳು ಹಾಗೂ ಗುಜರಾತ್, ತಮಿಳುನಾಡು, ಹರಿಯಾಣ, ಪಂಜಾಬ್ ಸೇರಿದಂತೆ ವಿವಿಧ ರಾಜ್ಯಗಳಲ್ಲಿ 40ಕ್ಕಿಂತ ಹೆಚ್ಚು ಪ್ರಕರಣಗಳು ದಾಖಲಾಗಿವೆ ಎಂಬುದು ತನಿಖೆಯಿಂದ ಗೊತ್ತಾಗಿದೆ.

'ಹುಸಿ ಬಾಂಬ್ ಸಂದೇಶ ಕಳುಹಿಸಿದ್ದ ಪ್ರಕರಣದಲ್ಲಿ ಕೆಲವು ತಿಂಗಳ ಹಿಂದೆ ಅಹಮದಾಬಾದ್ ಪೊಲೀಸರು ರೆನೆ ಅವರನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದರು. ಗುಜರಾತ್‌ನ ಅಹಮದಾಬಾದ್‌ನ ಕೇಂದ್ರ ಕಾರಾಗೃಹದಿಂದ ಬಾಡಿ ವಾರಂಟ್ ಮೇಲೆ ವಶಕ್ಕೆ ಪಡೆದುಕೊಂಡು ವಿಚಾರಣೆ ನಡೆಸಲಾಯಿತು. ವಿಚಾರಣೆ ವೇಳೆ ಪ್ರಿಯಕರನ ವಿರುದ್ಧ ಸೇಡು ತೀರಿಸಿಕೊಳ್ಳಲು ಕೃತ್ಯ ಎಸಗಿರುವುದಾಗಿ ಒಪ್ಪಿಕೊಂಡಿದ್ದಾರೆ' ಎಂದು ಪೊಲೀಸರು ಹೇಳಿದರು.

ತಮಿಳುನಾಡು ಮೂಲದ ರೆನೆ ಅವರು ಎಲೆಕ್ಟ್ರಿಕಲ್ ವಿಷಯದಲ್ಲಿ ಬಿ.ಇ ಪದವಿ ಪಡೆದಿದ್ದು, ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

ಜೂನ್ 14ರಂದು ಕಲಾಸಿಪಾಳ್ಯ ಪೊಲೀಸ್ ಠಾಣಾ ವ್ಯಾಪ್ತಿಯ ಖಾಸಗಿ ಶಾಲೆಯೊಂದಕ್ಕೆ ಬಾಂಬ್ ಬೆದರಿಕೆಯ ಇ–ಮೇಲ್ ಸಂದೇಶ ಬಂದಿತ್ತು. ಅದಾದ ಮೇಲೂ ಉತ್ತರ ವಿಭಾಗದ ವಿವಿಧ ಆರು ಶಾಲೆಗಳಿಗೆ ಹುಸಿ ಬಾಂಬ್ ಸಂದೇಶಗಳು ಬಂದಿದ್ದವು. ಇದರಿಂದ ಆತಂಕದ ವಾತಾವರಣ ನಿರ್ಮಾಣವಾಗಿತ್ತು.

ಮಾಹಿತಿ ತಿಳಿದು ಸ್ಥಳಕ್ಕೆ ತೆರಳಿದ್ದ ಬಾಂಬ್ ನಿಷ್ಕ್ರಿಯ ದಳ ಹಾಗೂ ಬಾಂಬ್ ಪತ್ತೆದಳ ಸಿಬ್ಬಂದಿ ಪರಿಶೀಲನೆ ನಡೆಸಿದ್ದರು. ಶಾಲಾ ಆವರಣದಲ್ಲಿ ಪರಿಶೀಲನೆ ನಡೆಸಿದ್ದರು. ಯಾವುದೇ ಸ್ಫೋಟಕ ವಸ್ತುಗಳು ಪತ್ತೆ ಆಗಿರಲಿಲ್ಲ. ಪ್ರಕರಣ ದಾಖಲಿಸಿಕೊಂಡಿದ್ದ ಪೊಲೀಸರು ತನಿಖೆ ಆರಂಭಿಸಿದ್ದರು. ಕೆಲವು ತಾಂತ್ರಿಕ ಸಾಕ್ಷ್ಯಾಧಾರ ಆಧರಿಸಿ ತನಿಖೆ ನಡೆಸಿದಾಗ ಆರೋಪಿಯ ಸುಳಿವು ಲಭಿಸಿತ್ತು ಎಂದು ಮೂಲಗಳು ಹೇಳಿವೆ.

ಪ್ರಿಯಕರನನ್ನು ಸಿಲುಕಿಸಲು ಪ್ರಯತ್ನ: 'ರೆನೆ ಅವರು ಬೆಂಗಳೂರು ಮೂಲದ ಯುವಕನನ್ನು ಪ್ರೀತಿಸಿದ್ದರು. ರೆನೆ ಪ್ರೀತಿಯನ್ನು ಯುವಕ ನಿರಾಕರಿಸಿದ್ದರು. ಕಳೆದ ಫೆಬ್ರುವರಿಯಲ್ಲಿ ಬೇರೆ ಯುವತಿಯ ಜತೆಗೆ ಮದುವೆ ಮಾಡಿಕೊಂಡಿದ್ದರು. ಈ ಬೆಳವಣಿಗೆಯಿಂದ ಅಸಮಾಧಾನಗೊಂಡಿದ್ದ ಆರೋಪಿ, ಪ್ರಿಯಕರನ ವ್ಯಕ್ತಿತ್ವಕ್ಕೆ ಮಸಿ ಬಳಿಯಲು ಯೋಜಿಸಿದ್ದರು. ಯಾವುದಾದರೂ ಪ್ರಕರಣದಲ್ಲಿ ಸಿಲುಕಿಸಲು ಸಂಚು ರೂಪಿಸಿದ್ದರು' ಎಂದು ಮೂಲಗಳು ಹೇಳಿವೆ.

ಜ್ಯೋತಿಷಿ ಹೇಳಿದಂತೆ ಕೃತ್ಯ: 'ಪತ್ನಿಯಿಂದ ಪ್ರಿಯಕರನನ್ನು ದೂರ ಮಾಡಿದರೆ ಮತ್ತೆ ನಿಮ್ಮನ್ನು ಪ್ರೀತಿಸುತ್ತಾನೆ ಎಂದು ಜ್ಯೋತಿಷಿಯೊಬ್ಬರು ಹೇಳಿದ್ದರು. ಬಳಿಕ ಪ್ರಿಯತಮನ ಹೆಸರಿನಲ್ಲಿ ಇ–ಮೇಲ್ ಖಾತೆ ಸೃಷ್ಟಿಸಿ, ದೇಶದೆಲ್ಲೆಡೆ ಹುಸಿ ಬಾಂಬ್ ಸಂದೇಶ ಕಳುಹಿಸುತ್ತಿದ್ದರು. ಶಾಲೆಯನ್ನು ಉಡಾಯಿಸುವುದಾಗಿ ಸಂದೇಶದಲ್ಲಿ ಉಲ್ಲೇಖಿಸುತ್ತಿದ್ದರು' ಎಂದು ಪೊಲೀಸರು ಹೇಳಿದರು.

ಆರೋಪಿ ವೈಯಕ್ತಿಕ ಕಾರಣಕ್ಕೆ ಈ ರೀತಿಯ ಕೃತ್ಯ ಎಸಗಿರುವುದು ತನಿಖೆಯಿಂದ ಗೊತ್ತಾಗಿದೆ. ನಗರದಲ್ಲಿ ದಾಖಲಾದ ಪ್ರಕರಣಗಳಲ್ಲಿ ರೆನೆ ಜೋಶಿಲ್ಡಾ ಅವರು ಏಳು ಪ್ರಕರಣದಲ್ಲಿ ಭಾಗಿ ಆಗಿರುವುದು ಪತ್ತೆಯಾಗಿದೆ.

ಸೀಮಾಂತ್‌ಕುಮಾರ್ ಸಿಂಗ್, ನಗರ ಪೊಲೀಸ್ ಕಮಿಷನರ್

ವಿಶೇಷ ತಂಡದಿಂದ ತನಿಖೆ

ನಗರ ಪೊಲೀಸ್ ಕಮಿಷನರ್ ಸೀಮಾಂತ್‌ಕುಮಾರ್ ಸಿಂಗ್ ಅವರು ಉತ್ತರ ವಿಭಾಗದ ಸೈಬರ್ ಠಾಣೆಗೆ ವರ್ಗಾಯಿಸಿದ್ದರು. ಉತ್ತರ ವಿಭಾಗದ ಡಿಸಿಪಿ ನೇಮಗೌಡ ಅವರ ಮಾರ್ಗದರ್ಶನದಲ್ಲಿ ತನಿಖಾಧಿಕಾರಿಯಾಗಿ ಎಸಿಪಿ ಪವನ್ ಅವರನ್ನು ನೇಮಿಸಲಾಗಿತ್ತು. ಇನ್‌ಸ್ಪೆಕ್ಟರ್ ಮಂಜು ನೇತೃತ್ವದ ತಂಡವು ತಾಂತ್ರಿಕ ಆಯಾಮದಲ್ಲಿ ತನಿಖೆ ನಡೆಸಿ ಆರೋಪಿಯನ್ನು ಪತ್ತೆಹಚ್ಚಿದೆ.

11 ರಾಜ್ಯಗಳ ಶಾಲಾ, ಕಾಲೇಜಿಗೆ ಸಂದೇಶ

ಯುವತಿ ಬಿ.ಇ ಪದವಿ ಪಡೆದಿದ್ದರಿಂದ ತಾಂತ್ರಿಕ ಪರಿಣತಿ ಇತ್ತು. ವಿಪಿಎನ್ ಮೂಲಕ ಲಾಗಿನ್ ಆಗಿ, ಗೇಟ್ ಕೋಡ್ ಅಪ್ಲಿಕೇಶನ್ ಮೂಲಕ ವರ್ಚುವಲ್ ಮೊಬೈಲ್ ನಂಬರ್ ಪಡೆದುಕೊಳ್ಳುತ್ತಿದ್ದರು. 6ರಿಂದ 7 ವಾಟ್ಸ್‌ಆ್ಯಪ್ ಖಾತೆಗಳನ್ನು ನಿರ್ವಹಣೆ ಮಾಡುತ್ತಿದ್ದ ಯುವತಿ, ಕರ್ನಾಟಕ ಸೇರಿದಂತೆ ದೇಶದ 11 ರಾಜ್ಯಗಳ ಶಾಲಾ–ಕಾಲೇಜುಗಳಿಗೆ ಪ್ರಿಯಕರನ ಹೆಸರಿನಲ್ಲಿ ಹುಸಿ ಬಾಂಬ್ ಸಂದೇಶ ಕಳುಹಿಸುತ್ತಿದ್ದರು ಎಂಬುದು ತನಿಖೆಯಿಂದ ಗೊತ್ತಾಗಿದೆ ಎಂದು ಪೊಲೀಸರು ತಿಳಿಸಿದರು.

ಚಿತ್ರಾವಳಿ

ನಗರದ ಕರ್ನಾಟಕ ಚಿತ್ರಕಲಾ ಪರಿಷತ್ತಿನಲ್ಲಿ ಇಕೋ–ವಾಚ್, ಕರ್ನಾಟಕ ರಾಜ್ಯ ಪಶ್ಚಿಮ ಘಟ್ಟ ಸಂರಕ್ಷಣಾ ಸಮಿತಿ ಆಯೋಜಿಸಿದ್ದ ದಕ್ಷಿಣ ಭಾರತದ ಪಶ್ಚಿಮ ಘಟ್ಟ ಕುರಿತ ಚಿತ್ರಕಲೆ ಪ್ರದರ್ಶನವನ್ನು ಸುರೇಶ್ ಹೆಬ್ಳೀಕರ್, ಗಿರೀಶ ಕಾಸರವಳ್ಳಿ, ಎಸ್.ಜಿ. ವಾಸುದೇವ, ಕಲಾವಿದ ರೂಪೇಶ್ ನಾಣಯ್ಯ ವೀಕ್ಷಿಸಿದರು ಪ್ರಜಾವಾಣಿ ಚಿತ್ರ

ಬೆಂಗಳೂರು ವರದಿಗಾರರ ಕೂಟದ ಸುವರ್ಣ ಮಹೋತ್ಸವ–55 ಲಾಂಛನವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನಗರದಲ್ಲಿ ಗುರುವಾರ ಬಿಡುಗಡೆ ಮಾಡಿದರು. ಮುಖ್ಯಮಂತ್ರಿ ಅವರ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ್, ವರದಿಗಾರರ ಕೂಟದ ಅಧ್ಯಕ್ಷ ಆರ್.ಟಿ.ವಿಠ್ಠಲಮೂರ್ತಿ, ಪ್ರಧಾನ ಕಾರ್ಯದರ್ಶಿ ಎಚ್.ವಿ.ಕಿರಣ್ ಮತ್ತು ಪದಾಧಿಕಾರಿಗಳು ಉಪಸ್ಥಿತರಿದ್ದರು

ನಗರದ ಹನುಮಗಿರಿ ಬೆಟ್ಟದ ಮೇಲಿರುವ ಅರ್ಕೇಶ್ವರಸ್ವಾಮಿ ಹಾಗೂ ಪ್ರಸನ್ನ ಆಂಜನೇಯಸ್ವಾಮಿ ದೇವಸ್ಥಾನದಲ್ಲಿ ಹನುಮಗಿರಿ ಸೇವಾ ಸಮಿತಿ ಆಯೋಜಿಸಿದ್ದ ಕಾರ್ತಿಕ ಹುಣ್ಣಿಮೆ ದೀಪೋತ್ಸವದಲ್ಲಿ 5.5 ಅಡಿ ಎತ್ತರವಿರುವ ತಾಮ್ರದ ದೀಪಸ್ತಂಭವನ್ನು ಬೆಳಗಿದರು ಪ್ರಜಾವಾಣಿ ಚಿತ್ರ: ಎಂ. ಎಸ್ ಮಂಜುನಾಥ್

ಲೋಕಾಯುಕ್ತ ಪೊಲೀಸರ ಹೆಸರು ಬಳಸಿ ಸುಲಿಗೆ ಯತ್ನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲೋಕಾಯುಕ್ತ ಪೊಲೀಸರ ಹೆಸರು ಬಳಸಿಕೊಂಡು ಸುಲಿಗೆಗೆ ಯತ್ನಿಸಿದ ಆರೋಪದಡಿ ಎಲೆಕ್ಟ್ರಿಕಲ್ ಗುತ್ತಿಗೆದಾರರೊಬ್ಬರ ವಿರುದ್ಧ ವಿಧಾನಸೌಧ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ವಾಜರಹಳ್ಳಿಯ ನಿವಾಸಿ ಶರಣಪ್ಪ ಕುರುಬನಳ್ಳ ಅವರ ವಿರುದ್ಧ ಭಾರತೀಯ ನ್ಯಾಯ ಸಂಹಿತೆಯ(ಬಿಎನ್‌ಎಸ್) ಸೆಕ್ಷನ್‌ಗಳಾದ 308(2) ಹಾಗೂ 308(3)ರ ಅಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು. ಗುತ್ತಿಗೆದಾರ ಜಾನ್ ಬೆನಡಿಕ್ಟ್ ಅವರು ದೂರು ನೀಡಿದ್ದರು.

ಎಫ್‌ಐಆರ್‌ನಲ್ಲಿ ಏನಿದೆ?: 'ಶರಣಪ್ಪ ಅವರು ಕಳೆದ 19 ವರ್ಷ ಗಳಿಂದ ನಗರದಲ್ಲಿ ಎಲೆಕ್ಟ್ರಿಕಲ್ ಗುತ್ತಿಗೆದಾರರಾಗಿ ಕೆಲಸ ಮಾಡುತ್ತಿದ್ದಾರೆ. ಭ್ರಷ್ಟಾಚಾರ ವಿರೋಧಿ ಕಾರ್ಯಕರ್ತರಾಗಿ ಗುರುತಿಸಿಕೊಂಡಿದ್ದಾರೆ. ಶರಣಪ್ಪ ಅವರು ಬೆಸ್ಕಾಂ ಅಧಿಕಾರಿಗಳು ಹಾಗೂ ಎಲೆಕ್ಟ್ರಿಕಲ್ ಗುತ್ತಿಗೆದಾರರ ಮಧ್ಯೆ ನಡೆಯುವ ಹಣದ ವ್ಯವಹಾರಗಳ ಆಡಿಯೊ ಸಂಭಾಷಣೆ ಹಾಗೂ ವಿಡಿಯೊವನ್ನು ಸಂಗ್ರಹಿಸಿಕೊಳ್ಳುತ್ತಿದ್ದರು. ಬಳಿಕ, ಬೆಸ್ಕಾಂ ಅಧಿಕಾರಿಗಳನ್ನು ಮನೆಗೆ ಕರೆಸಿಕೊಂಡು ಹಣದ ವ್ಯವಹಾರವನ್ನು ಲೋಕಾಯುಕ್ತ ಪೊಲೀಸರಿಗೆ ತಿಳಿಸಿ ಬಂಧಿಸುವಂತೆ ಹೇಳುತ್ತೇನೆ ಎಂದು ಹೆದರಿಸುತ್ತಿದ್ದರು. ಲೋಕಾಯುಕ್ತ ಪೊಲೀಸರಿಗೆ ಮಾಹಿತಿ ನೀಡದಿರಲು ಹಣ ನೀಡುವಂತೆ ಬೇಡಿಕೆ ಇಡುತ್ತಿದ್ದರು' ಎಂದು ಪೊಲೀಸರು ಹೇಳಿದರು.

ಭಾರಿ ಸ್ಫೋಟದ ಶಬ್ದ: ಆತಂಕ

ಪ್ರಜಾವಾಣಿ ವಾರ್ತೆ

ರಾಮನಗರ: ಜಿಲ್ಲೆಯ ವಿವಿಧೆಡೆ ಗುರುವಾರ ಮಧ್ಯಾಹ್ನ ಭಾರಿ ಸ್ಫೋಟದ ಶಬ್ದವಾಗಿದೆ. ಕಿಟಕಿ ಹಾಗೂ ಬಾಗಿಲುಗಳನ್ನು ಜೋರಾಗಿ ಅಲುಗಾಡಿವೆ. ಏಕಾಏಕಿ ಕೇಳಿ ಬಂದ ಶಬ್ದವು ಭೂ ಕಂಪನದ ರೀತಿ ಭಾಸವಾಗಿದ್ದು, ಕೆಲವೆಡೆ ಜನರು ಆತಂಕಗೊಂಡು ಮನೆಯಿಂದ ಹೊರಕ್ಕೆ ಬಂದಿದ್ದಾರೆ.

ರಾಮನಗರ, ಬಿಡದಿ, ಚನ್ನಪಟ್ಟಣ, ಮಾಗಡಿ, ಹಾರೋಹಳ್ಳಿ, ಕನಕಪುರದ ಹಲವೆಡೆ ಮಧ್ಯಾಹ್ನ ಸುಮಾರು 2 ಗಂಟೆ ಸುಮಾರಿಗೆ ಎರಡು ಸಲ ಶಬ್ದ ಕೇಳಿ ಬಂದಿದೆ. ಕಲ್ಲು ಸ್ಫೋಟಿಸಿರಬಹುದು ಎಂದು ಸ್ಥಳೀಯವಾಗಿ ಜನರು ಅಂದುಕೊಂಡಿದ್ದರು. ಆದರೆ, ಜಿಲ್ಲೆಯ ಹಲವೆಡೆ ಇದೇ ಮಾದರಿಯ ವಿಚಿತ್ರ ಶಬ್ದವಾಗಿರುವುದನ್ನು ಕೇಳಿ ಗಾಬರಿಗೊಂಡಿದ್ದಾರೆ. 'ಮನೆಯೊಳಗೆ ಮಲಗಿದ್ದಾಗ ಪಟಾಕಿ ಸಿಡಿಸಿದಂತಹ ಜೋರು ಶಬ್ದ ಕೇಳಿ ಬಂತು. ಒಮ್ಮೆಲೆ ಕಿಟಕಿಗಳು ಅಲುಗಾಡಿದವು. ಏನಾಗಿರಬಹುದು ಎಂದು ನೋಡಲು ಹೊರಕ್ಕೆ ಬಂದಾಗ, ಅಕ್ಕಪಕ್ಕದ ಮನೆಯವರು ಸಹ ಅದೇ ಮಾದರಿಯ ಶಬ್ದ ಕೇಳಿರುವುದಾಗಿ ಹಾಗೂ ಅವರ ಮನೆಯ ಕಿಟಕಿ–ಬಾಗಿಲುಗಳು ಸಹ ಅಲುಗಾಡಿದ್ದರ ಕುರಿತು ಹೇಳಿದರು' ಎಂದು ಅರ್ಕಾವತಿ ಬಡಾವಣೆಯ ನಾಗಮ್ಮ ಹೇಳಿದರು.

ಸ್ಫೋಟದ ಮಾದರಿಯ ಶಬ್ದದ ಕುರಿತು ಮಾಧ್ಯಮದವರಿಗೆ ಪ್ರತಿಕ್ರಿಯಿಸಿದ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಉಪ ನಿರ್ದೇಶಕಿ ರೇಷ್ಮಾ, 'ಸ್ಫೋಟದ ಶಬ್ದ ಎಲ್ಲಿಂದ ಕೇಳಿ ಬಂತು ಎಂಬುದು ಗೊತ್ತಾಗಿಲ್ಲ. ಭೂ ಕಂಪನ ಆಗಿದೆಯೇ ಎಂಬುದರ ಕುರಿತು ಪರಿಶೀಲಿಸಿದಾಗ, ಅದೂ ಆಗಿಲ್ಲ ಎಂಬುದು ಗೊತ್ತಾಯಿತು. ವಿಚಿತ್ರ ಶಬ್ದದ ಕುರಿತು ಪರಿಶೀಲನೆ ನಡೆಯುತ್ತಿದೆ' ಎಂದರು.

'ಕಾಗೇರಿ ದೇಶದ್ರೋಹದ ಹೇಳಿಕೆ'

ಮಂಗಳೂರು: ಜನಗಣ ಮನ ರಾಷ್ಟ್ರಗೀತೆ ಅಲ್ಲ ಎಂದು ಹೇಳಿ ರಾಷ್ಟ್ರಕವಿ ರವೀಂದ್ರನಾಥ ಠಾಗೋರರಿಗೆ ಅವಮಾನ ಮಾಡಿರುವ ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ವಿರುದ್ಧ ದೇಶದ್ರೋಹದ ಪ್ರಕರಣ ದಾಖಲಿಸಬೇಕು ಎಂದು ವಿಧಾನ ಪರಿಷತ್ ಸದಸ್ಯ ಬಿ.ಕೆ. ಹರಿಪ್ರಸಾದ್ ಆಗ್ರಹಿಸಿದರು.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಗಾಂಧೀಜಿ ಕೊಂದವರ ಪರವಾಗಿರುವ ಬಿಜೆಪಿಯವರು ರಾಷ್ಟ್ರದ ಸಂಸ್ಕೃತಿ ಬಿಂಬಿಸಿದ ಠಾಗೋರರ ಮೇಲೆ ದಾಳಿಗೆ ಇಳಿದಿದ್ದಾರೆ. ಅದು ದೇಶದ್ರೋಹಿ ಪಕ್ಷ ಎಂಬುದಕ್ಕೆ ಇದೇ ಸಾಕ್ಷಿ ಎಂದರು.

ಆರ್‌ಎಸ್‌ಎಸ್ ಎಂದರೆ ಏನೆಂದು ಕೇರಳದಲ್ಲಿ ಸಾಬೀತಾಗಿದೆ. ಅಂಥ ಸಂಘಟನೆಯಿಂದ ಕಾಂಗ್ರೆಸ್‌ಗೆ ಕಲಿಯಲು ಏನೂ ಇಲ್ಲ ಎಂದರು.

ಫುಟ್‌ಬಾಲ್: ಪರಿಕ್ರಮ ತಂಡಕ್ಕೆ ಗೆಲುವು

ಬೆಂಗಳೂರು: ಪರಿಕ್ರಮ ಎಫ್‌ಸಿ ತಂಡವು ಗುರುವಾರ ಕೆಎಸ್‌ಎಫ್‌ಎ ಸೂಪರ್ ಡಿವಿಷನ್ ಫುಟ್‌ಬಾಲ್ ಲೀಗ್ ಚಾಂಪಿಯನ್‌ಷಿಪ್‌ನ ಪಂದ್ಯದಲ್ಲಿ 3–2ರಿಂದ ಎಂಇಜಿ ಅಂಡ್ ಸೆಂಟರ್ ಎಫ್‌ಸಿ ತಂಡವನ್ನು ಮಣಿಸಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಪರಿಕ್ರಮ ತಂಡದ ಹಾವೊಮಿಂಥಾಂಗ್ ಕಿಪ್ಜೆನ್ ಎರಡು ಗೋಲು ಗಳಿಸಿ ಗೆಲುವಿನ ರೂವಾರಿಯಾದರು. ಮತ್ತೊಂದು ಗೋಲು ಎದುರಾಳಿ ತಂಡದ ಅಬ್ದುಲ್ ಜಿಯಾದ್ ಅವರಿಂದ 'ಉಡುಗೊರೆ'ಯಾಗಿ ಲಭಿಸಿತು. ಎಂಇಜಿ ಪರ ಲಾಲ್ ಲಾಸ್ವಮಕಿಮ ಮತ್ತು ನಿಯಾಸ್ ನಜರ್ ಚೆಂಡನ್ನು ಗುರಿ ಸೇರಿಸಿದರು.

ಮತ್ತೊಂದು ಪಂದ್ಯದಲ್ಲಿ ಯುನೈಟೆಡ್ ಸ್ಪಾರ್ಸ್ ಎಫ್‌ಸಿ ತಂಡವು 4–0ಯಿಂದ ಭಾರತ್ ಬೆಂಗಳೂರು ಎಫ್‌ಸಿ ತಂಡವನ್ನು ಸೋಲಿಸಿತು.

ದಿನದ ಮೂರನೇ ಪಂದ್ಯದಲ್ಲಿ ಬಿಎಫ್‌ಸಿ ತಂಡವು 3–1ರಿಂದ ಬೆಂಗಳೂರು ಡ್ರೀಮ್ ಯುನೈಟೆಡ್ ತಂಡವನ್ನು ಪರಾಭವಗೊಳಿಸಿತು.

ಪರಿಕ್ರಮ ಎಫ್‌ಸಿಯ ಅಮಿತ್ ಕುಮಾರ್ (ಬಲ) ಮತ್ತು ಎಂಇಜಿ ತಂಡದ ರೋಹಿತ್ ಸೋಮನ್ ಚೆಂಡಿಗಾಗಿ ಸೆಣಸಾಟ ನಡೆಸಿದರು —ಪ್ರಜಾವಾಣಿ ಚಿತ್ರ: ಬಿ.ಕೆ. ಜನಾರ್ದನ

ಕೋಲ್ಕತ್ತ ರೇಸ್

ಸಟಿವರ್ ಗೆಲ್ಲುವ ನಿರೀಕ್ಷೆ

ದೆಹಲಿ ರೇಸ್ ಕ್ಲಬ್ (1940) ಲಿಮಿಟೆಡ್ ಕಪ್ ಶುಕ್ರವಾರದ ಕೋಲ್ಕತ್ತ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಸಟಿವರ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1:45ಕ್ಕೆ ಪ್ರಾರಂಭವಾಗಲಿರುವ ದಿನದ ಆರು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಹೋರಸ್ ದಿ ಗ್್ರೇಟ್ 3, ಪ್ರಿನ್ಸೆಸ್ ಪೀಚ್ 1, ಆರ್ಟೆಮಿಸ್ ಜೆಲ್ಡಾ 5
2ನೇ ರೇಸ್: ಸ್ಟಾರ್ ಪ್ರೈಡ್ 14, ಎನೋಲ ಹೋಮ್ಸ್ 1, ಸ್ಪಿರಿಟ್ ಬೇ 7
3ನೇ ರೇಸ್: ಮೊರಾನೊ 2, ಫಾಸ್ಟ್ ಅಪ್ರೋಚ್ 5, ಲಾರ್ಡ್ ವೇಡರ್ 1
4ನೇ ರೇಸ್: ಸ್ಟಾರ್ ಸ್ಟಡೆಡ್ 7, ಗಾಲ್ವೆ ಗರ್ಲ್ 5, ಟ್ರೂ ಫೈಟ್ 3
5ನೇ ರೇಸ್: ಸಟಿವರ್ 2, ಥರ್ಡ್ ಅವೆನ್ಯೂ 1, ಕಿಂಗ್ ಲೂಯಿಸ್ 5
6ನೇ ರೇಸ್: ಮೈನ್ ಸ್ಟ್ರೀಟ್ 2, ನ್ಯಾಚುರಲ್ ಗ್ರೇಸ್ 6, ಸ್ನೋ ಪಿಯರ್ಸರ್ 4

ಉತ್ತಮ ಬೆಟ್: ಸ್ಟಾರ್ ಸ್ಟಡೆಡ್

ಜಾಕ್‌ಪಾಟ್‌ಗೆ	1ನೇ ಟ್ರಿಬಲ್	2ನೇ ಟ್ರಿಬಲ್
2,3,4,5,6	1,2,3	4,5,6

ನಾರಾಯಣ ಗುರುಗಳ ಮಹಾಸಮಾಧಿಯ ಶತಮಾನೋತ್ಸವ ಸಿದ್ಧತಾ ಕಾರ್ಯಕ್ರಮ

ಮಂಗಳೂರು: ಸರ್ವಧರ್ಮ ಸಮ್ಮೇಳನ ಡಿ.4ಕ್ಕೆ

ಪ್ರಜಾವಾಣಿ ವಾರ್ತೆ

ಮಂಗಳೂರು: ನಾರಾಯಣ ಗುರು ಮತ್ತು ಗಾಂಧೀಜಿ ಮುಖಾಮುಖಿಯ ಶತಮಾನೋತ್ಸವ ಮತ್ತು ಗುರುಗಳ ಮಹಾಸಮಾಧಿಯ ಶತಮಾನೋತ್ಸವ ಕಾರ್ಯಕ್ರಮಗಳ ಅಂಗವಾಗಿ ಸರ್ವಧರ್ಮ ಸಮ್ಮೇಳನ ಮತ್ತು ಯತಿಪೂಜೆ ಮಂಗಳೂರಿನಲ್ಲಿ ಡಿ.4ರಂದು ನಡೆಯಲಿದೆ.

ಕೇರಳದ ಶಿವಗಿರಿ ಮಠದ ಪ್ರತಿನಿಧಿ ಜ್ಞಾನೇಂದ್ರತೀರ್ಥ ಸ್ವಾಮೀಜಿ ಅಧ್ಯಕ್ಷತೆ ಮತ್ತು ವಿಧಾನ ಪರಿಷತ್ ಸದಸ್ಯ ಬಿ.ಕೆ. ಹರಿಪ್ರಸಾದ್ ನೇತೃತ್ವದಲ್ಲಿ ನಗರದಲ್ಲಿ ಗುರುವಾರ ನಡೆದ ಸಭೆಯಲ್ಲಿ ನಿರ್ಧರಿಸಲಾಯಿತು.

'ಗುರುಗಳು ಮಹಾಸಮಾಧಿಯಾಗಿ 98 ವರ್ಷ ಸಂದಿವೆ. ಸಮಾಧಿಯ ಶತಮಾನೋತ್ಸವ ಕಾರ್ಯಕ್ರಮಗಳಿಗೆ ಶಿವಗಿರಿಯಲ್ಲಿ ರಾಷ್ಟ್ರಪತಿ ದ್ರೌಪತಿ ಮುರ್ಮು ಅವರು ಚಾಲನೆ ನೀಡಿದ್ದಾರೆ. ಇದರೊಂದಿಗೆ ಗಾಂಧೀಜಿ ಮತ್ತು ಗುರುಗಳ ಸಂವಾದದ ನೂರನೇ ವರ್ಷ, ಆಲುವಾದಲ್ಲಿ ನಡೆದ ಭಾರತದ ಮೊದಲ ಸರ್ವಧರ್ಮ ಸಮ್ಮೇಳನದ ನೆನಪಿನ ಕಾರ್ಯಕ್ರಮಗಳು ಕೂಡ ನಡೆಯುತ್ತಿವೆ. ಕರ್ನಾಟಕ ರಾಜ್ಯದ ಕಾರ್ಯಕ್ರಮ ಮಂಗಳೂರಿನಲ್ಲಿ ನಡೆಸಲು ನಿರ್ಧರಿಸಲಾಗಿದೆ' ಎಂದು ಜ್ಞಾನೇಂದ್ರತೀರ್ಥರು ತಿಳಿಸಿದರು.

ಕೇರಳದ 30 ಮಂದಿ ಸೇರಿದಂತೆ ಒಟ್ಟು 50 ಯತಿಗಳಿಗೆ ಗೌರವ ಮಂಗಳೂರು ಕಾರ್ಯಕ್ರಮದ ವೈಶಿಷ್ಟ್ಯ. ಮಧ್ಯಾಹ್ನದ ನಂತರ ಸರ್ವ ಧರ್ಮ ಸಮ್ಮೇಳನ ನಡೆಯಲಿದೆ ಎಂದರು.

ಸತ್ಯಾನಂದತೀರ್ಥ ಸ್ವಾಮೀಜಿ, ವಿಖ್ಯಾತಾನಂದ ಸ್ವಾಮೀಜಿ, ಶಾಸಕರಾದ ಸುನಿಲ್ ಕುಮಾರ್, ಉಮಾನಾಥ ಕೋಟ್ಯಾನ್, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿಗಳಾದ ಪದ್ಮರಾಜ್ ಆರ್, ರಕ್ಷಿತ್ ಶಿವರಾಂ, ನಿವೃತ್ತ ಪೊಲೀಸ್ ಅಧಿಕಾರಿ ಪೀತಾಂಬರ ಹೆರಾಜೆ, ಮಂಗಳೂರು ವಿವಿ ನಾರಾಯಣ ಗುರು ಅಧ್ಯಯನ ಪೀಠದ ಅಧ್ಯಕ್ಷ ಜಯರಾಜ್, ನಾರಾಯಣ ಗುರು ಅಭಿವೃದ್ಧಿ ನಿಗಮದ ಅಧ್ಯಕ್ಷ ಮಂಜುನಾಥ ಪೂಜಾರಿ, ನಾರಾಯಣ ಗುರು ವಿಚಾರ ವೇದಿಕೆ ಅಧ್ಯಕ್ಷ ಸತ್ಯಜಿತ್ ಸುರತ್ಕಲ್ ಪಾಲ್ಗೊಂಡಿದ್ದರು.

ಮಂಗಳೂರಿನಲ್ಲಿ ನಡೆದ ಸಭೆಯಲ್ಲಿ ಬಿ.ಕೆ ಹರಿಪ್ರಸಾದ್ ಮಾತನಾಡಿದರು. ಜ್ಞಾನೇಂದ್ರತೀರ್ಥ ಸ್ವಾಮೀಜಿ, ವಿಖ್ಯಾತಾನಂದ ಸ್ವಾಮೀಜಿ, ಸತ್ಯಾನಂದತೀರ್ಥ ಸ್ವಾಮೀಜಿ, ಪೀತಾಂಬರ ಹೆರಾಜೆ ಪಾಲ್ಗೊಂಡಿದ್ದರು – ಪ್ರಜಾವಾಣಿ ಚಿತ್ರ

ಗುಬ್ಬಿ ಕ್ಷೇತ್ರದ ಶಾಸಕ ಎಸ್ .ಆರ್ ಶ್ರೀನಿವಾಸ್ ಪುತ್ರ ದುಷ್ಯಂತ್ ಸಿನಿಮಾಗೆ ಹೆಜ್ಜೆ ಇಟ್ಟದ್ದೇ ಅಪ್ಪನ ವಿರೋಧದ ನಡುವೆ. ಸಿಂಪಲ್ ಸುನಿ ನಿರ್ದೇಶನದ 'ಗತವೈಭವ' ಸಿನಿಮಾ ನ.14ರಂದು ತೆರೆಕಾಣುತ್ತಿದ್ದು, ಇದರಲ್ಲಿ ನಾಲ್ಕು ಭಿನ್ನ ಶೇಡ್ಸ್‌ನಲ್ಲಿದ್ದಾರೆ ಅವರು. ರಾಜಕೀಯ ದೋಣಿಯಿಂದ ದೂರವೇ ಇರುವ ನಿರ್ಧಾರ ಮಾಡಿ ಸಿನಿಮಾ ದೋಣಿ ಹತ್ತಿರುವ ಅವರೊಂದಿಗೆ ಮಾತಿಗಿಳಿದಾಗ...

ಕಂಬಳವೀರ ದುಷ್ಯಂತ್!

ಆಶಿಕಾ–ದುಷ್ಯಂತ್

• ಅಭಿಲಾಷ್ ಪಿ.ಎಸ್.

• ನಿಮ್ಮ ಹಿನ್ನೆಲೆ ಹಾಗೂ ತಯಾರಿಯ ಬಗ್ಗೆ...

ಗುಬ್ಬಿ ತಾಲ್ಲೂಕಿನ ಸಣ್ಣಹಳ್ಳಿಯೊಂದರಿಂದ ಬಂದ ಕುಟುಂಬ ನನ್ನದು. ಹುಟ್ಟಿ ಬೆಳೆದಿದ್ದು, ಓದಿದ್ದು ತುಮಕೂರಿನಲ್ಲಿ. ಬ್ರಿಟನ್‌ನಲ್ಲಿದ್ದುಕೊಂಡು ಎಲ್‌ಎಲ್‌ಬಿ ಮಾಡಿದೆ. 2017ಕ್ಕೆ ಬ್ರಿಟನ್‌ನಿಂದ ಮರಳಿಬಂದ ಬಳಿಕ ನಟನಾಗಬೇಕು ಎಂದುಕೊಂಡು ತಯಾರಿ ಆರಂಭಿಸಿದೆ. ಎಂಟು ವರ್ಷದ ಪಯಣವಿದು. ಆರಂಭದಲ್ಲಿ ಬೀದಿ ನಾಟಕ, ಕಿರುಚಿತ್ರ, ರಂಗಭೂಮಿ, ಮ್ಯೂಸಿಕ್ ವಿಡಿಯೊಗಳಲ್ಲಿ ನಟಿಸಿದೆ. ಸಿನಿಮಾಗಾಗಿ ಸುಮಾರು 20 ಕೆ.ಜಿ.ತೂಕ ಇಳಿಸಿಕೊಂಡೆ. ಬಳಿಕ ಮಾರ್ಷಲ್ ಆರ್ಟ್ಸ್, ಡಾನ್ಸ್ ತರಬೇತಿ ಪಡೆದೆ. ಟೆಂಟ್ ಸಿನಿಮಾ, ಪುಷ್ಕರ್ ಆ್ಯಕ್ಟಿಂಗ್ ಇನ್‌ಸ್ಟಿಟ್ಯೂಟ್, ನೀನಾಸಂ ಧನಂಜಯ ಹಾಗೂ ಕೃಷ್ಣ ಹೆಬ್ಬಾಳೆ ಅವರ ಬಳಿ ನಟನೆಯ ತರಬೇತಿ ಪಡೆದುಕೊಂಡೆ. 2020ರ ಮೇ ತಿಂಗಳಲ್ಲಿ 'ರಾಬಿನ್‌ಹುಡ್' ಸಿನಿಮಾ ಮಾಡಬೇಕು ಎಂದು ನಾನು ಹಾಗೂ ಸುನಿ ಅವರು ನಿರ್ಧರಿಸಿದೆವು. ಇದಕ್ಕಾಗಿ ಹೀರೊ ಇಂಟ್ರೊಡಕ್ಷನ್ ದೃಶ್ಯವನ್ನೂ ಚಿತ್ರೀಕರಿಸಿದ್ದೆವು. ಬಜೆಟ್ ಹೆಚ್ಚಾದ ಕಾರಣ ಅದನ್ನು ಪಕ್ಕಕ್ಕಿಟ್ಟು, ಒಂದೂವರೆ ವರ್ಷ 18–20 ಹೊಸ ಕಥೆಗಳನ್ನು ಕೇಳಿದೆವು. ಅವುಗಳಾವೂ ಒಪ್ಪಿಗೆಯಾಗಲಿಲ್ಲ. ಸುನಿ ಅವರ ಸಿನಿಪಯಣದ ಒಂದು ಅತ್ಯುತ್ತಮ ಸಿನಿಮಾ ನನ್ನ ಜೊತೆಯಾಗಬೇಕು ಎನ್ನುವ ನಿರೀಕ್ಷೆ ಹೊತ್ತಿದ್ದೆ. ಕೊನೆಯಲ್ಲಿ ಸುನಿ, ಅವರದೇ 'ಗತವೈಭವ' ಕಥೆ ಹೇಳಿದರು. ಈ ಕಥೆಯಲ್ಲಿ ನಾಯಕನಿಗೆ ನಾಲ್ಕು ಶೇಡ್‌ಗಳಿವೆ. ಇದನ್ನು ನಿಭಾಯಿಸಲು ನುರಿತ ಕಲಾವಿದನೇ ಬೇಕು ಎನ್ನುವ ಕಾರಣಕ್ಕೆ ನನಗೆ ಮೊದಲು ಈ ಕಥೆ ಹೇಳಿರಲಿಲ್ಲ. ಆದರೆ ನನ್ನ ಸಿನಿಮಾ ಆಸಕ್ತಿ ಕಂಡು ಸುನಿ ಅವರಿಗೆ ನನ್ನಲ್ಲಿ ಪೂರ್ಣ ನಂಬಿಕೆ ಮೂಡಿತ್ತು.

ಭಾವನಾತ್ಮಕವಾಗಿ ಒಂದು ರೋಲರ್‌ಕೋಸ್ಟರ್ ರೈಡ್ ಈ ಸಿನಿಮಾದಲ್ಲಿದೆ. ಮೊದಲ ಸಿನಿಮಾದಲ್ಲೇ ನಾಲ್ಕು ಶೇಡ್‌ಗಳನ್ನು ಮಾಡುವ ಅವಕಾಶ ಸಿಗುವುದು ವಿರಳ. ಬರವಣಿಗೆಯಲ್ಲಿ ಹೆಚ್ಚಿನ ತಾಕತ್ತನ್ನು ಈ ಸಿನಿಮಾ ಹೊಂದಿದೆ.

• ಸಿನಿಮಾ ಕ್ಷೇತ್ರಕ್ಕೇ ಬರಬೇಕು ಎಂದೆನಿಸಿದ್ದು ಏಕೆ?

ನನ್ನ ಹಿನ್ನೆಲೆಯೇ ನನ್ನ ಈ ಹೆಜ್ಜೆಗೆ ಮುಖ್ಯ ಕಾರಣ. ಮನೆಯಲ್ಲಿ ದೊಡ್ಡ ವ್ಯಕ್ತಿ ಇದ್ದಾಗ ನಾವೇನೇ ಮಾಡಿದರೂ ನೀವು ಅವರ ಮಗ, ಆ ಕುಟುಂಬದಿಂದ ಬಂದಿದ್ದೀರಿ ಎನ್ನುವ ಮಾತು, ಭಾವನೆ ಸಾಮಾನ್ಯ. ಶಾಲಾ ದಿನಗಳಲ್ಲೂ ಒಳ್ಳೆಯ ಅಂಕ ಪಡೆದಾಗಲೂ ಈ ಮಾತುಗಳನ್ನು ನಾನು ಕೇಳಿದ್ದೇನೆ. ಇದು ಸದಾ ಚುಚ್ಚುತ್ತಲೇ ಇತ್ತು. ಹಾಗಾದರೆ ನಾನೇನು ಅಲ್ಲವೇನೋ ಎನ್ನುವ ಪ್ರಶ್ನೆಯನ್ನು ನಾನೇ ಕೇಳಿಕೊಂಡಿದ್ದೆ. ಅದಕ್ಕಾಗಿ ಉನ್ನತ ಶಿಕ್ಷಣಕ್ಕೆ ಬ್ರಿಟನ್‌ಗೆ ಹೋದೆ. ಅಲ್ಲೂ ಸ್ಕಾಲರ್‌ಶಿಪ್ ಪಡೆದು ಒಳ್ಳೆಯ ಅಂಕಗಳೊಂದಿಗೆ ಡಿಗ್ರಿ ಪಡೆದೆ. ಇವರ ಯಾವ ಪ್ರಭಾವವೂ ಇಲ್ಲದ, ನಡೆಯದ ಕ್ಷೇತ್ರಕ್ಕೆ ಹೋಗಿ ಗೆಲ್ಲಬೇಕು ಎಂದು ನಿರ್ಧರಿಸಿ ಸಿನಿಮಾ ಕ್ಷೇತ್ರಕ್ಕೆ ಹೆಜ್ಜೆ ಇಟ್ಟೆ. ರಾಜಕೀಯಕ್ಕೆ ಬರಬೇಕು ಎನ್ನುವ ಯೋಚನೆ ಇರಲೇ ಇಲ್ಲ. ರಾಜಕೀಯದಲ್ಲಿ ನೆಮ್ಮದಿ ಇಲ್ಲ, ಕುಟುಂಬದೊಂದಿಗೆ ಕಾಲ ಕಳೆಯಲು ಆಗುವುದಿಲ್ಲ, ಪ್ರಾಮಾಣಿಕವಾಗಿದ್ದರೂ ನೋಡುವ ದೃಷ್ಟಿಗಳು ಬೇರೆಯದೇ ಆಗಿರುತ್ತವೆ...ಹೀಗೆ ನನ್ನ ಕಾಲದಲ್ಲೇ ಇದು ಅಂತ್ಯವಾಗಲಿ ಎನ್ನುವ ಭಾವನೆ ತಂದೆಗಿತ್ತು. ಕುಟುಂಬದಲ್ಲೂ ರೋಸಿ ಹೋಗಿದ್ದೆವು. ರಾಜಕೀಯಕ್ಕೆ ಹೋದರೂ ಮತ್ತದೇ 'ಪ್ರಭಾವ'ದ ಸುಳಿಯಲ್ಲಿ ಸಿಲುಕಿಕೊಳ್ಳುತ್ತೇನೆ ಎಂದೆನಿಸಿತು. ತಂದೆಯ ವಿರುದ್ಧವೆಂದಲ್ಲ, ಅವರ ಆಸೆ, ಆಕಾಂಕ್ಷೆಗಳ ದಾರಿಯಲ್ಲಿ ನನ್ನ ಹೆಜ್ಜೆ ಇರಲಿಲ್ಲ. ನಾನೊಬ್ಬ ಐಎಎಸ್ ಅಧಿಕಾರಿಯಾಗಬೇಕು ಎಂದು ಮಾರ್ಗದರ್ಶನ ಮಾಡಿದ್ದರು. ನನ್ನ ಆಸೆಯೂ ಅದೇ ಆಗಿತ್ತು. ಆದರೆ ಕೊನೆಯಲ್ಲಿ ಸಿನಿಮಾ ಕ್ಷೇತ್ರ ಆಯ್ದುಕೊಂಡೆ. ಈ ವೃತ್ತಿಯಲ್ಲೂ ನಾಲ್ಕು ಜನ ಗೌರವ ಕೊಡುವ ರೀತಿ ಬಾಳಿದರೆ ತಂದೆ ಖಂಡಿತವಾಗಿಯೂ ಖುಷಿಪಡಲಿದ್ದಾರೆ ಎನ್ನುವ ಭಾವನೆ ನನ್ನದು.

• ಸಿನಿಮಾದಲ್ಲಿನ ನಿಮ್ಮ ಪಾತ್ರದ ಬಗ್ಗೆ...

ಫ್ಯಾಂಟಸಿ ರೊಮ್ಯಾಂಟಿಕ್ ಕಾಮಿಡಿ ಕಥಾಹಂದರದ ಈ ಸಿನಿಮಾದಲ್ಲಿ ವಿಎಫ್‌ಎಕ್ಸ್ ಕಲಾವಿದನ ಪಾತ್ರದಲ್ಲಿ ನಟಿಸಿದ್ದೇನೆ. ಇದೊಂದು ಪುನರ್ಜನ್ಮದ ಕಥೆ. ದೇವಲೋಕ–ಸಮುದ್ರಮಂಥನದ ಸಂದರ್ಭದಲ್ಲಿ ರಾಕ್ಷಸನಾಗಿ ಕಾಣಿಸಿಕೊಳ್ಳಲಿದ್ದೇನೆ. ದೇವಕನ್ಯೆಯಾಗಿ ಆಶಿಕಾ ರಂಗನಾಥ್ ಬಣ್ಣಹಚ್ಚಿದ್ದಾರೆ. 1498ರಲ್ಲಿ ವಾಸ್ಕೋ ಡ ಗಾಮನ ಜೊತೆಯಿರುವ 'ಪೋರ್ಚುಗೀಸ್' ಎನ್ನುವ ಪಾತ್ರದಲ್ಲಿ, ಸ್ವಾತಂತ್ರ್ಯ ಸಂಗ್ರಾಮದ ಸಂದರ್ಭದಲ್ಲಿ 'ಕಂಬಳವೀರ ಶ್ರೀನಿವಾಸ'ನಾಗಿ ಹಾಗೂ ಪ್ರಸ್ತುತ ಸಮಯದ 'ಪುರಾತನ್' ಎನ್ನುವ ಯುವಕನಾಗಿ ನಟಿಸಿದ್ದೇನೆ. ಈ ಎಲ್ಲಾ ಪಾತ್ರಗಳಿಗೂ ಸಂಬಂಧವಿದೆ ಎನ್ನುವ ರೀತಿಯಲ್ಲಿ ಕಥೆ ಪೋಣಿಸಲಾಗಿದೆ.

• ಹೊಸ ನಟ–ನಟಿಯರನ್ನು ಪರಿಚಯಿಸುವ ಸುನಿ ಬಗ್ಗೆ...

ಅವರ ಒಡನಾಟ ಸುಮಾರು ಐದೂವರೆ ವರ್ಷದ್ದು. ಸೌಮ್ಯ ಸ್ವಭಾವದ ಅವರು ನಮ್ಮ ಭಾವನೆ, ಅಭಿಪ್ರಾಯ ಹೇಳುವ ಅವಕಾಶ ನೀಡುತ್ತಾರೆ. ಹೊಸಬರಿಗೆ ಕಲಿಸುವ ತಾಳ್ಮೆ, ಅಭಿನಯ ತೆಗಿಸುವಂತ ಸಾಮರ್ಥ್ಯ ಅವರಿಗಿದೆ.

• ಈ ಪ್ರಾಜೆಕ್ಟ್ ವಿಳಂಬವಾಗಲು ಕಾರಣಗಳು...

ಇದರಲ್ಲಿ ನಾಲ್ಕು ಜನ್ಮಗಳ ಕಥೆಯಿದೆ. ಅವೆಲ್ಲವೂ ಬೇರೆ ಬೇರೆ ಕಾಲಘಟ್ಟದಲ್ಲಿ, ಬೇರೆ ಬೇರೆ ಸ್ಥಳಗಳಲ್ಲಿ ನಡೆಯುತ್ತದೆ. ಸೆಟ್ಸ್, ಪ್ರಪಂಚ, ಭಾಷಾ ಪ್ರಯೋಗ ಎಲ್ಲವೂ ಒಂದಕ್ಕಿಂತ ಒಂದು ಭಿನ್ನ. ಒಂದು ರೀತಿಯಲ್ಲಿ ನಾಲ್ಕು ಸಿನಿಮಾ ಮಾಡಿದ ಅನುಭವ ಇಲ್ಲಾಗಿತ್ತು. ಸಿನಿಮಾದಲ್ಲಿ ಸುಮಾರು ಒಂದು ಗಂಟೆಯ ವಿಎಫ್‌ಎಕ್ಸ್ ಇದೆ. ಸುಮಾರು ಇನ್ನೂರು ಜನರು ಇದಕ್ಕಾಗಿ ಕೆಲಸ ಮಾಡಿದ್ದಾರೆ. ಜೊತೆಗೆ ತಯಾರಿಗೇ ಹಲವು ತಿಂಗಳು ತೆಗೆದುಕೊಂಡೆವು. ಕಂಬಳ ಓಡಿಸುವ 'ಶ್ರೀನಿವಾಸ'ನ ಕಥೆಗಾಗಿ ಎರಡೂವರೆ ತಿಂಗಳು ನಾನು ಮಂಗಳೂರಿನ ಬೋಳಂಬಳ್ಳಿಯಲ್ಲಿದ್ದೆ. ಅಲ್ಲಿನ ಭಾಷೆ ಕಲಿತು, ಹೊಳೆಗಳಲ್ಲಿ ಸ್ನಾನ ಮಾಡಿಕೊಂಡು, ಅವರ ಆಚಾರ–ಸಂಸ್ಕೃತಿಗಳನ್ನು ತಿಳಿದುಕೊಂಡು, ಕೋಣಗಳನ್ನು ಓಡಿಸುವ ತರಬೇತಿ ಪಡೆದೇ ನಟಿಸಿದ್ದೇನೆ. ಪೋರ್ಚುಗಲ್‌ನಲ್ಲಿ ಶೂಟಿಂಗ್ ನಡೆಸಲೂ ಇದೇ ರೀತಿಯ ತಯಾರಿಯಿತ್ತು. ಹಳೆಯ ಹಡಗಿನಲ್ಲಿನ ಚಿತ್ರೀಕರಣ ಸವಾಲಿನದ್ದಾಗಿತ್ತು. ಸಿನಿಮಾದ ಕಥೆ ನೈಜವಾಗಿ ತೆರೆ ಮೇಲೆ ಕಾಣಬೇಕೆಂದರೆ ಇಷ್ಟು ಸಮಯ ಬೇಕೆ ಬೇಕು.

• ಹೊಸ ಪ್ರಾಜೆಕ್ಟ್‌ಗಳು...

ಕಥೆಗಳನ್ನು ಕೇಳುತ್ತಿದ್ದೇನೆ. ಒಂದೆರಡು ಪ್ರಾಜೆಕ್ಟ್ ಒಪ್ಪಿಕೊಂಡಿದ್ದೇನೆ. ಮುಂದೆ ಬರುವ ಕಥೆಗಳಲ್ಲಿ ಇಷ್ಟವಾಗುವುದನ್ನು ಆಯ್ಕೆ ಮಾಡಿಕೊಳ್ಳಲಿದ್ದೇನೆ. ನಾಲ್ಕೈದು ವರ್ಷವಾಯಿತು ಎಂದು ಸುಮ್ಮನೆ ಸಿನಿಮಾ ಮಾಡುವುದಿಲ್ಲ.

ದುಷ್ಯಂತ್

• ಸಿನಿಮಾ–ರಾಜಕೀಯ ದೋಣಿಯಲ್ಲಿ...

ಎಂಟು ವರ್ಷ ಪ್ರಯತ್ನಪಟ್ಟು ಒಂದು ಸಿನಿಮಾ ಮಾಡಿದ್ದೇನೆ. ಒಂದೆರಡು ಸಿನಿಮಾ ಮಾಡಬೇಕು ಎನ್ನುವ ಉದ್ದೇಶವಿದ್ದಿದ್ದರೆ ಬಂದ ತಕ್ಷಣದಲ್ಲೇ ಹೀರೊ ಆಗುತ್ತಿದ್ದೆ. ಬೇಗ ಸ್ಟಾರ್ ಆಗಬೇಕು, ಪ್ರಚಾರ ಬೇಕು, ಇದನ್ನು ಉಪಯೋಗಿಸಿಕೊಂಡು ಬೇರೆಲ್ಲೋ ಹೋಗಬೇಕು ಎನ್ನುವಂತಿದ್ದರೆ ಬಂದ ತಕ್ಷಣದಲ್ಲೇ ಸಿನಿಮಾ ಮಾಡುತ್ತಿದ್ದೆ. ಎಂಟು ವರ್ಷದ ಸುದೀರ್ಘ ಪಯಣ ಮಾಡಿರುವುದೇ ಇಲ್ಲಿ ಗಟ್ಟಿಯಾಗಿ ಇರಬೇಕು ಎನ್ನುವ ಉದ್ದೇಶದಿಂದ.

ಐ ಆ್ಯಮ್ ಗಾಡ್ ಎಂದ ರವಿ ಗೌಡ

'ಧ್ವಜ' ಸಿನಿಮಾ ಮೂಲಕ ನಾಯಕನಾಗಿ ಚಂದನವನದಲ್ಲಿ ಮೊದಲ ಹೆಜ್ಜೆ ಇಟ್ಟಿದ್ದ ನಟ ರವಿ ಗೌಡ, 'ಐ ಆ್ಯಮ್ ಗಾಡ್' ಎಂಬ ಸಿನಿಮಾ ಮೂಲಕ ನಿರ್ದೇಶಕರಾಗುತ್ತಿದ್ದಾರೆ. ಈ ಸಿನಿಮಾ ಇಂದು (ನ.7) ತೆರೆಕಂಡಿದೆ. ನಟನೆ, ನಿರ್ದೇಶನದ ಜೊತೆಗೆ ಈ ಸಿನಿಮಾದ ನಿರ್ಮಾಣವನ್ನೂ ಅವರೇ ಮಾಡಿದ್ದು ಈ ಕುರಿತು ಸಿನಿಮಾ ರಂಜನೆ ಜೊತೆಗೆ ಮಾತಿಗೆ ಸಿಕ್ಕಾಗ...

'ನಾನು 'ಧ್ವಜ' ಸಿನಿಮಾ ರಿಲೀಸ್‌ಗೂ ಮುನ್ನವೇ 'ಉಪ್ಪಿ–2'ನ ನಿರ್ದೇಶನ ತಂಡದಲ್ಲಿ ಕೆಲಸ ಮಾಡಿದ್ದೆ. 'ಧ್ವಜ' ರಿಮೇಕ್ ಸಿನಿಮಾವಾಗಿತ್ತು. ಇದಾದ ಬಳಿಕ ಈ ಕ್ಷೇತ್ರದಲ್ಲಿ ಮುಂದುವರಿಯಬೇಕೇ, ಬೇಡವೇ ಎನ್ನುವುದರಲ್ಲೇ ಒಂದು ವರ್ಷ ಕಳೆದೆ. ಬಳಿಕ ಸಿನಿಮಾ ಮಾಡಲು ಸ್ಕ್ರಿಪ್ಟ್ ಹುಡುಕತೊಡಗಿದೆ. ಯಾವುದೂ ಸಿಗದೇ ಇದ್ದಾಗ ನಾನೇ ಕಥೆ ಬರೆಯಲು ಕುಳಿತೆ. ಯಾವುದೇ ಅನುಭವ ಇಲ್ಲದೇ ಈ ಕೆಲಸಕ್ಕೆ ಕೈಹಾಕಿದ ಕಾರಣ ಹಾಗೂ ಒಂದು ಕೊನೆಯ ಪ್ರಯತ್ನವೆಂಬಂತೆ ನನ್ನ ಹೆಜ್ಜೆ ಇದ್ದ ಕಾರಣ ಕೊಂಚ ಹೆಚ್ಚಿನ ಅವಧಿಯನ್ನೇ ಇದಕ್ಕಾಗಿ ತೆಗೆದುಕೊಂಡೆ. ಸಿನಿಮಾದ ಶೂಟಿಂಗ್ ಆರಂಭಿಸಿದ ಬಳಿಕವೂ ಕೆಲ ಕ್ಷುಲ್ಲಕ ಕಾರಣಗಳಿಂದ ಚಿತ್ರೀಕರಣ ವಿಳಂಬವಾಗುತ್ತಾ ಬಂತು. ಈ ಸಿನಿಮಾದ ನಿರ್ದೇಶಕ, ನಾಯಕ, ನಿರ್ಮಾಪಕ ನಾನೇ. ಇದರಿಂದ ಸಿನಿಮಾಗೆ ಯಾವ ರೀತಿಯೂ ತೊಂದರೆ ಆಗಿಲ್ಲ. ಈ ಜವಾಬ್ದಾರಿಯಿಂದ ಸ್ವಲ್ಪ ಕಷ್ಟವಾಯಿತು ಬಿಟ್ಟರೆ ಹೆಚ್ಚಿನ ವಿಷಯಗಳನ್ನು ಕಲಿತೆ ಎನ್ನಬಹುದು. ಕಲಾವಿದರ ಡೇಟ್ ಸಮಸ್ಯೆ, ಹಾಡೊಂದು ತಡವಾಯಿತು ಹೀಗೆ ನಾನಾ ಕಾರಣಗಳಿಂದ ಸಿನಿಮಾ ಮುಂದೂಡಿಕೆಯಾಯಿತು. ನಾನೇ ನಿರ್ಮಾಪಕನಾಗಿದ್ದ ಕಾರಣ ಹೆಚ್ಚು ಸಮಸ್ಯೆಯಾಗಲಿಲ್ಲ. ಎಲ್ಲಾ ಜವಾಬ್ದಾರಿಗಳನ್ನು ನಿಭಾಯಿಸುವುದು ಸವಾಲಿನದ್ದಾಗಿತ್ತು' ಎನ್ನುತ್ತಾರೆ ರವಿ.

'ಉಪೇಂದ್ರ ಅವರಿಂದ ಚಿತ್ರಕಥೆಯ ಸ್ಟೈಲ್ ಕಲಿತೆ. ಯಾವುದೇ ಸಿನಿಮಾದ ಅನುಭವ ಇಲ್ಲದೇ ಅವರ ತಂಡ ಸೇರಿಕೊಂಡಿದ್ದೆ. ಸಿನಿಮಾದ ಪ್ರತಿಯೊಂದು ವಿಷಯವನ್ನೂ ಕಲಿತದ್ದು ಅಲ್ಲೇ. ನಾನು ನಟನಾಗಬೇಕು ಎನ್ನುವ ಆಸೆ ಹೊತ್ತಿದ್ದೆ. ಪ್ರೇಮಕಥೆಯೊಂದನ್ನು ಮಾಡುವ ಯೋಚನೆ ಮಾಡಿದ್ದ ನಾನು, ಥ್ರಿಲ್ಲರ್ ಅಂಶವನ್ನು ಅದಕ್ಕೆ ಸೇರಿಸಿದೆ. ಅನವಶ್ಯಕವಾಗಿ ಪ್ರೇಮಕಥೆಗೆ ಥ್ರಿಲ್ಲರ್ ಅಂಶಗಳನ್ನು ಜೋಡಿಸುವುದು ಕೆಲವೊಮ್ಮೆ ಸರಿಹೊಂದುವುದಿಲ್ಲ. ನನ್ನ ಕಥೆಯಲ್ಲಿ ಎರಡು ಕಥೆಗಳು ಸಮನಾಂತರವಾಗಿ ಸಾಗುತ್ತದೆ' ಎನ್ನುತ್ತಾ ತಮ್ಮ ಪಾತ್ರದತ್ತ ಮಾತು ಹೊರಳಿಸಿದರು.

'ಸಿನಿಮಾದಲ್ಲಿ ನಾನು 'ದೇವ' ಎಂಬ ಪಾತ್ರದಲ್ಲಿ ನಟಿಸಿದ್ದೇನೆ. ನೇರನುಡಿಯ, ಒರಟು ವ್ಯಕ್ತಿತ್ವ ಈತನದು. ತನ್ನವರನ್ನು ಬಹಳ ಇಷ್ಟಪಡುವವನು ಹಾಗೂ ಅವರ ರಕ್ಷಣೆ ತನ್ನ ಜವಾಬ್ದಾರಿ ಎಂದುಕೊಂಡವನು. ಈ ಸಂದರ್ಭದಲ್ಲಿ ತನ್ನವರಿಗೆ ತೊಂದರೆಯಾದಾಗ ಅದನ್ನು ಹೇಗೆ ನಿಭಾಯಿಸುತ್ತಾನೆ ಎನ್ನುವುದೇ ಸಿನಿಮಾದ ಕಥೆ. 'ಐ ಆ್ಯಮ್ ಗಾಡ್' ಎನ್ನುವ ಶೀರ್ಷಿಕೆ ಅಂತಿಮವಾಗಿದ್ದು ಉಪ್ಪಿ ಅವರ ಪ್ರಭಾವದಿಂದಲೇ. ಸಿನಿಮಾದೊಳಗಿರುವ ನೆಗೆಟಿವ್ ಶೇಡ್ ಪಾತ್ರವು ಗೋಡೆ ಮೇಲೆ ಬರೆಯುವ ಪದಗಳು ಇವು' ಎಂದರು ರವಿ ಗೌಡ.

'ಹೊಸಬರ ಸಿನಿಮಾ ಬಂದಾಗ ಎಲ್ಲರ ಮನಸ್ಸಿನಲ್ಲೂ 'ಸಿನಿಮಾ ಹೇಗಿರಲಿದೆಯೋ' ಎನ್ನುವ ಸಂದೇಹ ಸಹಜ. ಹೀಗಿದ್ದರೂ ಹೊಸಬರ ಸಿನಿಮಾವನ್ನೇ ನೋಡುವ ಒಂದಿಷ್ಟು ಜನರಿದ್ದಾರೆ. ಅಂತಹ ಜನ ನಮ್ಮ ನಡುವೆಯೇ ಇರುತ್ತಾರೆ. ಅಂತಹ ಪ್ರೇಕ್ಷಕರೇ ಸಿನಿಮಾ ಬಗ್ಗೆ ಮಾತನಾಡಿದಾಗ ಹೊಸಬರಿಗೆ ಭರವಸೆ ಮೂಡುತ್ತದೆ. ಸಿನಿಮಾ ನೋಡಿದವರನ್ನು ಸಿನಿಮಾ ಹೇಗಿದೆ ಎಂದು ಕೇಳಿ ಅವರ ಅಭಿಪ್ರಾಯ ಪಡೆದು ಸಿನಿಮಾ ನೋಡಿ ಎನ್ನುವಷ್ಟು ಭರವಸೆಯನ್ನು ನಾನು ಈ ಕಥೆ ಮೇಲೆ ಹೊಂದಿದ್ದೇನೆ' ಎನ್ನುತ್ತಾ ಮಾತಿಗೆ ವಿರಾಮವಿತ್ತರು.

ನೈಜ ಘಟನೆಯ 'ಲವ್ ಯು ಮುದ್ದು'

'ಕೆಮಿಸ್ಟ್ರಿ ಆಫ್ ಕರಿಯಪ್ಪ' ಸಿನಿಮಾದ ನಿರ್ದೇಶಕ ಕುಮಾರ್ ನಿರ್ದೇಶನದ 'ಲವ್ ಯು ಮುದ್ದು' ಇಂದು (ನ.7) ತೆರೆಕಂಡಿದೆ.

ಈ ಸಿನಿಮಾದಲ್ಲಿ ಸಿದ್ದು ಮೂಲಿಮನಿ ನಾಯಕನಾಗಿ ಹಾಗೂ ರೇಷ್ಮಾ ನಾಯಕಿಯಾಗಿ ಬಣ್ಣಹಚ್ಚಿದ್ದಾರೆ. ಮಹಾರಾಷ್ಟ್ರದ ಸೊಲ್ಲಾಪುರದ ಯುವ ದಂಪತಿ ಆಕಾಶ್ ನಾರಾಯಣ್ಕರ್ ಮತ್ತು ಅಂಜಲಿ ಭಾಯ್ ಶಿಂಧೆ ಜೀವನದ ಕಥೆಯೇ ಈ ಸಿನಿಮಾದ ಎಳೆ.

ಪ್ರೀತಿಯೇ ಸರ್ವಸ್ವ, ಪ್ರೀತಿಯೇ ಸಕಲ ಎನ್ನುವುದನ್ನು ಸಾಬೀತು ಮಾಡಿದ ಈ ಜೋಡಿಯ ಜೀವನದಲ್ಲಾದ ಏಳುಬೀಳಿನ ಕಥೆ ಇದಾಗಿದೆ. ನವದಂಪತಿಗಳು ದೇವರ ದರ್ಶನ ಪಡೆಯಲು ಹೋದಾಗ ಊಹಿಸಲಾಗದ ಘಟನೆ ನಡೆಯಿತು. ಅದು ಏನು? ಅವರಿಬ್ಬರ ಬಾಳಲ್ಲಿ ನಡೆದ ಘೋರ ದುರಂತವೇನು ಎನ್ನುವುದಕ್ಕೆ ಸಿನಿಮಾ ರೂಪ ನೀಡಿದ್ದಾರೆ ಕುಮಾರ್. ಇದು ಅವರ ಐದನೇ ಸಿನಿಮಾ. ರಾಜೇಶ್ ನಟರಂಗ, ತಬಲಾ ನಾಣಿ ತಾರಾಬಳಗದಲ್ಲಿದ್ದಾರೆ. ಕಿಶನ್ ಎಂಟರ್‌ಟೇನ್ಮೆಂಟ್ ಬ್ಯಾನರ್‌ನಡಿ ಕಿಶನ್ ಟಿ.ಎನ್. ಈ ಚಿತ್ರ ನಿರ್ಮಾಣ ಮಾಡಿದ್ದಾರೆ.

ಚಂದನವನದ ತೆರೆಗಳಲ್ಲಿ ಏಳು ಸಿನಿಮಾ

ಸಾಹಸಸಿಂಹ ವಿಷ್ಣುವರ್ಧನ್ ನಟನೆಯ 'ಯಜಮಾನ' ಇಂದು (ನ.7) ಮರು ಬಿಡುಗಡೆಯಾಗುತ್ತಿದ್ದು, ಇದರ ಜೊತೆಗೆ ಏಳು ಹೊಸ ಕನ್ನಡ ಚಿತ್ರಗಳು ರಿಲೀಸ್ ಆಗುತ್ತಿವೆ.

ರೋಣ

ಬಿ.ಆರ್.ಕೆ ಪ್ರೊಡಕ್ಷನ್ಸ್ ಮೂಲಕ ನಿರ್ಮಾಣವಾಗಿರುವ ಸಿನಿಮಾ ಇದಾಗಿದ್ದು, ಸತೀಶ್ ಕುಮಾರ್ ನಿರ್ದೇಶನ ಮಾಡಿದ್ದಾರೆ. ಅಪ್ಪ-ಮಗನ ಕಥೆಯನ್ನು ಒಳಗೊಂಡಿರುವ ಈ ಸಿನಿಮಾದಲ್ಲಿ, ರಘು ರಾಜನಂದ ಹಾಗೂ ಪ್ರಕೃತಿ ಪ್ರಸಾದ್ ಮುಖ್ಯಭೂಮಿಕೆಯಲ್ಲಿದ್ದಾರೆ. ಶರತ್ ಲೋಹಿತಾಶ್ವ ನಾಯಕನ ತಂದೆಯ ಪಾತ್ರದಲ್ಲಿ ನಟಿಸಿದ್ದಾರೆ.

ಐ ಆ್ಯಮ್ ಗಾಡ್

ರವಿ ಗೌಡ ನಟಿಸಿ, ನಿರ್ದೇಶಿಸಿ, ನಿರ್ಮಿಸಿರುವ ಈ ಸಿನಿಮಾ ಸಸ್ಪೆನ್ಸ್ ಥ್ರಿಲ್ಲರ್ ಪ್ರೇಮಕಥೆಯಾಗಿದೆ. ಚಿತ್ರದಲ್ಲಿ ನಾಯಕಿಯಾಗಿ ವಿಜೇತಾ ನಟಿಸಿದ್ದಾರೆ. ರವಿಶಂಕರ್, ಅವಿನಾಶ್, ಅರುಣ ಬಾಲರಾಜ್ ಹಾಗೂ ನಿರಂಜನ್ ಕುಮಾರ್ ತಾರಾಬಳಗದಲ್ಲಿದ್ದಾರೆ. ಅಜನೀಶ್ ಲೋಕನಾಥ್ ಸಂಗೀತ ನಿರ್ದೇಶನ, ಜಿತಿನ್ ದಾಸ್ ಛಾಯಾಚಿತ್ರಗ್ರಹಣ ಸಿನಿಮಾಗಿದೆ.

ಇದರ ಜೊತೆಗೆ **'ಹೇ ಪ್ರಭು'**, **'ಗಡಾಕೇಸರಿ'**, **'ನಿಷಿದ್ಧ'** ಹಾಗೂ **'ಡಿಡಿಡಿ'** ಎಂಬ ಕನ್ನಡ ಸಿನಿಮಾಗಳೂ ತೆರೆಕಂಡಿವೆ.

ದಿ ಗರ್ಲ್‌ಫ್ರೆಂಡ್

ಕನ್ನಡಿಗರೇ ಆದ ನಟಿ ರಶ್ಮಿಕಾ ಮಂದಣ್ಣ ಹಾಗೂ ದೀಕ್ಷಿತ್ ಶೆಟ್ಟಿ ನಟಸಿರುವ ತೆಲುಗು ಸಿನಿಮಾ 'ದಿ ಗರ್ಲ್‌ಫ್ರೆಂಡ್' ಕೂಡಾ ಇಂದು ತೆರೆಕಾಣುತ್ತಿದೆ. ಸಿನಿಮಾವನ್ನು ರಾಹುಲ್ ರವೀಂದ್ರನ್ ನಿರ್ದೇಶನ ಮಾಡಿದ್ದು, ನಿರ್ಮಾಪಕ ಅಲ್ಲು ಅರವಿಂದ್ ಚಿತ್ರವನ್ನು ಪ್ರಸ್ತುತಪಡಿಸುತ್ತಿದ್ದಾರೆ. ತೆಲುಗು, ಹಿಂದಿಯಲ್ಲಷ್ಟೇ ಈ ಸಿನಿಮಾ ತೆರೆಕಾಣುತ್ತಿದೆ.

ಹಾಸನ ನಗರಾಭಿವೃದ್ಧಿ ಪ್ರಾಧಿಕಾರ ಬಿ.ಎಂ.ರಸ್ತೆ, ಹಾಸನ.

ದೂರವಾಣಿ ಸಂಖ್ಯೆ: 268876, 266719,

ನಂ: ಹಾನಪ್ರಾ/ಎಸ್.ಎಂ.ಕೆ.ನಗರ/ಮೂ.ನಿ/ವಾ.ನಿ/ಬಿ.ನಿ/ಇ-ಹರಾಜು/ಪ್ರಕಟಣೆ/02/2025-26

ದಿನಾಂಕ:05.11.2025

ಹಾಸನ ನಗರಾಭಿವೃದ್ಧಿ ಪ್ರಾಧಿಕಾರವು ಅಭಿವೃದ್ಧಿಪಡಿಸಿರುವ ಎಸ್.ಎಂ.ಕೆ.ನಗರ (Airport enclave) ವಸತಿ ಬಡಾವಣೆಯಲ್ಲಿ ಮೂಲೆ ನಿವೇಶನಗಳು, ವಾಣಿಜ್ಯ ನಿವೇಶನಗಳು ಮತ್ತು ಮಧ್ಯಂತರ ವಸತಿ ಬಿಡಿ ನಿವೇಶನಗಳ ಇ-ಹರಾಜು ಸಾರ್ವಜನಿಕ ಪ್ರಕಟಣೆ

ಇ-ಹರಾಜನ್ನು ಆರಂಭಿಸುವ ದಿನಾಂಕ:17.11.2025 ಭಾರತೀಯ ಕಾಲಮಾನ 17.00 ಗಂಟೆಯ ನಂತರ ಇ.ಎಂ.ಡಿ. ಮೊತ್ತದೊಂದಿಗೆ ಇ-ಹರಾಜಿನಲ್ಲಿ ಪಾಲ್ಗೊಳ್ಳಲು, ಆಸಕ್ತಿ ವ್ಯಕ್ತಪಡಿಸಲು ಕೊನೆಯ ದಿನಾಂಕ:20.12.2025 ಭಾರತೀಯ ಕಾಲಮಾನ 17.00 ಗಂಟೆ ವರೆಗೆ ಕ್ರಮ ಸಂಖ್ಯೆ:01 ರಿಂದ 20 ರವರೆಗಿನ ನಿವೇಶನಗಳ ಇ-ಹರಾಜನ್ನು ಮುಕ್ತಾಯಗೊಳಿಸಲು ಕೊನೆಯ ದಿನಾಂಕ:22.12.2025 ಭಾರತೀಯ ಕಾಲಮಾನ 17.00ಗಂಟೆಗೆ (ಸಂಜೆ-5.00ಗಂಟೆ) (ಡೆಲ್ಟಾ ಟೈಮ್ 5.00 ನಿಮಿಷ) ಕ್ರಮ ಸಂಖ್ಯೆ:21 ರಿಂದ 40 ರವರೆಗಿನ ನಿವೇಶನಗಳ ಇ-ಹರಾಜನ್ನು ಮುಕ್ತಾಯಗೊಳಿಸಲು ಕೊನೆಯ ದಿನಾಂಕ:23.12.2025 ಭಾರತೀಯ ಕಾಲಮಾನ 17.00ಗಂಟೆಗೆ (ಸಂಜೆ-5.00ಗಂಟೆ) (ಡೆಲ್ಟಾ ಟೈಮ್ 5.00 ನಿಮಿಷ) ಇ-ಹರಾಜಿನಲ್ಲಿ ಭಾಗವಹಿಸುವವರು, ಹರಾಜಿನಲ್ಲಿರುವ ನಿವೇಶನದ ಒಟ್ಟು ಮೌಲ್ಯ ರೂ.30.00 ಲಕ್ಷದವರೆಗೆ ಪಾವತಿ ಮಾಡಬೇಕಾದ ಇ.ಎಂ.ಡಿ ಹಣ ಪ್ರತಿ ನಿವೇಶನಕ್ಕೆ ರೂ.50,000/- ಹಾಗೂ ರೂ.30.00 ಲಕ್ಷಕ್ಕಿಂತ ಮೇಲ್ಪಟ್ಟ ಮೌಲ್ಯದ ನಿವೇಶನಗಳಿಗೆ ಇ.ಎಂ.ಡಿ ಹಣ ಪ್ರತಿ ನಿವೇಶನಕ್ಕೆ ರೂ.1,00,000/- ಕನಿಷ್ಠ ಬಿಡ್ ಬದಲಾವಣೆ ಮೊತ್ತ ನಿವೇಶನಗಳಿಗೆ ರೂ.10,000/-ಗಳು. ಇ-ಹರಾಜಿನಲ್ಲಿ ಭಾಗವಹಿಸಲು ಹೆಚ್ಚಿನ ಮಾಹಿತಿಗಾಗಿ ನಿವೇಶನಗಳ ವಿವರಕ್ಕೆ ಸಂಪರ್ಕಿಸಬೇಕಾದ ಅಂತರ್ಜಾಲ https://kppp.karnataka.gov.in

ಎಸ್.ಎಂ.ಕೆ.ನಗರ ವಸತಿ ಬಡಾವಣೆಯಲ್ಲಿ ಲಭ್ಯವಿರುವ ಮೂಲೆ ಮತ್ತು ವಾಣಿಜ್ಯ ನಿವೇಶನಗಳು (ಕ್ರ.ಸಂ. 01 ರಿಂದ 20)

ಕ್ರ. ಸಂ	ನಿವೇಶನ ಸಂಖ್ಯೆ ಮೂಲೆ ನಿವೇಶನ	Site Facing of roads	ಅಳತೆ (ಮೀಟರ್‌ಗಳಲ್ಲಿ) ಪೂರ್ವ-ಪಶ್ಚಿಮ	ಉತ್ತರ-ದಕ್ಷಿಣ	ವಿಸ್ತೀರ್ಣ ಚ.ಮೀ	ಪ್ರಾಧಿಕಾರದಿಂದ ನಿಗದಿಪಡಿಸಿರುವ ಕನಿಷ್ಠ ಬೆಲೆ(ಪ್ರತಿ. ಚ.ಅಡಿ ಒಂದಕ್ಕೆ ರೂ.2250/-
1	1	S-E	(15.00+17.00)/2	(4.80+12.80)/2	140.80	3408750
2	22	S-E	(6.90+12.10)/2	(12.10+13.10)/2	113.40	2745000
3	46	S-W	(12.00+13.00)/2	(6.80+12.10)/2	118.13	2859927
4	2038	S-W	(11.40+17.30)/2	(12.00+13.10)/2	172.20	4169250
5	2371	S-W	(15.50+26.50)/2	(18.00+21.40)/2	369.00	8932500
6	2372	S-E	(7.30+15.50)/2	(12.00+14.30)/2	136.80	3312000
7	3750	S-E	(12.50+16.70)/2	(18.00+18.50)/2	262.80	6363000
8	3762	N-E	(20.60+16.60)/2	(18.10+18.10)/2	336.66	8149500
9	4476	N-E	(19.80+16.60)/2	(18.30+18.00)/2	330.33	7997289

ಎಸ್.ಎಂ.ಕೆ.ನಗರ ವಸತಿ ಬಡಾವಣೆಯಲ್ಲಿ ಲಭ್ಯವಿರುವ ವಾಣಿಜ್ಯ ನಿವೇಶನಗಳ ವಿವರಗಳು (ಕ್ರ.ಸಂ. 10 ರಿಂದ 20)

ಕ್ರ. ಸಂ	ನಿವೇಶನ ಸಂಖ್ಯೆ ವಾಣಿಜ್ಯ ನಿವೇಶನ	Site Facing of roads	ಅಳತೆ (ಮೀಟರ್‌ಗಳಲ್ಲಿ) ಪೂರ್ವ-ಪಶ್ಚಿಮ	ಉತ್ತರ-ದಕ್ಷಿಣ	ವಿಸ್ತೀರ್ಣ ಚ.ಮೀ	ಪ್ರಾಧಿಕಾರದಿಂದ ನಿಗದಿಪಡಿಸಿರುವ ಕನಿಷ್ಠ ಬೆಲೆ(ಪ್ರತಿ. ಚ.ಅಡಿ ಒಂದಕ್ಕೆ ರೂ.3250/-
10	6354	East	24.60+24.50/2	35.60	873.98	30563000
11	6355	East	24.60+24.90/2	35.60	881.11	30810000
12	6356	N-E	41.90+9.20/2	47.70+35.60/2	887.58	31037500
13	6365	East	25.00+42.55/2	27.20+35.00/2	1050.40	36731500
14	6369	East	58.00+39.60/2	27.00+25.30/2	1234.64	43173000
15	6370	N-S	30.10+13.00/2	25.00+18.30/2	394.36	13789750
16	6396	S-E	15.25+34.90/2	25.20+32.90/2	631.89	22096750
17	6408	N-W	25.60+21.20/2	33.00+32.50/2	760.50	26594750
18	6409	West	23.30	32.50	757.25	26481033
19	6410	West	23.30	32.50	757.25	26481033
20	6411	West	23.30	32.50	757.25	26481033

ಎಸ್.ಎಂ.ಕೆ.ನಗರ ವಸತಿ ಬಡಾವಣೆಯಲ್ಲಿ ಲಭ್ಯವಿರುವ ವಾಣಿಜ್ಯ ನಿವೇಶನಗಳು ಹಾಗೂ ಮಧ್ಯಂತರ ವಸತಿ ಬಿಡಿ ನಿವೇಶನಗಳ ವಿವರಗಳು (ಕ್ರ.ಸಂ. 21 ರಿಂದ 40)

ಕ್ರ. ಸಂ	ನಿವೇಶನ ಸಂಖ್ಯೆ ವಾಣಿಜ್ಯ ನಿವೇಶನ	Site Facing of roads	ಅಳತೆ (ಮೀಟರ್‌ಗಳಲ್ಲಿ) ಪೂರ್ವ-ಪಶ್ಚಿಮ	ಉತ್ತರ-ದಕ್ಷಿಣ	ವಿಸ್ತೀರ್ಣ ಚ.ಮೀ	ಪ್ರಾಧಿಕಾರದಿಂದ ನಿಗದಿಪಡಿಸಿರುವ ಕನಿಷ್ಠ ಬೆಲೆ(ಪ್ರತಿ. ಚ.ಅಡಿ ಒಂದಕ್ಕೆ ರೂ.3250/-
21	6413	West	18.30	32.40	592.92	20735000
22	6414	West	18.30	32.40	592.92	20735000
23	6417	West	29.50+15.80/2	31.80+35.50/2	720.27	25187500
24	6418	West	24.70	28.35+29.00/2	708.27	24768250
25	6419	West	24.75	29.00	717.75	25099750
26	6420	West	24.75	30.10	744.97	26051775
27	6421	West	18.30	30.75	562.72	19678493
28	6425	S-W	16.90+47.10/2	32.00+44.60/2	1024.00	35808500
29	07	N-W, S-W	72.00	33.00	2376.00	83088720
30	10	N-W, S-W	Odd site	Odd site	1596.32	55823310
31	11	N, E, S, W	72.20	81.20	5862.64	205016500

ಎಸ್.ಎಂ.ಕೆ.ನಗರ ವಸತಿ ಬಡಾವಣೆಯಲ್ಲಿ ಲಭ್ಯವಿರುವ ಮಧ್ಯಂತರ ವಸತಿ ಬಿಡಿ ನಿವೇಶನಗಳ ವಿವರಗಳು (ಕ್ರ.ಸಂ. 32 ರಿಂದ 40)

ಕ್ರ. ಸಂ	ನಿವೇಶನ ಸಂಖ್ಯೆ ವಾಣಿಜ್ಯ ನಿವೇಶನ	Site Facing of roads	ಅಳತೆ (ಮೀಟರ್‌ಗಳಲ್ಲಿ) ಪೂರ್ವ-ಪಶ್ಚಿಮ	ಉತ್ತರ-ದಕ್ಷಿಣ	ವಿಸ್ತೀರ್ಣ ಚ.ಮೀ	ಪ್ರಾಧಿಕಾರದಿಂದ ನಿಗದಿಪಡಿಸಿರುವ ಕನಿಷ್ಠ ಬೆಲೆ(ಪ್ರತಿ. ಚ.ಅಡಿ ಒಂದಕ್ಕೆ ರೂ.2000/-
32	4907	South	(12.00+11.40)/2	(9.00+12.20)/2	124.02	2668900
33	4911	East	9.00	14.00	126.00	2712000
34	4932	North	23.00+23.50/2	8.20.8.60/2	194.14	4178000
35	5151	South	15.00	9.00	135.00	2905200
36	5153	South	9.00	15.00	135.00	2905200
37	5401/1	South	(12.17+12.00)/2	(9.80+7.70)/2	105.74	2275524
38	5401/2	South	(12.17+12.00)/2	(7.70+5.60)/2	80.36	1729347
39	5116	South	35.00+34.20/2	12.00	415.20	8934000
40	5117	South	34.00+32.60/2	12.00	400.80	8624000

ಇ-ಹರಾಜಿನ ಷರತ್ತು ಮತ್ತು ನಿಯಮ ನಿಬಂಧನೆಗಳು ಕೆಳಕಂಡಂತಿವೆ:- 1.ಇ-ಹರಾಜಿನಲ್ಲಿ ಭಾಗವಹಿಸಲಿಚ್ಚಿಸುವವರು ಇ-ಹರಾಜಿಗೆ ಸಂಬಂಧಿಸಿದ ಮಾಹಿತಿಯನ್ನು https://kppp.karnataka.gov.in ವೆಬ್‌ಸೈಟ್‌ನಲ್ಲಿ ಲಾಗಿನ್ ಆಗಿ ಮುಖಪುಟದ ಡೌನ್‌ಲೋಡ್‌ನಲ್ಲಿ ಟೆಂಡರ್‌ದಾರರಿಗೆ ಬಳಕೆದಾರರ ಕೈಪಿಡಿಗಳು ಇಲ್ಲಿ New e-Auction Bidding user manual ಅನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್- 080-46010000 ಮತ್ತು 080-68948777 ಗೆ ಸಂಪರ್ಕಿಸಬಹುದು 2.ಪ್ಯಾನ್ ಕಾರ್ಡ್ (PAN Card, Aadhar Card) ಲಗತ್ತಿಸುವುದು. 3.ಇ-ಮೇಲ್ ವಿಳಾಸ/ ಮೊಬೈಲ್ ದೂರವಾಣಿ ಸಂಖ್ಯೆ/ಸ್ಥಿರ ದೂರವಾಣಿ (ಲ್ಯಾಂಡ್‌ಲೈನ್)ಸಂಖ್ಯೆ ನಮೂದಿಸಿರುವುದು. ನಿರ್ಧಿಷ್ಟಪಡಿಸಿದ ನಮೂನೆಯನ್ನು ಡೌನ್‌ಲೋಡ್ ಮಾಡಿಕೊಂಡು, ವಿವರಗಳನ್ನು ಭರ್ತಿ ಮಾಡಿ, ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಬೇಕಾಗಿರುತ್ತದೆ. 4.ಪಾಲುದಾರ ಸಂಸ್ಥೆ/ಲಿಮಿಟೆಡ್ ಕಂಪನಿಗಳು/ಟ್ರಸ್ಟ್ ಹರಾಜಿನಲ್ಲಿ ಭಾಗವಹಿಸಬಹುದಾಗಿದೆ. ಹೀಗೆ ಭಾಗವಹಿಸುವ ಪಾಲುದಾರ ಸಂಸ್ಥೆ/ಲಿಮಿಟೆಡ್ ಕಂಪನಿಗಳು/ಟ್ರಸ್ಟ್ ಹರಾಜಿನಲ್ಲಿ ಭಾಗವಹಿಸುವ ಮುನ್ನ ತಮ್ಮ ಪಾಲುದಾರಿಕೆ ಸಂಸ್ಥೆಯ ನೊಂದಾವಣಿಯನ್ನು ಭಾರತ ದೇಶದಲ್ಲಿ ಮಾಡಿ ಕೊಂಡಿರಬೇಕು. 5.ಹರಾಜಿನ ನಿವೇಶನಗಳಿಗೆ ಸಂಬಂಧಿಸಿದ ಎಲ್ಲಾ ಕಾನೂನು ಪ್ರಕರಣಗಳು ಹಾಸನದ ನ್ಯಾಯಾಲಯದ ವ್ಯಾಪ್ತಿಗೆ ಒಳಪಡುತ್ತದೆ. 6.ಇ.ಎಂ.ಡಿ.ಮೊತ್ತ ರೂ.50,000/- & ರೂ.1,00,000/-ಗಳನ್ನು ಹಾಗೂ ಇ-ಹರಾಜಿನ ಶುಲ್ಕವನ್ನು ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ DEBIT CARD/CREDIT CARD/NET BANKING ಮುಖಾಂತರ ಅಥವಾ ಡಿ.ಡಿ. ಯೊಂದಿಗೆ ಚಲನ್ ಮುದ್ರಿಸಿ ಐ.ಸಿ.ಐ.ಸಿ.ಐ. ಬ್ಯಾಂಕ್ ಶಾಖೆಗೆ ಪಾವತಿ ಮಾಡಬಹುದಾಗಿದೆ. 7.ಯಶಸ್ವಿ ಬಿಡ್‌ದಾರರು ಬಿಡ್ಡನ್ನು ಅಂಗೀಕೃತಗೊಂಡಿರುವ ಬಗ್ಗೆ ಇ-ಪೋರ್ಟಲ್ ಮುಖಾಂತರವೇ ಪರಿಶೀಲಿಸಿಕೊಂಡು, 25% ರಷ್ಟು ಬಿಡ್ ಮೊತ್ತವನ್ನು (ಇ.ಎಂ.ಡಿ. ರೂ. 50,000/- ಮತ್ತು ರೂ.1,00,000/-ಗಳನ್ನು ಹೊರತುಪಡಿಸಿ) ಇ-ಹರಾಜು ಮುಕ್ತಾಯಗೊಂಡು ಅಂಗೀಕೃತಗೊಂಡ ಅವಧಿಯ 72 ಗಂಟೆಗೆ (03ದಿನಗಳ ಒಳಗಾಗಿ) ಅಥವಾ ಅದರೊಳಗಾಗಿ ಕೆಳಕಂಡ ಬ್ಯಾಂಕ್ ಖಾತೆಗೆ ಪಾವತಿ ಮಾಡಬೇಕು (ಪಾವತಿಸಿದ ನಂತರ ಅದರ ಪ್ರತಿಯನ್ನು ಕಛೇರಿಗೆ ಸಲ್ಲಿಸುವುದು) ಸರ್ಕಾರಿ ರಜಾ/ಬ್ಯಾಂಕ್ ರಜಾ ಇದ್ದಲ್ಲಿ, ನಂತರದ ದಿನದಲ್ಲಿ (Next Day) ಪಾವತಿಸತಕ್ಕದ್ದು. ಹಾಗೂ ಪಾವತಿಸಲು ವಿಫಲರಾದಲ್ಲಿ ಇ.ಎಂ.ಡಿ. ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು. ಪಾವತಿಯ ರೀತಿ: ಆರ್.ಟಿ.ಜಿ.ಎಸ್/ಎನ್.ಇ.ಎಫ್.ಟಿ.

Beneficiary Name: Commissioner, Hassan Urban Development Authority, Hassan (HUDA)

ಕ್ರಸಂ.	ಬ್ಯಾಂಕ್ ಹೆಸರು	ಖಾತೆ ಸಂಖ್ಯೆ	ಐ.ಎಫ್.ಎಸ್.ಸಿ. ಕೋಡ್
1	ಬ್ಯಾಂಕ್ ಆಫ್ ಬರೋಡ, ಹುಡಾ ಶಾಖೆ, ಬಿ.ಎಂ.ರಸ್ತೆ, ಹಾಸನ	74730100000418	BARB0VJHUDA (ZERO)

8.ಯಶಸ್ವಿ ಬಿಡ್‌ದಾರರು ನಿವೇಶನದ ಬಿಡ್‌ನ ಮೊತ್ತದ ಶೇಕಡಾ 25 ರಷ್ಟು ಪಾವತಿಸಿದ ನಂತರ ಇ-ಹರಾಜು ಬಿಡ್‌ನ್ನು ಪ್ರಾಧಿಕಾರ ಸ್ಥಿರೀಕರಣದ ಬಗ್ಗೆ ನಮೂನೆ 1 ರಲ್ಲಿ ತಿಳುವಳಿಕೆ ಪತ್ರವನ್ನು ಸ್ವೀಕರಿಸಿದ ದಿನಾಂಕದಿಂದ 45(ನಲವತ್ತೈದು) ದಿನಗಳೊಳಗಾಗಿ ವಸತಿ ಮೂಲೆ ನಿವೇಶನಗಳ ಪೂರ್ಣ ಹಣ ಸಂದಾಯ ಮಾಡಬೇಕು. ಅದಕ್ಕೆ ತಪ್ಪಿದಲ್ಲಿ ಶೇಕಡಾ 18 ರಂತೆ ಬಡ್ಡಿಯೊಂದಿಗೆ 90 (ತೊಂಭತ್ತು) ದಿನಗಳ ಕಾಲಾವಕಾಶ ವಿಸ್ತರಿಸಲಾಗುವುದು. ಪ್ರಾಧಿಕಾರವು ಒಪ್ಪಿದಲ್ಲಿ ಶೇಕಡಾ 21 ರಂತೆ ಬಡ್ಡಿ ದರದಲ್ಲಿ ಮುಂದಿನ 30 (ಮೂವತ್ತು) ದಿವಸಗಳ ಕಾಲಾವಕಾಶ ನೀಡಲಾಗುವುದು. ಈ ಮೇಲ್ಕಂಡ ಎಲ್ಲಾ ಕಾಲಾವಧಿಯು ಮುಗಿದ ನಂತರ ಮತ್ತೆ ಕಾಲಾವಕಾಶ ನೀಡಲು ನಿಯಮವಳಿಯಲ್ಲಿ ಅವಕಾಶವಿರುವುದಿಲ್ಲ. ನಿಗದಿತ ಅವಧಿ ಒಳಗಡೆ ಬಾಕಿ ಬಿಡ್ ಮೊತ್ತದ ಹಣ ಪಾವತಿಸದಿದ್ದಲ್ಲಿ ಹರಾಜು ಮೊತ್ತದ ಶೇಕಡಾ 25ರಷ್ಟು ಮುಂಗಡ ಠೇವಣಿ ಹಣವನ್ನು ಯಾವುದೇ ಸೂಚನೆ ನೀಡದೆ ಪ್ರಾಧಿಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು. ಹಾಗೂ ಸದರಿ ಹರಾಜು ರದ್ದಪಡಿಸಿ, ಹರಾಜಿಗೆ ತಗಲಿದ ವೆಚ್ಚವನ್ನು ನಿಮ್ಮಿಂದ ವಸೂಲು ಮಾಡಲಾಗುವುದು. 9.ಯಶಸ್ವಿ ಬಿಡ್‌ದಾರರು ನಿಗದಿತ ಅವಧಿಯೊಳಗೆ ಹಣ ಪಾವತಿಸದಿದ್ದಲ್ಲಿ ನಿವೇಶನ ಮರು ಹರಾಜು ಮಾಡಲಾಗುವುದು. ಮರುಹರಾಜಿನಲ್ಲಿ ಮೊದಲ ಬಿಡ್‌ದಾರರಿಂದ ಕಡಿಮೆ ಬಿಡ್ ಮೊತ್ತಕ್ಕೆ ಹರಾಜಿನಲ್ಲಿ ಪ್ರಾಧಿಕಾರಕ್ಕೆ ನಷ್ಟವಾಗುವ ಮೊತ್ತವನ್ನು ಮೊದಲ ಬಿಡ್‌ದಾರರಿಂದ ವಸೂಲಿ ಮಾಡಲು ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳಲಾಗುವುದು. ಒಂದು ವೇಳೆ ಮೊದಲ ಬಿಡ್‌ದಾರರು ಬಿಡ್ ಮೊತ್ತಕ್ಕಿಂತ ಹೆಚ್ಚಿನ ಮೊತ್ತಕ್ಕೆ ಹರಾಜಿನಲ್ಲಿ ಬರುವ ಲಾಭಾಂಶ ಮೊದಲ ಬಿಡ್‌ದಾರರಿಗೆ ನೀಡಲಾಗುವುದಿಲ್ಲ. 10.ಹರಾಜಿನಲ್ಲಿ ನಿವೇಶನ ಪಡೆದವರು ನಿವೇಶನವನ್ನು ವಿಭಜಿಸಲು ನಿಯಮಾವಳಿಯಲ್ಲಿ ಅವಕಾಶವಿರುವುದಿಲ್ಲ. 11.ಹರಾಜಿನಲ್ಲಿ ನಿವೇಶನ ಪಡೆದವರು ಪ್ರಾಧಿಕಾರದಿಂದ ನಿವೇಶನ ನೋಂದಾಯಿಸಿಕೊಡುವಾಗ ವಿಧಿಸಿದ ಷರತ್ತುಗಳಿಗೆ ಬದ್ಧರಾಗಿರತಕ್ಕದ್ದು. 12.ನಿವೇಶನಗಳನ್ನು ಎಲ್ಲಿ ಹೇಗಿವೆಯೋ ಹಾಗೆಯೇ ಹರಾಜು ನಡೆಸಲಾಗುವುದು. 13.ಬ್ಯಾಂಕ್ ಸೇವಾ ಶುಲ್ಕ ಇತ್ಯಾದಿಗಳನ್ನು ಬಿಡ್ಡುದಾರರೇ ಭರಿಸತಕ್ಕದ್ದು. 14.ಅಖೈರು ಬಿಡ್ಡಾದ ನಂತರ ಸದರಿ ಬಿಡ್ಡನ್ನು ಅಂಗೀಕರಿಸುವ ಅಥವಾ ಯಾವುದೇ ಕಾರಣ ನೀಡದೆ, ತಿಳುವಳಿಕೆ ನೀಡದೆ ತಿರಸ್ಕರಿಸುವ ಹಕ್ಕನ್ನು ಪ್ರಾಧಿಕಾರ ಹೊಂದಿರುತ್ತದೆ. 15.ಈ ಹರಾಜನ್ನು ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಮೂಲೆ ಮತ್ತು ವಾಣಿಜ್ಯ ನಿವೇಶನಗಳ ವಿಲೇವಾರಿ ನಿಯಮ 1991ರ ನಿಯಮಾವಳಿ ರೀತ್ಯಾ ಕ್ರಮವಹಿಸಲಾಗುವುದು. 16.ನಿವೇಶನದ ವಿವರಕ್ಕೆ ಮತ್ತು ಇತರೆ ಮಾಹಿತಿಗಳಿಗೆ https://kppp.karnataka.gov.in ಲಾಗಿನ್ ಆಗಿ ಪಡೆಯಬಹುದು. 17.ಇ-ಹರಾಜಿನ ಯಶಸ್ವಿ ಬಿಡ್‌ದಾರರು (H-1 Bidders) ನಿವೇಶನದ ಬಿಡ್‌ನ ಮೊತ್ತದ ಶೇಕಡಾ 25ರಷ್ಟು ಹಣ ಪಾವತಿಸಿದ ನಂತರ ಪಾವತಿಸಿರುವ ರಸೀದಿ ಮತ್ತು ಸಂಬಂಧಿಸಿದ ದಾಖಲಾತಿಗಳನ್ನು ಕಛೇರಿಗೆ ಕಡ್ಡಾಯವಾಗಿ ಸಲ್ಲಿಸತಕ್ಕದ್ದು. 18.ಬಿಡ್‌ದಾರರು ಇ-ಪೋರ್ಟಲ್‌ನಲ್ಲಿ ನಿವೇಶನಕ್ಕಾಗಿ ರಿಜಿಸ್ಟ್ರೇಷನ್ ಮಾಡುವ ವೇಳೆ ಬ್ಯಾಂಕ್ ಖಾತೆ ಸಂಖ್ಯೆ ಮತ್ತು ಐ.ಎಫ್.ಎಸ್.ಸಿ ಕೋಡ್‌ನ್ನು ಸರಿಯಾಗಿ ರೀತಿಯಲ್ಲಿ ನಮೂದಿಸಬೇಕು. ತಪ್ಪಿದಲ್ಲಿ ಇ.ಎಂ.ಡಿ. ಮೊತ್ತವನ್ನು ಬ್ಯಾಂಕ್ ಖಾತೆಗೆ https://kppp.karnataka.gov.in ರವರು ವರ್ಗಾಯಿಸಲು ಸಾಧ್ಯವಾಗುವುದಿಲ್ಲ. 19.ಕ್ರ.ಸಂ. 01 ರಿಂದ 68 ನಿವೇಶನಗಳಿಗೆ ಕನಿಷ್ಠ ಬಿಡ್ ಬದಲಾವಣೆ ಮೊತ್ತ ರೂ.10000/- ಗಳು. 20.ಹರಾಜಿನಲ್ಲಿ ವಿಫಲರಾದವರಿಗೆ ಹರಾಜು ಅಂತಿಮಗೊಳಿಸಿದ ನಂತರ ಇ.ಎಂ.ಡಿ. ಮೊತ್ತವನ್ನು https://kppp.karnataka.gov.in ರವರು ನೇರವಾಗಿ ಬ್ಯಾಂಕ್ ಖಾತೆಗೆ ಮರುಪಾವತಿಸಲು ಕ್ರಮವಹಿಸುತ್ತಾರೆ. ಇ.ಎಂ.ಡಿ. ಮೊತ್ತವನ್ನು ಹಿಂದಿರುಗಿಸಲು ತಡವಾದ್ದಲ್ಲಿ, ಇ-ಮೇಲ್ ವಿಳಾಸ refund.eproc@karnataka.gov.in ಹಾಗೂ ದೂರವಾಣಿ ಸಂಖ್ಯೆ: 080-22230960, 080-22234115 ಸಂಪರ್ಕಿಸಬಹುದಾಗಿರುತ್ತದೆ. 21.ಇ-ಹರಾಜು ಕೊನೆಯ ಕ್ಷಣದಲ್ಲಿ ಬರುತ್ತಿರುವ ಬಿಡ್ಡುಗಳಿಗೆ ಡೆಲ್ಟಾ ಟೈಮ್ 5 ನಿಮಿಷಗಳ ಕಾಲ ವಿಸ್ತರಣೆಯಾಗುತ್ತದೆ. ಉದಾ: ಇ-ಹರಾಜಿನಲ್ಲಿ ಪಾಲ್ಗೊಳ್ಳಲು, ಆಸಕ್ತಿ ವ್ಯಕ್ತಪಡಿಸಲು ಅಂತಿಮ ಸಮಯ 5.00 ಎಂದಿದ್ದಲ್ಲಿ ಅದನ್ನು 4.57 ಗಂಟೆಗಳಿಂದ ಪ್ರಾರಂಭಿಸಿ, 5.02 ಘಂಟೆಗಳ ವರೆಗೆ ಅವಧಿ ವಿಸ್ತರಣೆಯಾಗುತ್ತದೆ. ಮತ್ತೆ ಯಾರಾದರೂ ಬಿಡ್‌ದಾರರು ಬಿಡ್ಡನ್ನು 5.01 ಘಂಟೆಗೆ ಮಾಡಿದ್ದಲ್ಲಿ 5.06 ವರೆಗೆ ಅವಧಿ ವಿಸ್ತರಣೆಯಾಗುತ್ತದೆ. 22.ಅಂತಿಮವಾಗಿ ನಿವೇಶನವನ್ನು ಬಿಡ್ಡುದಾರರಿಗೆ ಹಸ್ತಾಂತರಿಸುವ ಸಮಯದಲ್ಲಿ ನಿವೇಶನಗಳ ನಿಖರವಾದ ಅಳತೆಯಲ್ಲಿ ಯಾವುದೇ ವ್ಯತ್ಯಾಸ ಕಂಡು ಬಂದಲ್ಲಿ ಹೆಚ್ಚು/ಕಡಿಮೆ ದರವನ್ನು ಬಿಡ್ಡುದಾರರು ನೀಡಿರುವ ಬಿಡ್ಡಿನ ದರದ ಮೇಲೆ ನಿಗಧಿಪಡಿಸಲಾಗುವುದು. 23.ಹರಾಜಿಗೆ ಸಂಬಂಧಿಸಿದ ಮಾಹಿತಿಯನ್ನು www.hassan.uda.gov.in ವೆಬ್‌ಸೈಟ್‌ನಿಂದ ನೋಡಬಹುದಾಗಿದೆ. ನಿವೇಶನ ಮತ್ತು ಸ್ಥಳದ ಮಾಹಿತಿಗಾಗಿ ಸಂಪರ್ಕಿಸಬೇಕಾದ ವಿವರ:- 1)ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಮೊ:9448330622 2) ಕಾರ್ಯದರ್ಶಿಗಳು ಮೊ:7483179415 3) ನಗರ ಯೋಜಕರು ಮೊ:9741938357, 4) ಮೊ:9844740640,

ಸಹಿ/- (ಕೆ.ಎಂ.ರಮೇಶ್) ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರ, ಹಾಸನ

ಸಹಿ/- (ಪಟೇಲ್ ಶಿವಣ್ಣ) ಅಧ್ಯಕ್ಷರು, ನಗರಾಭಿವೃದ್ಧಿ ಪ್ರಾಧಿಕಾರ, ಹಾಸನ

ವಾಸಾಸಂಇ/ಹಿಸನಿ/ಹಾಸನ/730/ಕೆಎಸ್‌ಎಂಸಿಎ/2025-26

ಆಸ್ತಿ ವಿವರ: ಸಲ್ಲಿಕೆಗೆ ದೂರ...

ಒಂದನೇ ಪುಟದಿಂದ...

ಈ ಪಟ್ಟಿಯಲ್ಲಿ ಕಾಂಗ್ರೆಸ್ ಪ್ರತಿನಿಧಿಸುವ ಶಾಸಕರಾದ, ಮುಖ್ಯ-ಮಂತ್ರಿಯವರ ಆರ್ಥಿಕ ಸಲಹೆಗಾರ-ರಾಗಿರುವ ಬಸವರಾಜ ರಾಯರಡ್ಡಿ, ಮುಖ್ಯಮಂತ್ರಿ ರಾಜಕೀಯ ಕಾರ್ಯದರ್ಶಿ ನಸೀರ್ ಅಹ್ಮದ್, ಬಿಡಿಎ ಅಧ್ಯಕ್ಷ ಎನ್.ಎ.ಹ್ಯಾರಿಸ್, ಮಾಜಿ ಸಚಿವ ಕೆ.ಎನ್. ರಾಜಣ್ಣ, ಸತೀಶ್ ಸೈಲ್, ಟಿ.ಡಿ. ರಾಜೇಗೌಡ, ಸಿ.ಪುಟ್ಟರಂಗ ಶೆಟ್ಟಿ, ಕೆ.ಎಂ. ಉದಯ್, ಕೆ.ಎಚ್. ಪುಟ್ಟಸ್ವಾಮಿಗೌಡ, ಸಿ.ಪಿ. ಯೋಗೇಶ್ವರ, ಡಾ.ಎಚ್.ಡಿ. ರಂಗನಾಥ್, ಎಸ್.ಎನ್. ಸುಬ್ಬಾರೆಡ್ಡಿ, ಕೆ.ಎಂ.ರೂಪಕಲಾ, ಕೆ. ಗೋವಿಂದರಾಜು ಅವರ ಹೆಸರುಗಳಿವೆ.

ಬಿಜೆಪಿಯ ಜಿ. ಜನಾರ್ದನ ರೆಡ್ಡಿ, ಎಚ್.ವಿಶ್ವನಾಥ್, ಎಂ.ಟಿ.ಬಿ. ನಾಗರಾಜು (ಎಂ.ಟಿ.ಬಿ), ಪ್ರದೀಪ ಶೆಟ್ಟರ್, ಜೆಡಿಎಸ್ ಶಾಸಕಾಂಗ ಪಕ್ಷ ನಾಯಕರಾದ ಸಿ.ಬಿ.ಸುರೇಶ್ ಬಾಬು, ಶಾಸಕರಾದ ಎಚ್.ಡಿ. ರೇವಣ್ಣ, ಎ.ಮಂಜು, ಸಿ.ಎನ್. ಬಾಲಕೃಷ್ಣ ಅವರು ಪಟ್ಟಿಯಲ್ಲಿದ್ದಾರೆ.

ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಸೆಕ್ಷನ್ 22ರ ಪ್ರಕಾರ, 'ಪ್ರತಿಯೊಬ್ಬ ಸಾರ್ವಜನಿಕ ಸೇವಕನು ಪ್ರತಿ ವರ್ಷ ಜೂನ್ 30ರೊಳಗೆ ಆಸ್ತಿ ಮತ್ತು ಋಣ ಬಾಧ್ಯತೆಯ ವಿವರಗಳನ್ನು ಸಲ್ಲಿಸಬೇಕು. ಪ್ರಮಾಣಪತ್ರ ಸಲ್ಲಿಸಲು ವಿಫಲರಾದ ಸಾರ್ವಜನಿಕ ಸೇವಕರಿಗೆ ಸಂಬಂಧಿಸಿದಂತೆ ಲೋಕಾಯುಕ್ತರು ಸಕ್ಷಮ ಪ್ರಾಧಿಕಾರಿಯಾಗಿರುವ ರಾಜ್ಯಪಾಲರಿಗೆ ವರದಿ ಸಲ್ಲಿಸಬೇಕು. ಅಂತಹ ಶಾಸಕರ ಹೆಸರುಗಳನ್ನು ರಾಜ್ಯದಾದ್ಯಂತ ಪ್ರಸರಣ ಹೊಂದಿರುವ ಮೂರು ದಿನಪತ್ರಿಕೆಗಳಲ್ಲಿ ಪ್ರಕಟಿಸಬೇಕು' ಎಂದು ಹೇಳಲಾಗಿದೆ.

ವಿಧಾನಸಭಾ ಸದಸ್ಯರು

ಒಂದನೇ ಪುಟದಿಂದ...

ಬಿ.ಎನ್.ರವಿಕುಮಾರ್, ಜಿ.ಕೆ.ವೆಂಕಟ ಶಿವಾರೆಡ್ಡಿ, ಸಮೃದ್ಧಿ ವಿ.ಮಂಜುನಾಥ್, ಎಂ.ರೂಪಕಲಾ, ಕೆ.ವೈ. ನಂಜೇಗೌಡ, ಕೆ.ಗೋಪಾಲಯ್ಯ, ಎ.ಸಿ.ಶ್ರೀನಿವಾಸ, ಬಿ.ಶಿವಣ್ಣ, ಎನ್.ಶ್ರೀನಿವಾಸಯ್ಯ, ಎಚ್.ಸಿ.ಬಾಲಕೃಷ್ಣ, ಗಣಿಗ ರವಿಕುಮಾರ್ ಗೌಡ, ಎ.ಬಿ. ರಮೇಶ್ ಬಂಡಿಸಿದ್ದೇಗೌಡ, ಎಚ್.ಕೆ.ಸುರೇಶ್, ಸಿಮೆಂಟ್ ಮಂಜು, ಡಾ.ವೈ.ಭರತ್ ಶೆಟ್ಟಿ, ಭಾಗೀರಥಿ ಮುರುಳ್ಯ, ಡಿ.ರವಿಶಂಕರ್, ಅನಿಲ್ ಚಿಕ್ಕಮಾದು, ಕೆ.ಹರೀಶ್ ಗೌಡ, ಎಂ.ಆರ್.ಮಂಜುನಾಥ್, ಎ.ಆರ್.ಕೃಷ್ಣಮೂರ್ತಿ

ಗಡುವು ಮುಗಿದ ಬಳಿಕ ಸಲ್ಲಿಸಿದವರು

ಸಾಂಖ್ಯಿಕ ಮತ್ತು ಯೋಜನಾ ಸಚಿವ ಡಿ.ಸುಧಾಕರ್, ಶಾಸಕರಾದ ಬಿ.ಎಂ.ನಾಗರಾಜು, ಎಂ.ಟಿ.ಕೃಷ್ಣಪ್ಪ, ಯಾಸೀರ್ ಅಹ್ಮದ್ ಖಾನ್ ಪಠಾಣ್ ಮತ್ತು ಪರಿಷತ್ ಸದಸ್ಯ ಚಿದಾನಂದ್ ಎಂ.ಗೌಡ.

ಇನ್‌ಸ್ಪೆಕ್ಟರ್ ಕಾಲಿಮಿರ್ಚಿ ವರ್ಗಾವಣೆ

ಬೆಳಗಾವಿ: ಕರ್ನಾಟಕ ರಾಜ್ಯೋತ್ಸವದ ದಿನವೇ ಕರಾಳ ದಿನ ಆಚರಿಸಿದ ಎಂಇಎಸ್ ಮುಖಂಡ ಶುಭಂ ಶೆಳಕೆ ಜತೆಗೆ ಸೆಲ್ಫಿ ಕ್ಲಿಕ್ಕಿಸಿಕೊಂಡ ಇಲ್ಲಿನ ಮಾಳಮಾರುತಿ ಠಾಣೆಯ ಇನ್‌ಸ್ಪೆಕ್ಟರ್ ಜೆ.ಎಂ.ಕಾಲಿಮಿರ್ಚಿ ಅವರನ್ನು ಯಾವುದೇ ಸ್ಥಳ ನಿಯೋಜನೆ ಮಾಡದೇ ವರ್ಗಾವಣೆ ಮಾಡಲಾಗಿದ್ದು, ಅವರ ಜಾಗಕ್ಕೆ ಸಿಪಿಐ ಬಿ.ಆರ್. ಗಡೇಕರ್ ಅವರನ್ನು ನೇಮಕ ಮಾಡಲಾಗಿದೆ.

ಜೆ.ಎಂ. ಕಾಲಿಮಿರ್ಚಿ

ಸರ್ಕಾರ ಗುರುವಾರ ವರ್ಗಾವಣೆ ಮಾಡಿರುವ 120 ಇನ್‌ಸ್ಪೆಕ್ಟರ್‌ಗಳ ಪಟ್ಟಿಯಲ್ಲಿ ಕಾಲಿಮಿರ್ಚಿ ಅವರ ಹೆಸರನ್ನೂ ಸೇರಿಸಲಾಗಿದೆ. ನಾಡವಿರೋಧಿ, ರೌಡಿಶೀಟರ್ ಆದ ಶೆಳಕೆ ಜತೆಗೆ ಸೆಲ್ಫಿ ತೆಗೆದುಕೊಂಡ ಅವರನ್ನು ವರ್ಗಾವಣೆ ಮಾಡಬೇಕು ಎಂದು ವಿವಿಧ ಸಂಘಟನೆಗಳು ಹೋರಾಟ ನಡೆಸಿದ್ದವು.

ಪುರಸಭೆ ಕಾರ್ಯಾಲಯ, ಬ್ಯಾಡಗಿ (ಜಿ: ಹಾವೇರಿ)

ನಂ. ಪುಸಬ್ಯಾ/ಕಾವಿ/ಜೆ.ಎಚ್.ಎ/2025-26 ದಿನಾಂಕ: 05-10-2025

ಟೆಂಡರ ಪ್ರಕಟಣೆ

ಜಲ ಹೀ ಅಮೃತ್ ಯೋಜನೆಯಡಿ ಬ್ಯಾಡಗಿ ಪುರಸಭೆ ವ್ಯಾಪ್ತಿಯ ಎಸ್.ಟಿ.ಪಿ ಘಟಕಕ್ಕೆ OCEMS ಹಾಗೂ 50 KW Advanced On-Grid Solar System ಅಳವಡಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಆದ್ಯಾದೇಶ 2000ರ ಪ್ರಕಾರ ಅರ್ಹ ಅಧಿಕೃತ್ ತಯಾರಕರು/ಪೂರೈಕೆದಾರರಿಂದ ಟೆಂಡರನ್ನು kppp portal ಮುಖಾಂತರ ಕರ್ನಾಟಕ ಸ್ಟಾಂಡರ್ಡ ಟೆಂಡರ ಡಾಕ್ಯೂಮೆಂಟ್ಸ್ KG-3 ರಂತೆ ಆಹ್ವಾನಿಸಲಾಗಿದೆ. ಟೆಂಡರನಲ್ಲಿ ಭಾಗವಹಿಸಲು ಇಚ್ಛಿಸುವ ಅರ್ಹ ಅಧಿಕೃತ್ ತಯಾರಕರು /ಪೂರೈಕೆದಾರರು ಹೆಚ್ಚಿನ ವಿವರಗಳನ್ನು ವೆಬ್‌ಸೈಟ್ https://kppp.karnataka.gov.in ನಲ್ಲಿ ಪಡೆದುಕೊಳ್ಳಬಹುದು. ಟೆಂಡರ್ ತಿದ್ದುಪಡಿ ಅಧಿಸೂಚನೆಗಳಿದ್ದಲ್ಲಿ kppp portal ನಲ್ಲಿ ಪ್ರಕಟಿಸಲಾಗುವುದು.

ಕ್ರ.ಸಂ.	ಇಂಡೆಂಟ್ ನಂಬರ	ಅಂದಾಜು ಮೊತ್ತ
1	DMA/2025-26/IND5420.	75.0 ಲಕ್ಷ

ಸಹಿ/- (ಬಾಲಚಂದ್ರ ಎಸ್. ಪಾಟೀಲ್) ಅಧ್ಯಕ್ಷರು, ಪುರಸಭೆ, ಬ್ಯಾಡಗಿ,
ಸಹಿ/- (ಸುಭಾಸ ಡಿ. ಮಾಳಗಿ) ಉಪಾಧ್ಯಕ್ಷರು, ಪುರಸಭೆ, ಬ್ಯಾಡಗಿ,
ಸಹಿ/- (ವಿನಯಕುಮಾರ ಹೊಳೆಪ್ಪಗೋಳ) ಮುಖ್ಯಾಧಿಕಾರಿ, ಪುರಸಭೆ, ಬ್ಯಾಡಗಿ,

dipr/hvr/dipo/485/25-26

ಬೆಂಗಳೂರು ಕೇಂದ್ರ ನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಛೇರಿ, ಸರ್. ಸಿ.ವಿ. ರಾಮನ್‌ನಗರ ವಿಭಾಗ, 8ನೇ ಅಡ್ಡರಸ್ತೆ, 12ನೇ ಮುಖ್ಯರಸ್ತೆ, ಹೆಚ್‌ಎಎಲ್ 2ನೇ ಸ್ಟೇಜ್, ಇಂದಿರಾನಗರ ಬೆಂಗಳೂರು-560038

ನಂ.: ಕಾಪಾಅ/ಸಿವಿ/ಟೆಂಡರ್/05/2025-26 ದಿನಾಂಕ: 06.11.2025

ಅಲ್ಪಾವಧಿ ಟೆಂಡರ್ ಪ್ರಕಟಣೆ

(ದ್ವಿ ಲಕೋಟೆ ಟೆಂಡರ್-ಕೆಡಬ್ಲ್ಯು4) (ಜಿಓಕೆ ಕೆಪಿಪಿಪಿ ಪೋರ್ಟಲ್ ಮೂಲಕ ಮಾತ್ರ) ಕಾರ್ಯಪಾಲಕ ಅಭಿಯಂತರರು (ಸಿ.ವಿ. ರಾಮನ್‌ನಗರ) ವಿಭಾಗ, ಇವರು ಈ ಕೆಳಗಿನ ಕಾಮಗಾರಿಗಳಿಗೆ ಅರ್ಹ ಟೆಂಡರ್‌ದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ. ಬೆಂಗಳೂರು ಕೇಂದ್ರ ನಗರ ಪಾಲಿಕೆ / ಸಿಪಿಡಬ್ಲ್ಯುಡಿ / ಕೆಪಿಡಬ್ಲ್ಯುಡಿ / ರೈಲ್ವೇಸ್ / ಎಂಇಎಸ್ / ಯಾವುದೇ ರಾಜ್ಯ ಅಥವಾ ಕೇಂದ್ರ ಸರ್ಕಾರಿ ಸಂಸ್ಥೆಗಳಲ್ಲಿ ನೋಂದಾಯಿತ ಸೂಕ್ತ ದರ್ಜೆಯ ಟೆಂಡರ್‌ದಾರರು ಯಾವುದೇ ಅಥವಾ ಎಲ್ಲಾ ಕಾಮಗಾರಿಗಳಿಗೆ ಟೆಂಡರ್‌ಗಳನ್ನು ಸಲ್ಲಿಸಬಹುದು (ಟೆಂಡರ್ ಡಾಕ್ಯೂಮೆಂಟ್-ಕೆಡಬ್ಲ್ಯು4).

ಕ್ರ. ಸಂ.	ಕಾಮಗಾರಿಯ ಹೆಸರು
1	2025-26ನೇ ಸಾಲಿನ ಜಿಒಕೆ ಅನುದಾನದ ಅಡಿಯಲ್ಲಿ ಸರ್. ಸಿ.ವಿ. ರಾಮನ್ ನಗರ ವಿಭಾಗದ ಪ್ರಮುಖ ಮತ್ತು ಉಪ ಪ್ರಮುಖ ರಸ್ತೆಗಳಿಗೆ ಡಾಂಬರು ಮರುಪೂರಣ ಮತ್ತು ಸುಧಾರಣೆಗಳು (ಜಿಬಿ ನಂ. 1, 3, 4, 5, 8, 9, 11, 12, 13, 14, 15, 17, 18, 19, 20, 21, 22, 23, 25) (ಕಾಮಗಾರಿಗಳ ಸಂಖ್ಯೆ – 19). **ಕಾಮಗಾರಿಯ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ):** 3,000.00, **ಇಎಂಡಿ (ರೂ.ಗಳಲ್ಲಿ):** 30.00 ಲಕ್ಷಗಳು.

ವೇಳಾಪಟ್ಟಿ: (1) ಆರ್‌ಎಫ್‌ಪಿ ದಸ್ತಾವೇಜುಗಳ ಲಭ್ಯತೆಯ ದಿನಾಂಕ: **07.11.2025**ರಿಂದ. (2) ಪೂರ್ವಭಾವಿ ಸಭೆಯು **13.11.2025**ರ **ಮಧ್ಯಾಹ್ನ 3:30 ಗಂಟೆಗೆ** ಮುಖ್ಯ ಅಭಿಯಂತರರು ಕೇಂದ್ರ ವಲಯ-1ರವರ ಕಛೇರಿ, 8ನೇ ಅಡ್ಡರಸ್ತೆ, 12ನೇ ಎ ಮುಖ್ಯರಸ್ತೆ, ಹೆಚ್‌ಎಎಲ್ 2ನೇ ಸ್ಟೇಜ್, ಇಂದಿರಾನಗರ, ಬೆಂಗಳೂರು-5600038 ಇಲ್ಲಿ ನಡೆಯಲಿದೆ. (3) ಟೆಂಡರ್ ದಸ್ತಾವೇಜುಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **21.11.2025ರ ಸಂಜೆ 4:00 ಗಂಟೆವರೆಗೆ.** (4) ತಾಂತ್ರಿಕ ಬಿಡ್‌ಗಳನ್ನು ವೆಬ್‌ಸೈಟ್ https://kppp.karnataka.gov.in ಮೂಲಕ ಕಾರ್ಯಪಾಲಕ ಅಭಿಯಂತರರ ಕಛೇರಿ, ಸರ್. ಸಿ.ವಿ. ರಾಮನ್‌ನಗರ ವಿಭಾಗದಲ್ಲಿ **24.11.2025ರ ಸಂಜೆ 4:30 ಗಂಟೆಗೆ** ತೆರೆಯಲಾಗುವುದು. ಹೆಚ್ಚಿನ ಮಾಹಿತಿಯನ್ನು ಮೇಲಿನ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ **https://kppp.karnataka.gov.in** ವೆಬ್‌ಸೈಟ್‌ನಿಂದ ಪಡೆದುಕೊಳ್ಳಬಹುದು.

ಸಹಿ/- ಕಾರ್ಯಪಾಲಕ ಅಭಿಯಂತರರು, ಸಿ.ವಿ. ರಾಮನ್‌ನಗರ ವಿಭಾಗ, ಬಿಸಿಸಿಸಿ

ಬೆಂಗಳೂರು ನಗರ ವಿಶ್ವವಿದ್ಯಾಲಯ

"ಜ್ಞಾನಜ್ಯೋತಿ-ಸೆಂಟ್ರಲ್ ಕಾಲೇಜ್ ಕ್ಯಾಂಪಸ್" ಡಾ॥ ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು-560 001. ಇ-ಮೇಲ್: registrar@buc.ac.in

ಸಂಖ್ಯೆ: ಬಿ.ಸಿ.ಯು/ಶೈಕ್ಷಣಿಕ/ಸಂಯೋಜನೆ/03/2025-26 ದಿನಾಂಕ:06.11.2025

ಸಂಯೋಜನೆಗಾಗಿ ಅಧಿಸೂಚನೆ

ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಸಂಯೋಜಿತ ಕಾಲೇಜುಗಳು ಹಾಗೂ ಹೊಸ ಕಾಲೇಜು ಪ್ರಾರಂಭಿಸಲು ಉದ್ದೇಶಿಸಿರುವ ಸಂಸ್ಥೆಗಳಿಂದ 2026-27ನೇ ಶೈಕ್ಷಣಿಕ ಸಾಲಿನ ವಿವಿಧ ಸಂಯೋಜನೆ ಪ್ರಕಾರಗಳಾದ ಸಂಯೋಜನೆ ಮುಂದುವರಿಕೆ, ಹೊಸ ಕಾಲೇಜು ಪ್ರಾರಂಭ, ಅಸ್ತಿತ್ವದಲ್ಲಿರುವ ಕಾಲೇಜುಗಳಲ್ಲಿ ಹೊಸ ಕೋರ್ಸುಗಳು/ವಿಷಯಗಳು ಸೇರಿಸುವುದು, ಹೆಚ್ಚುವರಿ ವಿದ್ಯಾರ್ಥಿ ಪ್ರಮಾಣ/ವಿದ್ಯಾರ್ಥಿ ಪ್ರಮಾಣ ಕಡಿತ ಹಾಗೂ ಶಾಶ್ವತ ಸಂಯೋಜನೆಗೆ ಮುಂತಾದವುಗಳಿಗೆ ಸಂಬಂಧಿಸಿದಂತೆ 2026-27ನೇ ಶೈಕ್ಷಣಿಕ ಸಾಲಿಗೆ ಆನ್‌ಲೈನ್ ಅರ್ಜಿ ಪ್ರಕ್ರಿಯೆ **ದಿನಾಂಕ: 10.11.2025** ರಿಂದ ಪ್ರಾರಂಭವಾಗಿ **ದಿನಾಂಕ: 25.11.2025 ರಂದು** ದಂಡಶುಲ್ಕವಿಲ್ಲದೆ ಹಾಗೂ ದಂಡಶುಲ್ಕದೊಂದಿಗೆ **ದಿನಾಂಕ: 30.11.2025 ರವರೆಗೆ** UUCMS ಆನ್‌ಲೈನ್ ಪೋರ್ಟಲ್ ಮೂಲಕ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ.

ಎಲ್ಲಾ ಕಾಲೇಜುಗಳು ಹಾಗೂ ಶಿಕ್ಷಣ ಸಂಸ್ಥೆಗಳು UUCMS ಆನ್‌ಲೈನ್ ಪೋರ್ಟಲ್ ಮೂಲಕ ತಮ್ಮ ಅರ್ಜಿಗಳನ್ನು ಅಗತ್ಯ ದಾಖಲೆಗಳೊಂದಿಗೆ ಸಲ್ಲಿಸಲು ತಿಳಿಸಲಾಗಿದೆ. ಹೆಚ್ಚಿನ ಮಾಹಿತಿ ಮತ್ತು ಪೂರ್ಣ ಅಧಿಸೂಚನೆಗಾಗಿ ವಿಶ್ವವಿದ್ಯಾನಿಲಯದ ಅಧಿಕೃತ ಜಾಲತಾಣ **https://bcu.ac.in** ಮತ್ತು UUCMS ಪೋರ್ಟಲ್ ವೀಕ್ಷಿಸಬಹುದು ಹಾಗೂ ವಿಶ್ವವಿದ್ಯಾನಿಲಯದ ಆಡಳಿತ ಕಛೇರಿಯ ಸಮಯದಲ್ಲಿ ಸಂಪರ್ಕಿಸಬಹುದಾಗಿದೆ.

ಎಲ್ಲಾ ಸಂಯೋಜಿತ ಕಾಲೇಜುಗಳು ಹಾಗೂ ಸಂಸ್ಥೆಗಳು ಸಂಬಂಧಿಸಿದ ಸಂಯೋಜನಾ ಅರ್ಜಿಗಳನ್ನು ನಿಗದಿತ ದಿನಾಂಕದೊಳಗೆ ಸಲ್ಲಿಸುವಂತೆ ಸೂಚಿಸಲಾಗಿದೆ.

ಸಹಿ/- ಕುಲಸಚಿವರು

ವಾಸಾಸಂಇ/ವಾಪ್ರ/ಜಿಎ/3638/2025-26

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ

ಸಂಖ್ಯೆ: 16ಸಿ-1, ಮಿಲ್ಲರ್ ಟ್ಯಾಂಕ್ ಬೆಡ್ ಏರಿಯ, ವಸಂತನಗರ, ಬೆಂಗಳೂರು-52.
ದೂರವಾಣಿ: 080-22268677/78/79 ಫ್ಯಾಕ್ಸ್: 080-22268667
ಇ-ಮೇಲ್: kerc-ka@nic.in ವೆಬ್‌ಸೈಟ್: www.kerc.karnataka.gov.in

ಸಂಖ್ಯೆ: N/109/2025/1127 ದಿನಾಂಕ: 06.11.2025

ಸಾರ್ವಜನಿಕ ಸೂಚನೆ

ವಿಷಯ: ಮುಕ್ತ ಗ್ರಾಹಕರ ಮೇಲೆ ಹೆಚ್ಚುವರಿ ಸರ್ಚಾರ್ಜ್ ವಿಧಿಸುವ ಪ್ರಸ್ತಾವನೆಯ ಕುರಿತು ಸಾರ್ವಜನಿಕ ವಿಚಾರಣೆಯನ್ನು ಮರು ನಿಗದಿಪಡಿಸಿ, ಆಕ್ಷೇಪಣೆಗಳನ್ನು ಸಲ್ಲಿಸಲು ಸಮಯವನ್ನು ವಿಸ್ತರಿಸಿರುವ ಬಗ್ಗೆ.

ಆಯೋಗವು ವಿಷಯದ ಕುರಿತು ಸಾರ್ವಜನಿಕ ವಿಚಾರಣೆಯನ್ನು **ದಿನಾಂಕ: 13.11.2025** ರಂದು ನಿಗದಿಪಡಿಸಿದ್ದು, ತಿದ್ದುಪಡಿ ಅರ್ಜಿಯ ಕುರಿತು ಆಕ್ಷೇಪಣೆಗಳನ್ನು ಸಲ್ಲಿಸಲು ಸಮಯವನ್ನು ವಿಸ್ತರಿಸುವಂತೆ ವಿವಿಧ ಪಾಲುದಾರರು/ಸಂಸ್ಥೆಗಳಿಂದ ಆಯೋಗವು ಮನವಿಗಳನ್ನು ಸ್ವೀಕರಿಸಿರುವುದರಿಂದ, ಆಯೋಗವು ತಿದ್ದುಪಡಿ ಅರ್ಜಿಗೆ ಆಕ್ಷೇಪಣೆಗಳನ್ನು ಸಲ್ಲಿಸಲು ಸಮಯಾವಕಾಶವನ್ನು ವಿಸ್ತರಿಸಿದೆ ಮತ್ತು ವಿಷಯದ ಬಗ್ಗೆ ಸಾರ್ವಜನಿಕ ವಿಚಾರಣೆಯನ್ನು **ದಿನಾಂಕ: 02.12.2025 ರಂದು ಮಧ್ಯಾಹ್ನ 2.00 ಗಂಟೆಗೆ** ನಿಗದಿಪಡಿಸಿದೆ. ಆದ್ದರಿಂದ, ಆಸಕ್ತ ವ್ಯಕ್ತಿಗಳು/ಪಾಲುದಾರರು ತಿದ್ದುಪಡಿ ಅರ್ಜಿಯ ಕುರಿತು ಕಾಮೆಂಟ್‌ಗಳು/ ಆಕ್ಷೇಪಣೆಗಳಿದ್ದರೆ ಅವುಗಳನ್ನು **ದಿನಾಂಕ: 01.12.2025ರ ಸಂಜೆ 5.00 ಗಂಟೆಯವರೆಗೆ** ಆಯೋಗದ ಕಛೇರಿಯಲ್ಲಿ ಸಲ್ಲಿಸಬಹುದು. ತಿದ್ದುಪಡಿ ಅರ್ಜಿ ಮತ್ತು ಸಂಬಂಧಿಸಿದ ದಾಖಲೆಗಳು ಆಯೋಗದ ವೆಬ್‌ಸೈಟ್‌ನಲ್ಲಿ **(https://kerc.karnataka.gov.in)** ಲಭ್ಯವಿರುತ್ತದೆ.

ವರ್ಚ್ಯುಯಲ್ ಹಿಯರಿಂಗ್ ಸಂಬಂಧ **ದಿನಾಂಕ: 30.10.2025** ರ ಸಾರ್ವಜನಿಕ ವಿಚಾರಣಾ ಸೂಚನಾಪತ್ರದಲ್ಲಿ ಉಲ್ಲೇಖಿಸಲಾದ ಎಲ್ಲಾ ನಿಯಮಗಳು ಮತ್ತು ಷರತ್ತುಗಳು ಬದಲಾಗದೆ ಯಥಾವತ್ ಉಳಿದಿರುತ್ತವೆ.

ಸಹಿ/- ಕಾರ್ಯದರ್ಶಿ, ಕವಿನಿಆ, ಬೆಂಗಳೂರು.

ವಾಸಾಸಂಇ/ಉನಿ-ಸಿ.ಪಿ/3639/ಕೆಎಸ್‌ಎಂಸಿಎ/2025-26

ಭಾರತ ಸರ್ಕಾರ, ಬಾಹ್ಯಾಕಾಶ ಇಲಾಖೆ, ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೋ)

ಲಿಕ್ವಿಡ್ ಪ್ರೊಪಲ್ಷನ್ ಸಿಸ್ಟಮ್ಸ್ ಸೆಂಟರ್ (ಎಲ್‌ಪಿಎಸ್‌ಸಿ) **ನಿರ್ಮಾಣ ಮತ್ತು ನಿರ್ವಹಣೆ ವಿಭಾಗ**

ಎಲ್‌ಪಿಎಸ್‌ಸಿ ಕ್ಯಾಂಪಸ್, 80 ಅಡಿ ರಸ್ತೆ, ಹೆಚ್‌ಎಎಲ್ 2ನೇ ಹಂತ, ಬೆಂಗಳೂರು-560 008. ದೂ.: 080-25037203/080-25037214

ದಿನಾಂಕ: 06.11.2025

ಇ-ಟೆಂಡರ್ ಪ್ರಕಟಣೆ

ಭಾರತದ ರಾಷ್ಟ್ರಪತಿಯವರ ಪರವಾಗಿ ಕೆಳಕಂಡ ಕಾಮಗಾರಿಗೆ ಐಟಂ ದರ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಕ್ರ. ಸಂ.	ಕಾಮಗಾರಿಯ ಹೆಸರು ಮತ್ತು ಎನ್‌ಐಟಿ ಸಂಖ್ಯೆ ಮತ್ತು ದಿನಾಂಕ	ಅಂದಾಜು ಮೊತ್ತ	ಇಎಂಡಿ	ಪೂರ್ಣಗೊಳಿಸಲು ಕಾಲಾವಧಿ
1	ಎಲ್‌ಪಿಎಸ್‌ಸಿ ಕ್ಯಾಂಪಸ್, ತುಮಕೂರು ಇಲ್ಲಿರುವ ಎನ್‌ಎಂಪಿಟಿಟಿಎಫ್ ಸುತ್ತಲೂ ಗಡಿಗೋಡೆ ನಿರ್ಮಾಣ. ಸಂ.:ಎಲ್‌ಪಿಎಸ್‌ಸಿ(ಬಿ)/ಸಿಎಂಡಿ/01/1003/ಸಿ/ಎಂಜೆ/002/2025-26 ದಿನಾಂಕ: 06.11.2025	ರೂ. 52.24 ಲಕ್ಷಗಳು	ರೂ. 1,04,480/-	03 ತಿಂಗಳು
	ಡೌನ್‌ಲೋಡ್ ಅವಧಿ: 06.11.2025 ರಿಂದ 18.11.2025			

ಆಸಕ್ತಿಯುಳ್ಳ ಟೆಂಡರ್‌ದಾರರು **www.tenderwizard.com/ISRO** ಅನ್ನು ಪರಿವೀಕ್ಷಿಸಿ. ಜೊತೆಗೆ ಅರ್ಹತಾ ಅಗತ್ಯತೆ ಮತ್ತು ಇತರೆ ವಿವರಗಳಿಗೆ ಸಂಪೂರ್ಣ ವಿವರವಿರುವ ಟೆಂಡರ್ ಪ್ರಕಟಣೆಯನ್ನು ವೆಬ್‌ಸೈಟ್: **www.isro.gov.in, www.ipsc.gov.in** ಗೆ ಭೇಟಿನೀಡಿ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/- ಮುಖ್ಯಸ್ಥರು, ಸಿಎಂಡಿ, ಎಲ್‌ಪಿಎಸ್‌ಸಿ(ಬಿ)

ಗದಗ-ಬೆಟಗೇರಿ ನಗರಸಭೆ ಕಾರ್ಯಾಲಯ

ಜಿಲ್ಲೆ:- ಗದಗ, ರಾಜ್ಯ:- ಕರ್ನಾಟಕ. ದೂ.ಸಂಖ್ಯೆ:- 08372-278285
ಇ-ಮೇಲ್:- ka.gadag.betageri.cmc@gmail.com

ಕ್ರ ಸಂ:-ಗಬೆನಸ/ಆವಿ/ವಹಿ/2025-26/ ದಿನಾಂಕ:-05-11-2025

ಅಲ್ಪಾವಧಿ ಟೆಂಡರ್ ಪ್ರಕಟಣೆ

ಗದಗ-ಬೆಟಗೇರಿ ನಗರಸಭೆ ವ್ಯಾಪ್ತಿಯಲ್ಲಿ ರಿ.ಸ.ನಂ:126/ಬ ನೇದ್ದರ 6 ಎಕರೆ 37 ಗುಂಟೆ ಪ್ರದೇಶದಲ್ಲಿ ಆಧುನಿಕ ಕಸಾಯಿಖಾನೆ ನಿರ್ಮಾಣ ಮಾಡಲು ಅಂದಾಜು ವೆಚ್ಚ ರೂ.17.7 ಕೋಟಿ ಮೊತ್ತ ನಿಗಧಿಪಡಿಸಲಾಗಿದ್ದು ಸದರಿ ಕಸಾಯಿಖಾನೆ ನಿರ್ಮಾಣದ ಯೋಜನಾ ವರದಿ(ಡಿ.ಪಿ.ಆರ್) ತಯಾರಿಸಲು ಅಲ್ಪಾವಧಿ ಟೆಂಡರ್ **ಇಂಡೆಂಟ್ ನಂ:DMA/2025-26/SE6547** ನೇದ್ದರಲ್ಲಿ ಟೆಂಡರ್ ಆಹ್ವಾನಿಸಲಾಗಿ ಆಸಕ್ತ ಅರ್ಹ ಬಿಡ್‌ದಾರರು ಕೆ.ಪಿ.ಪಿ.ಪಿ ಪೋರ್ಟಲ್ **https://kppp.karnataka.gov.in** ನೇದ್ದರ ಮೂಲಕ ಕೊನೆಯ **ದಿನಾಂಕ:-15/11/2025** ರ ವೇಳೆ **17.30** ಒಳಗಾಗಿ ಟೆಂಡರ್ ಸಲ್ಲಿಸಬಹುದಾಗಿರುತ್ತದೆ ಟೆಂಡರ್ ವಿವರ ಈ ಕೆಳಗಿನಂತಿದೆ.

ಕ್ರ ಸಂ	ಟೆಂಡರ್ ವಿವರ	ಇ.ಎಂ.ಡಿ ಮೊತ್ತ ರೂ.
1	Selection of Consultancy Services for Preparation of Detail Project Report of Construction of Slaughter House in the Limit of Gadag-Betageri CMC	ರೂ.54000/-

ಸದರಿ ಟೆಂಡರ್‌ಗೆ ಸಂಬಂಧಿಸಿದ ದಿನಾಂಕ ಹಾಗೂ ಇತರೆ ಬದಲಾವಣೆಗಳಾದಲ್ಲಿ ಕೆ.ಪಿ.ಪಿ ಪೋರ್ಟಲ್ ನಲ್ಲಿ ಪ್ರಕಟಿಸಲಾಗುವುದು. ಪತ್ರಿಕಾ ಪ್ರಕಟಣೆಯಲ್ಲಿ ಪ್ರಕಟಿಸಲಾಗುವುದಿಲ್ಲಾ.

ಸಹಿ/- ಪೌರಾಯುಕ್ತರು, ಗದಗ-ಬೆಟಗೇರಿ ನಗರಸಭೆ
ಸಹಿ/- ಆಡಳಿತಾಧಿಕಾರಿಗಳು, ಗದಗ-ಬೆಟಗೇರಿ ನಗರಸಭೆ

ವಾಸಾಸಂಇ/ಗದಗ/361/2025-26

ನಗರಸಭಾ ಕಾರ್ಯಾಲಯ, ಸಾಗರ – 577401

Web: www.sagaracity.mrc.gov.in Ph: 08183-226021
Email: ka.sagar.cmc@gmail.com

ನಂ.ನಸಸಾ:ಎಇಇ:ಅಮೃತ್-2.0:03:2025-26 ದಿ; 28.10.2025

-:ಮರು ಟೆಂಡರ್ ಪ್ರಕಟಣೆ:- (ಇ-ಪ್ರಕ್ಯೂರ್‌ಮೆಂಟ್ ಮುಖಾಂತರ)

ಸಾಗರ ನಗರಸಭೆಗೆ ಕೇಂದ್ರ ಪುರಸ್ಕೃತ ಅಮೃತ್ 2.0 ಮಿಷನ್ ಯೋಜನೆಯಡಿ ಗಣಪತಿ ಕೆರೆ ಉದ್ಯಾನವನ ಅಭಿವೃದ್ಧಿ ಕಾಮಗಾರಿಯನ್ನು ನಿರ್ವಹಿಸಲು KW3 ನಿಯಮಗಳನ್ವಯ ಐಟಂವಾರು ದ್ವಿ ಲಕೋಟೆಯಲ್ಲಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಲೋಕೋಪಯೋಗಿ ಇಲಾಖೆಯಲ್ಲಿ ಅರ್ಹ ದರ್ಜೆಯಲ್ಲಿ ಗುತ್ತಿಗೆ ಪರವಾನಿಗೆ ಪಡೆದುಕೊಂಡಿರುವ ಗುತ್ತಿಗೆದಾರರು, ತಮ್ಮ ಕನಿಷ್ಠ ದರವನ್ನು ನಮೂದಿಸಿ ನಿಗಧಿಪಡಿಸಿದ ಇಎಂಡಿಯೊಂದಿಗೆ ತಮ್ಮ ಕನಿಷ್ಠ ದರವನ್ನು http://www.kppp.karnataka.gov.in portal ನಲ್ಲಿ ಟೆಂಡರ್ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿ ಹಾಗೂ ಷರತ್ತುಗಳನ್ನು ವೆಬ್ ಸೈಟ್ http://www.kppp.karnataka.gov.in ಪಡೆಯಬಹುದಾಗಿದೆ.

(1) ಭರ್ತಿ ಮಾಡಿದ ಟೆಂಡರ್ ಸಲ್ಲಿಸಲು ಕಡೆಯ ದಿನಾಂಕ 12.11.2025 ಸಂಜೆ 5.30 ಘಂಟೆಯವರೆಗೆ. (2) ತಾಂತ್ರಿಕ ಬಿಡ್ ತೆರೆಯುವ ದಿನಾಂಕ 14.11.2025 ಸಂಜೆ 5.30 ಘಂಟೆಗೆ (3) ಆರ್ಥಿಕ ಬಿಡ್ ತೆರೆಯುವ ದಿನಾಂಕ 17.11.2025 ಸಂಜೆ 5.30 ಘಂಟೆಗೆ ಅನಿವಾರ್ಯ ಕಾರಣದಿಂದ ಸಾಧ್ಯವಾಗದೇ ಇದ್ದಲ್ಲಿ ಮುಂದಿನ ಕಛೇರಿ ವೇಳೆಯಲ್ಲಿ ತೆರೆಯಲಾಗುವುದು.

ಕ್ರ.ಸಂ.1. ಇಂಡೆಂಟ್ ನಂ: DMA/2025-26/OW/WORK_INDENT 49854 CALL 2 ಅಂದಾಜು ಮೊತ್ತ ರೂ.ಲಕ್ಷಗಳಲ್ಲಿ: 86.83

ಷರತ್ತುಗಳು: 1. ಟೆಂಡರ್‌ಗೆ ಸಂಬಂಧಪಟ್ಟಂತೆ ಯಾವುದೇ ತಿದ್ದುಪಡಿ ಹಾಗೂ ಬದಲಾವಣೆಗಳು ಇದ್ದಲ್ಲಿ ಕೆ.ಪಿ.ಪಿ.ಪಿ ಪ್ರೋಟೆಲ್‌ನಲ್ಲಿ ಪ್ರಚುರ ಪಡಿಸಲಾಗುವುದು. 2. ಸರ್ಕಾರದ ನಿಯಮಾವಳಿಯಂತೆ ಜಿ.ಎಸ್.ಟಿಯನ್ನು ಪಾವತಿಸಲಾಗುವುದು. 3. ಹೆಚ್ಚಿನ ವಿವರಗಳನ್ನು ನಗರಸಭೆಯ ವೆಬ್ ಸೈಟ್ http://www.sagaracity.gov.in ನಲ್ಲಿ ಹಾಗೂ ಕಛೇರಿಯ ವೇಳೆಯಲ್ಲಿ ತಾಂತ್ರಿಕ ವಿಭಾಗದಲ್ಲಿ ತಿಳಿದುಕೊಳ್ಳಬಹುದು.

ಸಹಿ/- ಮೈತ್ರಿ ವಿ ಪಾಟೀಲ್, ಅದ್ಯಕ್ಷರು ನಗರಸಭೆ ಸಾಗರ
ಸಹಿ/- ಸವಿತಾವಾಸು, ಉಪಾದ್ಯಕ್ಷರು ನಗರಸಭೆ ಸಾಗರ
ಸಹಿ/- ಹೆಚ್.ಕೆ. ನಾಗಪ್ಪ, ಪೌರಾಯುಕ್ತರು, ನಗರಸಭೆ ಸಾಗರ

ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಶಿ/25-26/19/11/1195

ಅಭಿಮತ ವಿಭಾಗ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ

ಸುಭಾಷಿತ

ನಿಮ್ಮ ಜೀವನದಲ್ಲಿ ಸೂರ್ಯ ಮರೆಯಾದನೆಂದು ನೀವು ಅತ್ತರೆ, ಹೊಳೆಯುವ ನಕ್ಷತ್ರಗಳು ಕಾಣಿಸಲು ಕಣ್ಣೀರು ಅಡ್ಡಿಯಾಗುತ್ತದೆ.

ರವೀಂದ್ರನಾಥ ಟ್ಯಾಗೋರ್

ಸಂಪಾದಕೀಯ

ಸೈಬರ್ ವಂಚನೆ: ಕೋರ್ಟ್ ಕಳವಳ ನಿಯಂತ್ರಣಕ್ಕೆ ಒಂದು ನೂಕುಬಲ

ಸೈಬರ್ ಅಪರಾಧ ಪ್ರಕರಣಗಳ ಬಗ್ಗೆ, ಅದರಲ್ಲೂ ಮುಖ್ಯವಾಗಿ ಡಿಜಿಟಲ್ ಬಂಧನದಂತಹ ಅಪರಾಧ ಕೃತ್ಯಗಳ ಬಗ್ಗೆ ಸುಪ್ರೀಂ ಕೋರ್ಟ್ ವ್ಯಕ್ತಪಡಿಸಿರುವ ಕಳವಳವು ಇಂತಹ ಕೃತ್ಯಗಳು ಅದೆಷ್ಟು ಗಂಭೀರ ಸ್ವರೂಪವನ್ನು ಪಡೆದುಕೊಂಡಿವೆ ಎಂಬುದನ್ನು ಹೇಳುತ್ತಿದೆ. ಇಂತಹ ಅಪರಾಧ ಕೃತ್ಯಗಳನ್ನು ತಡೆಯಲು ಸುಪ್ರೀಂ ಕೋರ್ಟ್ ಕೆಲವು ನಿರ್ದೇಶನಗಳನ್ನು ನೀಡಿದೆ. ಸೈಬರ್ ಅಪರಾಧಿಗಳು ಕಾನೂನು ಜಾರಿ ಸಂಸ್ಥೆಗಳ ಪ್ರತಿನಿಧಿಗಳು ಇಲ್ಲವೇ ನ್ಯಾಯಾಲಯದ ಅಧಿಕಾರಿಗಳು ಎಂದು ಹೇಳಿಕೊಂಡು ಅಮಾಯಕರಿಂದ ₹3,000 ಕೋಟಿಗೂ ಹೆಚ್ಚಿನ ಮೊತ್ತವನ್ನು ಸುಲಿಗೆ ಮಾಡಿದ್ದಾರೆ ಎಂದು ಅಂದಾಜು ಮಾಡಲಾಗಿದೆ. ಸೈಬರ್ ಅಪರಾಧದ ಹಲವು ಪ್ರಕರಣಗಳು ವರದಿಯಾಗಿಲ್ಲದಿರುವ ಸಾಧ್ಯತೆ ಇದೆ, ಹೀಗಾಗಿ ವಂಚನೆಯ ವಾಸ್ತವ ಮೊತ್ತವು ಇನ್ನಷ್ಟು ಹೆಚ್ಚಿರಬಹುದು. ಮತ್ತೆ ಮತ್ತೆ ವರದಿಯಾಗುತ್ತಿರುವ ಸೈಬರ್ ಅಪರಾಧ ಕೃತ್ಯಗಳು ಸಂತ್ರಸ್ತರಿಗೆ ಹಣಕಾಸಿನ ನಷ್ಟವನ್ನು ಉಂಟುಮಾಡುವುದರ ಜೊತೆಗೆ ಅವರನ್ನು ಮಾನಸಿಕ ಯಾತನೆಗೂ ದೂಡುತ್ತವೆ. ದೇಶದಲ್ಲಿ ಡಿಜಿಟಲ್ ವಂಚನೆ ಪ್ರಕರಣಗಳು ಹೆಚ್ಚಾಗುತ್ತಿರುವ ಬಗ್ಗೆ ನೀತಿ ಆಯೋಗವು ಕೆಲವು ಸಮಯದ ಹಿಂದೆ ಕಳವಳ ವ್ಯಕ್ತಪಡಿಸಿತ್ತು. ಪ್ರಧಾನಿ ನರೇಂದ್ರ ಮೋದಿ ಅವರು ಈ ಬಗೆಯ ವಂಚನೆಗಳ ಬಗ್ಗೆ ತಮ್ಮ 'ಮನ್ ಕಿ ಬಾತ್' ಕಾರ್ಯಕ್ರಮದಲ್ಲಿ ಉಲ್ಲೇಖಿಸಿದ್ದಾರೆ. ಸೈಬರ್ ಅಪರಾಧಗಳ ಭಿನ್ನ ಸಾಧ್ಯತೆಗಳ ಬಗ್ಗೆ ಜನರಲ್ಲಿ ಅರಿವು ಮೂಡಿಸುವ ಕೆಲಸವನ್ನು ಪೊಲೀಸರು ಹಾಗೂ ಸರ್ಕಾರದ ಇತರ ಸಂಸ್ಥೆಗಳ ಅಧಿಕಾರಿಗಳು ಮಾಡುತ್ತಲೇ ಇದ್ದಾರೆ. ಆದರೆ, ಜನಜಾಗೃತಿ ಉದ್ದೇಶದ ಅಭಿಯಾನಗಳು ಹೆಚ್ಚಿನ ಪ್ರಯೋಜನ ತಂದುಕೊಟ್ಟಂತೆ ಕಾಣುತ್ತಿಲ್ಲ. 2022ರಲ್ಲಿ ದೇಶದಲ್ಲಿ ಸೈಬರ್ ಭದ್ರತೆಗೆ ಸಂಬಂಧಿಸಿದ 10.29 ಲಕ್ಷ ಪ್ರಕರಣಗಳು ವರದಿಯಾಗಿದ್ದವು; ಇದು, 2024ರಲ್ಲಿ 22.68 ಲಕ್ಷಕ್ಕೆ ಏರಿಕೆ ಆಗಿದೆ.

ಡಿಜಿಟಲ್ ಬಂಧನದಂತಹ ಸೈಬರ್ ಅಪರಾಧಗಳ ಬಗ್ಗೆ ಸುಪ್ರೀಂ ಕೋರ್ಟ್ ವ್ಯಕ್ತಪಡಿಸಿರುವ ಕಳವಳ, ತನಿಖಾ ಸಂಸ್ಥೆಗಳು ಚುರುಕಾಗಲು ಕಾರಣ ಆಗಬಹುದು.

ದೇಶದ ಕುಟುಂಬಗಳ ಪೈಕಿ ಶೇ 85ರಷ್ಟಕ್ಕಿಂತ ಹೆಚ್ಚಿನವು ಈಗ ಇಂಟರ್ನೆಟ್ ಜೊತೆ ಸಂಪರ್ಕ ಹೊಂದಿವೆ. ಅಂದರೆ, ಅಪರಾಧಿಗಳಿಗೆ ಕುಕೃತ್ಯ ಎಸಗಲು ವಿಶಾಲವಾದ ನೆಲೆಯೊಂದು ಸಿಕ್ಕಂತಾಗಿದೆ. ಇಂಟರ್ನೆಟ್ ಮೂಲಕ ಬಹಳ ದೂರದಲ್ಲಿ ಇದ್ದುಕೊಂಡೇ ಅಪರಾಧ ಕೃತ್ಯ ಎಸಗಲು ಅವಕಾಶ ಇರುವ ಕಾರಣದಿಂದಾಗಿ ವಂಚಕರಿಗೆ ತಮ್ಮ ಗುರುತನ್ನು ಮರೆಮಾಚಲು ಸಾಧ್ಯವಾಗುತ್ತದೆ. ವಂಚನೆ ಪ್ರಕರಣಗಳಲ್ಲಿ ಅವರ ಬಂಧನವನ್ನು ಒಂದು ಸೂಚಕವನ್ನಾಗಿ ಪರಿಗಣಿಸುವುದಾದರೆ, ಸೈಬರ್ ವಂಚಕರು ಬಂಧನಕ್ಕೊಳಗಾಗುವ ಸಾಧ್ಯತೆಯು ಸಾಂಪ್ರದಾಯಿಕ ವಂಚಕರ ಬಂಧನ ಸಾಧ್ಯತೆಗಿಂತ ಕಡಿಮೆ. ಸೈಬರ್ ವಂಚಕರು ಬಹಳಷ್ಟು ಸಂದರ್ಭಗಳಲ್ಲಿ ಸಂತ್ರಸ್ತರಲ್ಲಿ ಅರಿವಿನ ಕೊರತೆಯನ್ನು, ಅವರಲ್ಲಿನ ಭಯವನ್ನು, ಆಘಾತವನ್ನು ಬಳಸಿಕೊಳ್ಳುತ್ತಿದ್ದಾರೆ. ಅದರಲ್ಲೂ ಹೆಚ್ಚಾಗಿ, ಹಿರಿಯ ನಾಗರಿಕರನ್ನು ಅವರು ಗುರಿ ಮಾಡಿಕೊಳ್ಳುತ್ತಿದ್ದಾರೆ. ಅಮಾಯಕರನ್ನು ಡಿಜಿಟಲ್ ಅರೆಸ್ಟ್ ಹೆಸರಿನಲ್ಲಿ ದಿನಗಳ ಕಾಲ ಒಂದೇ ಕೊಠಡಿಯಲ್ಲಿ ಇರಿಸಿ, ಅವರಿಗೆ ನಿತ್ಯಕರ್ಮಗಳನ್ನು ಮುಗಿಸಿಕೊಳ್ಳಲು ಕೂಡ ಅವಕಾಶ ನೀಡದ ನಿದರ್ಶನಗಳು ವರದಿಯಾಗಿವೆ. ಬ್ಯಾಂಕರ್‌ಗಳು, ಭಿನ್ನ ವೃತ್ತಿಗಳಲ್ಲಿ ತೊಡಗಿಸಿಕೊಂಡಿರುವವರು, ಸೈಬರ್ ಅಪರಾಧ ತಡೆ ವಿಭಾಗದಲ್ಲಿ ಕೆಲಸ ಮಾಡುವ ಪೊಲೀಸರು ಕೂಡ ವಂಚಕರ ಜಾಲಕ್ಕೆ ಬಿದ್ದಿರುವ ಉದಾಹರಣೆಗಳಿವೆ.

ಸಮಸ್ಯೆಯನ್ನು ಬಹಳ ಗಂಭೀರವಾಗಿ ಪರಿಗಣಿಸಿರುವುದಾಗಿ ಹೇಳಿರುವ ಸುಪ್ರೀಂ ಕೋರ್ಟ್, ಇಂತಹ ಅಪರಾಧ ಕೃತ್ಯಗಳನ್ನು ಮಟ್ಟಹಾಕಲು ಕಾನೂನು ಜಾರಿ ಸಂಸ್ಥೆಗಳನ್ನು ಬಲಪಡಿಸುವ ಉದ್ದೇಶದಿಂದ ಕಠಿಣ ಆದೇಶಗಳನ್ನು ನೀಡುವುದಾಗಿ ಹೇಳಿದೆ. ನ್ಯಾಯಾಲಯದ ನಕಲಿ ಆದೇಶವೊಂದನ್ನು ಇರಿಸಿಕೊಂಡು ತಮ್ಮನ್ನು ಡಿಜಿಟಲ್ ಬಂಧನಕ್ಕೆ ಒಳಪಡಿಸಲಾಗಿತ್ತು, ₹1 ಕೋಟಿಗೂ ಹೆಚ್ಚು ಮೊತ್ತವನ್ನು ವಂಚಿಸಲಾಯಿತು ಎಂದು ಹರಿಯಾಣದ ಮಹಿಳೆಯೊಬ್ಬರು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಯವರಿಗೆ (ಸಿಜೆಐ) ಬರೆದ ಪತ್ರವನ್ನು ಆಧರಿಸಿ ಕೋರ್ಟ್ ಈ ಪ್ರಕರಣವನ್ನು ಸ್ವಯಂಪ್ರೇರಿತವಾಗಿ ಕೈಗೆತ್ತಿಕೊಂಡಿದೆ. ಈ ವಿಚಾರದ ಬಗ್ಗೆ ಪರಿಶೀಲಿಸುವಂತೆ ಕೋರ್ಟ್ ಸಿಬಿಐಗೆ ಸೂಚಿಸಿತ್ತು. ಇಂತಹ ಪ್ರಕರಣಗಳ ತನಿಖೆಯಲ್ಲಿ ಎದುರಾಗುವ ಸಮಸ್ಯೆಗಳನ್ನು, ಸವಾಲುಗಳನ್ನು ಸಿಬಿಐ ಅಧಿಕಾರಿಗಳು ಕೋರ್ಟ್‌ಗೆ ತಿಳಿಸಿದ್ದಾರೆ. ಸೈಬರ್ ಅಪರಾಧ ಕೃತ್ಯ ಎಸಗುವ ಹಲವರು ಮ್ಯಾನ್ಮಾರ್, ಲಾವೋಸ್, ಕಾಂಬೋಡಿಯಾದಲ್ಲಿ ಇದ್ದಾರೆ. ಅವರು ಆಧುನಿಕ ತಂತ್ರಜ್ಞಾನವನ್ನು ಬಳಸಿಕೊಳ್ಳುತ್ತಿದ್ದಾರೆ, ತಮ್ಮ ಕೆಲಸಕ್ಕೆ ಎ.ಐ. ನೆರವು ಪಡೆಯುತ್ತಿದ್ದಾರೆ, ತನಿಖಾ ಸಂಸ್ಥೆಗಳಿಗಿಂತ ಒಂದು ಹೆಜ್ಜೆ ಮುಂದೆ ಇದ್ದಾರೆ. ಪ್ರಕರಣದಲ್ಲಿ ತನಗೆ ನೆರವಾಗಲು ಸುಪ್ರೀಂ ಕೋರ್ಟ್, ಅಮಿಕಸ್ ಕ್ಯೂರಿ (ನ್ಯಾಯಾಲಯದ ಸಹಾಯಕ) ಒಬ್ಬರನ್ನು ನೇಮಕ ಮಾಡಿದೆ. ತನಿಖಾ ಸಂಸ್ಥೆಗಳ ಪಾಲಿಗೆ ಇಂತಹ ಪ್ರಕರಣಗಳ ತನಿಖೆಯು ಬಹಳ ದೀರ್ಘ ಅವಧಿಯ ಕೆಲಸವಾಗಬಹುದು, ಅಪೇಕ್ಷಿತ ಫಲಿತಾಂಶ ಸಿಗದೆ ಇರಬಹುದು. ಆದರೆ ಈಗ ಇಂತಹ ಪ್ರಕರಣಗಳ ಬಗ್ಗೆ ಕೋರ್ಟ್ ಕೂಡ ವಿಶೇಷ ಗಮನ ಹರಿಸಿರುವ ಕಾರಣದಿಂದಾಗಿ, ತನಿಖಾ ಸಂಸ್ಥೆಗಳು ಇನ್ನಷ್ಟು ಚುರುಕಿನಿಂದ ಕೆಲಸ ನಿರ್ವಹಿಸಬೇಕಾದ ಸಂದರ್ಭ ಸೃಷ್ಟಿಯಾಗಬಹುದು.

ಜಾಲಡಾ

ಇಕ್ಕಟ್ಟು–ಬಿಕ್ಕಟ್ಟು!

ಒಂದೆಡೆ ನಾಲಗೆ ನೀರೂರಿಸುವ
ವೈವಿಧ್ಯಮಯ ಊಟ ತಿಂಡಿಯ,
ಅದು ಸಿಗುವ ತಾಣಗಳ ರೀಲ್ಸ್‌ಗಳು.
ಇನ್ನೊಂದೆಡೆ, ಎಣ್ಣೆ ಬೆಣ್ಣೆ ತಿನ್ನಬೇಡಿ,
ವ್ಯಾಯಾಮ ಮಾಡಿ, ಜಿಮ್‌ಗೆ ಹೋಗಿ,
ಪೌಷ್ಟಿಕ ಆಹಾರ ಮಾತ್ರ ತಿನ್ನಿ, ತೂಕ ಇಳಿಸಿರಿ, ಎಂಬ ಮಾಹಿತಿಯ ಮಹಾಪೂರ. ಆಧುನಿಕ ಬದುಕಿನ ಇಕ್ಕಟ್ಟು–ಬಿಕ್ಕಟ್ಟು ಅಂದರೆ ಇದೇ.

ಸವಿತಾ ನಾಗಭೂಷಣ, ಕವಯಿತ್ರಿ, 'ಫೇಸ್‌ಬುಕ್'ನಿಂದ

ಕಿಡಿನುಡಿ

ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಜಿಎಸ್‌ಟಿ ದರ ಇಳಿಸಿ, ಜನರ ಜೀವನಕ್ಕೆ ಅನುಕೂಲ ಮಾಡಿಕೊಟ್ಟಿದೆ. ಆದರೆ, ರಾಜ್ಯದ ಭ್ರಷ್ಟ ಕಾಂಗ್ರೆಸ್ ಸರ್ಕಾರವು ಜನರ ಜೇಬಿಗೆ ಕನ್ನ ಹಾಕುತ್ತಿದೆ. ಸಿದ್ದರಾಮಯ್ಯ ಎಂದರೆ ಬೆಲೆ ಏರಿಕೆಯ ಸರದಾರ.

ಸಿ.ಟಿ. ರವಿ, ವಿಧಾನ ಪರಿಷತ್ ಸದಸ್ಯ

25 ವರ್ಷಗಳ ಹಿಂದೆ

ಮಂಗಳವಾರ, 7-11-2000

• ಗಂಗಾವತಿ: ರೈತರ ಮೇಲೆ ಲಾಠಿ, ಗಾಳಿಯಲ್ಲಿ ಗುಂಡು

ಗಂಗಾವತಿ, ನ. 6– ಭತ್ತದ ಬೆಳೆಗೆ ಸೂಕ್ತ ಬೆಂಬಲ ಬೆಲೆ ನಿಗದಿ ಮಾಡಿ ಸರ್ಕಾರವೇ ಖರೀದಿ ವ್ಯವಸ್ಥೆ ಮಾಡಬೇಕೆಂದು ಒತ್ತಾಯಿಸಿ ಸಚಿವರ ಮನೆಗೆ ಮುತ್ತಿಗೆ ಹಾಕಲು ಯತ್ನಿಸಿದ ರೈತರನ್ನು ಚದುರಿಸಲು ಪೊಲೀಸರು ಲಾಠಿ ಪ್ರಹಾರ ನಡೆಸಿ, ಅಶ್ರುವಾಯು ಸಿಡಿಸಿದ್ದಲ್ಲದೆ ಗಾಳಿಯಲ್ಲಿ ಗುಂಡು ಹಾರಿಸಿದರು. ಪೊಲೀಸರು ಏಕಾಏಕಿ ಲಾಠಿ ಪ್ರಹಾರ ಆರಂಭಿಸಿದ್ದರಿಂದ ರೈತರು ದಿಕ್ಕೆಟ್ಟು ಓಡಲಾರಂಭಿಸಿದರು. ಈ ಗಲಭೆಯಿಂದಾಗಿ ನೂರಾರು ರೈತರು ಗಾಯಗೊಂಡಿದ್ದಾರೆ. ಅನಿರೀಕ್ಷಿತವಾಗಿ ನಡೆದ ಪೊಲೀಸರ ಹಲ್ಲೆಯಿಂದಾಗಿ ದಾರಿಯಲ್ಲಿ ಹೋಗುತ್ತಿದ್ದ ಅಮಾಯಕ ಜನರೂ ಗಾಯಗೊಂಡು ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

75 ವರ್ಷಗಳ ಹಿಂದೆ

ಮಂಗಳವಾರ, 7-11-1950

• ಏರ್ ಇಂಡಿಯಾ ವಿಮಾನದ ಅವಶೇಷ ಪತ್ತೆ

ಜಿನೀವಾ, ನ. 5– ನಲವತ್ತೆಂಟು ಮಂದಿಯನ್ನೊಳಗೊಂಡು, ಶುಕ್ರವಾರದಿಂದ ಕಾಣೆಯಾಗಿದ್ದ ಏರ್ ಇಂಡಿಯಾ ಕಾನ್‌ಸ್ಟಲೇಷನ್‌ನ 'ಮಲಬಾರ್ ಪ್ರಿನ್ಸೆಸ್' ವಿಮಾನವು ಇಂದು 15,781 ಅಡಿ ಎತ್ತರದ ಮಾಂಟ್ ಬ್ಲಾಂಕ್ ಶಿಖರದ, 700 ಅಡಿ ಕೆಳಗೆ ಬಿದ್ದುದು ಕಂಡು ಬಂತು.

ಲಂಡನ್ನಿನಲ್ಲಿ ಏರ್ ಇಂಡಿಯಾ ಸಂಸ್ಥೆಯ ಕಾರ್ಯಾಚರಣೆ ನಿರ್ದೇಶಕ ಕ್ಯಾಪ್ಟನ್ ಡಿ.ಕೆ. ಜಾಥಾರ್‌ರವರ ಕಣ್ಣಿಗೆ ಬಿದ್ದ ಈ ವಿಮಾನವು, ಎರಡು ಭಾಗವಾಗಿ ಮುರಿದು ಬಿದ್ದಿತ್ತು. ಯಾರೂ ಜೀವಂತವಾಗಿರುವ ಚಿಹ್ನೆಯೇನೂ ಕಾಣಬರಲಿಲ್ಲ.

'ಹೊರಗಿಡುವಿಕೆ' ಈಗ ಅಧಿಕೃತ

ವಿಶ್ಲೇಷಣೆ

ಯೋಗೇಂದ್ರ ಯಾದವ್

> ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಯ ಮತ್ತೊಂದು ಅಧ್ಯಾಯ ಆರಂಭಗೊಂಡಿದೆ. ಆದರೆ, ಬಿಹಾರದಲ್ಲಿ ನಡೆಸಿದ ಪ್ರಯೋಗದಿಂದ ಚುನಾವಣಾ ಆಯೋಗ ಪಾಠ ಕಲಿತಿಲ್ಲ!

ಹುಚ್ಚಾಟ ಈಗ ವ್ಯವಸ್ಥಿತವಾಗಿದೆ. ರಾಷ್ಟ್ರವ್ಯಾಪಿಯಾಗಿ ನಡೆಸುತ್ತಿರುವ ಮತದಾರರ ಪಟ್ಟಿಯ ಎರಡನೇ ವಿಶೇಷ ಸಮಗ್ರ ಪರಿಷ್ಕರಣೆಯು (ಎಸ್‌ಐಆರ್) ಬೇಕಾಬಿಟ್ಟಿ ಪರಿಹಾರವೊಂದಕ್ಕೆ ಸಮಸ್ಯೆಯ ಹುಡುಕಾಟವಲ್ಲ. ಈಗ ಇದಕ್ಕೆ ತರ್ಕವೊಂದರ ಹುಡುಕಾಟ ನಡೆದಿದೆ ಮತ್ತು ನಿರಂತರವಾಗಿ ಮನುಷ್ಯನೇ ಸೃಷ್ಟಿಸಿರುವ ಈ ಪ್ರಮಾದವನ್ನು ಮುಚ್ಚಿ ಹಾಕಬೇಕಿದೆ. ಎಸ್‌ಐಆರ್ ಈಗ ಸುಧಾರಣೆಗಳನ್ನು ಕಂಡಿದೆ. ಸಾಮೂಹಿಕವಾಗಿ ಗೊತ್ತುಗುರಿ ಇಲ್ಲದೆ ಮತಾವಕಾಶವನ್ನು ಕಸಿದುಕೊಳ್ಳುವ ಕಾರ್ಯಾಚರಣೆಯು ಈಗ ಉದ್ದೇಶಪೂರ್ವಕವಾಗಿ ಮತದಾರರನ್ನು ಹೊರಕ್ಕೆ ತಳ್ಳುವ ನಿಖರ ಮತ್ತು ಪರಿಷ್ಕೃತ ಸಾಧನವಾಗಿದೆ. ಇತ್ತೀಚೆಗೆ ಮಾಡಲಾದ ಘೋಷಣೆಯು ಚುನಾವಣಾ ಆಯೋಗದ ಅಸಮರ್ಥತೆಯನ್ನು ತೋರಿಸುತ್ತದೆ; ಅಥವಾ ಬಿಹಾರದಲ್ಲಿ ನಡೆಸಿದ ಪ್ರಯೋಗದಿಂದ ಯಾವುದೇ ಪಾಠ ಕಲಿಯಲು ಆಯೋಗಕ್ಕೆ ಇಚ್ಛೆ ಇಲ್ಲ ಎಂಬುದನ್ನು ತೋರಿಸುತ್ತದೆ.

ಪರಿಷ್ಕರಣೆಯಿಂದ ಮತದಾರರ ಪಟ್ಟಿಯ ಗುಣಮಟ್ಟದಲ್ಲಿ ಭಾರಿ ನೆಗೆತದ ಬದಲಿಗೆ ಎಲ್ಲ ಆಯಾಮಗಳಲ್ಲಿಯೂ ಅದು ಕೆಟ್ಟುಹೋಗಿದೆ: ವಯಸ್ಕರು–ಮತದಾರರ ಅನುಪಾತದಲ್ಲಿ ಗಮನಾರ್ಹ ಇಳಿಕೆ ಆಗಿದೆ; ಮಹಿಳೆಯರು ಮತ್ತು ಮುಸ್ಲಿಮರ ಹೆಸರು ತೆಗೆದುಹಾಕಿರುವುದು ಜನಸಂಖ್ಯೆಗೆ ಅನುಗುಣವಾಗಿ ಇಲ್ಲ; ಮತದಾರರ ಪಟ್ಟಿಯಲ್ಲಿರುವ ಲೋಪಗಳು (ನಕಲಿ ಹೆಸರುಗಳು, ಅಸಂಬದ್ಧ ಉಲ್ಲೇಖಗಳು, ಒಂದೇ ವಿಳಾಸದಲ್ಲಿ ನೂರಾರು ಹೆಸರುಗಳು ಇತ್ಯಾದಿ) ಈಗಲೂ ಕಣ್ಣಿಗೆ ರಾಚುವಂತಿವೆ. ಸರ್ಕಾರದ ಬೊಕ್ಕಸಕ್ಕೆ ಆಗುವ ಹಣಕಾಸಿನ ಹೊರೆಯ ಜೊತೆಗೆ ಇತರ ಸಮಸ್ಯೆಗಳೂ ಇವೆ– ಚುನಾವಣೆಗೆ ಮೊದಲು ರಾಜಕೀಯ ಅಸಮಾಧಾನ ಮತ್ತು ಬಡ ಪೌರರಿಗೆ ಆಗಿರುವ ದೈಹಿಕ ಮತ್ತು ಮಾನಸಿಕ ಹಿಂಸೆಗಳನ್ನು ಗಮನಿಸಿದರೆ ಮತದಾರರ ಪಟ್ಟಿಯನ್ನು ಯಾವ ರೀತಿ ಪರಿಷ್ಕರಣೆ ಮಾಡಬಾರದು ಎಂಬುದಕ್ಕೆ ಬಿಹಾರದ ಪ್ರಯೋಗವು ಉದಾಹರಣೆಯಂತಿದೆ.

ಪಾಠಗಳು ಎಲ್ಲರಿಗೂ ಕಾಣುವಂತೆ ಸ್ಪಷ್ಟವಾಗಿವೆ. ಒಂದು, ನಮ್ಮ ಮತದಾರರ ಪಟ್ಟಿಗಳು ಗಂಭೀರವಾದ ದೋಷಗಳಿಂದ ಕೂಡಿವೆ. ಎರಡು, ಮೃತರಾದವರು ಮತ್ತು ಸ್ಥಳದಲ್ಲಿ ಇಲ್ಲದವರು ಸಾಮಾನ್ಯ ಪರಿಷ್ಕರಣೆಯಲ್ಲಿ ಬಹುಸಂಖ್ಯೆಯಲ್ಲಿ ಪಟ್ಟಿಯಲ್ಲಿ ಉಳಿದುಕೊಂಡರೆ ಅರ್ಹ ಹೊಸ ಮತದಾರರು ದೊಡ್ಡ ಸಂಖ್ಯೆಯಲ್ಲಿ ಹೊರಗೆ ಉಳಿಯುತ್ತಾರೆ. ಮೂರು, ಮನೆ ಮನೆಗೆ ಭೇಟಿ ಕೊಟ್ಟು ದೃಢೀಕರಿಸುವ ಕೆಲಸ ಬಹುಕಾಲದಿಂದ ಬಾಕಿ ಉಳಿದಿದೆ. ನಾಲ್ಕು, ಪ್ರತಿಯೊಬ್ಬರೂ ಒಂದು ತಿಂಗಳೊಳಗೆ ಗಣತಿ ನಮೂನೆಯನ್ನು ಭರ್ತಿ ಮಾಡಿ ಕೊಡಬೇಕು ಎಂಬುದು ಅನಗತ್ಯ ಮತ್ತು ಅದರಿಂದಾಗಿ ಬಹಳ ಮಂದಿ ಅವಕಾಶ ವಂಚಿತರಾಗುತ್ತಾರೆ. ಐದು, 2003ರಲ್ಲಿ ತಯಾರಾದ 'ಶುದ್ಧ' ಎಂದು ಹೇಳಲಾಗುವ ಮತದಾರರ ಪಟ್ಟಿಯ ಜೊತೆ ಮತದಾರರನ್ನು ಹೋಲಿಸಿ ನೋಡುವುದಕ್ಕೂ ಮತದಾರರ ಪಟ್ಟಿಯ ಗುಣಮಟ್ಟ ಹೆಚ್ಚಳಕ್ಕೂ ಯಾವ ಸಂಬಂಧವೂ ಇಲ್ಲ. ಆರು, ಅರ್ಹತೆಗೆ ನೀಡಬೇಕಾದ ದಾಖಲಾತಿಗಳ ಪಟ್ಟಿಯು ಸೇರ್ಪಡೆಗಿಂತ ಹೊರಗಿಡುವುದಕ್ಕೆ ಮಹತ್ವ ನೀಡುವಂತಿದೆ ಮತ್ತು ಮತದಾರರು ದಾಖಲಾತಿ ಸಲ್ಲಿಸಲು ಅಸಾಧ್ಯ ಎನ್ನುವಂತಿದೆ. ಮತ್ತು ಏಳು, ಈ ಹಿಂದೆ ಇದ್ದ ಮತದಾರರ ಪಟ್ಟಿಯಲ್ಲಿ ವಿದೇಶಿಯರ ಹೆಸರು ಸೇರ್ಪಡೆಯಾಗಿದೆ ಎಂಬುದಕ್ಕೆ ಯಾವ ಆಧಾರವೂ ಇಲ್ಲ.

ಹಾಗಾಗಿ, ಬಿಹಾರದ ಎಸ್‌ಐಆರ್ ಪ್ರಾಯೋಗಿಕ ಪ್ರಕರಣ ಎಂದಾಗಿದ್ದರೆ, ಇಡೀ ಪ್ರಯೋಗದ ಹಿಂದಿನ ವಿವೇಚನೆಯ ಕುರಿತು ಗಂಭೀರ ಮರುಚಿಂತನೆ ನಡೆಸಬೇಕಾಗಿತ್ತು. ಎಸ್‌ಐಆರ್ ಬದಲಿಗೆ ಹಳೆಯ ಶೈಲಿಯ ಸಮಗ್ರ ಮರುಪರಿಶೀಲನೆ– ಅಂದರೆ ಮನೆ ಮನೆ ಭೇಟಿ ಮೂಲಕ ದೃಢೀಕರಣ– ನಡೆಸಬೇಕಿತ್ತು ಮತ್ತು ಇದಕ್ಕೆ ಆಧುನಿಕ ಮಾಹಿತಿ ತಂತ್ರಜ್ಞಾನ ಬಳಸಿಕೊಂಡು ದೋಷಗಳನ್ನು ಸರಿಪಡಿಸಬಹುದಿತ್ತು. ಹೀಗೆ ಮಾಡಿದ್ದರೆ, ಗಣತಿ ನಮೂನೆ ಭರ್ತಿ, ಅರ್ಹತಾ ದಾಖಲಾತಿಗಳ ಸಲಿಕೆ ಮತ್ತು 2003ರ ಪಟ್ಟಿಯಲ್ಲಿ ಇರುವವರ ಜೊತೆಗಿನ ಸಂಬಂಧ ಸಾಬೀತುಪಡಿಸುವಂತಹ ತ್ರಾಸದಾಯಕ ಪ್ರಕ್ರಿಯೆಯನ್ನು ತಪ್ಪಿಸಬಹುದಿತ್ತು. ಆದರೆ, ಸುಸಂಬದ್ಧ ಮತ್ತು ಸರಳವಾದ ಮಾರ್ಗವನ್ನು ಆಯೋಗವು ಅನುಸರಿಸಲಿಲ್ಲ. ಕಾನ್ಪುರ ಐಐಟಿಯ ಹಳೆ ವಿದ್ಯಾರ್ಥಿಯಾಗಿರುವ ಮುಖ್ಯ ಚುನಾವಣಾ ಆಯುಕ್ತರು, ಒಂದಕ್ಕಿಂತ ಹೆಚ್ಚಿನ ಹೆಸರುಗಳನ್ನು ಅಳಿಸಲು ಸಾಫ್ಟ್‌ವೇರ್ ಅಗತ್ಯವೇ ಇಲ್ಲ ಎಂದಿದ್ದಾರೆ. ಮತದಾರರ ಪಟ್ಟಿಯ 'ಶುದ್ಧೀಕರಣ' ಚುನಾವಣಾ ಆಯೋಗಕ್ಕೆ ಅಗತ್ಯ ಇಲ್ಲ ಎಂಬ ಅನುಮಾನಕ್ಕೆ ಇದು ಪುಷ್ಟಿ ಕೊಡುತ್ತದೆ.

ಕೆಡುಕಿನ ಉದ್ದೇಶವನ್ನೇ ಅಂತರಂಗದಲ್ಲಿ ಇರಿಸಿಕೊಂಡಿರುವ ಎಸ್‌ಐಆರ್ ಯೋಜನೆಯ ಹೊಸ ಆವೃತ್ತಿಯ ಸುಧಾರಣೆಯಲ್ಲಿ ಆಡಳಿತವನ್ನು ಹೆಚ್ಚು ದಕ್ಷಗೊಳಿಸುವುದಕ್ಕೆ ಮಹತ್ವ ನೀಡಲಾಗಿದೆ. ಬಿಹಾರದ ಪ್ರಯೋಗಕ್ಕೆ ಹೋಲಿಸಿದರೆ ಈಗ ಆಯೋಗವು ಹೆಚ್ಚು ಸನ್ನದ್ಧ ಆಗಿರಬಹುದು. ಪ್ರಕ್ರಿಯೆಯಲ್ಲಿ ಭಾಗಿಯಾಗುವ ಅಧಿಕಾರಿಗಳಿಗೆ ಸಕಾಲದಲ್ಲಿ ತರಬೇತಿ ನೀಡಿಕೆ ಮತ್ತು ಹಳೆಯ ಪಟ್ಟಿಯೊಂದಿಗೆ ಹೆಸರುಗಳನ್ನು ಹೋಲಿಸಿ ನೋಡುವುದರಿಂದ ಗೊಂದಲವನ್ನು ಕಡಿಮೆ ಮಾಡಿಕೊಳ್ಳಬಹುದು. ಪಕ್ಷಗಳ ಮತಗಟ್ಟೆ ಮಟ್ಟದ ಏಜೆಂಟರಿಗೆ (ಬಿಎಲ್‌ಎ) ನಮೂನೆ ಸಲ್ಲಿಕೆಗೆ ಅವಕಾಶ ಕೊಟ್ಟರೆ ಮತಗಟ್ಟೆ ಮಟ್ಟದ ಅಧಿಕಾರಿಗಳ (ಬಿಎಲ್‌ಒ) ಹೊರೆ ಕಡಿಮೆಯಾಗುತ್ತದೆ. ಪ್ರಕ್ರಿಯೆ ಆರಂಭವಾದ ಬಳಿಕ ಮತ್ತು ರಹಸ್ಯವಾಗಿ ಬಿಹಾರದಲ್ಲಿ ವಿನಾಯಿತಿ ನೀಡಿದ ಪ್ರವೃತ್ತಿಯನ್ನು ಆಯೋಗವು ಈಗ ಅಧಿಕೃತಗೊಳಿಸಿದೆ. ಮತದಾರರು ಗಣತಿ ನಮೂನೆಯ ಜೊತೆಗೆ ಯಾವುದೇ ದಾಖಲಾತಿಯನ್ನು ನೀಡಬೇಕಾಗಿಲ್ಲ. 2002–04ರ ಮತದಾರರ ಪಟ್ಟಿಯಲ್ಲಿ ಹೆಸರು ಇದ್ದವರ ಮಕ್ಕಳಿಗೆ ಮಾತ್ರ ಈ ವಿನಾಯಿತಿಯನ್ನು ಆರಂಭದಲ್ಲಿ ನೀಡಲಾಗಿತ್ತು. ಈಗ, ಈ ಪಟ್ಟಿಯಲ್ಲಿ ಇರುವವರ ಸಂಬಂಧಿಕರಾಗಿದ್ದರೆ (ಈತನಕ ಯಾರು ಯಾರು ಎಂಬುದನ್ನು ವಿವರಿಸಲಾಗಿಲ್ಲ) ಸಾಕು ಎಂದು ಬದಲಾಯಿಸಲಾಗಿದೆ. ಮನೆಯ ವಯಸ್ಕ ಸದಸ್ಯರೊಬ್ಬರು ಕುಟುಂಬದಲ್ಲಿರುವ ಎಲ್ಲರ ಗಣತಿ ನಮೂನೆಯನ್ನು ಸಲ್ಲಿಸಬಹುದು ಮತ್ತು ಇದು ವಲಸಿಗರಿಗೆ ಅನುಕೂಲ ಮಾಡಿಕೊಡಬಹುದು. ಪ್ರತಿಯೊಬ್ಬ ಬಿಎಲ್‌ಒ ಮತದಾರರ ಪಟ್ಟಿಗೆ ಹೊಸ ಹೆಸರು ಸೇರಿಸುವ ನಮೂನೆಯನ್ನು ತಮ್ಮೊಂದಿಗೆ ಒಯ್ಯಲು ಸೂಚಿಸಿದರೆ, ಮನೆ ಮನೆ ಭೇಟಿ ಸಂದರ್ಭದಲ್ಲಿ ಅಳಿಸುವಿಕೆ ಮಾತ್ರವಲ್ಲದೆ, ಹೊಸ ಮತದಾರರ ಸೇರ್ಪಡೆಯೂ ಗಣನೀಯವಾಗಿ ಆಗಬಹುದು. ಈ ಎಲ್ಲವೂ ಮತದಾರರ ತೊಂದರೆಯನ್ನು ಕಡಿಮೆ ಮಾಡಬಹುದು ಮತ್ತು ಅಧಿಕಾರಿಗಳ ದುಃಸ್ವಪ್ನಕ್ಕೆ ಕಡಿವಾಣ ಹಾಕಬಹುದು.

ಹಾಗಿದ್ದರೂ ಈ ವಿನಾಯಿತಿಗಳು ಮತ್ತು ಸುಧಾರಣೆಗಳು ಎಸ್‌ಐಆರ್‌ನ ಮೂಲದಲ್ಲಿಯೇ ಇರುವ ಹೊರಗಿಡುವಿಕೆಯ ಸ್ವರೂಪವನ್ನು ಬದಲಿಸುವುದಿಲ್ಲ. ಈ ಹಿಂದೆ ಎಂಟು ಬಾರಿ ನಡೆಸಲಾಗಿರುವ ಸಮಗ್ರ ಪರಿಷ್ಕರಣೆಯ ಪುನರಾವರ್ತನೆಯೇ ಈಗಿನ ಈ ಪ್ರಯೋಗ ಎಂಬ ಸುಳ್ಳನ್ನು ಕೈಬಿಡದಿರಲು ಚುನಾವಣಾ ಆಯೋಗವು ನಿರ್ಧರಿಸಿದೆ. ಈ ಹಿಂದಿನ ಮಾರ್ಗಸೂಚಿಗಳು ಈಗ ಸಾರ್ವಜನಿಕವಾಗಿ ಲಭ್ಯ ಇವೆ. ಈಗ ನಡೆಸುತ್ತಿರುವ ಎಸ್‌ಐಆರ್ ಈ ಹಿಂದೆ ನಡೆಸಿದ ಸಮಗ್ರ ಪರಿಷ್ಕರಣೆಯ ರೀತಿಯಲ್ಲಿ ಇರುವ ಸಾಧ್ಯತೆ ಇಲ್ಲ. ಹಳೆಯ ಮಾರ್ಗಸೂಚಿಯನ್ನು ಮುಚ್ಚಿಡಲು ಆಯೋಗವು ಎಷ್ಟೇ ಪ್ರಯತ್ನ ಮಾಡಿದ್ದರೂ ಸಾಧ್ಯವಾಗಿಲ್ಲ.

ಎಲ್ಲಕ್ಕಿಂತ ಮುಖ್ಯವಾಗಿ, ಮತದಾರರ ಪಟ್ಟಿಯಲ್ಲಿ ಸ್ಥಾನ ಪಡೆಯುವ ಹೊಣೆಗಾರಿಕೆಯನ್ನು ಮತದಾರರ ಮೇಲೆಯೇ ಹೊರಿಸಿರುವುದನ್ನು ಹೊಸ ಎಸ್‌ಐಆರ್ ಕೂಡ ಹಾಗೆಯೇ ಉಳಿಸಿಕೊಂಡಿದೆ. ಇದು ನಮ್ಮ ದೇಶದಲ್ಲಿ ಅನುಸರಿಸುವ ಸಾರ್ವತ್ರಿಕ ವಯಸ್ಕ ಮತದಾನದ ಹಕ್ಕು ಚಿಂತನೆಗೆ ವ್ಯತಿರಿಕ್ತವಾದುದು. ಒಂದು ತಿಂಗಳೊಳಗೆ ದಾಖಲಾತಿಗಳನ್ನು ಸಲ್ಲಿಸಲು ಮತದಾರರು ವಿಫಲರಾದರೆ, ಅವರ ಹೆಸರನ್ನು ಮತದಾರರ ಪಟ್ಟಿಯಿಂದ ಯಾವುದೇ ನೋಟಿಸ್, ವಿಚಾರಣೆ ಅಥವಾ ಮೇಲ್ಮನವಿಗೆ ಅವಕಾಶ ಇಲ್ಲದಂತೆ ಅಳಿಸಿ ಹಾಕಲಾಗುವುದು ಎಂಬ ಕ್ರೂರ ನಿಯಮವನ್ನೂ ಉಳಿಸಿಕೊಳ್ಳಲಾಗಿದೆ. ಮತದಾರರ ನೋಂದಣಿಯ ಹೊಣೆಗಾರಿಕೆಯನ್ನು ಸರ್ಕಾರವು ಕೈಬಿಟ್ಟು ಮತದಾರರಿಗೆ ಅದರ ಹೊಣೆ ವಹಿಸಿದಾಗ ಮತದಾರರ ಪಟ್ಟಿಯಲ್ಲಿ ಮತದಾರರ ಸಂಖ್ಯೆಯಲ್ಲಿ ಭಾರಿ ಕುಸಿತವಾಗಿದೆ ಎಂಬುದು ಜಾಗತಿಕವಾಗಿ ಇರುವ ಅನುಭವವಾಗಿದೆ. ಈ ತೊಡಕಿನಿಂದಾಗಿ ಶೇ 5ರಿಂದ ಶೇ 10ರಷ್ಟು ಮತದಾರರು ಮತದಾರರ ಪಟ್ಟಿಯಿಂದ ಹೊರಗೆ ಉಳಿಯಬಹುದು. ಬಿಹಾರದಲ್ಲಿ ಆಗಿರುವಂತೆ ಮಹಿಳೆಯರ ಸಂಖ್ಯೆಯು ಮತದಾರರ ಸಂಖ್ಯೆಯ ಅನುಪಾತಕ್ಕೆ ಅನುಗುಣವಾಗಿ ಇಲ್ಲದಿರಬಹುದು. ಈ ನೈಜ ಅಪಾಯದ ಕಡೆಗೆ ಗಮನ ಹರಿಸಬೇಕು ಎಂಬ ವಿಷಯದಲ್ಲಿ ಆಯೋಗವು ತಲೆಯೇ ಕೆಡಿಸಿಕೊಂಡಿಲ್ಲ.

ಹೊಸ ಆವೃತ್ತಿಯಲ್ಲಿ ಉದ್ದೇಶಪೂರ್ವಕ ಅಳಿಸುವಿಕೆ ಇನ್ನೂ ಹೆಚ್ಚು ತೀವ್ರವಾಗಿದೆ. 2002–2004ರ ಮತದಾರರ ಪಟ್ಟಿಯಲ್ಲಿ ಇದ್ದವರ ಪೌರತ್ವವನ್ನು ಪರೀಕ್ಷೆಗೆ ಒಳಪಡಿಸಲಾಗಿತ್ತು ಎಂಬ ಮಿಥ್ಯೆಯನ್ನು ಆಯೋಗವು ಪ್ರತಿಪಾದಿಸುತ್ತಲೇ ಇದೆ. ಆದರೆ, ಅಂತಹ ಯಾವುದೇ ಪ್ರಯತ್ನ ಆಗಿರಲಿಲ್ಲ ಎಂಬುದು ಆಗಿನ ಮಾರ್ಗಸೂಚಿಯಲ್ಲಿ ಸ್ಪಷ್ಟವಾಗಿದೆ. ಈಗ, ಪ್ರತಿಯೊಬ್ಬರೂ ತಾವು ಅಥವಾ ತಮ್ಮ ಸಂಬಂಧಿಕರು 2002–2004ರ ಮತದಾರರ ಪಟ್ಟಿಯಲ್ಲಿ ಇದ್ದೆವು ಎಂಬುದನ್ನು ಸಾಬೀತುಪಡಿಸಬೇಕಿದೆ. ಹಾಗೆ ಮಾಡದೇ ಇದ್ದರೆ ದಾಖಲೆ ಸಲ್ಲಿಸುವಂತೆ ಅವರಿಗೆ ನೋಟಿಸ್ ಬರುತ್ತದೆ; ಆಧಾರ್ ಅನ್ನು ಗೊಣಗುತ್ತಲೇ ಸೇರಿಸಿದ್ದರೂ ಅದೇ ಹಳೆಯ ನಿರ್ಬಂಧಾತ್ಮಕ ದಾಖಲಾತಿಗಳ ಪಟ್ಟಿಯೇ ಈಗಲೂ ಇದೆ. ಜೊತೆಗೆ, 2002–2004ರ ಪಟ್ಟಿಯಲ್ಲಿ ಕುಟುಂಬದ ಯಾರೊಬ್ಬರೂ ಏಕೆ ಇಲ್ಲ ಎಂಬ ಪ್ರಶ್ನೆಯನ್ನು ಎಲ್ಲರಿಗೂ ಕೇಳಲಾಗುತ್ತದೆ. ಇದು ಬಹಳ ಸ್ಪಷ್ಟವಾಗಿ ಅಸ್ಸಾಂನ ರಾಷ್ಟ್ರೀಯ ಪೌರತ್ವ ನೋಂದಣಿಯನ್ನು ಹೋಲುತ್ತದೆ. ದಾಖಲಾತಿಗಳನ್ನು ಹೇಗೆ ದೃಢೀಕರಿಸಬೇಕು ಎಂಬುದಕ್ಕೆ ಪಾರದರ್ಶಕವಾದ ಮಾನದಂಡವನ್ನು ಆಯೋಗವು ರೂಪಿಸಿಲ್ಲ. ಹಾಗಾಗಿ, ಸ್ವೇಚ್ಛೆಯಿಂದ ಹೆಸರು ಅಳಿಸುವಿಕೆ ಅಥವಾ ಆಡಳಿತಾರೂಢರಿಗೆ ಅಪಥ್ಯವಾದ ಸಮುದಾಯಗಳಿಗೆ ಸೇರಿದವರ ಹೆಸರುಗಳನ್ನು ಉದ್ದೇಶಪೂರ್ವಕವಾಗಿ ಅಳಿಸಿ ಹಾಕಬಹುದು ಎಂಬ ಕಳವಳ ಮೌಲಿಕವೇ ಆಗಿದೆ. ಈ ದೃಷ್ಟಿಕೋನದಲ್ಲಿ ನೋಡಿದಾಗ ಎರಡನೇ ಹಂತದ ಎಸ್‌ಐಆರ್ ಹೆಚ್ಚು ನೇರವಾದ ಪೌರತ್ವ ದೃಢೀಕರಣದ ಪ್ರಯೋಗವೇ ಆಗಿದೆ.

ಬಿಹಾರದಲ್ಲಿ ನಡೆದದ್ದು ಪ್ರಯೋಗ. ನಮ್ಮ ಮತದಾರರ ಪಟ್ಟಿಯನ್ನು ಬಾಧಿಸಿರುವ ರೋಗಕ್ಕೆ ಎಸ್‌ಐಆರ್ ಎಷ್ಟು ಸಮಂಜಸವಾದ ಔಷಧ ಎಂಬುದನ್ನು ಪರೀಕ್ಷಿಸುವುದು ಇದರ ಉದ್ದೇಶ ಅಲ್ಲ; ಬದಲಿಗೆ ಮೊದಲೇ ನಿರ್ಧರಿಸಿದ ಸಂದೇಹಾಸ್ಪದ ಔಷಧವನ್ನು ಎಷ್ಟು ಉತ್ತಮವಾಗಿ ಬಳಸಬಹುದು ಎಂಬುದರ ಪರೀಕ್ಷೆ ಎಂಬುದು ಸ್ಪಷ್ಟ.

ವಾಚಕರ ವಾಣಿ

'ಗ್ರೇಟರ್' ಹುಚ್ಚು; ಪರಂಪರೆಗೆ ಕುತ್ತು

ಮೈಸೂರು 'ಪಾರಂಪರಿಕ ನಗರ' ಎಂದೇ ಹೆಸರುವಾಸಿ. ಆದರೆ, ಇತ್ತೀಚಿನ ವರ್ಷಗಳಲ್ಲಿ ಮೈಸೂರು ಕೂಡ ಬೆಂಗಳೂರು ರೀತಿಯಲ್ಲಿಯೇ ಅಳತೆ ಮೀರಿ ಬೆಳೆಯುತ್ತಿರುವುದು ಅದರ ಪಾರಂಪರಿಕತೆಗೆ ಧಕ್ಕೆ ತರುತ್ತಿದೆ. ಈಗ ರಾಜ್ಯ ಸರ್ಕಾರ 'ಗ್ರೇಟರ್ ಮೈಸೂರು' ಮಾಡಲು ಮುಂದಾಗಿದೆ ಎಂಬ ಸುದ್ದಿಯಿದೆ. ಇದರಿಂದ ಹೊಸ ಉದ್ಯಮಗಳು ತಲೆಎತ್ತಿ ಪರಿಸರ ಮಾಲಿನ್ಯ ಹೆಚ್ಚಲಿದೆ. ಹೊಸ ಕಟ್ಟಡಗಳು ತಲೆಎತ್ತಲಿವೆ. ಜನಸಂಖ್ಯೆ ಹೆಚ್ಚಾಗಿ ಪಾರಂಪರಿಕ ನಗರ ಎಂಬ ಖ್ಯಾತಿ ಕಳಚಿಬೀಳುವ ಅಪಾಯವಿದೆ. ಮೈಸೂರನ್ನು ಮತ್ತೊಂದು ಬೆಂಗಳೂರು ಮಾಡುವುದಷ್ಟೇ ಸರ್ಕಾರದ ಇರಾದೆ; ಪರಂಪರೆ ಉಳಿಸುವ ಇಶಾರೆ ಇರುವಂತಿಲ್ಲ.

ಸಿ. ಸಿದ್ದರಾಜು ಆಲಕೆರೆ, ಮಂಡ್ಯ

ತುಮಕೂರು ವಿ.ವಿ ಸೌಜನ್ಯ ಮರೆಯಿತೆ?

ತುಮಕೂರು ವಿಶ್ವವಿದ್ಯಾಲಯದ ಹೊಸ ಕ್ಯಾಂಪಸ್ ಉದ್ಘಾಟನೆಗೊಳ್ಳುತ್ತಿರುವುದು ಸಂತಸದ ವಿಚಾರ. ಆದರೆ, ವಿಶ್ವವಿದ್ಯಾಲಯ ರೂಪುಗೊಳ್ಳುವುದಕ್ಕಿಂತ ಮುಂಚೆ ಬೆಂಗಳೂರು ವಿಶ್ವವಿದ್ಯಾಲಯದ ಅಡಿಯಲ್ಲಿ ತುಮಕೂರು ಸ್ನಾತಕೋತ್ತರ ಕೇಂದ್ರ ಇತ್ತು. ಇದು ರೂಪುಗೊಳ್ಳುವುದಕ್ಕೆ ನಾಡೋಜ ಬರಗೂರು ರಾಮಚಂದ್ರಪ್ಪನವರ ಅಪಾರ ಶ್ರಮವಿದೆ. ಇದನ್ನು ವಿ.ವಿ ಆಡಳಿತ ಮಂಡಳಿ ಮರೆಯಬಾರದು. ಸ್ನಾತಕೋತ್ತರ ಕೇಂದ್ರದ ಮೊದಲ ನಿರ್ದೇಶಕರಿಂದ ಹಿಡಿದು ವಿ.ವಿಯ ಅಭಿವೃದ್ಧಿಗೆ ಶ್ರಮಿಸಿದ ಗಣ್ಯರನ್ನು ಉದ್ಘಾಟನಾ ಕಾರ್ಯಕ್ರಮಕ್ಕೆ ಸೌಜನ್ಯಕ್ಕಾದರೂ ಆಹ್ವಾನಿಸದಿರುವುದು ಸರಿಯಲ್ಲ.

ಸೋಮಶೇಖರ್, ಕದಿರೇಹಳ್ಳಿ

ಗ್ರಾಹಕರ ನಂಬಿಕೆಗೆ ಬರೆ ಎಳೆದ 'ನಂದಿನಿ'

ಕರ್ನಾಟಕ ಹಾಲು ಮಹಾಮಂಡಳವು 'ನಂದಿನಿ' ತುಪ್ಪ ಮತ್ತು ಬೆಣ್ಣೆಯ ದರ ಏರಿಕೆ ಮಾಡಿದೆ. ಈ ದರ ಏರಿಕೆಯ ಬಿಸಿತಾಳದೆ ಗ್ರಾಹಕರು ಬೇರೆ ಸಂಸ್ಥೆಗಳ ಹೈನು ಉತ್ಪನ್ನಗಳತ್ತ ಮೊರೆ ಹೋಗುವ ಸಾಧ್ಯತೆಯಿದೆ. ಆಗ ಲಾಭದ ಬದಲಿಗೆ ಕೆಎಂಎಫ್ ನಷ್ಟ ಅನುಭವಿಸಬೇಕಾಗುತ್ತದೆ. ಗ್ರಾಹಕರ ನಂಬಿಕೆ ಗಳಿಸಿದ ಮೇಲೆ ಅವರಿಗೆ ಬರೆ ಹಾಕುವುದು ಸರಿಯಾದ ನಡೆಯಲ್ಲ.

ಬಾಲಕೃಷ್ಣ ಎಂ.ಆರ್., ಬೆಂಗಳೂರು

ಅನ್ನದಾತರ ಹಿತಾಸಕ್ತಿ ಮರೆತ ಸರ್ಕಾರ

ಬೆಳಗಾವಿ ಜಿಲ್ಲೆಯಲ್ಲಿ ಕಬ್ಬಿನ ದರ ಹೆಚ್ಚಳಕ್ಕೆ ಆಗ್ರಹಿಸಿ ಬೆಳೆಗಾರರು ನಡೆಸುತ್ತಿರುವ ಹೋರಾಟ ಎರಡನೇ ವಾರಕ್ಕೆ ಕಾಲಿಟ್ಟಿದೆ. ಆದರೂ, ರಾಜ್ಯ ಸರ್ಕಾರ ಸೂಕ್ತ ನಿರ್ಧಾರ ಕೈಗೊಳ್ಳದಿರುವುದು ದಿವ್ಯ ನಿರ್ಲಕ್ಷ್ಯವೇ ಸರಿ. ಅನ್ನದಾತ ದೇಶದ ಬೆನ್ನೆಲುಬು ಎಂಬ ಮಾತು ಕಾಗದಕಷ್ಟೆ ಸೀಮಿತವಾಗಿದೆ. ರೈತ ಬೆಳೆಯುವ ಫಸಲಿಗೆ ಉತ್ತಮ ಬೆಲೆ ದೊರಕಿಸಿಕೊಡುವುದು ಸರ್ಕಾರದ ಕರ್ತವ್ಯ. ಅತಿವೃಷ್ಟಿ, ಅನಾವೃಷ್ಟಿಯಿಂದ ರೈತ ಸಮುದಾಯ ಇನ್ನಿಲ್ಲದಂತೆ ಹೈರಾಣಾಗಿದೆ. ಅನ್ನದಾತರ ಹೆಸರು ಹೇಳಿಕೊಂಡು ಅಧಿಕಾರಕ್ಕೆ ಬರುವ ಸರ್ಕಾರಗಳು, ರೈತಸ್ನೇಹಿಯಾಗಿ ನಡೆದುಕೊಳ್ಳಬೇಕಿದೆ.

ರಾಮಚಂದ್ರ ಮಂಚಲದೊರೆ, ಗುಬ್ಬಿ

ಬಿಸಿತುಪ್ಪ

ಜಿಎಸ್‌ಟಿ
ದರ ಕ್ರಾಂತಿಯಿಂದ
ನಮ್ಮೆಲ್ಲರಿಗೂ ಕೈಗೆಟುಕಿ
ರುಚಿಸಿತ್ತು ಬೆಣ್ಣೆ-ತುಪ್ಪ:
ಈಗ ಇಳಿಸಿದ್ದರ ದುಪ್ಪಟ್ಟು
ದರದ ಏರಿಕೆಯಿಂದ
'ನಂದಿನಿ' ನುಂಗಲಾರದ
ಉಗುಳಲಾಗದ 'ಬಿಸಿತುಪ್ಪ'!

ಆರ್. ನಾಗರಾಜ್, ಗೊರೂರು

ಬಸ್ ಪ್ರಯಾಣಿಕರಿಗೆ ಊಟದ ಹೊರೆ!

ಹುಬ್ಬಳ್ಳಿಯಿಂದ ಶಿವಮೊಗ್ಗಕ್ಕೆ ಕೆಎಸ್‌ಆರ್‌ಟಿಸಿ ಬಸ್‌ನಲ್ಲಿ ಇತ್ತೀಚೆಗೆ ಪ್ರಯಾಣಿಸಿದೆ. ರಾತ್ರಿ ಊಟಕ್ಕಾಗಿ ಖಾಸಗಿ ಹೋಟೆಲ್ ಬಳಿ ಬಸ್ ನಿಲ್ಲಿಸಲಾಯಿತು. ಅಲ್ಲಿ ಎರಡು ರೊಟ್ಟಿಗೆ ₹150; ಒಂದು ಕಪ್ ಕಾಫಿಗೆ ₹35 ತೆರಬೇಕಾಯಿತು. ಸರ್ಕಾರಿ ಬಸ್ಸಿನಲ್ಲಿ ಪ್ರಯಾಣಿಸುವವರು ಹೆಚ್ಚು ಮಂದಿ ಬಡ ಮತ್ತು ಕೆಳಮಧ್ಯಮ ವರ್ಗದವರು. ಇಂತಹ ಪ್ರಯಾಣಿಕರು ಒಂದು ಊಟಕ್ಕಾಗಿ ದುಬಾರಿ ಬೆಲೆ ತೆರಬೇಕಾಗಿದೆ. ಇದೊಂದು ರೀತಿಯಲ್ಲಿ 'ಮೂಗಿಗಿಂತ ಮೂಗುತಿ ಭಾರ' ಎನ್ನುವಂತಾಗಿದೆ. ಈ ಬಗ್ಗೆ ಕಂಡಕ್ಟರ್ ಅವರನ್ನು ಪ್ರಶ್ನಿಸಿದೆ. ಮೇಲಧಿಕಾರಿಗಳು ಸೂಚಿಸಿದ ಹೋಟೆಲ್ ಬಳಿ ಬಸ್ ನಿಲ್ಲಿಸಬೇಕು; ಇಲ್ಲದಿದ್ದರೆ ಅಧಿಕಾರಿಗಳಿಂದ ಕಿರುಕುಳ ಅನುಭವಿಸಬೇಕಾಗುತ್ತದೆ ಎಂದು ಉತ್ತರಿಸಿದರು. ಇಲ್ಲಿ ಹೋಟೆಲ್ ಮಾಲೀಕರು ಮತ್ತು ಸಾರಿಗೆ ನಿಗಮದ ಮೇಲಧಿಕಾರಿಗಳ ನಡುವೆ ಅಪವಿತ್ರ ಮೈತ್ರಿ ಇರುವಂತಿದೆ. ಸಾರಿಗೆ ಸಚಿವರು ಈ ಬಗ್ಗೆ ಕ್ರಮಕೈಗೊಳ್ಳಲಿ.

ಸರ್ಜಾಶಂಕರ ಹರಳಿಮಠ, ಶಿವಮೊಗ್ಗ

ಮೌಲಿಕ, ಸದಭಿರುಚಿ ಸಿನಿಮಾಗಳ ಕಣ್ಮರೆ

ಇತ್ತೀಚೆಗೆ 'ಪ್ಯಾನ್ ಇಂಡಿಯಾ' ಮಾದರಿಯಲ್ಲಿ ಕನ್ನಡದ ಸಿನಿಮಾಗಳು ಅದ್ದೂರಿ ತಾರಾಗಣದೊಂದಿಗೆ ತೆರೆಕಾಣುತ್ತಿವೆ. ಸಂಖ್ಯೆಯ ದೃಷ್ಟಿಯಿಂದ ಕನ್ನಡದ ಚಿತ್ರಗಳು ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಾ ಹೋಗುತ್ತಿದ್ದರೂ ಗುಣಮಟ್ಟದ ದೃಷ್ಟಿಯಿಂದ ಇದೇ ಮಾತನ್ನು ಹೇಳುವಂತಿಲ್ಲ. ಪ್ರಸ್ತುತ ಬಿಡುಗಡೆಯಾಗುತ್ತಿರುವ ಬಹುತೇಕ ಚಿತ್ರಗಳು ಹೊಡಿ–ಬಡಿ ಸಂಸ್ಕೃತಿಯ ಸುತ್ತಲೇ ತಿರುಗುತ್ತಿವೆ. ಹಿಂಸಾಚಾರ, ಅಶ್ಲೀಲತೆ ಮುಂತಾದ ನಕಾರಾತ್ಮಕ ಅಂಶಗಳೇ ಚಿತ್ರಗಳಲ್ಲಿ ಹಾಸುಹೊಕ್ಕಾಗಿರುತ್ತವೆ. ಬೆರಳೆಣಿಕೆಯಷ್ಟಾದರೂ ಗುಣಮಟ್ಟದ ಚಿತ್ರಗಳು ತೆರೆಕಾಣುತ್ತಿರುವುದು ಸ್ವಲ್ಪಮಟ್ಟಿಗೆ ನೆಮ್ಮದಿ ತರುವ ವಿಚಾರ.

ವರನಟ ರಾಜ್‌ಕುಮಾರ್ ನಟನೆಯ 'ಬಂಗಾರದ ಮನುಷ್ಯ' ಸಿನಿಮಾ ಮೂಡಿಸಿದ ಹೆಜ್ಜೆಗುರುತುಗಳು ಸಾರ್ವಕಾಲಿಕ ದಾಖಲೆಯಾಗಿದೆ. ಅಂತಹ ಸದಭಿರುಚಿಯ ಚಿತ್ರಗಳ ನಿರ್ಮಾಣಕ್ಕೆ ನಿರ್ದೇಶಕರು, ನಿರ್ಮಾಪಕರು ಮುಂದಾಗಲಿ. ಹಾಗಾದಾಗ ಮಾತ್ರ 'ಸಾಮಾಜಿಕ ಮೌಲ್ಯ ಹೆಚ್ಚಿಸುವಂತಹ ಸಿನಿಮಾಗಳು ನಿರ್ಮಾಣವಾಗಲಿ' ಎಂದು ಇತ್ತೀಚೆಗೆ ಮೈಸೂರಿನಲ್ಲಿ ನಡೆದ ಸಿನಿಮಾ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಹೇಳಿದ ಮಾತಿಗೆ ಅರ್ಥ ಬರುತ್ತದೆ.

ಕೆ.ವಿ. ವಾಸು, ಮೈಸೂರು

ಚುರುಮುರಿ



ಚಾಟ್ ಜಿಪಿಟಿ ಗೋ!

• ಬಿ.ಎನ್. ಮಲ್ಲೇಶ್

'ಮಂಜಮ್ಮ, ಈ ಚಾಟ್ ಜಿಪಿಟಿ ಗೋ ಅಂದ್ರೇನು?' ಹರಟೆಕಟ್ಟೆಯಲ್ಲಿ ದುಬ್ಬೀರ ಕೇಳಿದ.

'ಅದೇನಂತ ನಮ್ಗೇ ಗೊತ್ತಿಲ್ಲ, ಪಾಪ, ಚಾ ಮಾಡೋ ಮಂಜಮ್ಮಗೆ ಗೊತ್ತಾಕ್ಕತಾ? ನೀನೊಳ್ಳೆ...' ಗುಡ್ಡೆ ರೇಗಿದ.

'ಏನ್ ಮಬ್ಬದೀರಲೆ... ಚಾಟ್ ಜಿಪಿಟಿ ಅಂದ್ರೆ ಗೂಗಲ್‌ನ ಅಣ್ಣ ಇದ್ದಂಗೆ. ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ ಮೂಲಕ ಏನ್ ಕೇಳಿದ್ರು ಉತ್ತರ ಕೊಡುತ್ತೆ...' ತೆಪರೇಸಿ ತನ್ನ ಪಾಂಡಿತ್ಯ ಪ್ರದರ್ಶಿಸಿದ.

'ಏನ್ ಕೇಳಿದ್ರೂ ಉತ್ತರ ಕೊಡುತ್ತಾ? ಬಿಹಾರದಲ್ಲಿ ಯಾರು ಗೆಲ್ತಾರೆ, ನಮ್ಮಲ್ಲಿ ನವೆಂಬರ್ ಕ್ರಾಂತಿ ಆಗುತ್ತಾ, ಬ್ರೆಜಿಲ್ ಹುಡುಗಿ ಹರಿಯಾಣದಲ್ಲಿ ಹೆಂಗೆ ವೋಟ್ ಹಾಕಿದ್ಲು, ಮೈಸೂರು ಹಾಕದೆ ಮೈಸೂರ್ ಪಾಕು, ಮದ್ದೂರು ಹಾಕದೆ ಮದ್ದೂರು ವಡೆ ಹೆಂಗೆ ಮಾಡಬೋದು ಎಲ್ಲ ಹೇಳುತ್ತಾ?' ಮಂಜಮ್ಮ ಕೇಳಿದಳು.

'ಹೇಳುತ್ತೆ, ಅದೊಂಥರಾ ಡಾಟಾ ದೇವರಿದ್ದಂಗೆ...'

'ಅಲೆ ಇವ್ನ... ಅರ್ಜೆಂಟ್ ಸಾಲ ಬೇಕು ಅಂದ್ರೆ ಕೊಡುತ್ತಾ? ಈ ಮಂಜಮ್ಮನ ಬಾಕಿ ಬಿಸಾಕ್ತಿದ್ದೆ ಅತ್ಲಾಗೆ...' ಎಂದ ಗುಡ್ಡೆ.

'ಅಲ್ಲ ಈ ಜಿಪಿಟಿ ಪಿಪಿಟಿ ಯಾಕೀಗ?' ಕೊಟ್ರೇಶಿ ಕೊಕ್ಕೆ.

'ಯಾಕಂದ್ರೆ ಈ ಚಾಟ್ ಜಿಪಿಟಿ ಗೋ ಅನ್ನೋದನ್ನ ಆ ಕಂಪನಿಯೋರು ಒಂದು ವರ್ಷ ಫ್ರೀ ಕೊಡ್ತಾರಂತೆ...' ಎಂದ ದುಬ್ಬೀರ.

'ಆಹಾ... ಫ್ರೀ ಅನ್ನೋದು ಎಲ್ಲಿ ಕಂಡ್ರೂ ಬಿಡಲ್ಲ ನೀನು. ಬಿಹಾರಕ್ಕಾದ್ರು ಹೋಗು, ಅಲ್ಲಿ ವೋಟಿಗೆ ₹35 ಸಾವಿರ ಕೊಡ್ತಾರಂತೆ...' ಮಂಜಮ್ಮ ನಕ್ಕಳು.

'ಅದು ಗೆದ್ದ ಮೇಲೆ, ಈಗಲ್ಲ...' ಎಂದ ತೆಪರೇಸಿ.

'ಸ್ವಲ್ಪ ಅಡ್ವಾನ್ಸ್ ಕೇಳಿದ್ರಾತಪ...'

'ಒಳ್ಳೆ ಐಡಿಯಾ... ಅದಿರ್ಲಿ, ಈ ಚಾಟ್ ಜಿಪಿಟಿ ಸರಿ, ಗೋ ಅಂದ್ರೇನು?' ಗುಡ್ಡೆ ಕೇಳಿದ.

'ಗೋ ಅಂದ್ರೆ ಇಲ್ಲಿಮಟ ತಾರಾತಿಗಡಿ ಬಾರಾವಿದ್ಯೆ ಮಾತಾಡಿದ್ದು ಸಾಕು, ಎದ್ದು ನಡೀರಿ ಅತ್ಲಾಗೆ ಅಂತ...'

ಮಂಜಮ್ಮನ ಮಾತಿಗೆ ಎಲ್ಲರೂ ಗೊಳ್ಳಂತ ನಕ್ಕರು.

ಸಂಗತ

ಕಸಾಪ, ಕನ್ನಡಶಾಲೆ: ಕರುಣಾಳು ಬಾ ಬೆಳಕೆ...

ನೂರು ವರ್ಷಗಳ ಹಿಂದಿನ 'ಕರುಣಾಳು ಬಾ ಬೆಳಕೆ' ಕವಿತೆ, ಸಾಹಿತ್ಯ ಪರಿಷತ್ತು ಮತ್ತು ಕನ್ನಡ ಶಾಲೆಗಳ ಕಾಯಕಲ್ಪದ ಹಂಬಲಕ್ಕೆ ಪ್ರಾರ್ಥನೆಯಂತಿದೆ.

• ರಾಘವೇಂದ್ರ ಕೆ. ತೊಗರ್ಸಿ

ಹೊಸಗನ್ನಡ ಕಾವ್ಯ ಪರಂಪರೆಗೆ 'ಕವಿರಾಜ ಮಾರ್ಗ' ರೂಪಿಸಿದವರು ಬೆಳ್ಳೂರು ಮೈಲಾರಯ್ಯ ಶ್ರೀಕಂಠಯ್ಯ (ಬಿಎಂಶ್ರೀ). ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಅವರ ನೆನಪನ್ನು ಚಿರಸ್ಥಾಯಿಯಾಗಿಸಿದ ಕೃತಿಗಳಲ್ಲೊಂದಾದ 'ಇಂಗ್ಲಿಷ್ ಗೀತೆಗಳು' ಕೃತಿ ನೂರರ ಹೊಸ್ತಿಲಲ್ಲಿದೆ.

ಆ ಸಂಕಲನದ ಮೊದಲ ಕವನ 'ಕಾಣಿಕೆ', ಶ್ರೀ ಅವರ ಸ್ವತಂತ್ರ ರಚನೆ. 'ಮೊದಲು ತಾಯ ಹಾಲ ಕುಡಿದು/ ಲಲ್ಲೆಯಿಂದ ತೊದಲಿ ನುಡಿದು/ ಕೆಳೆಯರೊಡನೆ ಬೆಳೆದು ಬಂದ/ ಮಾತದಾವುದು/ ನಲ್ಲೆಯೊಲವ ತೆರೆದು ತಂದ/ ಮಾತದಾವುದು...' ತಾಯಿಯ ಎದೆಹಾಲಿನೊಂದಿಗೆ ಎದೆನುಡಿಯೂ ಮಗುವಿಗೆ ಮೈಗೂಡುವುದನ್ನು ಚಿತ್ರಿಸಿರುವ 'ಕಾಣಿಕೆ' ನುಡಿ–ನಂಟಿನ ಬೆರಗನ್ನು ಕಾಣಿಸುವ ಕವಿತೆ.

'ಇಂಗ್ಲಿಷ್ ಗೀತೆಗಳು' ಕನ್ನಡಕ್ಕೆ ಪರಿಚಯಗೊಂಡ ನಂತರ ಕನ್ನಡ ಕಾವ್ಯ ಮತ್ತು ನುಡಿ ಹೊಸ ಆಯಾಮಕ್ಕೆ ತೆರೆದುಕೊಂಡವು. ಹೊಸಗನ್ನಡದ ಅರುಣೋದಯಕ್ಕೆ ಪ್ರೇರಕ ಶಕ್ತಿಗಳಲ್ಲಿ ಈ ಸಂಕಲನವೂ ಒಂದಾಯಿತು. ಕನ್ನಡಿಗರಿಗೆ ದಕ್ಕಿದ ಅಂದಿನ ಶಿಕ್ಷಣ ಮತ್ತು ಸಾಮಾಜಿಕ ಸಂದರ್ಭ ವಿಪುಲ ಸಾಹಿತ್ಯಸೃಷ್ಟಿಗೂ ಕಾರಣವಾಯಿತು.

ಸುಮಾರು ಹತ್ತು ವರ್ಷಗಳ ಕಾಲ ಬಿಡಿ ಬಿಡಿಯಾಗಿ ಅನುವಾದಿಸಿದ ಕವಿತೆಗಳನ್ನು 1926ರಲ್ಲಿ 'ಇಂಗ್ಲಿಷ್ ಗೀತೆಗಳು' ಹೆಸರಿನಲ್ಲಿ ಬಿಎಂಶ್ರೀ ಪ್ರಕಟಿಸಿದರು. ಆ ಸಂಕಲನದಲ್ಲಿ ಒಟ್ಟು 60 ಅನುವಾದಿತ ಹಾಗೂ ಮೂರು ಸ್ವಂತ ರಚನೆಗಳು ಸೇರಿವೆ.

'ಇಂಗ್ಲಿಷ್ ಗೀತೆಗಳು' ಸಂಕಲನದ ಬಹು ಪ್ರಸಿದ್ಧ ಕವಿತೆ: 'ಕರುಣಾಳು ಬಾ ಬೆಳಕೆ ಮುಸುಕಿದೀ ಮಬ್ಬಿನಲಿ/ ಕೈಹಿಡಿದು ನಡೆಸೆನ್ನನು'. ಜಾನ್ ಹೆನ್ರಿ ನ್ಯೂಮನ್ ಅವರ 'ಲೀಡ್ ಕೈಂಡ್ಲಿ ಲೈಟ್' ಕವಿತೆ, ಬಿಎಂಶ್ರೀ ಅವರ ರೂಪಾಂತರದಲ್ಲಿ, ಇದು ಕನ್ನಡ ಮನಸ್ಸಿನ ಅಭಿವ್ಯಕ್ತಿಯಲ್ಲದೆ ಬೇರೆಯಲ್ಲ ಎನ್ನುವಷ್ಟು ಸೊಗಸಾಗಿ ಮೂಡಿಬಂದಿದೆ. ಪ್ರಾರ್ಥನೆ, ವೇದನೆ, ಪಕ್ವ ಮನಸ್ಸಿನ ಅಧ್ಯಾತ್ಮ ಚಿಂತನೆ ಕವಿತೆಯಲ್ಲಿದೆ. ತೆನೆ ತುಂಬಿ ಬೆಳೆದು ನಿಂತ ಭತ್ತದ ಪೈರು ತಾನು ನಿಂತ ನೆಲಕ್ಕೋ ಬೇರಿಗೋ ತಲೆಬಾಗಿ ನಮಿಸುವಂತೆ ಈ ರಚನೆ ಸಹೃದಯರ ಮನಸ್ಸಿಗೆ ನಾಟುತ್ತದೆ.

'ಕರುಣಾಳು ಬಾ ಬೆಳಕೆ ಮುಸುಕಿದೀ ಮಬ್ಬಿನಲಿ' ಎನ್ನುವ ಪ್ರಾರ್ಥನೆಯೊಂದಿಗೆ ಕನ್ನಡ ಸಾಹಿತ್ಯ ಪರಿಷತ್ತಿನ ಇಂದಿನ ಸ್ಥಿತಿಯನ್ನು ನೆನಪಿಸಿಕೊಳ್ಳಬಹುದು.

ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆ ಎನ್ನುವುದು 'ಕಸಾಪ' ಹೆಗ್ಗಳಿಕೆ. 'ಇಂಗ್ಲಿಷ್ ಗೀತೆಗಳು' ಪ್ರಕಟಗೊಳ್ಳುವ ವೇಳೆಗಾಗಲೇ ಕನ್ನಡ ನಾಡನ್ನು ಕಟ್ಟುವ ಕೆಲಸದಲ್ಲಿ 'ಕನ್ನಡ ಸಾಹಿತ್ಯ ಪರಿಷತ್ತು' ತೊಡಗಿಕೊಂಡಿತ್ತು. ಅದರ ಫಲಶ್ರುತಿ ಎನ್ನುವಂತೆ ಕನ್ನಡ ನಾಡಿನ ಏಕೀಕರಣವನ್ನು ಗಮನಿಸಬಹುದು; ಗೋಕಾಕ್ ಚಳವಳಿಗೆ ಸಂದ ಜನಸಮೂಹದ ಅಭೂತಪೂರ್ವ ಪ್ರತಿಕ್ರಿಯೆಯಲ್ಲಿ ಪರಿಷತ್ತಿನ ಪಾತ್ರವೂ ಇತ್ತು.



ಕನ್ನಡ ಹಾಗೂ ಕನ್ನಡಿಗರ ಅಸ್ಮಿತೆಗಾಗಿ ರೂಪುಗೊಂಡ ಸಾಹಿತ್ಯ ಪರಿಷತ್ತಿನ ಇಂದಿನ ಸ್ಥಿತಿ ಕರುಣಾಜನಕ. ಪ್ರಜಾಸತ್ತಾತ್ಮಕ ನೆಲೆಯಲ್ಲಿ ಚುನಾಯಿತಗೊಂಡ ವ್ಯವಸ್ಥೆಯನ್ನು ಚುನಾಯಿತ ಸರ್ಕಾರವೇ ಅಮಾನತ್ತಿನಲ್ಲಿರಿಸಿದೆ. ಇಂತಹ ವಿಷಮ ಬೆಳವಣಿಗೆಯನ್ನು ಕನ್ನಡಿಗರು ಸ್ವಾಗತಿಸುವ ಸ್ಥಿತಿಯನ್ನು ಪರಿಷತ್ತಿನ ಚುಕ್ಕಾಣಿ ಹಿಡಿದವರೇ ತಂದಿದ್ದಾರೆ.

ತನಿಖೆಯಿಂದ ಸತ್ಯ ಹೊರಬಂದು, ತಪ್ಪು ಮಾಡಿದವರು ಉಪ್ಪು ತಿನ್ನುವುದು ಸಹಜ. ಆದರೆ, ಈ ಪ್ರಕ್ರಿಯೆ ಪರಿಷತ್ತಿನ ಆಜೀವ ಸದಸ್ಯರು ಹಾಗೂ ಹಿತಚಿಂತಕರ ಕಳವಳಕ್ಕೆ ಕಾರಣ ಆಗಬೇಕಲ್ಲವೆ? ಆ ಕಳವಳ ಚಿಂತನ ಮಂಥನವಾಗಿ ರೂಪುಗೊಳ್ಳಬೇಕಲ್ಲವೆ? ಆದರೆ, ಅಂಥ ಯಾವ ಪ್ರಯತ್ನಗಳೂ ನಡೆದಂತಿಲ್ಲ.

ಕಸಾಪ ಮತ್ತು ಕನ್ನಡ ಚಳವಳಿಗಳ ಆಗ್ರಹ ಅನೇಕ ಹೊಸತುಗಳ ಹುಟ್ಟಿಗೆ ನಾಂದಿ ಆಯಿತು. ಅದರ ಭಾಗ ಎನ್ನುವಂತೆ ಕನ್ನಡ ಸಂಸ್ಕೃತಿ ಸಚಿವಾಲಯ, ಕನ್ನಡ ಅಭಿವೃದ್ಧಿಗೊಂದು ಇಲಾಖೆ ರೂಪುಗೊಂಡವು. ಗಡಿರಕ್ಷಣೆ, ಸಂಸ್ಕೃತಿ ಪೋಷಣೆ, ಪುಸ್ತಕ ಸಂಸ್ಕೃತಿ ಲಾಲನೆ, ಸಾಹಿತ್ಯ ಸಂವರ್ಧನೆ– ಹೀಗೆ ಹಲವು ಹೆಸರಿನಲ್ಲಿ ಅಕಾಡೆಮಿ, ಪ್ರಾಧಿಕಾರಗಳು ಕಾರ್ಯ ನಿರ್ವಹಿಸುತ್ತಿವೆ. ಆದರೆ, ಇವೆಲ್ಲಕ್ಕೂ ಬೇರಿನ ರೂಪದಲ್ಲಿ ಕಾಣಬಹುದಾದ ಕನ್ನಡ ಶಾಲೆಗಳ ಸ್ಥಿತಿಗತಿ ಹೇಗಿದೆ?

ಒಂದೆಡೆ, ಕನ್ನಡ ಶಾಲೆಗಳು ವೇಗವಾಗಿ ಮುಚ್ಚುತ್ತಿವೆ. ಇನ್ನೊಂದೆಡೆ, ಅಕಾಡೆಮಿ– ಪ್ರಾಧಿಕಾರಗಳು ಕನ್ನಡ ಕಟ್ಟುವ ಕೆಲಸ ಮಾಡುತ್ತಿವೆ. ಇದು ವ್ಯಂಗ್ಯವೋ, ವಿರೋಧಾಭಾಸವೋ? ತಿಳಿದವರು ಹೇಳಬೇಕು.

ಎರಡು ಮೂರು ದಶಕಗಳಿಂದ ಸಾಹಿತ್ಯ ಪರಿಷತ್ತಿನ ಸಾಧನೆ– ಸಮ್ಮೇಳನಗಳ ಆಯೋಜನೆಗೆ ಹಾಗೂ ದತ್ತಿ ಪ್ರಶಸ್ತಿಗಳ ವಿತರಣೆಗೆ ಸೀಮಿತವಾಗಿದೆ. ಸಮ್ಮೇಳನದ ಹೆಸರಿನಲ್ಲಿ ಇಪ್ಪತ್ತು ಮೂವತ್ತು ಕೋಟಿ ರೂಪಾಯಿ ಸಾರ್ವಜನಿಕರ ಹಣ ವ್ಯಯವಾಗುತ್ತಿದೆ. ಇದು ಸರಿಯೆ?

ಕನ್ನಡ ಶಾಲೆಗಳು ಸಬಲಗೊಳ್ಳುವವರೆಗೂ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ಒಲ್ಲೆ ಎಂದಿದ್ದರು ದೇವನೂರ ಮಹಾದೇವ. ಈ ನಿಲುವು ಸರ್ಕಾರಿ ಪೋಷಿತ ಸಂಸ್ಥೆಗಳ ಭಾಗವಾಗಿರುವವರಿಗೂ ಮಾದರಿ ಆಗಬೇಕಲ್ಲವೆ?

ನೂರು ವರ್ಷಗಳ ಹಿಂದಿನ 'ಕರುಣಾಳು ಬಾ ಬೆಳಕೆ' ರಚನೆ, ಕಸಾಪ ಮತ್ತು ಕನ್ನಡ ಶಾಲೆಗಳ ಬಗ್ಗೆ ಕಾಳಜಿಯುಳ್ಳವರ ಅಂತರಂಗದ ಈ ಹೊತ್ತಿನ ಆರ್ದ್ರ ಮೊರೆಯಂತೆ ಕಾಣಿಸುತ್ತಿದೆ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಸಕ್ಕರೆ ಕಾರ್ಖಾನೆ ರಾಜಕೀಯ ನಂಟು

ಬೆಳಗಾವಿ

- ಚಿಕ್ಕೋಡಿಯ ಚಿದಾನಂದ ಪ್ರಭು ಕೋರೆ ಸಹಕಾರಿ ಸಕ್ಕರೆ ಕಾರ್ಖಾನೆಯ ಅಧ್ಯಕ್ಷರಾಗಿ ಮಲ್ಲಿಕಾರ್ಜುನ ಕೋರೆ ಅವರು ಮುಂದುವರಿದಿದ್ದಾರೆ. ಇವರು ಬಿಜೆಪಿ ಮುಖಂಡ ಪ್ರಭಾಕರ ಕೋರೆ ಅವರ ಸಹೋದರ ಸಂಬಂಧಿ
- ಬೆಳಗಾವಿ ತಾಲ್ಲೂಕಿನ ಹುದಲಿ ಗ್ರಾಮದ ಬೆಳಗಾಂ ಶುಗರ್ಸ್, ಮೂಡಲಗಿ ತಾಲ್ಲೂಕು ಹುಣಶ್ಯಾಳದ ಸತೀಶ್ ಶುಗರ್ಸ್ ಕಾರ್ಖಾನೆಗಳು ಸಚಿವ ಸತೀಶ ಜಾರಕಿಹೊಳಿ ಅವರ ಒಡೆತನದಲ್ಲಿವೆ
- ಗೋಕಾಕ ನಗರ ಬಳಿಯ ಗೋಕಾಕ್ ಸಕ್ಕರೆ ಮೊದಲು ಸಹಕಾರ ಸಕ್ಕರೆ ಕಾರ್ಖಾನೆ ಆಗಿತ್ತು. ಶಾಸಕ ರಮೇಶ ಜಾರಕಿಹೊಳಿ ಇದರ ನಿಯಂತ್ರಣ ಹೊಂದಿದ್ದರು. ಇದನ್ನು ಕೂಡ ಉದ್ಯಮಿಗಳಿಗೆ ಗುತ್ತಿಗೆಗೆ ನೀಡಲಾಗಿದೆ
- ಗೋಕಾಕ ತಾಲ್ಲೂಕು ಹಿರೇನಂದಿಯ ಸೌಭಾಗ್ಯಲಕ್ಷ್ಮೀ ಸಕ್ಕರೆ ಕಾರ್ಖಾನೆಯನ್ನು ಶಾಸಕ ರಮೇಶ ಜಾರಕಿಹೊಳಿ ಅವರ ಮಗ ಅಮರನಾಥ ಜಾರಕಿಹೊಳಿ ನಡೆಸುತ್ತಿದ್ದಾರೆ
- ಸವದತ್ತಿಯ ಹರ್ಷ ಶುಗರ್ಸ್ ಇದನ್ನು ವಿಧಾನ ಪರಿಷತ್ ಸದಸ್ಯ ಚನ್ನರಾಜ ಹಟ್ಟಿಹೊಳಿ ಸ್ಥಾಪಿಸಿದ್ದಾರೆ. ಇವರು ಸಚಿವೆ ಲಕ್ಷ್ಮೀ ಹೆಬ್ಬಾಳಕರ ಅವರ ಸಹೋದರ
- ಬಾವನ ಸವದತ್ತಿಯ ಶಿವಶಕ್ತಿ ಶುಗರ್ಸ್, ಸವದತ್ತಿ ತಾಲ್ಲೂಕು ಮರಕುಂಬಿಯ ಇನಾಮದಾರ್ ಸಕ್ಕರೆ ಕಾರ್ಖಾನೆಗಳಿಗೆ ಪ್ರಭಾಕರ ಕೋರೆ ಮಾಲೀಕರು
- ಕಾಗವಾಡದ ಶಿರಗುಪ್ಪಿ ಶುಗರ್ಸ್ ಮಾಜಿ ಶಾಸಕ ಕಲ್ಲಪ್ಪನ್ನ ಮಗೆಣ್ಣವರ ಅವರ ಮಾಲೀಕತ್ವದಲ್ಲಿದೆ
- ರಾಯಬಾಗ ತಾಲ್ಲೂಕು ಅಳಗವಾಡಿ ಬೀರೇಶ್ವರ ಸಕ್ಕರೆ ಕಾರ್ಖಾನೆಯು ದಾವಣಗೆರೆಯವರಾದ ಶಾಸಕ, ಮಾಜಿ ಸಚಿವ ಶಾಮನೂರು ಶಿವಶಂಕರಪ್ಪ ಅವರ ಮಾಲೀಕತ್ವದ್ದು
- ಕಾಗವಾಡ ತಾಲ್ಲೂಕಿನ ಕೆಂಪವಾಡದ ಅಥಣಿ ಫಾರ್ಮರ್ಸ್ ಶುಗರ್ಸ್‌ನ ಮಾಲೀಕರು ಮಾಜಿ ಸಚಿವ ಶ್ರೀಮಂತ ಪಾಟೀಲ
- ಅಥಣಿ ತಾಲ್ಲೂಕು ಬಾಳಿಗೇರಿಯ ಬಸವೇಶ್ವರ ಸಕ್ಕರೆ ಕಾರ್ಖಾನೆ ಇದ್ದು ಮಹಾರಾಷ್ಟ್ರ ಮೂಲದ ರಾಜಕಾರಣಿಯೊಬ್ಬರು ನಡೆಸುತ್ತಿದ್ದಾರೆ
- ಹುಕ್ಕೇರಿ ತಾಲ್ಲೂಕು ಬೆಲ್ಲದ ಬಾಗೇವಾಡಿಯ ವಿಶ್ವರಾಜ್ ಶುಗರ್ ಕಾರ್ಖಾನೆಗೆ ಶಾಸಕ ನಿಖಿಲ್ ಕತ್ತಿ ಮಾಲೀಕರಾಗಿದ್ದಾರೆ
- ಬೈಲಹೊಂಗಲದ ಸೋಮೇಶ್ವರ ಸಹಕಾರ ಸಕ್ಕರೆ ಕಾರ್ಖಾನೆಯ ಅಧ್ಯಕ್ಷರಾಗಿ ಬಸವರಾಜ ಬಾಳೇಕುಂದ್ರಿ ಇದ್ದಾರೆ. ಇವರು ಮಾಜಿ ಶಾಸಕ ರಮೇಶ ಬಾಳೇಕುಂದ್ರಿ ಅವರ ಪುತ್ರ
- ನಿಪ್ಪಾಣಿಯ ಶ್ರೀ ಹಾಲಸಿದ್ಧನಾಥ ಸಹಕಾರಿ ಸಕ್ಕರೆ ಕಾರ್ಖಾನೆಯ ಅಧ್ಯಕ್ಷರಾಗಿ ರಾಜಕಾರಣಿ ಎಂ.ಪಿ.ಪಾಟೀಲ ಮುಂದುವರಿದಿದ್ದಾರೆ. ಮಾಜಿ ಸಂಸದ, ಬಿಜೆಪಿಯ ಅಣ್ಣಾಸಾಹೇಬ್ ಜೊಲ್ಲೆ ಅವರು ನಿರ್ದೇಶಕರಾಗಿದ್ದಾರೆ
- ಅಥಣಿ ತಾಲ್ಲೂಕು ಹಳ್ಯಾಳದ ಕೃಷ್ಣಾ ಸಹಕಾರ ಸಕ್ಕರೆ ಕಾರ್ಖಾನೆಯ ಅಧ್ಯಕ್ಷ ಪರಪ್ಪ ಸವದಿ. ಇವರು ಶಾಸಕ ಲಕ್ಷ್ಮಣ ಸವದಿ ಅವರ ಸಹೋದರ
- ದಿ.ಘಟಪ್ರಭಾ ಸಹಕಾರ ಸಕ್ಕರೆ ಕಾರ್ಖಾನೆಗೆ ಪ್ರಭಾ ಶುಗರ್ಸ್ ಎನ್ನುತ್ತಾರೆ. ಇದು ಶಾಸಕ, ಬಿಜೆಪಿಯ ಬಾಲಚಂದ್ರ ಜಾರಕಿಹೊಳಿ ಅವರ ಸುಪರ್ದಿಯಲ್ಲಿದೆ
- ಎಂ.ಕೆ.ಹುಬ್ಬಳ್ಳಿಯ ಮಲ್ಲಪ್ರಭಾ ಸಹಕಾರ ಸಕ್ಕರೆ ಕಾರ್ಖಾನೆಯ ಅಧ್ಯಕ್ಷರಾಗಿ ವಿಧಾನ ಪರಿಷತ್ ಸದಸ್ಯ ಚನ್ನರಾಜ ಹಟ್ಟಿಹೊಳಿ ಆಯ್ಕೆಯಾಗಿದ್ದಾರೆ. ಇವರು ಸಚಿವೆ ಲಕ್ಷ್ಮೀ ಹೆಬ್ಬಾಳಕರ ಅವರ ಸಹೋದರ
- ಸಂಕೇಶ್ವರದ ಹಿರಣ್ಯಕೇಶಿ ಸಹಕಾರ ಸಕ್ಕರೆ ಕಾರ್ಖಾನೆಯ ಅಧ್ಯಕ್ಷರಾಗಿ ರಾಜು ಕಲ್ಲಟ್ಟಿ ಈಚೆಗೆ ಆಯ್ಕೆಯಾಗಿದ್ದಾರೆ. ಇವರು ಮಾಜಿ ಸಂಸದ ಅಣ್ಣಾಸಾಹೇಬ ಜೊಲ್ಲೆ ಆಪ್ತ. ಮಾಜಿ ಸಂಸದ ರಮೇಶ ಕತ್ತಿ ದಶಕಗಳ ಕಾಲ ಅಧ್ಯಕ್ಷರಾಗಿದ್ದರು
- ಹುಕ್ಕೇರಿಯ ಸಂಗಮ ಸಹಕಾರ ಸಕ್ಕರೆ ಕಾರ್ಖಾನೆಗೆ ರಾಜೇಂದ್ರ ಪಾಟೀಲ ಅಧ್ಯಕ್ಷರಾಗಿದ್ದಾರೆ. ಇವರು ಮಾಜಿ ಸಚಿವ ಮಲ್ಲಾರಿಗೌಡ ಪಾಟೀಲ ಅಳಿಯ
- ರಾಯಬಾಗ ತಲ್ಲೂಕಿನ ಬಾವನ ಸೌದತ್ತಿಯ ಕಾರ್ಖಾನೆಯು ರಾಜ್ಯಸಭಾ ಮಾಜಿ ಸದಸ್ಯ ಪ್ರಭಾಕರ ಕೋರೆ ಅವರ ಒಡೆತನದಲ್ಲಿದೆ
- ರಾಮದುರ್ಗ ತಾಲ್ಲೂಕಿನ ಉದುಪುಡಿ ಬಳಿ ಇರುವ ಶಿವಸಾಗರ ಶುಗರ್ಸ್ ಕಾರ್ಖಾನೆಯನ್ನು ಜಮಖಂಡಿ ಶಾಸಕ ಜಗದೀಶ ಗುಡಗುಂಟಿ ಇವರು ಖರೀದಿ ಮಾಡಿದ್ದಾರೆ. ಮೊದಲು ಇದು ಶಾಸಕ ರಮೇಶ ಕತ್ತಿ ಅವರ ಪುತ್ರ ಲವ ಅವರ ಮಾಲೀಕತ್ವದಲ್ಲಿ ಇತ್ತು

ಪ್ರಜಾವಾಣಿ ವಾರ್ತೆ

ಸಕ್ಕರೆ ಕಾರ್ಖಾನೆಗಳು ಪ್ರತಿ ಟನ್ ಕಬ್ಬಿಗೆ ಕೇಂದ್ರ ಸರ್ಕಾರ ನಿಗದಿ ಪಡಿಸಿದಷ್ಟು ಎಫ್‌ಆರ್‌ಪಿ (₹3,550) ನೀಡಬೇಕು ಎಂದು ಆಗ್ರಹಿಸಿ ರಾಜ್ಯದ ಕಬ್ಬು ಬೆಳೆಗಾರರು ಪ್ರತಿಭಟನೆ ತೀವ್ರಗೊಳಿಸಿರುವುದರ ನಡುವೆಯೇ ರಾಜ್ಯದಲ್ಲಿರುವ ಕಾರ್ಖಾನೆಗಳ ಮಾಲೀಕತ್ವದ ಬಗ್ಗೆಯೂ ಚರ್ಚೆ ನಡೆಯುತ್ತಿದೆ.

ರಾಜ್ಯದಲ್ಲಿ 81 ಸಕ್ಕರೆ ಕಾರ್ಖಾನೆಗಳಿದ್ದು, ಈ ಪೈಕಿ ಬೆಳಗಾವಿ, ವಿಜಯಪುರ ಮತ್ತು ಕಲಬುರಗಿ ಜಿಲ್ಲೆಯಲ್ಲಿಯೇ 53 ಇವೆ. ಹಲವು ಕಾರ್ಖಾನೆಗಳು ಸಚಿವರು, ಶಾಸಕರು, ರಾಜಕಾರಣಿಗಳು ಹಾಗೂ ಅವರ ಸಂಬಂಧಿಕರ ನೇರ ಮಾಲೀಕತ್ವದಲ್ಲಿವೆ. ಸಹಕಾರಿ ವ್ಯವಸ್ಥೆಯಡಿ ಹಲವು ಕಾರ್ಯನಿರ್ವಹಿಸುತ್ತಿದ್ದು, ಪರೋಕ್ಷವಾಗಿ ಪ್ರಭಾವಿ ರಾಜಕಾರಣಿಗಳ ಹಿಡಿತದಲ್ಲಿವೆ. ನಷ್ಟದ ಸುಳಿಗೆ ಸಿಲುಕಿರುವ ಕೆಲವು ಸಹಕಾರಿ ಕಾರ್ಖಾನೆಗಳನ್ನು ರಾಜಕಾರಣಿಗಳೇ ಗುತ್ತಿಗೆಗೆ ಪಡೆದು ನಿರ್ವಹಿಸುತ್ತಿದ್ದಾರೆ. ಉದ್ಯಮಿಗಳೇ ನೇರವಾಗಿ ನಡೆಸುತ್ತಿರುವ ಕಾರ್ಖಾನೆಗಳ ಸಂಖ್ಯೆ ಕೆಲವೇ ಕೆಲವು. ರಾಜ್ಯದ ಪ್ರಮುಖ ಮೂರು ಪಕ್ಷಗಳ (ಕಾಂಗ್ರೆಸ್, ಬಿಜೆಪಿ, ಜೆಡಿಎಸ್) ಮುಖಂಡರೂ ಸಕ್ಕರೆ ಕಾರ್ಖಾನೆಗಳನ್ನು ಹೊಂದಿದ್ದಾರೆ.

‘ಸಚಿವರು, ಶಾಸಕರು, ರಾಜಕಾರಣಿಗಳ ಹಿಡಿತದಲ್ಲಿ ಕಾರ್ಖಾನೆಗಳು ಇರುವುದರಿಂದ ದರ ನಿಗದಿ ವಿಚಾರದಲ್ಲಿ ಸರ್ಕಾರದ ಮೇಲೆ ಅವರು ಪ್ರಭಾವ ಬೀರುತ್ತಿದ್ದಾರೆ. ಸರ್ಕಾರ ಕೂಡ ಅವರಿಗೆ ಬೇಕಾದಂತೆ ನಡೆದುಕೊಳ್ಳುತ್ತಿದೆ. ಹೀಗಾಗಿಯೇ ಕಾರ್ಖಾನೆಗಳು ನಿಯಮಗಳನ್ನು ಉಲ್ಲಂಘನೆ ಮಾಡಿ, ರೈತರನ್ನು ಶೋಷಣೆ ಮಾಡುತ್ತಾ, ಹೆಚ್ಚು ಲಾಭ ಮಾಡುತ್ತಿವೆ’ ಎನ್ನುವುದು ಕಬ್ಬು ಬೆಳೆಗಾರರ ಆರೋಪ.

ರಾಜ್ಯದಲ್ಲಿ ರಾಜಕಾರಣಿಗಳು ಮತ್ತು ಅವರ ಸಂಬಂಧಿಕರ ನಂಟಿರುವ ಕಾರ್ಖಾನೆಗಳ ವಿವರ ಇಲ್ಲಿದೆ

ಬಾಗಲಕೋಟೆ

- ಜಮಖಂಡಿಯ ಪ್ರಭುಲಿಂಗೇಶ್ವರ ಕಾರ್ಖಾನೆ ಶಾಸಕ ಜಗದೀಶ ಗುಡಗುಂಟಿ ಮಾಲೀಕತ್ವದಲ್ಲಿದೆ
- ಮುಧೋಳ ತಾಲ್ಲೂಕಿನ ಇಂಡಿಯನ್ ಕೇನ್ ಪವರ್ ಲಿಮಿಟೆಡ್‌ಗೆ (ಐಸಿಪಿಎಲ್) ಗಣಿ ಸಚಿವ ಸಚಿವ ಎಸ್.ಎಸ್. ಮಲ್ಲಿಕಾರ್ಜುನ ಮಾಲೀಕ
- ಮುಧೋಳ ತಾಲ್ಲೂಕಿನ ರನ್ನಾನಗರದ ಸಹಕಾರಿ ಕಾರ್ಖಾನೆಯು ಸಾಲದಿಂದಾಗಿ ಬಂದ್ ಆಗಿತ್ತು. ಈ ಕಾರ್ಖಾನೆಯನ್ನು ಈಗ ಕಾಂಗ್ರೆಸ್ ಮುಖಂಡ, ಮಾಜಿ ಸಚಿವ ಎಸ್.ಆರ್.ಪಾಟೀಲ ವಹಿಸಿಕೊಂಡಿದ್ದಾರೆ. ಬೀಳಗಿ ಶುಗರ್ ಮಿಲ್ ಲಿಮಿಟೆಡ್ ಹೆಸರಿನಲ್ಲಿ ಕಾರ್ಯಾಚರಿಸುತ್ತಿದೆ
- ಬಿಜೆಪಿ ಮುಖಂಡ, ಮಾಜಿ ಸಚಿವ ಮುರುಗೇಶ ನಿರಾಣಿ ಕುಟುಂಬದ ಮಾಲೀಕತ್ವದ ಐದು ಕಾರ್ಖಾನೆಗಳು (ನಿರಾಣಿ ಶುಗರ್ಸ್, ಬಾದಾಮಿ ಶುಗರ್ಸ್, ಕೇದರನಾಥ ಶುಗರ್ಸ್, ಸಾಯಿಪ್ರಿಯಾ ಶುಗರ್ಸ್, ಎಂಆರ್‌ಎನ್ ಕೇನ್ ಪವರ್) ಜಿಲ್ಲೆಯಲ್ಲಿವೆ
- ಹಿರೇಪಡಸಲಗಿಯಲ್ಲಿರುವ ಜಮಖಂಡಿ ಶುಗರ್ಸ್ ಕಾರ್ಖಾನೆಯ ಮಾಲೀಕತ್ವವನ್ನು ಮಾಜಿ ಶಾಸಕ, ಕಾಂಗ್ರೆಸ್ ಮುಖಂಡ ಆನಂದ ನ್ಯಾಮಗೌಡ ಹೊಂದಿದ್ದಾರೆ
- ಬೀಳಗಿಯಲ್ಲಿರುವ ಬೀಳಗಿ ಶುಗರ್ಸ್‌ಗೆ ಕಾಂಗ್ರೆಸ್ ಮುಖಂಡ, ಮಾಜಿ ಸಚಿವ ಎಸ್.ಆರ್.ಪಾಟೀಲ ಮಾಲೀಕ

ವಿಜಯಪುರ

- ಸಿಂದಗಿ ತಾಲ್ಲೂಕು ಮಲಘಾಣದಲ್ಲಿರುವ ಶ್ರೀ ಸಾಯಿ ಬಸವ ಶುಗರ್ಸ್ ಕಾರ್ಖಾನೆಯು ಬೀಳಗಿ ಶಾಸಕ ಜೆ.ಟಿ.ಪಾಟೀಲ ಅವರ ಸಂಬಂಧಿ ಈರನಗೌಡ ಪಾಟೀಲ ಮತ್ತು ದೇವರಹಿಪ್ಪರಗಿ ಕ್ಷೇತ್ರದ ಮಾಜಿ ಶಾಸಕ ಸೋಮನಗೌಡ ಪಾಟೀಲರ ಸಹೋದರ ಸುರೇಶಗೌಡ ಪಾಟೀಲ ಸಾಸನೂರ ಜಂಟಿ ಒಡೆತನದಲ್ಲಿದೆ
- ಆಲಮೇಲದ ಕೆಪಿಆರ್ ಶುಗರ್ಸ್ ಮಿಲ್ಸ್ ಪ್ರೈ.ಲಿ, ಕಾಂಗ್ರೆಸ್ ಮುಖಂಡ, ಕೇಂದ್ರದ ಮಾಜಿ ಸಚಿವ ಪಿ.ಚಿದಂಬರಂ ಸಂಬಂಧಿ ತಮಿಳುನಾಡು ಮೂಲದ ಕೆ.ರಾಮಸ್ವಾಮಿ ಅವರಿಗೆ ಸೇರಿದ್ದಾಗಿದೆ
- ಇಂಡಿ ತಾಲ್ಲೂಕಿನಲ್ಲಿರುವ ಜಮಖಂಡಿ ಶುಗರ್ಸ್ ಲಿ.ಯುನಿಟ್ 2 ಕಾರ್ಖಾನೆಯು ಕಾಂಗ್ರೆಸ್ ಮುಖಂಡ ಜಮಖಂಡಿ ಮಾಜಿ ಶಾಸಕ ಆನಂದ ನ್ಯಾಮಗೌಡ ಮಾಲೀಕತ್ವದಲ್ಲಿದೆ
- ಚಡಚಣ ತಾಲ್ಲೂಕು ಮರಗೂರ ಭೀಮಾಶಂಕರ ಸಹಕಾರಿ ಸಕ್ಕರೆ ಕಾರ್ಖಾನೆಗೆ ಶಾಸಕ ಯಶವಂತರಾಯಗೌಡ ಪಾಟೀಲ ಅಧ್ಯಕ್ಷ
- ಬಬಲೇಶ್ವರ ತಾಲ್ಲೂಕು ಕಾರಜೋಳದಲ್ಲಿರುವ ಬಸವೇಶ್ವರ ಶುಗರ್ಸ್ ಲಿ.ಗೆ ತಮಿಳುನಾಡು ಮೂಲದ ರಾಜಕಾರಣಿ ಡಿ. ಶ್ರೀನಿವಾಸನ್ ಮಾಲೀಕರಾಗಿದ್ದಾರೆ
- ಇಂಡಿ ತಾಲ್ಲೂಕು ಹಿರೇಬೇವನೂರದಲ್ಲಿರುವ ಐಸಿಪಿಎಲ್‌ನ ಒಡೆತನ ಸಚಿವ ಎಸ್.ಎಸ್. ಮಲ್ಲಿಕಾರ್ಜುನ ಅವರದ್ದು

ಬೀದರ್

- ನಾರಂಜಾ ಸಹಕಾರ ಸಕ್ಕರೆ ಕಾರ್ಖಾನೆ (ಎನ್‌ಎಸ್‌ಎಸ್‌ಕೆ), ಮಹಾತ್ಮಗಾಂಧಿ ಸಹಕಾರ ಸಕ್ಕರೆ ಕಾರ್ಖಾನೆ (ಎಮ್‌ಜಿಎಸ್‌ಎಸ್‌ಕೆ) ಸಹಕಾರ ಕ್ಷೇತ್ರದ್ದು. ನಾರಂಜಾ ಕಾರ್ಖಾನೆಗೆ ಮಾಜಿ ಸಚಿವ ದಿವಂಗತ ಗುರುಪಾದಪ್ಪ ನಾಗಮಾರಪಳ್ಳಿ ಅವರ ಕಿರಿಯ ಮಗ, ಜೆಡಿಎಸ್ ಮುಖಂಡ ಸೂರ್ಯಕಾಂತ ನಾಗಮಾರಪಳ್ಳಿ ಅಧ್ಯಕ್ಷ. ಎಂಜಿಎಸ್‌ಎಸ್‌ಕೆಗೆ ಅರಣ್ಯ ಸಚಿವ ಈಶ್ವರ ಬಿ. ಖಂಡ್ರೆಯವರ ಸಹೋದರ ಅಮರ್ ಕುಮಾರ ಖಂಡ್ರೆ ಅಧ್ಯಕ್ಷ. ಈ ಎರಡೂ ಕಾರ್ಖಾನೆಗಳು ಸಾಲದ ಸುಳಿಗೆ ಸಿಲುಕಿವೆ
- ಭಾಲ್ಕೇಶ್ವರ ಸಕ್ಕರೆ ಕಾರ್ಖಾನೆಯನ್ನು ಬಿಜೆಪಿಯ ಮಾಜಿ ಶಾಸಕ ಪ್ರಕಾಶ್ ಖಂಡ್ರೆ ಆರಂಭಿಸಿದ್ದರು. ಬಳಿಕ ಓಂಕಾರ ಸಮೂಹಕ್ಕೆ ಮಾರಾಟ ಮಾಡಿದ್ದಾರೆ
- ಬೀದರ್ ಕಿಸಾನ್ ಸಕ್ಕರೆ ಕಾರ್ಖಾನೆ ಮಾಜಿ ಸಚಿವ ಮಿರಾಜುದ್ದೀನ್ ಪಟೇಲ್ ಅವರ ಸಹೋದರ ನಸೀಮ್ ಪಟೇಲ್ ಒಡೆತನದಲ್ಲಿದೆ

ಕಲಬುರಗಿ

- ಚಿಂಚೋಳಿಯಲ್ಲಿ ಸಿದ್ಧಸಿರಿ ಎಥೆನಾಲ್ ಆ್ಯಂಡ್ ಪವರ್ ಕಾರ್ಖಾನೆ ಇದೆ. ಇದರ ಒಡೆತನ ಸಿದ್ಧಸಿರಿ ಸೌಹಾರ್ದ ಸಹಕಾರಿ ನಿಯಮಿತ ಹೊಂದಿದ್ದು, ಈ ಸಹಕಾರಿ ಸಂಸ್ಥೆಗೆ ಶಾಸಕ ಬಸನಗೌಡ ಪಾಟೀಲ ಯತ್ನಾಳ ಅಧ್ಯಕ್ಷ (ಕಳೆದ ವರ್ಷ ಈ ಕಾರ್ಖಾನೆ ಕಾರ್ಯನಿರ್ವಹಿಸಿರಲಿಲ್ಲ)
- ಅಫಜಲಪುರ ತಾಲ್ಲೂಕಿನಲ್ಲಿ ಕೆಪಿಆರ್ ಶುಗರ್ಸ್ ಹಾಗೂ ರೇಣುಕಾ ಶುಗರ್ಸ್ ಕಾರ್ಖಾನೆಗಳಿವೆ. ಕೆಪಿಆರ್ ಶುಗರ್ಸ್ ಕೆಪಿಆರ್ ಸಂಸ್ಥೆಯ ಮಾಲೀಕತ್ವದಲ್ಲಿದೆ. ಆ ಸಂಸ್ಥೆಗೆ ತಮಿಳುನಾಡಿನ ಕೆ.ಪಿ.ರಾಮಸ್ವಾಮಿ ಅಧ್ಯಕ್ಷರು. ರಾಮಸ್ವಾಮಿ ಅವರು ಕಾಂಗ್ರೆಸ್ ಪಕ್ಷದ ಪಿ.ಚಿದಂಬರಂ ಸಂಬಂಧಿ. ರೇಣುಕಾ ಶುಗರ್ಸ್, ವಿದ್ಯಾ ಮರಕುಂಬಿ ಮಾಲೀಕತ್ವದಲ್ಲಿದೆ

ಹಾವೇರಿ

- ಸಂಗೂರಿನಲ್ಲಿ ಮಾಜಿ ಸಂಸದ ಜಿ.ಎಂ.ಸಿದ್ದೇಶ್ವರ ಮಾಲೀಕರು ಜಿ.ಎಂ.ಶುಗರ್ ಆ್ಯಂಡ್ ಎನರ್ಜಿ ಕಂಪನಿ ಕಾರ್ಯನಿರ್ವಹಿಸುತ್ತಿದೆ. ಇದು ಸಹಕಾರಿ ಕ್ಷೇತ್ರದ ಕಾರ್ಖಾನೆ. ಕಂಪನಿಯು 30 ವರ್ಷಗಳ ಗುತ್ತಿಗೆಗೆ ಇದನ್ನು ಪಡೆದಿದೆ. ರಟ್ಟಿಹಳ್ಳಿ ತಾಲ್ಲೂಕಿನ ಭೈರನಪಾದ ಬಳಿಯಲ್ಲಿರುವ ಜಿ.ಎಂ.ಶುಗರ್ಸ್ ಕಾರ್ಖಾನೆಗೂ ಸಿದ್ದೇಶ್ವರ ಅವರೇ ಮಾಲೀಕರು
- ಶಿಗ್ಗಾವಿ ತಾಲ್ಲೂಕಿನ ಶಿವಪುರ-ಕೋಣನಕೇರಿ ರಸ್ತೆಯಲ್ಲಿ ವಿ.ಐ.ಎನ್.ಪಿ ಡಿಸ್ಟಿಲರೀಸ್ ಮತ್ತು ಶುಗರ್ಸ್ ಕಂಪನಿಯು ಮಾಜಿ ಸಚಿವ ಶಿವರಾಮ ಹೆಬ್ಬಾರ ಅವರ ಮಗ ವಿವೇಕ ಹೆಬ್ಬಾರ ಒಡೆತನದಲ್ಲಿದೆ

ಮಂಡ್ಯ

- ಮಂಡ್ಯ ಮೈಸೂರು ಸಕ್ಕರೆ ಕಾರ್ಖಾನೆ (ಮೈಷುಗರ್) ಸರ್ಕಾರಿ ಸ್ವಾಮ್ಯದಲ್ಲಿರುವ ರಾಜ್ಯದ ಏಕೈಕ ಸಕ್ಕರೆ ಕಾರ್ಖಾನೆ
- ಪಾಂಡವಪುರ ಸಹಕಾರಿ ಸಕ್ಕರೆ ಕಾರ್ಖಾನೆಯನ್ನು ಇತ್ತೀಚೆಗೆ ಬಿಜೆಪಿ ಮುಖಂಡ, ಮಾಜಿ ಶಾಸಕ ಮುರುಗೇಶ್ ನಿರಾಣಿ ಅವರ ಒಡೆತನದ ‘ಎಂ.ಆರ್.ಎನ್. ಕೇನ್’ ಸಂಸ್ಥೆಗೆ 40 ವರ್ಷಗಳ ಗುತ್ತಿಗೆ ನೀಡಲಾಗಿದೆ

ದಾವಣಗೆರೆ

- ದಾವಣಗೆರೆ ಶುಗರ್ಸ್ ಲಿ. ಕುಕ್ಕುವಾಡದಲ್ಲಿದ್ದು ಗಣಿ ಮತ್ತು ಭೂ ವಿಜ್ಞಾನ ಖಾತೆ ಸಚಿವ ಎಸ್.ಎಸ್. ಮಲ್ಲಿಕಾರ್ಜುನ ಅವರ ಸಹೋದರ ಎಸ್.ಎಸ್.ಗಣೇಶ್ ಇದರ ಮಾಲೀಕ

ವಿಜಯನಗರ

ಹರಪನಹಳ್ಳಿ ತಾಲ್ಲೂಕಿನ ದುಗ್ಗಾವತಿಯಲ್ಲಿರುವ ಶಾಮನೂರು ಶುಗರ್ಸ್ ಮಾಲೀಕತ್ವ ಸಚಿವ ಎಸ್.ಎಸ್.ಮಲ್ಲಿಕಾರ್ಜುನ ಅವರದ್ದು

ಗದಗ

- ಮುಂಡರಗಿ ತಾಲ್ಲೂಕಿನಲ್ಲಿರುವ ವಿಜಯನಗರ ಶುಗರ್ಸ್ ಕಾರ್ಖಾನೆಯು ಆಂಧ್ರಪ್ರದೇಶದ ಮೂಲದ್ದು. ಈ ಕಾರ್ಖಾನೆಯು ಶ್ರೀಮೃಡಗಿರಿ ಸಹಕಾರಿ ಸಂಘದ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿತ್ತು. ಅದನ್ನು 30 ವರ್ಷಗಳ ಗುತ್ತಿಗೆಗೆ ವಿಜಯನಗರ ಶುಗರ್ಸ್‌ಗೆ ನೀಡಲಾಗಿತ್ತು. ಕೇಂದ್ರದ ಮಾಜಿ ಸಚಿವ, ಕಾಂಗ್ರೆಸ್ ಮುಖಂಡ ಜೈಪಾಲ ರೆಡ್ಡಿ ಅವರ ಮಗ ಆನಂದ ರೆಡ್ಡಿ ಇದರ ಮಾಲೀಕ

‘ರೈತರ ಸಂಕಷ್ಟಕ್ಕೆ ಕೇಂದ್ರವೇ ಹೊಣೆ’

ಒಂದನೇ ಪುಟದಿಂದ...

ಎಫ್‌ಆರ್‌ಪಿ ನಿಗದಿಯಲ್ಲಿ ಅನ್ಯಾಯ ಮಾಡಿರುವ ಕೇಂದ್ರ ಸರ್ಕಾರ, 2019 ರಲ್ಲಿ ಕಡೆಯದಾಗಿ ಸಕ್ಕರೆಗೆ ಎಂಎಸ್‌ಪಿ ನಿಗದಿ ಮಾಡಿತ್ತು. ಆಗ ಪ್ರತಿ ಕೆ.ಜಿ.ಗೆ ₹31 ನಿಗದಿ ಮಾಡಲಾಗಿತ್ತು. ಆ ಬಳಿಕ ಎಂಎಸ್‌ಪಿ ಪರಿಷ್ಕರಿಸಲಿಲ್ಲ. ಜತೆಗೆ ಕಳೆದ ಕೆಲವು ವರ್ಷಗಳಿಂದ ಕೇಂದ್ರ ಸರ್ಕಾರ ಸಕ್ಕರೆ ರಫ್ತನ್ನು ನಿಲ್ಲಿಸಿದೆ. ಕಳೆದ ವರ್ಷ ಇಡೀ ದೇಶಕ್ಕೆ 10 ಲಕ್ಷ ಟನ್ ರಫ್ತು ಮಾಡಲು ಮಾತ್ರ ಅವಕಾಶ ನೀಡಲಾಗಿತ್ತು. ರಾಜ್ಯದಲ್ಲಿ 41 ಲಕ್ಷ ಮೆಟ್ರಿಕ್ ಟನ್ ಉತ್ಪಾದನೆ ಆಗಿತ್ತು’ ಎಂದು ಹೇಳಿದರು.

ಎಥೆನಾಲ್ ವಿಚಾರದಲ್ಲೂ ಕೇಂದ್ರ ಸರ್ಕಾರವು ತಾರತಮ್ಯ ಧೋರಣೆ ಅನುಸರಿಸುತ್ತಿದೆ. ಕರ್ನಾಟಕದಲ್ಲಿ 270 ಕೋಟಿ ಲೀಟರ್ ಉತ್ಪಾದನಾ ಸಾಮರ್ಥ್ಯ ಇದ್ದರೂ 2024–25 ರಲ್ಲಿ 47 ಕೋಟಿ ಲೀಟರ್ ತೈಲ ಕಂಪನಿಗಳಿಗೆ ಖರೀದಿ ಮಾಡಲು ಹಂಚಿಕೆ ಆಗಿದೆ ಎಂದರು.

‘ಕೇಂದ್ರ ಸರ್ಕಾರವು ರಾಜ್ಯದ ವಿಚಾರದಲ್ಲಿ ನಡೆಸುತ್ತಿರುವ ತಾರತಮ್ಯ ಧೋರಣೆಯು ರೈತರ ಅನ್ನದ ತಟ್ಟೆವರೆಗೂ, ರೈತರ ಭೂಮಿವರೆಗೂ ಬಂದಿದೆ. ಈ ವಿಚಾರದಲ್ಲಿ ನಾವು ಅಧಿಕಾರಕ್ಕೆ ಬಂದಾಗಿನಿಂದಲೂ ಧ್ವನಿ ಎತ್ತಿದ್ದೇವೆ. ರೈತರೂ ನಮ್ಮ ಎಲ್ಲಾ ಪ್ರಯತ್ನಗಳ ಜೊತೆ ಕೈಜೋಡಿಸಬೇಕು’ ಎಂದು ಸಿದ್ದರಾಮಯ್ಯ ಮನವಿ ಮಾಡಿದರು.

ರೈತ ದ್ರೋಹಿಯಾದ ಬಿಜೆಪಿಯವರ ಮರುಳು ಮಾತುಗಳಿಗೆ ರೈತರು ಯಾವುದೇ ಕಾರಣಕ್ಕೂ ಬಲಿಯಾಗಬಾರದು. ರಾಜಕಾರಣ ಬೆರೆಸಲು ಬಿಜೆಪಿ ರಾಜ್ಯ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು ಪ್ರತಿಭಟನೆ ಸ್ಥಳಕ್ಕೆ ಹೋಗಿ ರಾತ್ರಿ ಮಲಗಿದ್ದರು. ಪ್ರತಿಭಟನಕಾರರ ಬೇಡಿಕೆ ಆಲಿಸಲು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅಲ್ಲಿಗೆ ಹೋಗಿದ್ದಾರಾ ಎಂದು ಅವರು ಪ್ರಶ್ನಿಸಿದರು.

ಸಕ್ಕರೆ ಕಾರ್ಖಾನೆಗಳ ಮಾಲೀಕರೂ ಆಗಿರುವುದರಿಂದ ಸಚಿವರಾದ ಸತೀಶ ಜಾರಕಿಹೊಳಿ ಮತ್ತು ಲಕ್ಷ್ಮೀ ಹೆಬ್ಬಾಳಕರ ಅವರು ಪ್ರತಿಭಟನಾ ಸ್ಥಳಕ್ಕೆ ಹೋಗಲಿಲ್ಲ. ರೈತರ ಆಕ್ರೋಶ ಹೆಚ್ಚಾಗಿದ್ದರಿಂದ ಸಕ್ಕರೆ ಸಚಿವ ಶಿವಾನಂದ ಪಾಟೀಲ ಅವರನ್ನು ಕಳುಹಿಸಲಿಲ್ಲ. ಬದಲಿಗೆ ಜಿಲ್ಲಾಧಿಕಾರಿ ಮತ್ತು ಎಸ್ಪಿ ಅವರನ್ನು ರೈತರ ಜತೆ ಮಾತುಕತೆಗೆ ಕಳುಹಿಸಲಾಗಿತ್ತು ಎಂದು ಸಿದ್ದರಾಮಯ್ಯ ಹೇಳಿದರು.

ಬೆಳಗಾವಿ ಜಿಲ್ಲಾಧಿಕಾರಿ ಸಕ್ಕರೆ ಕಾರ್ಖಾನೆ ಮಾಲೀಕರ ಜತೆ ಈಗಾಗಲೇ ಚರ್ಚೆ ನಡೆಸಿ, ಶೇ 11.25 ಇಳುವರಿ ಬಂದರೆ ₹3,200 ಮತ್ತು ಶೇ 10.25 ಇಳುವರಿ ಬಂದರೆ ₹3,100 (ಕಟಾವು ಮತ್ತು ಸಾಗಣೆ ವೆಚ್ಚ ಹೊರತು ಪಡಿಸಿ) ಪಾವತಿಸುವಂತೆ ಮನವೊಲಿಸಿದ್ದಾರೆ. ಈ ವಿಷಯವನ್ನು ಅಧಿಕಾರಿಗಳು ರೈತರಿಗೆ ತಿಳಿಸಿ ಮನವೊಲಿಸುವ ಪ್ರಯತ್ನ ಮಾಡಿದ್ದಾರೆ. ಆದ್ದರಿಂದ ನಾಳೆ ನಡೆಸಲು ಉದ್ದೇಶಿಸಿರುವ ರಸ್ತೆ ತಡೆಯನ್ನು ಕೈಬಿಟ್ಟು ವಿಧಾನಸಭೆಯಲ್ಲಿ ನಡೆಯುವ ಸಭೆಗೆ ಹಾಜರಾಗಬೇಕು ಎಂದು ಸಿದ್ದರಾಮಯ್ಯ ರೈತರಿಗೆ ಮನವಿ ಮಾಡಿದರು.

ಸಕ್ಕರೆ ಕಾರ್ಖಾನೆಗಳ ಮಾಲೀಕರು ಪ್ರತಿ ಟನ್‌ಗೆ ₹2,900 ಮಾತ್ರ ನೀಡುತ್ತಿದ್ದಾರೆ ಎಂಬುದಾಗಿ ರೈತರು ಹೇಳಿದ್ದಾರೆ ಎಂಬುದನ್ನು ಅವರ ಗಮನಕ್ಕೆ ತಂದಾಗ, ‘ಕಾರ್ಖಾನೆಗಳವರು ಕಬ್ಬನ್ನು ಕಟಾವು ಮಾಡಿ ಸಾಗಣೆ ವೆಚ್ಚವನ್ನೂ ಭರಿಸಿ ತರುವುದರಿಂದ ₹2,900 ನೀಡುತ್ತಾರೆ. ಕಟಾವು ಮತ್ತು ಸಾಗಣೆಗೆ ಪ್ರತಿ ಟನ್‌ಗೆ ₹900 ಆಗುತ್ತದೆ. ಅದನ್ನು ಕಾರ್ಖಾನೆಗಳೇ ಭರಿಸುತ್ತವೆ. ಇದರಿಂದ ಪ್ರತಿ ಟನ್‌ಗೆ ₹3,800 ಕೊಟ್ಟ ಹಾಗೆ ಆಗುವುದಿಲ್ಲವೇ’ ಎಂದು ಪ್ರಶ್ನಿಸಿದರು.

ಒಂದು ವೇಳೆ ರೈತರೇ ಕಬ್ಬನ್ನು ಕಾರ್ಖಾನೆಗೆ ತಂದರೆ ಪ್ರತಿ ಟನ್‌ಗೆ ₹3,500 ಕೊಡ್ತಾರೆ. ಆಗ ಕಟಾವು ಮತ್ತು ಸಾಗಣೆ ವೆಚ್ಚವನ್ನು ರೈತರೇ ಭರಿಸಬೇಕಾಗುತ್ತದೆ ಎಂದೂ ವಿವರಿಸಿದರು.

‘ಕೆಲವು ರೈತ ಮುಖಂಡರು ಮಹಾರಾಷ್ಟ್ರ ಸಕ್ಕರೆ ಕಾರ್ಖಾನೆಗಳ ಕುರಿತು ಪ್ರಸ್ತಾಪಿಸಿರುವುದು ನನ್ನ ಗಮನಕ್ಕೆ ಬಂದಿದೆ. ನನಗಿರುವ ಮಾಹಿತಿ ಪ್ರಕಾರ ಮಹಾರಾಷ್ಟ್ರದಲ್ಲಿ 40ಕ್ಕೂ ಹೆಚ್ಚು ಸಕ್ಕರೆ ಕಾರ್ಖಾನೆಗಳು ₹2,515ರಿಂದ ₹3,635ರವರೆಗೆ ಪ್ರತಿ ಟನ್ ಕಬ್ಬಿಗೆ ದರ ನೀಡುತ್ತಿವೆ. ನಾಳೆಯ ಸಭೆಯಲ್ಲಿ ಈ ವಿಚಾರವನ್ನು ತೀರ್ಮಾನಿಸುತ್ತೇವೆ’ ಎಂದರು.

ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಮಾತನಾಡಿ, ‘ರೈತರಿಗೆ ಪ್ರತಿ ಟನ್‌ಗೆ ಶೇ 11.25 ಇಳುವರಿ ಬಂದರೆ ₹3,200ರವರೆಗೆ ಕೊಡಲು ಹೇಳಿದ್ದೇವೆ (ಕಟಾವು, ಸಾಗಾಣಿಕೆ ವೆಚ್ಚ ಹೊರತುಪಡಿಸಿ). ಶೇ 10.25 ಇಳುವರಿಗೆ ₹3,100 ನಿಗದಿ ಮಾಡಿದ್ದೇವೆ. ಇದಕ್ಕೆ ಕಟಾವು ಮತ್ತು ಸಾಗಣೆ ವೆಚ್ಚ ₹900 ಸೇರಿಸಿದರೆ ₹4,100 ವರೆಗೂ ಸಿಗುತ್ತದೆ’ ಎಂದು ಹೇಳಿದರು.

ಪ್ರಧಾನಿ ಮೋದಿ ಭೇಟಿಗಾಗಿ ಪತ್ರ

‘ಕೇಂದ್ರ ಸರ್ಕಾರವು ಕೂಡಲೇ ಮಧ್ಯ ಪ್ರವೇಶ ಮಾಡಿ ಕಬ್ಬು ಇಳುವರಿ ಪ್ರಮಾಣವನ್ನು ಇಳಿಸಬೇಕು, ಎಫ್‌ಆರ್‌ಪಿ ದರ ಪರಿಷ್ಕರಿಸಬೇಕು, ಸಕ್ಕರೆ ರಫ್ತು ಸೇರಿ ಹಲವು ಸಮಸ್ಯೆಗಳನ್ನು ಬಗೆಹರಿಸಬೇಕು’ ಎಂದು ಸಿದ್ದರಾಮಯ್ಯ ಒತ್ತಾಯಿಸಿದರು.

‘ಪ್ರಧಾನಮಂತ್ರಿ ಅವರನ್ನು ಭೇಟಿ ಮಾಡಿ ಕಬ್ಬು ಬೆಳೆಗಾರರ ವಿಚಾರದಲ್ಲಿ ಉದ್ಭವಿಸಿರುವ ಸಮಸ್ಯೆಗಳನ್ನು ಬಗೆಹರಿಸಲು ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಮನವರಿಕೆ ಮಾಡಬೇಕಿದೆ. ಭೇಟಿ ಸಮಯ ನಿಡುವಂತೆ ಕೋರಿ, ಶುಕ್ರವಾರವೇ ಪ್ರಧಾನಿಯವರಿಗೆ ಪತ್ರ ಬರೆಯುತ್ತೇನೆ’ ಎಂದು ಹೇಳಿದರು.

ಪದಬಂಧ 6216

ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಮನದಲ್ಲಿಯೇ ಓಟನ್ನು ನೀಡುವುದು (4)
4.ಕ್ರೈಸ್ತರು ಧರಿಸುವ ಒಂದು ಧಾರ್ಮಿಕ ಲಾಂಛನ (3)
6.ಮುಂದೆ ಬರಲಿರುವ ಕಾಲ (3)
8.ರುಚಿಯುಳ್ಳ ರಸಸ್ವಾದನ ಶಕ್ತಿ! (4)
11.ತಂಬಾಕು ಕೊಯ್ಯಲು ಬಳಸುವ ಕಿರುಗತ್ತಿ (2)
12.ಈತ ಬಲು ಜಿಪುಣ (2)
13.ನಡುವೆ ಇರುವುದು (3)
14.ಹೆಜ್ಜೆ ಹಾಕುವಾಗ ಕಿಣಿಕಿಣಿ ಶಬ್ದ ಮಾಡುವ ಕಿರುಗಂಟೆ (2)
15.ಪರಾಜಯದಲ್ಲೇ ಗೆಲುವು ಅಡಗಿದೆಯಲ್ಲಾ! (2)
16.ಪಟದಲ್ಲಿನ ಪೇಚಾಟ ಉಲ್ಟಾ ಆಗಿದೆ! (4)
18.ದಯೆಗೊಂದು ಪರ್ಯಾಯ ಪದ (3)
20.ಕರದಲ್ಲಿ ಕಾಣಿಸಿದ ದೇವರು! (3)
21.ಮನಸ್ಸಿನ ತೇರು! (4)

ಮೇಲಿಂದ ಕೆಳಕ್ಕೆ

2.ತಂದೆ ತಾಯಿ ಇರುವ ಊರು (3)
3.ಭವನ ಮೇಲಿದ್ದಾಗ ಕಾಣಿಸಿದ ಆಕಾಶ (2)
4.ಗುರುವಿಗೆ ತಕ್ಕ ವಿದ್ಯಾರ್ಥಿ! (2)
5.ಸೂರ್ಯ ದೀಪ ಮುಂತಾದವುಗಳ ಪ್ರಕಾಶ (3)
7.ಸ್ಥೂಲಾವಲೋಕನವನ್ನು ಹೀಗೂ ಹೇಳುತ್ತಾರೆ (6)
9.ಬೇರೆಯ ಅಭಿಪ್ರಾಯ (5)
10.ಕಾಫಿನಾಡು ಎಂದೇ ಹೆಸರಾಗಿರುವ ಜಿಲ್ಲೆ (6)
11.ಬಾಡಿಗೆ ಕೊಡುವವನು (5)
15.ಟಕ ಟಕ ಶಬ್ದ ಮಾಡುವ ಕುದುರೆ ಬಂಡಿ (3)
17.ದಾರದೊಳಗಿರುವ ಒಡೆಯ (3)
18.ಕಠೋರವಾಗಿರುವ ಕೈ! (2)
19.ಮರದ ಪೀಠವಿಲ್ಲಿ ಉಲ್ಟಾ ಆಗಿದೆಯಲ್ಲಾ! (2)



6215ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ವಿಪ್ರಲಾಪ 3.ಹಲುಬೆ 5.ಗಣಪ 7.ಗಲಾಟೆ 8.ವಿಮಾನಯಾನ 11.ಗುಲಾಬಿ 12.ಕಲಭ 15.ಕಲ್ಯಾಣಿ 16.ವಿಚ್ಛೇದನ

ಮೇಲಿಂದ ಕೆಳಕ್ಕೆ:
1.ವಿಯೋಗ 2.ಪಕ್ಷ 3.ಹರಟೆ 4.ಬೆಳಕಿಂಡಿ 6.ಪಲ್ಲವಿ 7.ಗಗನಚುಂಬಿ 9.ನಡುಕ 10.ವಿಧ್ವಂಸಕ 11.ಗುರಾಣಿ 13.ಭವನ 14.ಭವಿ

ಸುಡೊಕು 6600

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

3	4		2		9	6		1
		1		8		2	7	
	7		1		4			8
		4				1		
2	8		6	9	1			
		7					6	5
	5			1				7
	1	6	8		2	5		
4	2			5				6

6599 ಸುಡೊಕು

3	5	1	7	4	2	9	8	6
6	9	2	1	5	8	3	7	4
4	7	8	3	6	9	2	1	5
1	6	4	8	9	5	7	2	3
9	2	5	4	3	7	8	6	1
8	3	7	6	2	1	4	5	9
2	1	3	9	7	6	5	4	8
5	4	6	2	8	3	1	9	7
7	8	9	5	1	4	6	3	2

ಹೃದಯದಲ್ಲಿ ಘೋರವಾದ ಮರುಭೂಮಿ ಹಬ್ಬುತ್ತಿದೆ

ನುಡಿ ಬೆಳಗು

ರೇಣುಕಾ ನಿಡಗುಂದಿ

ಲಿಫ್ಟ್‌ನಲ್ಲಿ ಒಬ್ಬ ಯುವತಿ ಮತ್ತು ಆಕೆಯ ಐದಾರು ವರ್ಷದ ಮಗು ಸಿಕ್ಕರು. ಮಗುವನ್ನು ನಾನು ಮಾತಾಡಿಸುತ್ತಲೇ ಆ ಯುವತಿ ನಿಮ್ಮ ವಯಸ್ಸೆಷ್ಟು ಅಂತ ಕೇಳಿದಳು. ಹಿನ್ನೆಲೆ ಮುನ್ನೆಲೆ ಇಲ್ಲದೇ ಹಾಕಿದ ಆಕೆಯ ಪ್ರಶ್ನೆಗೆ ತಬ್ಬಿಬ್ಬಾದ ನಾನು ನಗುತ್ತಲೇ ಉತ್ತರಿಸಿದೆ. ಆಕೆಗೆ ಕೇಳಿದೆ: ವಯಸ್ಸು ಕೇಳಿದ್ದು ಏಕೆ, ಏನು ಕಾರಣ?

‘ನನ್ನ ತೀರಿ ಹೋದ ತಂದೆ ತಾಯಿ ಅವರ ವೃದ್ಧಾಪ್ಯದಲ್ಲಿ ಏನು ಯೋಚಿಸಿದ್ದಿರಬಹುದು? ನಾನು ಅವರಿಗೆ ಎಷ್ಟು ದುಃಖ ಕೊಟ್ಟಿರಬಹುದು ಅಥವಾ ಅವರನ್ನು ನಾನು ಸರಿಯಾಗಿ ನೋಡಿಕೊಳ್ಳಲಿಲ್ಲವೋ? ಹೀಗೆ ಯೋಚಿಸುತ್ತಿರುತ್ತೇನೆ’ ಎಂದು ಆಕೆ ಉತ್ತರಿಸಿದಳು.

ನಾವಿರುವ ಅಂತಸ್ತಿನ ಮೇಲಿನ ಅಂತಸ್ತಿನಲ್ಲಿ ಕೆಲವೊಮ್ಮೆ ಜೋರಾಗಿ ಕೂಗುವ, ಜಗಳಾಡುವ, ಅಳುವ ಸದ್ದು ಕೇಳುತ್ತಿರುತ್ತದೆ. ಮಹಾನಗರಗಳಲ್ಲಿ ಪಕ್ಕದ ಮನೆಯಲ್ಲಿ ಯಾರಾದರೂ ಸತ್ತರೂ ಗೊತ್ತಾಗುವುದಿಲ್ಲ. ಜಗಳಾಡಿಕೊಂಡರೂ ಯಾರೂ ಜಗಳ ನಿಲ್ಲಿಸುವುದಕ್ಕೆ ಹೋಗದ ನಾಗರಿಕತೆ ಇಲ್ಲಿದೆ. ಹಿಂದೆ ಯಾರೊಬ್ಬರ ಮನೆಯ ವಿಷಯವೂ ಗುಟ್ಟಾಗಿರುತ್ತಿರಲಿಲ್ಲ. ಒಬ್ಬರ ಕಷ್ಟಸುಖಕ್ಕೆ ಒದಗುತ್ತಿದ್ದ ಸಹಬಾಳ್ವೆಯಿತ್ತು. ರಕ್ತ ಸಂಬಂಧಿಗಳಿಗೂ ಹೆಚ್ಚಾಗಿ ನೆರೆಹೊರೆಯವರೇ ಕಷ್ಟಕ್ಕೆ ಒದಗುತ್ತಿದ್ದರು. ಹಳ್ಳಿಗಳಲ್ಲಿ ಈಗಲೂ ಅಂತಹ ಜನರಿರಬಹುದು. ಆದರೆ, ಮಹಾನಗರಗಳ ಬಹುಅಂತಸ್ತುಗಳ ಫ್ಲ್ಯಾಟುಗಳಲ್ಲಿ, ಅಪಾರ್ಟ್‌ಮೆಂಟುಗಳಲ್ಲಿ ನೀನ್ಯಾರೋ, ನಾನ್ಯಾರೋ! ಜನ ನಡುಗಡ್ಡೆಗಳಂತೆ ಬದುಕುತ್ತಿದ್ದಾರೆ. ಒಂದೇ ಅಂತಸ್ತಿನಲ್ಲಿದ್ದರೂ ಒಬ್ಬರಿಗೊಬ್ಬರು ಕಾಣುವುದು ಲಿಫ್ಟುಗಳಲ್ಲಿ. ಪರಿಚಯವಿದ್ದರೂ ಸಲಿಗೆ ಇರದು. ಯಾರಿಗೂ ಹತ್ತಿರವಾಗುವ ಇಚ್ಛೆಯೂ ಇರುವುದಿಲ್ಲ. ಸಿಕ್ಕಾಗ ‘ಹಲೋ’ ಹೇಳಿದರೆ ಹೆಚ್ಚು. ಹೀಗಿರುವಾಗ ಯಾಕೋ ಯುವತಿಯ ಮಾತು ಮನಕಲಕಿತು. ಮುಖದಲ್ಲಿ ಒಂದು ತರಹದ ಹುಚ್ಚುಕಳೆ, ಹಚ್ಚಿದ ಕಾಡಿಗೆ ಎಲ್ಲ ಹರಡಿಕೊಂಡಿದೆ, ನೀಟಾಗಿಲ್ಲ. ಕೂದಲು ಒಪ್ಪವಾಗಿಲ್ಲ. ಆಕೆ ತುಂಬಾ ಡಿಸ್ಟರ್ಬ್ ಆಗಿದ್ದಾಳೆ ಎಂದು ಯಾರಿಗಾದರೂ ತಿಳಿಯುತ್ತಿತ್ತು.

‘ಇಷ್ಟೊಂದು ಚಿಂತಿಸಬೇಡ, ನೀನು ಖುಷಿಯಾಗಿದ್ದರೆ ಅಪ್ಪ-ಅಮ್ಮನ ಆತ್ಮವೂ ಖುಷಿಯಾಗಿರುತ್ತದೆ. ನಿನ್ನ ಮುಂದಿನ ಬದುಕು ನೋಡು. ಮುದ್ದಾದ ಮಗಳಿದ್ದಾಳೆ, ಮನಸ್ಸನ್ನು ಕ್ರಿಯಾಶೀಲವಾಗಿಡು. ಒಳ್ಳೆಯ ಪುಸ್ತಕಗಳನ್ನು ಓದು, ಸಂಗೀತ ಕೇಳು, ಯಾವುದಾದರೂ ಹಾಬಿ ಕ್ಲಾಸ್ ಸೇರಿಕೋ’ ಎಂದೆಲ್ಲ ಅವಳನ್ನು ಸಮಾಧಾನಿಸಿದೆ. ‘ನಿಮ್ಮೊಂದಿಗೆ ಮಾತಾಡಬೇಕು, ಮನೆಗೆ ಬರ್ತೀನಿ, ಯಾವ ನಂಬರು’ ಎಂಬ ಪ್ರಶ್ನೆಗಳಿಗೆ ಉತ್ತರಿಸಿದೆನಾದರೂ ಹೃದಯ ಮರುಗುತ್ತಿತ್ತು.

ಗೌರೀಶ್ ಕಾಯ್ಕಿಣಿ ಒಂದೆಡೆ ಬರೆಯುತ್ತಾರೆ: ‘ಇಂದು ಪ್ರಪಂಚದಲ್ಲಿ ಮರುಭೂಮಿ ಹಬ್ಬುತ್ತಿದೆಯಂತೆ. ಈ ಭೌಗೋಳಿಕ ಆಪತ್ತಿಗೂ ಮಿಗಿಲಾಗಿ ನಮ್ಮ ಇಂದಿನ ಜೀವನದಲ್ಲಿ ನಮ್ಮ ನಿಮ್ಮ ಹೃದಯಗಳಲ್ಲಿ ಘೋರವಾದ ಒಂದು ಮರುಭೂಮಿ ಬೆಳೆದು ಹಬ್ಬುತ್ತಿದೆ. ಎದೆ ಎದೆಯೊಳಗಿನ ನಡುವಿನ ಎಲ್ಲ ಹಸಿರು ಹಸಿ ತೇವು ತಂಪು ಆರಿ ಭಣಗುಡುವ ಅಂತರಂಗದ ಈ ಜನ್ಮಸ್ಥಾನ ಶೂನ್ಯವಾಗುತ್ತ ಸುತ್ತಲೂ ವಿಸ್ತರಿಸುತ್ತ ಸಾಗಿದೆ. ಸದ್ಯ ಪ್ರಯೋಜನ, ಸಂಕುಚಿತ ಸ್ವಾರ್ಥ, ಕಾರ್ಪಣ್ಯ ದೋಷೋಪಹತ ಸ್ವಭಾವ. ಅದರಿಂದ ಅನಿವಾರ್ಯವಾಗಿ ಬೆಳೆದ ಬದುಕಿನ ಹೋರಾಟ–ಏರಾಟ ಅದರ ತುಳಿದಾಟದಲ್ಲಿ ಬಾಂಧವ್ಯ–ಬಂಧನವಾಗಿ, ಅದೂ ಹರಿದು ಚೂರಾಗಿ ಬಿಡಿ ಬಿಡಿ ವ್ಯಕ್ತಿಗಳು ಹಾಕುವ ಹುಸಿ ಹುಡದಿಯಲ್ಲಿ ಬಾಳೆಲ್ಲ ಹುಡುಹುಡಿ ಆಗಿದೆ.’

ಎಷ್ಟು ಸೊಗಸಾಗಿ ವ್ಯಾಖ್ಯಾನಿಸಿದ್ದಾರೆ. ಮನುಷ್ಯ ನಡುಗಡ್ಡೆಯಷ್ಟೇ ಅಲ್ಲ, ಮರುಭೂಮಿಯೂ ಆಗುತ್ತಿದ್ದಾನೆ.

ಗುಂಡಣ್ಣ

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

07 ನವೆಂಬರ್ 2025 ಶುಕ್ರವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಕಾರ್ತಿಕ ಕೃಷ್ಣ ದ್ವಿತೀಯ ಗಂ. 11-06 ನಕ್ಷತ್ರ: ರೋಹಿಣಿ ಗಂ 24-34 ಯೋಗ: ಪರಿಘ ಗಂ. 22-28 ಕರಣ: ಗರ ಗಂ. 11-06 ತುಲಾ ಮಾಸದ 21 ನೇ ದಿನ. ಮಳೆ ನಕ್ಷತ್ರ : ವಿಶಾಖ 1 ನೇ ಪಾದ.ರಾಹುಕಾಲ : ಬೆಳಿಗ್ಗೆ 10-30 - 12-00, ಸೂರ್ಯೋದಯ : 06-30 ಸೂರ್ಯಾಸ್ತ : 05-58, ಮುಸ್ಲಿಂ ದಿನಾಂಕ : 15 ಜುಮಾದುಲ್ಲಾವಲ್, ಅದೃಷ್ಟ ಸಂಖ್ಯೆ : 8, 11

ಮೇಷ: ನೀತಿ ನಿಯಮಗಳಿಗೆ ಬದ್ಧರಾದರೆ, ಉದ್ಯೋಗದಲ್ಲಿ ಹೆದರುವ ಅವಶ್ಯಕತೆ ಕಂಡುಬಾರದು. ಜೀವನದ ಕೆಲವು ಪ್ರಮುಖ ಸಮಾರಂಭಕ್ಕೆ ಕ್ಷಣಗಣನೆ ಮಾಡುವಂಥರಾಗುವಿರಿ. ಧಾರ್ಮಿಕ ವ್ಯಕ್ತಿಗಳಿಗೆ ಶುಭ.

ವೃಷಭ: ಸಾರ್ವಜನಿಕರಿಂದ ನೇರವಾಗಿ ಕೆಲಸಗಳ ಬಗೆಗಿನ ಪ್ರತಿಕ್ರಿಯೆ ಪಡೆಯುವುದರಿಂದ ಗುಣಮಟ್ಟ ವೃದ್ಧಿ. ತಾಯಿಯ ಮೂಲಕ ಬರಬೇಕಾದ ಪಿತ್ರಾರ್ಜಿತ ಆಸ್ತಿಗೆ ಪ್ರಯತ್ನ ಬೇಕಾಗುತ್ತದೆ.

ಮಿಥುನ: ಹವ್ಯಾಸಿ ಛಾಯಾಗ್ರಾಹಕರಿಗೆ ಪ್ರಶಸ್ತಿ ಲಭಿಸುವುದು. ದೂರ ಸಂಚಾರದಲ್ಲಿ ಕಾರ್ಯಾನುಕೂಲ ತೋರಿಬಂದು ಮಾನಸಿಕ ನೆಮ್ಮದಿ. ಮಾನಸಿಕ ಖಿನ್ನತೆಯಿಂದ ಹೊರಬರಲು ಸಹಾಯ ಪಡೆಯಿರಿ.

ಕರ್ಕಾಟಕ: ಯಶಸ್ಸು, ಹೆಸರು ಪ್ರಯತ್ನ ಬೇಕಾದಷ್ಟೇ ಇದ್ದರೂ ಒಲಿದು ಬರುವುದು ಕಷ್ಟಕರ ಸಂಗತಿ. ಕುಟುಂಬ ಸ್ಥಾನದಲ್ಲಿ ಮನಸ್ತಾಪಕ್ಕೆ ಕಾರಣವಾಗದಂತೆ ಎಲ್ಲದರಲ್ಲೂ ಜಾಗ್ರತೆ ವಹಿಸಿರಿ.

ಸಿಂಹ: ಇತರರನ್ನು ಗೌರವಿಸುವುದು ಮತ್ತು ಇತರರ ಮಾತನ್ನು ಪರಾಮರ್ಶಿಸುವುದರ ಜತೆಗೆ ಮನ್ನಣೆ ಇರಲಿ. ಗಂಭೀರ ಚಿತ್ತ ಹಾಗೂ ದೃಢ ಮನಸ್ಸಿನಿಂದ ಕೈಗೊಂಡ ಕೆಲಸಗಳು ಕಾರ್ಯಗತವಾಗಲಿವೆ.

ಕನ್ಯಾ: ಲೋಕದಲ್ಲಿ ಸರ್ವೇಸಾಮಾನ್ಯವಾಗಿರುವ ಬದುಕಿನ ಪರಿಭಾಷೆಯಂತಲ್ಲದೆ ವಿಭಿನ್ನವಾಗಿ ಬದುಕಿ ತೋರಿಸುತ್ತೇವೆಂಬ ಕಲ್ಪನೆ ಹುಸಿಯಾಗುತ್ತದೆ. ಅನವಶ್ಯಕವಾದ ಖರ್ಚು ಹೆಚ್ಚಾಗಲಿದೆ.

ತುಲಾ: ದ್ರವಾಹಾರದ ಸೇವನೆ ಕಡಿಮೆ ಆಗಿ ಚರ್ಮದಲ್ಲಿ ಶುಷ್ಕತೆ ಉಂಟಾಗುತ್ತದೆ. ಸ್ಥಿರ ಆಸ್ತಿಯನ್ನು ಉಳಿಸಿಕೊಳ್ಳಲು ಕೋರ್ಟು ಕಚೇರಿಯನ್ನು ಪ್ರತಿನಿತ್ಯವೂ ಅಲೆಯುವಂತೆ ಆಗುತ್ತದೆ.

ವೃಶ್ಚಿಕ: ಹಿರಿಯರ ಜತೆಯಲ್ಲಿ ತೀರ್ಥಯಾತ್ರೆಗೆ ಪಾಲ್ಗೊಂಡು ದೇವರ ದರ್ಶನ ಮಾಡುವುದರಿಂದ ದಿವ್ಯ ಅನುಭೂತಿಯೊಂದಿಗೆ ಮನಸ್ಸಿಗೆ ನೆಮ್ಮದಿ ಸಿಗುವುದು. ವಾಹನ ಖರೀದಿ ವಿಚಾರದಲ್ಲಿ ತಟಸ್ಥರಾಗಿರಿ.

ಧನು: ಕೆಲಸ ಮತ್ತು ದುಡಿಮೆ ಸಮೃದ್ಧಿಯಾಗಿ ಇಲ್ಲವಾದರೂ ಕೌಟುಂಬಿಕ ನೆಮ್ಮದಿಗೆ ಕೊರತೆ ಕಾಣುವುದಿಲ್ಲ. ಹೊಸ ನೀರು ಬಂದಾಗ ಹಳೆಯ ನೀರು ಹೋಗುವುದು ಸಹಜ.

ಮಕರ: ಮನೆಯಲ್ಲಿ ಯುದ್ಧದ ವಾತಾವರಣವನ್ನು ಮನೆಯ ಯಜಮಾನತಿಯ ಸ್ಥಾನದಲ್ಲಿ ನಿಂತು ತಿಳಿಗೊಳಿಸಬೇಕಾದುದು ಅನಿವಾರ್ಯದ ಕರ್ತವ್ಯ. ಪ್ರೇಮಿಗಳ ಮನೋಕಾಮನೆಗಳು ಪೂರ್ಣಗೊಳ್ಳಲಿವೆ.

ಕುಂಭ: ಜೀವನ ರೂಪಿಸಿಕೊಳ್ಳಲು ನಿರ್ಧರಿಸಿದ ಪ್ರೇಮಿಗಳಿಗೆ ತಮ್ಮ ಸಹೋದರರಿಂದ ಸ್ಪಂದನೆ ಸಿಗುವ ಅವಕಾಶಗಳಿವೆ. ಸೃಜನಶೀಲತೆ, ಚಿಂತನಾ ಲಹರಿಗಳು, ಕಾರ್ಯವೈಖರಿಯು ವಿಭಿನ್ನವೆನಿಸುವುದು.

ಮೀನ: ಸಹವರ್ತಿಗಳು ಕೆಲವು ಸನ್ನಿವೇಶದಲ್ಲಿ ಪರವಾಗಿರುವಂತೆ ತೋರಿದರೂ ನಂಬಿಕೆಗೆ ಅರ್ಹರಾಗಿ ಇರುವುದಿಲ್ಲ. ಮಾತಿನ ಮೇಲೆ ಆತ್ಮವಿಶ್ವಾಸ ಮತ್ತು ಹಿಡಿತವಿರಲಿ. ಹಳೆಯ ಕಾರಿನ ಮಾರಾಟ ವಿಷಯ ಕೈಬಿಡಿ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ:	25,597
ಇಂದಿನ ಅಂತ್ಯ:	25,509
ದಿನದ ಕನಿಷ್ಠ:	25,491
	87

ಮೊಟ್ಟೆ ಧಾರಣೆ (ಎನ್‌ಇಸಿಸಿ)

ಬೆಂಗಳೂರು		
	100 ಕ್ಕೆ	₹610
	12 ಕ್ಕೆ	₹80
ಮೈಸೂರು:	100 ಕ್ಕೆ	₹612

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹180
ಆರ್‌ಎಸ್‌ಎಸ್-5	₹175
ಗುಡ್ ಲಾಟ್	₹162

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)

ಶೇಂಗಾ (ರಿಫೈನ್ಡ್)	₹1410 (1410)
ಸೋಯಾ (ರಿಫೈನ್ಡ್)	₹1255 (1255)
ಸೂರ್ಯಕಾಂತಿ (ರಿಫೈನ್ಡ್)	₹1465 (1480)
ಪಾಮೋಲಿನ್	₹1250 (1250)

ಮುದ್ರೆಮನೆ ಕಾಫಿ (50 ಕೆಜಿಗೆ)

ಎಪಿ	₹29250
ಎಸಿ	₹15540
ಆರ್‌ಪಿ	₹19250
ಆರ್‌ಸಿ	₹11075

ಚೆಕ್ ಸಮಸ್ಯೆ: ಹಣ ವರ್ಗಾವಣೆಗೆ ತೊಡಕು

ದೊಡ್ಡ ಮೊತ್ತದ ಚೆಕ್‌ಗಳಿಗೆ ಸಂಬಂಧಿಸಿದ ಹಣ ವರ್ಗಾವಣೆಯಲ್ಲಿ ಹೆಚ್ಚು ಸಮಸ್ಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚೆಕ್‌ಗಳನ್ನು ಬ್ಯಾಂಕ್‌ಗೆ ಸಲ್ಲಿಸಿದ ಕೆಲವೇ ತಾಸುಗಳಲ್ಲಿ ಹಣದ ವರ್ಗಾವಣೆ ಆಗುವ ಸೌಲಭ್ಯವು ಅಕ್ಟೋಬರ್ 4ರಿಂದ ಜಾರಿಗೆ ಬರುತ್ತದೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಹೇಳಿತ್ತಾದರೂ, ಆ ಸೌಲಭ್ಯವು ಸಮರ್ಪಕವಾಗಿ ಜಾರಿಗೆ ಬಂದಿಲ್ಲ. ವ್ಯವಸ್ಥೆಯಲ್ಲಿ ದೋಷಗಳು ನಿವಾರಣೆ ಆಗಿಲ್ಲ.

ಚೆಕ್ ಸಲ್ಲಿಸಿ ಹಲವು ದಿನಗಳು ಕಳೆದರೂ ಹಣದ ವರ್ಗಾವಣೆ ಆಗದಿರುವ ನಿದರ್ಶನಗಳು ಇವೆ. ಈ ರೀತಿ ಆಗಿರುವುದಕ್ಕೆ ತಾಂತ್ರಿಕ ದೋಷ ಕಾರಣ ಎಂದು ಬ್ಯಾಂಕಿಂಗ್ ವ್ಯವಸ್ಥೆಯ ಪ್ರತಿನಿಧಿಗಳು ಹೇಳುತ್ತಿದ್ದಾರೆ.

'ಚೆಕ್ ಸಲ್ಲಿಸಿದ ಕೆಲವು ತಾಸುಗಳಲ್ಲಿ ಹಣ ಜಮಾ ಆಗುವ ಸೌಲಭ್ಯ ಅಕ್ಟೋಬರ್ 4ರಿಂದ ಜಾರಿಗೆ ಬರಲಿದೆ ಎಂದು ಆರ್‌ಬಿಐ ಹೇಳಿತ್ತು. ಆದರೆ ಹಣದ ವರ್ಗಾವಣೆ ಪೂರ್ಣಗೊಳ್ಳುವುದಕ್ಕೆ ಒಂದು ವಾರ ಸಮಯ ತೆಗೆದುಕೊಂಡಿದ್ದೂ ಇದೆ. ಇದಕ್ಕೆ ತಾಂತ್ರಿಕ ದೋಷ ಕಾರಣ ಎಂದು ಹೇಳಲಾಗಿದೆ' ಎಂದು ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆಯ (ಎಫ್‌ಕೆಸಿಸಿಐ) ಮಾಜಿ ಅಧ್ಯಕ್ಷ ಶ್ರೀನಿವಾಸಮೂರ್ತಿ 'ಪ್ರಜಾವಾಣಿ'ಗೆ ತಿಳಿಸಿದರು.

ಮುಖ್ಯಾಂಶಗಳು

- ಚೆಕ್ ಸಲ್ಲಿಸಿದ ನಂತರ ಮಾನ್ಯ ಮಾಡುವಲ್ಲಿ ವಿಳಂಬ
- ತಾಂತ್ರಿಕ ದೋಷಗಳಿಂದಾಗಿ ಈ ಸಮಸ್ಯೆ ಎಂಬ ವಿವರಣೆ
- ಇನ್ನೊಂದು ವಾರದಲ್ಲಿ ಸಮಸ್ಯೆ ಪರಿಹೋಗುವ ವಿಶ್ವಾಸ

ಮಧ್ಯಾಹ್ನ 12 ಗಂಟೆಗೆ ಮೊದಲು ಬ್ಯಾಂಕ್‌ಗೆ ಚೆಕ್ ಸಲ್ಲಿಸಿದರೆ, ಹಣದ ವರ್ಗಾವಣೆಯು ಅದೇ ದಿನ ಪೂರ್ಣಗೊಳ್ಳುವ ಸಾಧ್ಯತೆ ಇದೆ. ಆದರೆ ಆ ವಿಚಾರದಲ್ಲಿ ಖಾತರಿ ಇಲ್ಲ, ವರ್ಗಾವಣೆ ವಿಳಂಬವೂ ಆಗಬಹುದು ಎಂದು ಅವರು ತಮ್ಮ ಅನುಭವ ಹಂಚಿಕೊಂಡರು.

ಚೆಕ್ ಹಾಕಿದ ನಂತರ ಹಣದ ವರ್ಗಾವಣೆಯು ಆರ್‌ಬಿಐ ಹೇಳಿದ ಸಮಯಮಿತಿಯಲ್ಲಿ ಆಗುತ್ತಿಲ್ಲ ಎಂಬ ವಿಚಾರವು ರಾಜ್ಯ ಮಟ್ಟದ ಬ್ಯಾಂಕರುಗಳ ಸಮಿತಿಯ (ಎಸ್‌ಎಲ್‌ಬಿಸಿ) ಸಭೆಯಲ್ಲಿ ಕೂಡ ಪ್ರಸ್ತಾಪ ಆಗಿದೆ. ಸಭೆಯಲ್ಲಿ ಹಾಜರಿದ್ದ ಆರ್‌ಬಿಐ ಪ್ರತಿನಿಧಿಗಳು, ಚೆಕ್ ಸಲ್ಲಿಸಿದ ಕೆಲವೇ ಗಂಟೆಗಳಲ್ಲಿ ಹಣ ವರ್ಗಾವಣೆ ಪೂರ್ಣವಾಗುವ ವ್ಯವಸ್ಥೆಯು ಜನವರಿ 1ರಿಂದ ಸರಿಯಾಗಿ ಆಗುತ್ತದೆ ಎಂಬ ಭರವಸೆ ನೀಡಿದ್ದಾರೆ ಎಂದು ಎಫ್‌ಕೆಸಿಸಿಐ ನಿಕಟಪೂರ್ವ ಅಧ್ಯಕ್ಷ ಎಂ.ಜಿ. ಬಾಲಕೃಷ್ಣ ತಿಳಿಸಿದರು.

'ಆರ್‌ಬಿಐ ಸೂಚನೆ ಪ್ರಕಾರ ಚೆಕ್ ಸಲ್ಲಿಸಿದ ಎರಡು ತಾಸುಗಳಲ್ಲಿ ನಗದು ವರ್ಗಾವಣೆ ಪೂರ್ಣವಾಗಬೇಕು. ಆದರೆ ವಾಸ್ತವದಲ್ಲಿ ಅದು ಆಗುತ್ತಿಲ್ಲ. ಕೆಲವು ತಾಂತ್ರಿಕ ಸಮಸ್ಯೆಗಳಿಂದಾಗಿ ಹೀಗಾಗುತ್ತಿದೆ. ಕೆಲವು ಬ್ಯಾಂಕ್‌ಗಳಲ್ಲಿ ಸಿಬ್ಬಂದಿ ಹಾಗೂ ಅಗತ್ಯ ಮೂಲಸೌಲಭ್ಯದ ಕೊರತೆ ಇರುವುದೂ ಇದಕ್ಕೆ ಕಾರಣವಾಗಿದೆ. ಹಣದ ವರ್ಗಾವಣೆ ಪೂರ್ಣಗೊಳ್ಳುವುದಕ್ಕೆ ಮೂರು ದಿನಗಳವರೆಗೂ ಸಮಯ ಬೇಕಾಗುತ್ತಿದೆ' ಎಂದು ಖಾಸಗಿ ಬ್ಯಾಂಕ್ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

ಅಂತರ್‌ಬ್ಯಾಂಕ್ ವಹಿವಾಟು ಅನುಮೋದನೆಯಲ್ಲಿ ಸಮಸ್ಯೆ ಆಗುತ್ತಿದೆ. ₹10 ಲಕ್ಷಕ್ಕಿಂತ ಹೆಚ್ಚಿನ ಮೊತ್ತದ ಚೆಕ್‌ಗಳನ್ನು ಮಾನ್ಯ ಮಾಡುವಲ್ಲಿ ಸಮಸ್ಯೆ ಇದೆ. ಆದರೆ ಅದಕ್ಕಿಂತ ಕಡಿಮೆ ಮೊತ್ತದ ಚೆಕ್‌ಗಳನ್ನು ಮಾನ್ಯ ಮಾಡುವ ಕೆಲಸವು ಬೇಗನೆ ಆಗುತ್ತಿದೆ. ದೊಡ್ಡ ಮೊತ್ತದ ಚೆಕ್‌ಗಳನ್ನು ಮಾನ್ಯ ಮಾಡಲು ಬಹಳ ಸಮಯ ತೆಗೆದುಕೊಳ್ಳಲಾಗು-ತ್ತಿದೆ ಎಂದು ಸರ್ಕಾರಿ ಸ್ವಾಮ್ಯದ ಕೆನರಾ ಬ್ಯಾಂಕ್‌ನ ಅಧಿಕಾರಿಯೊಬ್ಬರು ಹೆಸರು ಬಹಿರಂಗಪಡಿಸಬಾರದು ಎಂದು ಷರತ್ತಿನೊಂದಿಗೆ ತಿಳಿಸಿದರು.

ಇನ್ನು ಏಳು ದಿನಗಳಲ್ಲಿ ಸಮಸ್ಯೆಗಳು ಪರಿಹಾರ ಕಾಣಲಿವೆ ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದರು.

ವಿಶ್ವದರ್ಜೆಯ ಬ್ಯಾಂಕ್ ಬೇಕು: ನಿರ್ಮಲಾ

ಮುಂಬೈ (ಪಿಟಿಐ): ಭಾರತದಲ್ಲಿ ದೊಡ್ಡದಾದ ಹಾಗೂ ವಿಶ್ವದರ್ಜೆಯ ಬ್ಯಾಂಕ್‌ಗಳ ಅಗತ್ಯವಿದೆ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಗುರುವಾರ ಹೇಳಿದ್ದಾರೆ. ಈ ವಿಚಾರವಾಗಿ ಆರ್‌ಬಿಐ ಜೊತೆ ಮಾತುಕತೆ ನಡೆಯುತ್ತಿದೆ ಎಂದಿದ್ದಾರೆ.

'ಈ ವಿಚಾರವಾಗಿ ಕೆಲಸವು ಈಗಾಗಲೇ ಶುರುವಾಗಿದೆ. ನಾವು ಬ್ಯಾಂಕ್‌ಗಳ ಜೊತೆಯೂ ಮಾತುಕತೆ ನಡೆಸುತ್ತಿದ್ದೇವೆ' ಎಂದು ಅವರು ಕಾರ್ಯಕ್ರಮವೊಂದರಲ್ಲಿ ಹೇಳಿದ್ದಾರೆ.

'ಸರ್ಕಾರವು ತೀರ್ಮಾನ ತೆಗೆದುಕೊಳ್ಳುವ ಮೊದಲು ಬಹಳಷ್ಟು ಕೆಲಸಗಳು ಆಗಬೇಕಿವೆ. ಈಗಾಗಲೇ ಅಸ್ತಿತ್ವದಲ್ಲಿರುವ ಬ್ಯಾಂಕ್‌ಗಳಿಂದ ಒಂದು ಬ್ಯಾಂಕ್ ಸೃಷ್ಟಿಸುವ ಮೂಲಕ ಈ ಕೆಲಸ ಆಗದು. ವಿಲೀನದ ಮೂಲಕ ಅದನ್ನು ಮಾಡಬಹುದು, ಅದು ಕೂಡ ಒಂದು ಮಾರ್ಗ. ಆದರೆ ಹೆಚ್ಚಿನ ಬ್ಯಾಂಕ್‌ಗಳು ಕೆಲಸ ಮಾಡಲು ಅವಕಾಶ ನೀಡುವ ವ್ಯವಸ್ಥೆಯೊಂದು ರೂಪುಗೊಳ್ಳಬೇಕು' ಎಂದು ಅವರು ಹೇಳಿದ್ದಾರೆ.

ಸುದ್ದಿ 2 ನಿಮಿಷ

ಬ್ಯಾಂಕ್‌ಗಳ ಖಾಸಗೀಕರಣಕ್ಕೆ ಯುಎಫ್‌ಬಿಯು ತೀವ್ರ ವಿರೋಧ

ಬೆಂಗಳೂರು: ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳ ಖಾಸಗೀಕರಣಕ್ಕೆ ಬ್ಯಾಂಕ್ ಸಂಘಟನೆಗಳ ಸಂಯುಕ್ತ ವೇದಿಕೆ (ಯುಎಫ್‌ಬಿಯು) ತೀವ್ರ ವಿರೋಧ ವ್ಯಕ್ತಪಡಿಸಿದೆ.

ಡೆಲ್ಲಿ ಸ್ಕೂಲ್ ಆಫ್ ಎಕನಾಮಿಕ್ಸ್‌ನಲ್ಲಿ ಇತ್ತೀಚೆಗೆ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು, 'ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳ ಖಾಸಗೀಕರಣದಿಂದ ಹಣಕಾಸಿನ ಒಳಗೊಳ್ಳುವಿಕೆಯ ಉದ್ದೇಶಕ್ಕೆ ಮತ್ತು ರಾಷ್ಟ್ರದ ಹಿತಾಸಕ್ತಿಗೆ ಧಕ್ಕೆ ಆಗುತ್ತದೆ ಎಂಬ ಆತಂಕದಲ್ಲಿ ಹುರುಳಿಲ್ಲ' ಎಂದು ಹೇಳಿದ್ದರು. ಈ ಹೇಳಿಕೆಗೆ ಯುಎಫ್‌ಬಿಯು ವಿರೋಧ ವ್ಯಕ್ತಪಡಿಸಿದೆ.

ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳು ದೇಶದ ಆರ್ಥಿಕ ಒಳಗೊಳ್ಳುವಿಕೆಗೆ ಬೆನ್ನೆಲುಬು ಆಗಿವೆ. ಈ ಬ್ಯಾಂಕ್‌ಗಳು ಜನರದ್ದು, ಲಾಭಕೋರರಿಗೆ ಸೇರಿದ್ದಲ್ಲ. ಇವು ದೇಶದ ಆಸ್ತಿ. ಅವುಗಳನ್ನು ಮಾರಾಟ ಮಾಡಲು ಬಿಡುವುದಿಲ್ಲ ಎಂದು ಯುಎಫ್‌ಬಿಯು ಹೇಳಿದೆ.

ಜನಧನ್, ನರೇಗಾ, ಪಿಂಚಣಿ ಸೇರಿದಂತೆ ಸರ್ಕಾರದ ಯೋಜನೆಗಳ ಫಲ ದೊರೆಯುತ್ತಿರುವುದು ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳಿಂದಲೇ ಹೊರತು ಖಾಸಗಿ ಬ್ಯಾಂಕ್‌ಗಳಿಂದ ಅಲ್ಲ. ಖಾಸಗೀಕರಣದಿಂದ ಉದ್ಯೋಗದ ಅಭದ್ರತೆ ಮತ್ತು ಸಾರ್ವಜನಿಕರ ಹಣಕ್ಕೆ ಅಪಾಯ ಉಂಟಾಗಲಿದೆ. ಖಾಸಗೀಕರಣದಿಂದ ಕಾರ್ಪೊರೇಟ್ ಕಂಪನಿಗಳಿಗೆ ಲಾಭವಾಗಲಿದೆಯೇ ಹೊರತು ಸಾರ್ವಜನಿಕರಿಗೆ ಅಲ್ಲ. ಖಾಸಗೀಕರಣದಿಂದ ಜನರ ಹಣ ಖಾಸಗಿಯವರ ನಿಯಂತ್ರಣಕ್ಕೆ ಸೇರಲಿದೆ ಎಂದು ಹೇಳಿದೆ.

ಎಲ್‌ಐಸಿಗೆ ₹10,053 ಕೋಟಿ ಲಾಭ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ಭಾರತೀಯ ಜೀವ ವಿಮಾ ನಿಗಮದ (ಎಲ್‌ಐಸಿ) ನಿವ್ವಳ ಲಾಭದಲ್ಲಿ ಶೇ 32ರಷ್ಟು ಏರಿಕೆಯಾಗಿದ್ದು, ₹10,053 ಕೋಟಿ ಲಾಭ ಗಳಿಸಿದೆ.

ಕಳೆದ ಆರ್ಥಿಕ ವರ್ಷದ ಇದೇ ಅವಧಿಯಲ್ಲಿ ₹7,621 ಕೋಟಿ ಲಾಭ ಆಗಿತ್ತು ಎಂದು ನಿಗಮವು ಷೇರುಪೇಟೆಗೆ ಗುರುವಾರ ತಿಳಿಸಿದೆ.

ಒಟ್ಟು ವರಮಾನವು ₹2.39 ಲಕ್ಷ ಕೋಟಿಯಾಗಿದೆ. ಕಳೆದ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ವರಮಾನವು ₹2.29 ಲಕ್ಷ ಕೋಟಿಯಷ್ಟಿತ್ತು. ಕಂತುಗಳ ಮೂಲಕ ಗಳಿಸಿದ ವರಮಾನವು ₹1.19 ಲಕ್ಷ ಕೋಟಿಯಿಂದ ₹1.26 ಲಕ್ಷ ಕೋಟಿಗೆ ಹೆಚ್ಚಳವಾಗಿದೆ.

ಕಳೆದ ವರ್ಷದ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಮೊದಲ ವರ್ಷದ ಕಂತು ಮೂಲಕ ₹11,201 ಕೋಟಿ ಗಳಿಸಿತ್ತು. ಈ ಬಾರಿ ಅದು ₹10,836 ಕೋಟಿಗೆ ಇಳಿದಿದೆ ಎಂದು ತಿಳಿಸಿದೆ.

ರಾಜ್ಯದಲ್ಲೇ ಸಿದ್ಧವಾಗಲಿವೆ 'ಎಐ ಸರ್ವರ್'

ಬುರ್ಕಾನ್ ವರ್ಲ್ಡ್ ಇನ್‌ವೆಸ್ಟ್‌ಮೆಂಟ್ ಗ್ರೂಪ್‌ನಿಂದ ₹1,500 ಕೋಟಿ ಹೂಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೃತಕ ಬುದ್ಧಿಮತ್ತೆ ತಂತ್ರಜ್ಞಾನದಿಂದ ಕಾರ್ಯನಿರ್ವಹಿಸುವ ಅತ್ಯಾಧುನಿಕ 'ಎಐ ಸರ್ವರ್'ಗಳನ್ನು ಅಮೆರಿಕದ ಬುರ್ಕಾನ್ ವರ್ಲ್ಡ್ ಇನ್‌ವೆಸ್ಟ್‌ಮೆಂಟ್ ಗ್ರೂಪ್ ಕರ್ನಾಟಕದಲ್ಲೇ ತಯಾರಿಸಲಿದೆ.

ಬುರ್ಕಾನ್ ವರ್ಲ್ಡ್‌ನ ಅಧೀನ ಸಂಸ್ಥೆ ದಿ ಫಾಜಿ ಗ್ರೂಪ್ ಸಿಇಒ ಶಫಿ ಖಾನ್ ಅವರ ನೇತೃತ್ವದ ನಿಯೋಗದ ಜತೆ ಹೂಡಿಕೆ ಕುರಿತು ಗುರುವಾರ ಮಾತುಕತೆ ನಡೆಸಿದ ನಂತರ ಸುದ್ದಿಗಾರರ ಜತೆ ಮಾತನಾಡಿದ ಬೃಹತ್ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಅವರು ಈ ವಿಷಯ ತಿಳಿಸಿದರು.

ಅಮೆರಿಕದ ಮಿಯಾಮಿಯಲ್ಲಿ ಕೇಂದ್ರ ಕಚೇರಿ ಹೊಂದಿರುವ ಈ ಕಂಪನಿ ರಾಜ್ಯದಲ್ಲಿ ₹1,500 ಕೋಟಿ ಬಂಡವಾಳ ಹೂಡಲು ಮುಂದೆ ಬಂದಿದೆ. ದೇವನಹಳ್ಳಿ ಸಮೀಪ 10-15 ಎಕರೆ ಭೂಮಿ ನೀಡಲಾಗುವುದು. ಹೂಡಿಕೆಯಿಂದ ತಯಾರಿಕಾ ವಲಯದಲ್ಲಿ ಸಾಕಷ್ಟು ಉದ್ಯೋಗಗಳು ಸೃಷ್ಟಿಯಾಗಲಿವೆ ಎಂದು ಹೇಳಿದರು.

ಡೇಟಾ ಕೇಂದ್ರಗಳಲ್ಲಿ ಬಳಕೆಯಾಗುವ ಸರ್ವರ್‌ಗಳಿಗೆ ಬಹು ಬೇಡಿಕೆ ಇದೆ. ಇದಕ್ಕೆ ಸಂಬಂಧಿಸಿದ ತಂತ್ರಜ್ಞಾನ ಹಾಗೂ ಉಪಕರಣಗಳನ್ನು ಬೇರೆ ದೇಶಗಳಿಗೆ ರಫ್ತು ಮಾಡಲು ಸಹಕಾರ ನೀಡಲಾಗುವುದು. ಅತ್ಯಾಧುನಿಕ ಸಿಪಿಯು, ಜಿಪಿಯು, ಎಐ-ರೆಡಿ ನೆಟ್‌ವರ್ಕ್ ಸ್ವಿಚ್ ತಯಾರಿಕೆಯನ್ನೂ ಕಂಪನಿ ಆರಂಭಿಸಲಿದೆ. ಜಾಗತಿಕ ತಾಂತ್ರಿಕ ಪಾಲುದಾರ ಕಂಪನಿಗಳಾದ ಗಿಗಾಬೈಟ್ ಮತ್ತು ಸೆರಾ ನೆಟ್‌ವರ್ಕ್ ಸಹಯೋಗ ನೀಡಲಿವೆ. ಸೆಮಿಕಂಡಕ್ಟರ್, ಎಐ ಹಾರ್ಡ್-ವೇರ್, ಆಧುನಿಕ ಎಲೆಕ್ಟ್ರಾನಿಕ್ಸ್ ಕಾರ್ಯಪರಿಸರದ ಬಲವರ್ಧನೆ ಆಗಲಿದೆ. ಸ್ಥಳೀಯವಾಗಿ ಆರ್ ಆ್ಯಂಡ್ ಡಿ, ತಂತ್ರಜ್ಞಾನ ವರ್ಗಾವಣೆ, ಶಿಕ್ಷಣ ಸಂಸ್ಥೆಗಳು ಮತ್ತು ಇಲ್ಲಿಯ ಕೈಗಾರಿಕೆಗಳ ಸಹಭಾಗಿತ್ವ ಸಿಗಲಿದೆ ಎಂದರು.

ಶಾಸಕ ಯಾಸಿರ್ ಅಹಮದ್ ಪಠಾಣ್, ಕೈಗಾರಿಕಾ ಇಲಾಖೆ ಪ್ರಧಾನ ಕಾರ್ಯದರ್ಶಿ ಸೆಲ್ವಕುಮಾರ್, ಉದ್ಯೋಗ ಮಿತ್ರ ವ್ಯವಸ್ಥಾಪಕ ನಿರ್ದೇಶಕ ದೊಡ್ಡ ಬಸವರಾಜು, ಕ್ವಾಡ್-ಜೆನ್ ಕಂಪನಿ ಅಧ್ಯಕ್ಷ ಸಿ.ಎಸ್.ರಾವ್ ಇದ್ದರು.

ಚೆಕ್ ಹಸ್ತಾಂತರ

ಬೃಹತ್ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ, ಕರ್ನಾಟಕ ರಾಜ್ಯ ಮಾರ್ಕೆಟಿಂಗ್ ಕಮ್ಯೂನಿಕೇಷನ್ ಆ್ಯಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್‌ನ ಅಧ್ಯಕ್ಷ ಸತೀಶ್ ಸೈಲ್ ಅವರು, ಕಂಪನಿಯು ಸರ್ಕಾರಕ್ಕೆ ನೀಡುತ್ತಿರುವ ಲಾಭಾಂಶವಾದ ₹30.71 ಕೋಟಿಯ ಚೆಕ್ ಅನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಹಸ್ತಾಂತರಿಸಿದರು. ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ಮೊಹಮ್ಮದ್ ಅತೀಕ್‌ಉಲ್ಲಾ ಷರೀಫ್, ಕಂಪನಿಯ ಉಪ ಪ್ರಧಾನ ವ್ಯವಸ್ಥಾಪಕ ನಂದೀಶ ಪಿ.ಎಸ್. ಇದ್ದರು.

ಸೇವಾ ವಲಯ ಪ್ರಗತಿ ಇಳಿಕೆ

ನವದೆಹಲಿ (ಪಿಟಿಐ): 'ದೇಶದ ಸೇವಾ ವಲಯದ ಬೆಳವಣಿಗೆ ಅಕ್ಟೋಬರ್ ತಿಂಗಳಿನಲ್ಲಿ ಐದು ತಿಂಗಳ ಕನಿಷ್ಠ ಮಟ್ಟಕ್ಕೆ ಇಳಿಕೆ ಆಗಿದೆ' ಎಂದು ಎಸ್ ಆ್ಯಂಡ್ ಪಿ ಗ್ಲೋಬಲ್ ಸಂಸ್ಥೆಯ ಮಾಸಿಕ ಸಮೀಕ್ಷೆ ಗುರುವಾರ ತಿಳಿಸಿದೆ.

ಎಚ್‌ಎಸ್‌ಬಿಸಿ ಇಂಡಿಯಾ ಸರ್ವಿಸಸ್ ಪಿಎಂಐ ಬ್ಯುಸಿನೆಸ್ ಆ್ಯಕ್ಟಿವಿಟಿ ಸೂಚ್ಯಂಕವು ಸೆಪ್ಟೆಂಬರ್‌ನಲ್ಲಿ 60.9 ದಾಖಲಾಗಿತ್ತು. ಆದರೆ, ಅಕ್ಟೋಬರ್‌ನಲ್ಲಿ 58.9ಕ್ಕೆ ಇಳಿದಿದೆ.

'ಹೆಚ್ಚಿದ ಸ್ಪರ್ಧಾತ್ಮಕತೆಯ ಒತ್ತಡ ಮತ್ತು ಭಾರಿ ಮಳೆಯು ಚಟುವಟಿಕೆಯ ಇಳಿಕೆಗೆ ಕಾರಣವಾದವು. ಇದು ಸೂಚ್ಯಂಕ ಇಳಿಕೆಗೆ ದಾರಿ ಮಾಡಿಕೊಟ್ಟಿತು' ಎಂದು ಎಚ್‌ಎಸ್‌ಬಿಸಿ ಇಂಡಿಯಾದ ಮುಖ್ಯ ಅರ್ಥಶಾಸ್ತ್ರಜ್ಞೆ ಪ್ರಾಂಜುಲ್ ಭಂಡಾರಿ ಹೇಳಿದ್ದಾರೆ.

ಹೆಚ್ಚಿದ ಬೇಡಿಕೆ ಮತ್ತು ಜಿಎಸ್‌ಟಿ ದರ ಇಳಿಕೆಯಂತಹ ಅಂಶಗಳು ಕಾರ್ಯಾಚರಣೆಯ ಸ್ಥಿತಿ ಸುಧಾರಿಸಲು ನೆರವಾದವು. ಆದರೂ, ಸ್ಪರ್ಧಾತ್ಮಕತೆ ಮತ್ತು ಹೆಚ್ಚಿನ ಮಳೆಯಿಂದ ಬೆಳವಣಿಗೆಯು ನಿಧಾನವಾಯಿತು ಎಂದು ಹೇಳಿದ್ದಾರೆ.

ಅಡಿಕೆ ಧಾರಣೆ

ಚಿತ್ರದುರ್ಗ	
ಅಪಿ	55739-56169
ಬೆಟ್ಟೆ	34619-35059
ಕೆಂಪುಗೋಟು	30609-31010
ರಾಶಿ	55229-55689

ಕುಮಟಾ	
ಚಾಲಿ	37079-48299
ಚಿಪ್ಪು	22699-38359
ಕೋಕ	12309-35199
ಹಳೆಚಾಲಿ	45300-46699

ಪುತ್ತೂರು	
ಕೋಕ	20000-31500
ಹೊಸತು	26000-37000
ಹಳತು	45000-53500

ಸಾಗರ	
ಬಿಳಿಗೋಟು	12349-36858
ಚಾಲಿ	31299-43109
ಕೋಕ	11099-34299
ಕೆಂಪುಗೋಟು	22099-36499
ರಾಶಿ	30999-61299
ಸಿಪ್ಪೆಗೋಟು	8090-24009

ಶಿವಮೊಗ್ಗ	
ಬೆಟ್ಟೆ	56100-75499
ಗೊರಬಲು	19000-36699
ಹೊಸತು	55259-58199
ರಾಶಿ	40009-58789
ಸರಕು	60219-92896

ಸಿದ್ದಾಪುರ	
ಬಿಳಿಗೋಟು	26809-36129
ಚಾಲಿ	41009-48289
ಕೋಕ	20009-32289
ಕೆಂಪುಗೋಟು	26699-32099
ರಾಶಿ	47099-56799
ತಟ್ಟಿಬೆಟ್ಟೆ	31089-47899

ಶಿರಸಿ	
ಬೆಟ್ಟೆ	39189-54099
ಬಿಳಿಗೋಟು	32278-39099
ಚಾಲಿ	44599-49699
ಕೆಂಪುಗೋಟು	24199-32699
ರಾಶಿ	54099-59199

ಯಲ್ಲಾಪುರ	
ಅಪಿ	64965-73565
ಬಿಳಿಗೋಟು	16899-37059
ಚಾಲಿ	38969-49601
ಕೋಕ	14200-28812
ಕೆಂಪುಗೋಟು	18900-38499
ರಾಶಿ	46169-63499
ತಟ್ಟಿಬೆಟ್ಟೆ	38600-46169

ಎಸ್‌ಬಿಐ ಫಂಡ್ಸ್‌ನ ಷೇರು ಮಾರಾಟ

ನವದೆಹಲಿ (ಪಿಟಿಐ): ಎಸ್‌ಬಿಐ ಫಂಡ್ಸ್ ಮ್ಯಾನೇಜ್‌ಮೆಂಟ್ ಲಿಮಿಟೆಡ್‌ನಲ್ಲಿನ (ಎಸ್‌ಬಿಐಎಫ್‌ಎಂಎಲ್) ಶೇ 10ರಷ್ಟು ಷೇರನ್ನು ಸಾರ್ವಜನಿಕರಿಗೆ ಮಾರಾಟ ಮಾಡಲು (ಐಪಿಒ) ಭಾರತೀಯ ಸ್ಟೇಟ್ ಬ್ಯಾಂಕ್ ಮತ್ತು ಅಮುಂಡಿ ಇಂಡಿಯಾ ನಿರ್ಧರಿಸಿವೆ.

ಎಸ್‌ಬಿಐ ಫಂಡ್ಸ್ ಮ್ಯಾನೇಜ್‌ಮೆಂಟ್ ಲಿಮಿಟೆಡ್‌ನಲ್ಲಿನ ತನ್ನ ಷೇರುಗಳ ಪೈಕಿ 3.20 ಕೋಟಿ (ಶೇ 6.30ರಷ್ಟು) ಈಕ್ವಿಟಿ ಷೇರುಗಳನ್ನು ಐಪಿಒ ಮೂಲಕ ಮಾರಾಟ ಮಾಡಲು ಅನುಮೋದನೆ ನೀಡಲಾಗಿದೆ ಎಂದು ಭಾರತೀಯ ಸ್ಟೇಟ್ ಬ್ಯಾಂಕ್ (ಎಸ್‌ಬಿಐ) ಷೇರುಪೇಟೆಗೆ ತಿಳಿಸಿದೆ.

ಅಮುಂಡಿ ಇಂಡಿಯಾ ಸಹ ಎಸ್‌ಬಿಐಎಫ್‌ಎಂಎಲ್‌ನಲ್ಲಿನ 1.88 ಕೋಟಿ (ಶೇ 3.70ರಷ್ಟು) ಈಕ್ವಿಟಿ ಷೇರುಗಳನ್ನು ಮಾರಾಟ ಮಾಡಲು ಉದ್ದೇಶಿಸಿದೆ. ಇವೆರಡೂ ಕಂಪನಿಗಳು ಒಟ್ಟು 5.08 ಕೋಟಿ (ಶೇ 10) ಷೇರುಗಳನ್ನು ಮಾರಾಟ ಮಾಡಲಿವೆ. ಈ ಐಪಿಒ ಪ್ರಕ್ರಿಯೆ 2026ರಲ್ಲಿ ಪೂರ್ಣಗೊಳ್ಳುವ ನಿರೀಕ್ಷೆ ಇದೆ ಎಂದು ತಿಳಿಸಿವೆ.

ಮುಂಬೈ ಧಾರಣೆ (ಶೇಂಗಾ)

06-11-2025	
ಜಾವಾ 70/80(ಹೊಸ)	10300-10400
ಜಾವಾ 80/90(ಹೊಸ)	9600-9700
ದಪ್ಪ ಮಧ್ಯಪ್ರದೇಶ (ಹೊಸ)	7500-7600
ದಪ್ಪ ಗುಜರಾತ್ (ಹೊಸ)	8400-8500
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1420 (1420)
ಒಂದು ವಾರದ ಡೆಲಿವರಿ	1415 (1415)
ಪಾಮ್ ವಾರದ ಡೆಲಿವರಿ	1248 (1248)
ಸೂರ್ಯಕಾಂತಿ ಎಣ್ಣೆ ಕಚ್ಚಾ	1400 (1410)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,20,100 (1,19,600)
ಬೆಳ್ಳಿ ಕೆ.ಜಿಗೆ	1,48,100 (1,47,000)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಚಿನ್ನ, ಬೆಳ್ಳಿ ದರ ಏರಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಗುರುವಾರ ನಡೆದ ವಹಿವಾಟಿನಲ್ಲಿ ಚಿನ್ನ ಮತ್ತು ಬೆಳ್ಳಿ ಧಾರಣೆ ಏರಿಕೆ ಆಗಿದೆ.

10 ಗ್ರಾಂ ಚಿನ್ನದ (ಶೇ 99.9ರಷ್ಟು ಪರಿಶುದ್ಧತೆ) ದರವು ₹600ರಷ್ಟು ಹೆಚ್ಚಳವಾಗಿ, ₹1,24,700ರಂತೆ ಮಾರಾಟವಾಗಿದೆ. ಆಭರಣ ಚಿನ್ನದ (ಶೇ 99.5ರಷ್ಟು ಪರಿಶುದ್ಧತೆ) ಬೆಲೆ ಇಷ್ಟೇ ಪ್ರಮಾಣದಲ್ಲಿ ಏರಿಕೆಯಾಗಿ, ₹1,24,100 ಆಗಿದೆ. ಬೆಳ್ಳಿ ಧಾರಣೆ ಕೆ.ಜಿಗೆ ₹1,800 ಹೆಚ್ಚಳವಾಗಿ, ₹1,53,300ಕ್ಕೆ ತಲುಪಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ. ವರ್ತಕರಿಂದ ಚಿನ್ನದ ಖರೀದಿ ಹೆಚ್ಚಳವಾಗಿದೆ. ಇದು ಬೆಲೆ ಏರಿಕೆಗೆ ಕಾರಣ ಎಂದು ತಿಳಿಸಿದೆ.

ಅಮೆರಿಕನ್ ಗ್ಯಾಂಬಿಟ್ಸ್‌ಗೆ 'ಫೈಯರ್ಸ್' ಪ್ರಾಯೋಜಕತ್ವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ಲೋಬಲ್ ಚೆಸ್ ಲೀಗ್ ಫ್ರಾಂಚೈಸಿಯಾದ ಅಮೆರಿಕನ್ ಗ್ಯಾಂಬಿಟ್ಸ್ ತಂಡಕ್ಕೆ ಬ್ರೋಕರೇಜ್ ಕಂಪನಿಯಾದ ಫೈಯರ್ಸ್, ಮೂರು ವರ್ಷಗಳ ಅವಧಿಗೆ ಪ್ರಧಾನ ಪ್ರಾಯೋಜಕತ್ವ ವಹಿಸಿದೆ. ಗುರುವಾರ ನಗರದಲ್ಲಿ ನಡೆದ ಮಾಧ್ಯಮಗೋಷ್ಠಿಯಲ್ಲಿ ಇದನ್ನು ಘೋಷಿಸಲಾಯಿತು.

ಇದರ ಭಾಗವಾಗಿ, ಅಮೆರಿಕನ್ ಗ್ಯಾಂಬಿಟ್ಸ್‌ನ ಸಹ-ಮಾಲೀಕ ಪ್ರಚುರಾ ಪಿ.ಪಿ., ಫೈಯರ್ಸ್ ಸಿಇಒ ಮತ್ತು ಸಹ-ಸಂಸ್ಥಾಪಕ ತೇಜಸ್ ಖೋಡೆ ಮತ್ತು ಹಿರಿಯ ಉಪಾಧ್ಯಕ್ಷ ಮತ್ತು ಮಾರ್ಕೆಟಿಂಗ್ ಮುಖ್ಯಸ್ಥ ಲಕ್ಕಿ ಸೈನಿ ಅವರು ಅಮೆರಿಕನ್ ಗ್ಯಾಂಬಿಟ್ಸ್ ತಂಡದ ಅಧಿಕೃತ ಜರ್ಸಿಯನ್ನು ಅನಾವರಣಗೊಳಿಸಿದರು.

'ನಾವು ಚೆಸ್ ಪ್ರೇಮಿಗಳು. ಈ ಆಟ ಪ್ರೋತ್ಸಾಹಿಸುವವರು. ಇತ್ತೀಚೆಗಷ್ಟೇ ಕಚೇರಿಯಲ್ಲಿ ಟೂರ್ನಿ ನಡೆದಿತ್ತು' ಎಂದು ತೇಜಸ್ ಖೋಡೆ ಈ ಸಂದರ್ಭದಲ್ಲಿ ಸಂತಸ ಹಂಚಿಕೊಂಡರು. ವೃತ್ತಿಪರರಲ್ಲದಿದ್ದರೂ ಹವ್ಯಾಸಕ್ಕೆ ತೇಜಸ್ ಅವರು ಚೆಸ್ ಆಡುತ್ತಾರೆ ಎಂದು ಪ್ರಚುರಾ ಅವರು ಹೇಳಿದರು.

ಗ್ಲೋಬಲ್ ಚೆಸ್ ಲೀಗ್ ಡಿಸೆಂಬರ್ 13ರಿಂದ ನಡೆಯಲಿದೆ. ಕ್ರಿಕೆಟಿಗ ರವಿಚಂದ್ರನ್ ಅಶ್ವಿನ್ ಅವರು ಗ್ಯಾಂಬಿಟ್ಸ್ ತಂಡದ ಸಹ ಮಾಲೀಕರಾಗಿದ್ದಾರೆ.

ತಂಡದಲ್ಲಿ ಭಾರತದ ಆಟಗಾರರಿಲ್ಲದಿರುವ ಬಗ್ಗೆ ಕೇಳಿದ ಪ್ರಶ್ನೆಗೆ, 'ಆಕ್ಷನ್‌ನಲ್ಲಿ ನಾವೂ ಭಾರತದ ಆಟಗಾರರನ್ನು ಪಡೆಯಲು ಪ್ರಯತ್ನಿಸಿದೆವು. ಆದರೆ ಬೇಡಿಕೆಯ ಪೈಪೋಟಿಯಲ್ಲಿ ನಮ್ಮ ಯತ್ನ ಕೈಗೂಡಲಿಲ್ಲ' ಎಂದು ಪ್ರಚುರಾ ತಿಳಿಸಿದರು.

ಬೆಂಗಳೂರಿನಲ್ಲಿ ಗುರುವಾರ, ಗ್ಲೋಬಲ್ ಚೆಸ್ ಲೀಗ್ ಫ್ರಾಂಚೈಸಿಯಾದ ಅಮೆರಿಕನ್ ಗ್ಯಾಂಬಿಟ್ಸ್ ತಂಡದ ಜರ್ಸಿ ಅನಾವರಣ ಕಾರ್ಯಕ್ರಮದಲ್ಲಿ ಫ್ರಾಂಚೈಸಿಯ ಸಹ ಮಾಲೀಕ ಪಿ.ಪಿ.ಪ್ರಚುರಾ, ತಂಡದ ಪ್ರಧಾನ ಪ್ರಾಯೋಜಕರಾದ ಫೈಯರ್ಸ್ ಬ್ರೋಕರೇಜ್‌ನ ಸಿಇಒ ತೇಜಸ್ ಖೋಡೆ, ಹಿರಿಯ ಉಪಾಧ್ಯಕ್ಷ ಲಕ್ಕಿ ಸೈನಿ ಅವರು ಪಾಲ್ಗೊಂಡಿದ್ದರು ಪ್ರಜಾವಾಣಿ ಚಿತ್ರ

ಸದ್ಯ ಯಾವ ಕ್ರಾಂತಿಯೂ ಇಲ್ಲ: ಡಿಕೆಶಿ

ಒಂದನೇ ಪುಟದಿಂದ...

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಭೇಟಿ ಮಾಡುತ್ತೀರಾ ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, 'ನಾನು ಯಾರನ್ನೂ ಭೇಟಿ ಮಾಡುವುದಿಲ್ಲ. ನನ್ನ ಬಳಿ ಯಾರೂ ಸಚಿವ ಸಂಪುಟ ವಿಸ್ತರಣೆ ಬಗ್ಗೆ ಚರ್ಚೆ ಮಾಡಿಲ್ಲ. ಸಚಿವ ಸಂಪುಟ ವಿಸ್ತರಣೆ ಮುಖ್ಯಮಂತ್ರಿಯವರ ಪರಮಾಧಿಕಾರ. ನನಗೆ ಯಾವುದೇ ನಾಯಕರನ್ನು ಭೇಟಿ ಮಾಡುವ ಕಾರ್ಯಕ್ರಮ ಇಲ್ಲ' ಎಂದು ಸ್ಪಷ್ಟಪಡಿಸಿದರು.

'ಸಂಪುಟ ವಿಸ್ತರಣೆ ಹಾಗೂ ನಾಯಕತ್ವ ಬದಲಾವಣೆ ವಿಚಾರ ಚರ್ಚೆ ಏನಿದ್ದರೂ ನಿಮ್ಮದು (ಮಾಧ್ಯಮ). ನಾಯಕತ್ವ ಬದಲಾವಣೆ ಬಗ್ಗೆ ನಾನು ಏನಾದರೂ ಹೇಳಿದ್ದೇನಾ? ಮುಖ್ಯಮಂತ್ರಿಯವರು ಏನಾದರೂ ಹೇಳಿದ್ದಾರಾ? ಪಕ್ಷ ಏನು ಹೇಳುತ್ತದೆಯೋ ಅದನ್ನು ಕೇಳಿಕೊಂಡು ಹೋಗುತ್ತೇವೆ ಎಂದು ಸ್ಪಷ್ಟಪಡಿಸಿದ್ದೇವೆ. ನಾನು ಪಕ್ಷದ ಶಿಸ್ತಿನ ಸಿಪಾಯಿ. ಪಕ್ಷದ ಗೆರೆ ಬಿಟ್ಟು ನಾನು ಎಂದಿಗೂ ಹೋಗುವುದಿಲ್ಲ' ಎಂದು ತಿಳಿಸಿದರು.

'ಪಕ್ಷ ಸಂಘಟನೆ ವಿಚಾರವಾಗಿ ರಾಷ್ಟ್ರೀಯ ನಾಯಕರೊಂದಿಗೆ ಚರ್ಚೆ ಮಾಡುತ್ತೇನೆ. ಮತಗಳ್ಳತನ ವಿಚಾರವಾಗಿ ಬುಧವಾರ ರಾತ್ರಿ ಹಾಗೂ ಗುರುವಾರ ಬೆಳಿಗ್ಗೆ ಸಭೆ ಮಾಡಿದ್ದೇವೆ' ಎಂದರು.

ಸಂಪುಟ ಸೇರ್ಪಡೆಯ ಆಕಾಂಕ್ಷೆಯಲ್ಲಿ ಇರುವವರಿಗೆ ಏನು ಹೇಳುತ್ತೀರಾ ಎಂದು ಕೇಳಿದಾಗ, 'ಅದೆಲ್ಲವನ್ನೂ ದೆಹಲಿ ನಾಯಕರು ಯಾವಾಗ, ಯಾವ ರೀತಿ ಮಾಡಬೇಕೋ ಮಾಡುತ್ತಾರೆ' ಎಂದರು.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

JOB OPPORTUNITIES

Multiple Vacancy

ಉದ್ಯೋಗಾವಕಾಶ

General

ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th, PUC, ITI, Degree. ಸಂಬಳ 16,000-86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

ಕಂಪನಿಗಳಿಗೆ ಬೇಕಾಗಿದ್ದಾರೆ.7TH, PUC, Degree, ಡಿಪ್ಲೋಮಾದವರು ಯುವಕ, ಯುವತಿಯರಿಗೆ ಸಂಬಳ 18,000- 45,000 (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9916788422

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ,ತಿಂಗಳಿಗೆ, 15,000.ರಿಂದ 20,000. ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777503, 8884777502.

ಮನೆಯಿಂದಲೇ ಕೆಲಸ Part Time/Full Time ವರ್ಕ್ ಗಳಿಗೆ ಯುವಕರು, ಯುವತಿಯರು ಬೇಕಾಗಿದ್ದಾರೆ. 18,000/ 25,000. ಕೊರಿಯರ್ ಸೌಲಭ್ಯವಿದೆ. 8095043191

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ)	₹433-675
ದ್ವಿತಳಿ (ಬಿ.ವಿ)	₹476-808

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹28000-28000
ತಿಪಟೂರು	₹27004-29000

'8 ಯುದ್ಧ ವಿಮಾನ ಹೊಡೆದು ಉರುಳಿಸಲಾಗಿದೆ'

ನ್ಯೂಯಾರ್ಕ್ (ಪಿಟಿಐ): 'ಕಳೆದ ಮೇ ತಿಂಗಳಲ್ಲಿ ಭಾರತ ಹಾಗೂ ಪಾಕಿಸ್ತಾನದ ನಡುವೆ ನಡೆದ ಸಂಘರ್ಷದಲ್ಲಿ 8 ಯುದ್ಧ ವಿಮಾನಗಳನ್ನು ಹೊಡೆದು ಉರುಳಿಸಲಾಗಿದೆ' ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ತಿಳಿಸಿದ್ದಾರೆ. ಆದರೆ, ಯಾವ ದೇಶಕ್ಕೆ ಸೇರಿದ ವಿಮಾನ ಎಂಬುದನ್ನು ಸ್ಪಷ್ಟಪಡಿಸಿಲ್ಲ.

ಡೊನಾಲ್ಡ್ ಟ್ರಂಪ್

ಫ್ಲಾರಿಡಾದ ಮಿಯಾಮಿಯಲ್ಲಿ ನಡೆದ ಅಮೆರಿಕ ವ್ಯಾಪಾರ ವೇದಿಕೆ ಉದ್ದೇಶಿಸಿ ಮಾತನಾಡಿದ ಅವರು, 'ಸಂಘರ್ಷದ ವೇಳೆ ಏಳರಿಂದ ಎಂಟು ಯುದ್ಧ ವಿಮಾನಗಳನ್ನು ಹೊಡೆದುರುಳಿಸಲಾಗಿದೆ' ಎಂದು ತಿಳಿಸಿದ್ದಾರೆ.

'ಇಲ್ಲಿಯವರೆಗೂ 7 ಯುದ್ಧ ವಿಮಾನಗಳನ್ನು ಹೊಡೆದುರುಳಿಸಲಾಗಿದೆ' ಎಂದು ಟ್ರಂಪ್ ಹೇಳುತ್ತಿದ್ದರು.

'ಪಾಕಿಸ್ತಾನ-ಭಾರತದ ಸಂಘರ್ಷದ ವೇಳೆ ಎರಡೂ ದೇಶಗಳೊಟ್ಟಿಗೆ ನಾನು ವ್ಯಾಪಾರ ಒಪ್ಪಂದದಲ್ಲಿದ್ದೆ. ಆ ದೇಶಗಳು ಯುದ್ಧಕ್ಕೆ ಮುಂದಾಗಲಿವೆ ಎಂದು ತಿಳಿಯಿತು. ಏಳು ವಿಮಾನಗಳನ್ನು ಹೊಡೆದುರುಳಿಸಲಾಗಿತ್ತು. ಎಂಟನೇ ವಿಮಾನಕ್ಕೆ ತೀವ್ರವಾಗಿ ಹಾನಿ ಉಂಟಾಗಿತ್ತು. ಒಟ್ಟಾರೆ ಎಂಟು ಯುದ್ಧ ವಿಮಾನಗಳನ್ನು ಹೊಡೆದುರುಳಿಸಲಾಗಿದೆ' ಎಂದು ಹೇಳಿದ್ದಾರೆ.

ಪುನರುಚ್ಚಾರ: 'ಪಾಕಿಸ್ತಾನ-ಭಾರತದ ನಡುವೆ ಸಂಘರ್ಷ ಕೊನೆಗೊಳಿಸಿದ್ದು ನಾನೇ' ಎಂದು ಪುನರುಚ್ಚರಿಸಿರುವ ಅಧ್ಯಕ್ಷ ಡೊನಾಲ್ಡ್ ಟ್ರಂಪ್, 'ಒಂದೊಮ್ಮೆ ಸೇನಾ ಸಂಘರ್ಷ ಮುಂದುವರಿಸಿದರೆ, ಎಲ್ಲ ವ್ಯಾಪಾರ ಒಪ್ಪಂದಗಳನ್ನು ರದ್ದುಪಡಿಸಲಾಗುವುದು ಎಂದು ಉಭಯ ರಾಷ್ಟ್ರಗಳನ್ನು ಎಚ್ಚರಿಸಿದ್ದೆ. ಇದಾದ ಬಳಿಕವೇ ಎರಡು ದೇಶಗಳೂ ಶಾಂತಿ ಒಪ್ಪಂದಕ್ಕೆ ಮುಂದಾದವು' ಎಂದು ಹೇಳಿದ್ದಾರೆ.

ಜೊಹ್ರಾನ್ ಮಮ್ದಾನಿ ಗೆಲುವು ಸಂಭ್ರಮಿಸಿದ ಭಾರತೀಯ ಅಮೆರಿಕನ್ನರು

'ಅಮೆರಿಕ ರಾಜಕೀಯದಲ್ಲಿ ಹೊಸ ಯುಗ'

ನ್ಯೂಯಾರ್ಕ್ (ಪಿಟಿಐ): ನ್ಯೂಯಾರ್ಕ್ ನಗರದ ಮೇಯರ್ ಆಗಿ ಆಯ್ಕೆಯಾದ ಜೊಹ್ರಾನ್ ಮಮ್ದಾನಿ ಅವರ ಗೆಲುವಿಗೆ ಭಾರತೀಯ–ಅಮೆರಿಕನ್ ವಲಸಿಗರು ಹರ್ಷ ವ್ಯಕ್ತಪಡಿಸಿದ್ದಾರೆ. ಈ ಗೆಲುವನ್ನು ಐತಿಹಾಸಿಕ ಎಂದು ಬಣ್ಣಿಸಿರುವ ಅವರು, 'ವಲಸಿಗರಿಗೆ ಸಿಗುತ್ತಿರುವ ಮನ್ನಣೆಯ ಸಂಕೇತ ಇದಾಗಿದೆ' ಎಂದು ಹೇಳಿದ್ದಾರೆ.

ನ್ಯೂಯಾರ್ಕ್ ಮೂಲದ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಸಂಸ್ಥೆಯ ಸ್ಥಾಪಕಿ ಅನು ಸೆಹಗಲ್ ಬುಧವಾರ ಮಾತನಾಡಿ, 'ಈ ಗೆಲುವಿನ ನಂತರ ಹೊಸಯುಗ ಉದಯವಾದಂತೆ ಭಾಸವಾಯಿತು' ಎಂದು ಹೇಳಿದ್ದಾರೆ.

ವಿಜಯೋತ್ಸವದ ವೇಳೆ ಜೊಹ್ರಾನ್ ಅವರು ಮಾಡಿರುವ ಭಾಷಣವು, ನ್ಯೂಯಾರ್ಕ್ ನಗರವು ಇಲ್ಲಿಗೆ ಬರುವ ಶ್ರಮಿಕರ ದುಡಿಮೆ ಮತ್ತು ಶ್ರಮದಿಂದ ರೂಪುಗೊಳ್ಳು-ತ್ತದೆ ಎಂಬ ವಲಸಿಗರ ಪರವಾದ ನಂಬಿಕೆಯನ್ನು ಪ್ರತಿಬಿಂಬಿಸುತ್ತದೆ. ಜೊತೆಗೆ, ನೆಹರೂ ಅವರನ್ನು ಉಲ್ಲೇಖಿಸುವುದರಿಂದ ಹಿಡಿದು 'ಧೂಮ್ ಮಚಾಲೆ' ಹಾಡಿನವರೆಗೆ ನಮ್ಮ ಸಮುದಾಯ ಮಾತ್ರ ಗುರುತಿಸುವ ಸಾಂಸ್ಕೃತಿಕ ಸಂಕೇತಗಳಿಂದ ಭಾಷಣವು ತುಂಬಿತ್ತು...' ಎಂದಿದ್ದಾರೆ.

ದಕ್ಷಿಣ ಏಷ್ಯಾ ಸಮುದಾಯದ ನಾಯಕ ಮತ್ತು ನಸ್ಸೌ ಕೌಂಟಿಯ ಮಾಜಿ ಉಪ ನಿಯಂತ್ರಣಾಧಿಕಾರಿ ದಿಲೀಪ್ ಚೌಹಾಣ್ ಅವರು ಮಮ್ದಾನಿ ಅವರನ್ನು ಅಭಿನಂದಿಸುತ್ತಾ, 'ಸಾರ್ವಜನಿಕ ಸೇವೆಗೆ ಮೀಸಲಾಗಿರುವ ಮತ್ತು ನಗರದ ಬಗ್ಗೆ ಬದ್ಧತೆಯಿರುವ ದಕ್ಷಿಣ ಏಷ್ಯಾದ ಅಮೆರಿಕನ್ ಸಹೋದ್ಯೋಗಿಯನ್ನು ನೋಡಿ ಸಂತೋಷವಾಯಿತು' ಎಂದು ಹೇಳಿದ್ದಾರೆ.

ಸಾಮುದಾಯಿಕ ಸಂಘಟನೆಯಾದ ಇಂಡಿಯನ್ ಅಮೆರಿಕನ್ ಇಂಪ್ಯಾಕ್ಟ್ ಫಂಡ್, ವರ್ಜೀನಿಯಾದ ಲೆಫ್ಟಿನೆಂಟ್ ಗವರ್ನರ್ ಗಜಾಲಾ ಹಶ್ಮಿ ಮತ್ತು ನ್ಯೂಯಾರ್ಕ್ ಮೇಯರ್ ಜೊಹ್ರಾನ್ ಸೇರಿದಂತೆ ಅಮೆರಿಕಾದಾದ್ಯಂತ ತಾನು ಅನುಮೋದಿಸಿದ 19 ಮಂದಿ ಚುನಾವಣೆಗಳಲ್ಲಿ ಗೆದ್ದಿದ್ದಾರೆ ಎಂದು ಸಂತಸ ವ್ಯಕ್ತಪಡಿಸಿದೆ.

ನ್ಯೂಯಾರ್ಕ್‌ನ ನೂತನ ಮೇಯರ್ ಆಗಿ ಆಯ್ಕೆಯಾದ ಜೊಹ್ರಾನ್ ಮಮ್ದಾನಿ ಜೊತೆಗೆ ದಕ್ಷಿಣ ಏಷ್ಯಾ ಸಮುದಾಯದ ನಾಯಕ ದಿಲೀಪ್ ಚೌಹಾಣ್ ಪಿಟಿಐ ಚಿತ್ರ

> ಮಮ್ದಾನಿ ಭವಿಷ್ಯದ ಭರವಸೆಯ ಬೆಳಕಾಗಿದ್ದಾರೆ. ಅವರು ಪ್ರತಿಯೊಬ್ಬ ವಲಸಿಗರಿಗೂ ಮಾದರಿಯಾಗಿ ನಿಲ್ಲುತ್ತಾರೆ. ಅವರ ಉನ್ನತಿಗಾಗಿ ಶುಭ ಹಾರೈಸುತ್ತೇನೆ
>
> **ದಿಲೀಪ್ ಚೌಹಾಣ್,** ದಕ್ಷಿಣ ಏಷ್ಯಾ ಸಮುದಾಯದ ನಾಯಕ

> ದಕ್ಷಿಣ ಏಷ್ಯಾದ ಅಮೆರಿಕನ್ನರು ಈ ದೇಶದ ರಾಜಕೀಯ ಭವಿಷ್ಯದ ಭಾಗವಾಗಿದ್ದಾರೆ ಎಂಬುವುದನ್ನು ಮಂಗಳವಾರದ ಫಲಿತಾಂಶಗಳು ಸಾಬೀತುಪಡಿಸಿವೆ
>
> **ಇಂಡಿಯನ್ ಅಮೆರಿಕನ್ ಇಂಪ್ಯಾಕ್ಟ್ ಫಂಡ್, ಸಾಮುದಾಯಿಕ ಸಂಘಟನೆ**

ಮಮ್ದಾನಿ ವಿರುದ್ಧ ಟ್ರಂಪ್ ಕಿಡಿ

ನ್ಯೂಯಾರ್ಕ್‌ನ ನೂತನ ಮೇಯರ್ ಆಗಿ ಆಯ್ಕೆಯಾದ ಜೊಹ್ರಾನ್ ಮಮ್ದಾನಿ ಆಯ್ಕೆ ಕುರಿತು ವ್ಯಂಗ್ಯವಾಡಿದ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, 'ಮುಂದೆ ನ್ಯೂಯಾರ್ಕ್ ಎಷ್ಟು ಹಾಳಾಗಲಿದೆ ಎನ್ನುವುದನ್ನು ಗಮನಿಸುವಿರಿ' ಎಂದು ಪ್ರತಿಕ್ರಿಯಿಸಿದ್ದಾರೆ.

'ಅವರ ಹೆಸರು ಏನೇ ಇರಲಿ, ನವೆಂಬರ್ 4ರ ಚುನಾವಣೆಯ ನಂತರ ಅಮೆರಿಕನ್ನರು ಕಮ್ಯೂನಿಸಂ ಹಾಗೂ ಸಾಮಾನ್ಯ ಜ್ಞಾನದ ನಡುವೆ ಕಠಿಣ ಆಯ್ಕೆಯನ್ನು ಎದುರಿಸುತ್ತಿದ್ದಾರೆ' ಎಂದು ತಿಳಿಸಿದ್ದಾರೆ.

'ಕಳೆದ ವರ್ಷ ನವೆಂಬರ್ 5ರಂದು ಎರಡನೇ ಅವಧಿಗೆ ನನ್ನನ್ನು ಅಧ್ಯಕ್ಷರನ್ನಾಗಿ ಆಯ್ಕೆ ಮಾಡುವ ಮೂಲಕ ದೇಶದ ಸಾರ್ವಭೌಮತ್ವವನ್ನು ಎತ್ತಿಹಿಡಿದಿದ್ದರು. ಮಂಗಳವಾರ ನಡೆದ ಮೇಯರ್ ಚುನಾವಣೆ ಸಂದರ್ಭಲ್ಲಿ ಜನರ ವಿವೇಚನೆ ಸ್ವಲ್ಪ ಕಡಿಮೆಯಾಯಿತು' ಎಂದು ಹೇಳಿದ್ದಾರೆ.

'ಬಲಪಂಥೀಯ ಚಳವಳಿ, ಟ್ರಂಪ್ ನೀತಿಗಳಿಗೆ ನ್ಯೂಯಾರ್ಕ್ ಉತ್ತರ'

ನವದೆಹಲಿ (ಪಿಟಿಐ): 'ನ್ಯೂಯಾರ್ಕ್ ನಗರದ ಮೇಯರ್ ಚುನಾವಣೆಯಲ್ಲಿ ಭಾರತ ಸಂಜಾತ ಜೊಹ್ರಾನ್ ಮಮ್ದಾನಿ ಅವರ ಗೆಲುವು, ಅಮೆರಿಕದ ಬಲಪಂಥೀಯ ಚಳವಳಿಗಳಿಗೆ ಮತ್ತು ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ನೀತಿಗಳಿಗೆ ನ್ಯೂಯಾರ್ಕ್ ನಗರದ ಉತ್ತರವಾಗಿದೆ' ಎಂದು ಮಾಜಿ ಭಾರತೀಯ ರಾಯಭಾರಿ ವೇಣು ರಾಜಮಣಿ ಹೇಳಿದ್ದಾರೆ.

'ಪ್ರಚಾರದ ಸಮಯದಲ್ಲಿ ಮಮ್ದಾನಿ ನೀಡಿದ ಮಹತ್ವಾಕಾಂಕ್ಷೆಯ ಭರವಸೆಗಳನ್ನು ಹೇಗೆ ಈಡೇರಿಸುತ್ತಾರೆ ಎಂಬುದನ್ನು ಕಾದು ನೋಡಬೇಕಿದೆ' ಎಂದೂ ಹೇಳಿದ್ದಾರೆ.

'ಮಮ್ದಾನಿ ಅವರು ನ್ಯೂಯಾರ್ಕ್ ನಗರದ ಜನರಿಗೆ ಅಗತ್ಯವಿರುವ ದಿನಬಳಕೆ ವಸ್ತುಗಳ ಬೆಲೆ ಏರಿಕೆ ವಿಷಯವನ್ನೇ ಎತ್ತಿಕೊಂಡು ಚುನಾವಣೆಯನ್ನು ಎದುರಿಸಿದರು. ಇದು ಸಹ ಗೆಲುವಿಗೆ ಪ್ರಮುಖ ಕಾರಣವಾಯಿತು' ಎಂದು ಮಾಜಿ ರಾಯಭಾರಿ ಅಶೋಕ್ ಕಾಂತಾ ಹೇಳಿದ್ದಾರೆ.

ಅಲ್ಲದೆ, ಇದನ್ನು 'ಐತಿಹಾಸಿಕ ಗೆಲುವು' ಎಂದು ಅಂತರರಾಷ್ಟ್ರೀಯ ವ್ಯವಹಾರಗಳ ತಜ್ಞರು ಬಣ್ಣಿಸಿದ್ದಾರೆ.

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

(ಸಿಐಎನ್: ಯು40109ಕೆಎ1999ಎಸ್‌ಜಿಸಿ025521)

ಸಂ: ಮುಪ್ರವ್ಯ(ತಾಂತ್ರಿಕ)/ಪಿಎಸ್/2025-26 ದಿನಾಂಕ: 05.11.2025

ಸಂಕ್ಷಿಪ್ತ ಟೆಂಡರ್ ಪ್ರಕಟಣೆ (KPP ಪೋರ್ಟಲ್ ಮೂಲಕ ಮಾತ್ರ)

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು ಈ ಕೆಳಕಂಡ ವಿಚಾರಣೆ ಸಂಖ್ಯೆ ಮೂಲಕ ಕೆಳಕಂಡ ಕೆಲಸಕ್ಕೆ ಎಲೆಕ್ಟ್ರಾನಿಕ್ ವಿಧಾನದ ಮೂಲಕ ಬಿಡ್‌ಗಳನ್ನು ಆಹ್ವಾನಿಸಿದೆ:

ವಿಚಾರಣೆ ಸಂಖ್ಯೆ/ಕಾಮಗಾರಿ ವಿವರ

ಕವಿಪ್ರನಿನಿ/2025-26/ಒಡಬ್ಲ್ಯು/ವರ್ಕ್_ಇಂಡೆಂಟ್2952

ದರ ಒಪ್ಪಂದ ಆಧಾರದ ಮೇಲೆ 31.5MVA ಮತ್ತು ಕಡಿಮೆ ಸಾಮರ್ಥ್ಯದ ಪರಿವರ್ತಕಗಳನ್ನು ಡಿಸ್‌ಮ್ಯಾಂಟಲ್ ಮಾಡುವುದು, ಸಾಗಿಸುವುದು(to & fro), ರಿಪೇರಿ ಮಾಡುವುದು, ಪರೀಕ್ಷಿಸುವುದು, ಜೋಡಣೆ ಮಾಡಿ ಸ್ಥಾಪಿಸುವುದು ಮತ್ತು ಕವಿಪ್ರನಿನಿಯು ನಿಯೋಜಿಸಿದ ವಿದ್ಯುತ್ ವಿತರಣಾ ಕೇಂದ್ರದಲ್ಲಿ ಕಾರ್ಯಾರಂಭಗೊಳಿಸುವುದು.

ಬಿಡ್‌ಗಳನ್ನು ಎಲೆಕ್ಟ್ರಾನಿಕ್ ಟೆಂಡರಿಂಗ್ ವಿಧಾನದ ಮೂಲಕ ಮಾತ್ರ ಸ್ವೀಕರಿಸಲಾಗುವುದು. ಇ-ಟೆಂಡರಿಂಗ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತಾದ ವಿವರಗಳನ್ನು ಕವಿಪ್ರನಿನಿಯ ವೆಬ್‌ಸೈಟ್ **https://kptcl.karnataka.gov.in** ನ ಹೈಪರ್‌ಲಿಂಕ್ **'E Procurement KPTCL'** ಅಥವಾ **https://kppp.karnataka.gov.in** ನಲ್ಲಿ ಲಾಗಿನ್ ಆಗಿ **ದಿನಾಂಕ 10.11.2025 ರಂದು ಅಪರಾಹ್ನ 15.00 ಗಂಟೆ ಅಥವಾ ನಂತರದಿಂದ** ಪಡೆಯಬಹುದು. ಬಿಡ್ ಸಲ್ಲಿಕೆಗೆ ಕೊನೆಯ ದಿನಾಂಕ **09.12.2025 ಅಪರಾಹ್ನ 15.00 ಗಂಟೆ**. ಬಿಡ್ ಸಲ್ಲಿಕೆಯ ಕೊನೆಯ ದಿನಾಂಕವನ್ನು ವಿಸ್ತರಿಸಿದಲ್ಲಿ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ತಿಳಿಸಲಾಗುವುದು. ಇದಕ್ಕೆ ಸಂಬಂಧಿಸಿದಂತೆ ಇತರೆ ಹೆಚ್ಚಿನ ಮಾಹಿತಿಗಳು ಬೇಕಾದಲ್ಲಿ ಕೆಳ ಸಹಿದಾರರ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದಾಗಿದೆ.

ಬಿಡ್ಡುದಾರರು ಬಿಡ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕದ ಮುನ್ನ ಪ್ರಕಟಿಸುವ ಎಲ್ಲಾ ತಿದ್ದುಪಡಿಗಳು/ಸೇರ್ಪಡೆಗಳನ್ನು ಗಮನಿಸತಕ್ಕದ್ದು.

ಸಹಿ/-ಮುಖ್ಯ ಪ್ರಧಾನ ವ್ಯವಸ್ಥಾಪಕರು(ತಾಂತ್ರಿಕ), ಕವಿಪ್ರನಿನಿ, ನಿಗಮ ಕಾರ್ಯಾಲಯ, ಕಾವೇರಿ ಭವನ, ಬೆಂಗಳೂರು-560009.

ಬೆಂಗಳೂರು ಕೇಂದ್ರ ನಗರ ಪಾಲಿಕೆ-ವಲಯ-2

ಕಾರ್ಯಪಾಲಕ ಅಭಿಯಂತರರ ಕಛೇರಿ, ಚಾಮರಾಜಪೇಟೆ ವಿಭಾಗ, ಬಿಬಿಎಂಪಿ ಅಂಗನವಾಡಿ ಸೆಂಟರ್, 2ನೇ ಮೇನ್, ಟಿ.ಆರ್.ಮಿಲ್ ರಸ್ತೆ, ಬೆಂಗಳೂರು-560018

ನಂ.: ಕಾಪಾ/ಸಿಎಂಪಿ/ಟೆಂಡರ್/ಇ-ಪ್ರೊಕ್ಯೂರ್/10/2025-26 ದಿನಾಂಕ : 06.11.2025

ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)

(ಅಲ್ಪಾವಧಿ ಟೆಂಡರ್ ಪ್ರಕಟಣೆ : ದ್ವಿಲಕೋಟೆ ಪದ್ಧತಿ)

(ಕೆಪಿಪಿ ಪೋರ್ಟಲ್ https://kppp.karnataka.gov.in ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಚಾಮರಾಜಪೇಟೆ ವಿಭಾಗ, ಬೆಂಗಳೂರು ಕೇಂದ್ರ ನಗರ ಪಾಲಿಕೆಯಲ್ಲಿ ನೋಂದಾಯಿಸಲಾದ ಅರ್ಹ ಗುತ್ತಿಗೆದಾರರಿಂದ ಅಥವಾ / ಕೆಪಿಡಬ್ಲ್ಯೂಡಿ / ಸಿಪಿಡಬ್ಲ್ಯೂಡಿ/ ರೈಲ್ವೆಗಳು / ಎಂಇಎಸ್ / ರಾಷ್ಟ್ರೀಯ ಹೆದ್ದಾರಿ ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳ ವರ್ಗ-1 ರಲ್ಲಿ ನೊಂದಾಯಿಸಲಾದ ಅರ್ಹ ಗುತ್ತಿಗೆದಾರರಿಂದ ಕೆಳಗಿನ ಕೋಷ್ಟಕದಲ್ಲಿ ವಿವರಿಸಲಾದ ಕಾಮಗಾರಿಯ ನಿರ್ಮಾಣಕ್ಕಾಗಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಕ್ರ. ಸಂ.	ಕಾಮಗಾರಿಯ ಹೆಸರು
1.	ರಾಯಪುರಂನಲ್ಲಿ ಬಿಬಿಎಂಪಿ ಬಾಲಕಿಯರ ಪ್ರೌಢಶಾಲೆಯ ಹಂತ-2ರ ನಿರ್ಮಾಣ ಮತ್ತು ಚಾಮರಾಜಪೇಟೆ ವಿಭಾಗದ ರಾಯಪುರಂ, ಆಜಾದ್‌ನಗರ, ಚಾಮರಾಜಪೇಟೆ ಮತ್ತು ಎಸ್‌ಕೆಆರ್ ಮಾರುಕಟ್ಟೆ ವಾರ್ಡ್‌ಗಳಲ್ಲಿ ಅಡ್ಡಲಾಗಿ ಚರಂಡಿ ರಚನೆ ಸೇರಿದಂತೆ ರಸ್ತೆ ಪಾದಚಾರಿ ಮಾರ್ಗ, ಒಳಚರಂಡಿ ವ್ಯವಸ್ಥೆಯ ಸುಧಾರಣೆ. **ಜಿಎಸ್‌ಟಿ ಸೇರಿದಂತೆ ಅಂದಾಜು ವೆಚ್ಚ: ರೂ. 2200.00 ಲಕ್ಷಗಳು, ಇಎಂಡಿ ಮೊತ್ತ : ರೂ. 19.00 ಲಕ್ಷಗಳು (ರೂ.1.00 ಲಕ್ಷ ಆನ್‌ಲೈನ್‌ನಲ್ಲಿ ಉಳಿದಿರುವ ಬ್ಯಾಲೆನ್ಸ್ ಬಿಜಿ/ಎಫ್‌ಡಿಆರ್ ಜೊತೆಗೆ)**
2.	ಚಾಮರಾಜಪೇಟೆ ವಿಭಾಗದ ಆರ್ಟಿಫೀಸಿಯಲ್ ಮತ್ತು ಸಬ್ ಆರ್ಟಿಫೀಸಿಯಲ್ ರಸ್ತೆಗಳಲ್ಲಿ ಸಂಚಾರ ಜಂಕ್ಷನ್‌ಗಳ ಸುಧಾರಣೆ ಮತ್ತು ಸಂಚಾರ ದಟ್ಟಣೆ ಕಡಿಮೆ ಮಾಡಲು, airflow and greenery ವ್ಯವಸ್ಥೆಯ ಸುಧಾರಣೆ. **ಜಿಎಸ್‌ಟಿ ಸೇರಿದಂತೆ ಅಂದಾಜು ವೆಚ್ಚ: ರೂ. 330.00 ಲಕ್ಷಗಳು, ಇಎಂಡಿ ಮೊತ್ತ : ರೂ. 4.20 ಲಕ್ಷಗಳು (ರೂ.1.00 ಲಕ್ಷ ಆನ್‌ಲೈನ್‌ನಲ್ಲಿ ಉಳಿದಿರುವ ಬ್ಯಾಲೆನ್ಸ್ ಬಿಜಿ/ಎಫ್‌ಡಿಆರ್ ಜೊತೆಗೆ)**

ಟೆಂಡರ್‌ನ ಕಾರ್ಯಸೂಚಿ: (1) **ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಿಂದ ದಿನಾಂಕ: 10.11.2025 ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.** (2) ಟೆಂಡರ್‌ಗಳನ್ನು **ದಿನಾಂಕ: 19.11.2025 ರಂದು 16.00 ಗಂಟೆಯೊಳಗೆ ಅಥವಾ ಅದಕ್ಕೂ ಮೊದಲು** ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಆನ್‌ಲೈನ್‌ನಲ್ಲಿ ಸಲ್ಲಿಸಬೇಕು ಮತ್ತು ಟೆಂಡರ್‌ಗಳನ್ನು ತೆರೆಯುವುದು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮಾರ್ಗಸೂಚಿಗಳ ಪ್ರಕಾರ ಇರುತ್ತದೆ. (3) **ಬಿಡ್ ಪೂರ್ವ ಸಭೆಯು ದಿನಾಂಕ ಮತ್ತು ಸ್ಥಳ: 13.11.2025 ರಂದು ಬೆಳಿಗ್ಗೆ 11.00 ಗಂಟೆಗೆ,** ಮುಖ್ಯ ಎಂಜಿನಿಯರ್ (ಕೇಂದ್ರ, ವಲಯ-2), ಅನುಬಂಧ-3, ಜಿಬಿಎ ಪ್ರಧಾನ ಕಚೇರಿ, ಬೆಂಗಳೂರು-560001 (4) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **21.11.2025 ರಂದು ಬೆಳಿಗ್ಗೆ 11.00 ಗಂಟೆಗೆ** ಚಾಮರಾಜಪೇಟೆ ವಿಭಾಗದ ಕಾರ್ಯಪಾಲಕ ಅಭಿಯಂತರರವರ ಕಚೇರಿಯಲ್ಲಿ **https://kppp.karnataka.gov.in** ವೆಬ್‌ಸೈಟ್‌ನಲ್ಲಿ ತೆರೆಯಲಾಗುವುದು.

ಸಹಿ/- ಕಾರ್ಯಪಾಲಕ ಅಭಿಯಂತರರು, ಚಾಮರಾಜಪೇಟೆ ವಿಭಾಗ

ಬೆಂಗಳೂರು ಕೇಂದ್ರ ನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರವರ ಕಚೇರಿ, ಶಿವಾಜಿನಗರ ವಿಭಾಗ, ತಿಮ್ಮಯ್ಯ ರಸ್ತೆ, ಕ್ವೀನ್ಸ್ ರಸ್ತೆ, ಬೆಂಗಳೂರು-560052.

ಸಂಖ್ಯೆ: ಕಾಪಾಅ/ಶಿವಾಜಿನಗರ/ಇ-ಪ್ರೊಕ್/01/2025-26 ದಿನಾಂಕ: 07-11-2025

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ ಪ್ರಕಟಣೆ

ದ್ವಿ ಲಕೋಟೆ ಪದ್ಧತಿ (ಜಿಓಕೆ ಕೆಪಿಪಿ ಪೋರ್ಟಲ್ ಮುಖಾಂತರ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಶಿವಾಜಿನಗರ ವಿಭಾಗ, ಬಿಸಿಸಿಐ, ಬೆಂಗಳೂರು ಇವರು ಆಯುಕ್ತರು, ಬಿಸಿಸಿಸಿ ಇವರ ಪರವಾಗಿ ಈ ಕೆಳಕಂಡ ಕಾಮಗಾರಿಗಾಗಿ ಬಿಬಿಎಂಪಿ ಅಥವಾ ಸಿಪಿಡಬ್ಲ್ಯೂಡಿ/ಕೆಪಿಡಬ್ಲ್ಯೂಡಿ/ರೈಲ್ವೇಸ್/ ಎಂಇಎಸ್/ರಾಷ್ಟ್ರೀಯ ಹೆದ್ದಾರಿ ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ ನೊಂದಾಯಿತಗೊಂಡ ಅರ್ಹ ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಗಳ ಹೆಸರು
1	2025-26ನೇ ಸಾಲಿಗೆ ಶಿವಾಜಿನಗರ ವಿಧಾನಸಭಾ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ವಸಂತನಗರ ಉಪ-ವಿಭಾಗದಲ್ಲಿ ಆಯ್ದ ಪ್ರಮುಖ, ಮಧ್ಯಮ ಮತ್ತು ಇತರೆ ಮುಖ್ಯ ರಸ್ತೆಗಳ ರೀಸರ್ಫೇಸಿಂಗ್ ಕಾಮಗಾರಿ (ಪ್ಯಾಕೇಜ್-01) (ಸರ್ಕಾರದ ಅನೆಕ್ಸರ್-1ರ ಕ್ರ.ಸಂ. 51, 52, 58, 60, 68, 70, 73, 74, 75 & 81ರಂತೆ ಒಟ್ಟು 10 ಕಾಮಗಾರಿಗಳನ್ನು ಒಳಗೊಂಡಿರುತ್ತದೆ.)
	ಟೆಂಡರ್‌ಗಿಟ್ಟ ಮೊತ್ತ (ಜಿಎಸ್‌ಟಿ ಹೊರತುಪಡಿಸಿ) : **ರೂ. 863.75 ಲಕ್ಷಗಳು**. ಇಎಂಡಿ: **ರೂ. 8,64,000/-** (ರೂ. 1,00,000/- ಎನ್‌ಇಎಫ್‌ಟಿ ಮೂಲಕ ಹಾಗೂ ಬಾಕಿ ರೂ. 7,64,000/-ಗಳನ್ನು ಬ್ಯಾಂಕ್ ಗ್ಯಾರಂಟಿ ಮೂಲಕ ಸಲ್ಲಿಸಬೇಕು).
2	2025-26ನೇ ಸಾಲಿಗೆ ಶಿವಾಜಿನಗರ ವಿಧಾನಸಭಾ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ವಸಂತನಗರ ಉಪ-ವಿಭಾಗದಲ್ಲಿ ಆಯ್ದ ಪ್ರಮುಖ, ಮಧ್ಯಮ ಮತ್ತು ಇತರೆ ಮುಖ್ಯ ರಸ್ತೆಗಳ ರೀಸರ್ಫೇಸಿಂಗ್ ಕಾಮಗಾರಿ (ಪ್ಯಾಕೇಜ್-02) (ಸರ್ಕಾರದ ಅನೆಕ್ಸರ್-1ರ ಕ್ರ.ಸಂ. 53, 56, 57, 59, 63, 64, 65, 66, 71, 77, 78 & 79ರಂತೆ ಒಟ್ಟು 12 ಕಾಮಗಾರಿಗಳನ್ನು ಒಳಗೊಂಡಿರುತ್ತದೆ.)
	ಟೆಂಡರ್‌ಗಿಟ್ಟ ಮೊತ್ತ (ಜಿಎಸ್‌ಟಿ ಹೊರತುಪಡಿಸಿ) : **ರೂ. 908.98 ಲಕ್ಷಗಳು**. ಇಎಂಡಿ: **ರೂ. 9,10,000/-** (ರೂ. 1,00,000/- ಎನ್‌ಇಎಫ್‌ಟಿ ಮೂಲಕ ಹಾಗೂ ಬಾಕಿ ರೂ. 8,10,000/-ಗಳನ್ನು ಬ್ಯಾಂಕ್ ಗ್ಯಾರಂಟಿ ಮೂಲಕ ಸಲ್ಲಿಸಬೇಕು).
3	2025-26ನೇ ಸಾಲಿಗೆ ಶಿವಾಜಿನಗರ ವಿಧಾನಸಭಾ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ವಸಂತನಗರ ಉಪ-ವಿಭಾಗದಲ್ಲಿ ಆಯ್ದ ಪ್ರಮುಖ, ಮಧ್ಯಮ ಮತ್ತು ಇತರೆ ಮುಖ್ಯ ರಸ್ತೆಗಳ ರೀಸರ್ಫೇಸಿಂಗ್ ಕಾಮಗಾರಿ (ಪ್ಯಾಕೇಜ್-03) (ಸರ್ಕಾರದ ಅನೆಕ್ಸರ್-1ರ ಕ್ರ.ಸಂ. 54, 55, 61, 62, 67, 69, 72, 76 & 80ರಂತೆ ಒಟ್ಟು 09 ಕಾಮಗಾರಿಗಳನ್ನು ಒಳಗೊಂಡಿರುತ್ತದೆ.)
	ಟೆಂಡರ್‌ಗಿಟ್ಟ ಮೊತ್ತ (ಜಿಎಸ್‌ಟಿ ಹೊರತುಪಡಿಸಿ) : **ರೂ. 868.00 ಲಕ್ಷಗಳು**. ಇಎಂಡಿ: **ರೂ. 8,68,000/-** (ರೂ. 1,00,000/- ಎನ್‌ಇಎಫ್‌ಟಿ ಮೂಲಕ ಹಾಗೂ ಬಾಕಿ ರೂ. 7,68,000/-ಗಳನ್ನು ಬ್ಯಾಂಕ್ ಗ್ಯಾರಂಟಿ ಮೂಲಕ ಸಲ್ಲಿಸಬೇಕು).
4	2025-26ನೇ ಸಾಲಿಗೆ ಶಿವಾಜಿನಗರ ವಿಧಾನಸಭಾ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಶಿವಾಜಿನಗರ ಉಪ-ವಿಭಾಗದಲ್ಲಿ ಆಯ್ದ ಪ್ರಮುಖ, ಮಧ್ಯಮ ಮತ್ತು ಇತರೆ ಮುಖ್ಯ ರಸ್ತೆಗಳ ರೀಸರ್ಫೇಸಿಂಗ್ ಕಾಮಗಾರಿ (ಪ್ಯಾಕೇಜ್-04) (ಸರ್ಕಾರದ ಅನೆಕ್ಸರ್-1ರ ಕ್ರಸಂ. 82 ರಿಂದ 111 ವರೆಗೆ ಒಟ್ಟು 30 ಕಾಮಗಾರಿಗಳನ್ನು ಒಳಗೊಂಡಿರುತ್ತದೆ.)
	ಟೆಂಡರ್‌ಗಿಟ್ಟ ಮೊತ್ತ (ಜಿಎಸ್‌ಟಿ ಹೊರತುಪಡಿಸಿ) : **ರೂ. 1425.00 ಲಕ್ಷಗಳು.** ಇಎಂಡಿ: **ರೂ. 14,25,000/-** (ರೂ. 1,00,000/- ಎನ್‌ಇಎಫ್‌ಟಿ ಮೂಲಕ ಹಾಗೂ ಬಾಕಿ ರೂ. 13,25,000/-ಗಳನ್ನು ಬ್ಯಾಂಕ್ ಗ್ಯಾರಂಟಿ ಮೂಲಕ ಸಲ್ಲಿಸಬೇಕು).

ಕಾಮಗಾರಿ ಕಾಲಾವಧಿ : **180 ದಿನಗಳು (ಪ್ರತಿ ಕಾಮಗಾರಿಗೆ).**

ಟೆಂಡರ್ ದಿನಾಂಕಗಳು : (1) ಟೆಂಡರ್ ದಾಖಲೆಗಳನ್ನು ಕೆಪಿಪಿ ಪೋರ್ಟಲ್ **https://kppp.karnataka.gov.in**ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಪೂರ್ವ-ಬಿಡ್ ಸಭೆಯ ದಿನಾಂಕ: **14.11.2025ರಂದು ಮಧ್ಯಾಹ್ನ 3.00 ಗಂಟೆಗೆ – ಮುಖ್ಯ ಅಭಿಯಂತರರು, ವಲಯ-2, ಬೆಂಗಳೂರು ಕೇಂದ್ರ ನಗರ ಪಾಲಿಕೆ, ಅನೆಕ್ಸ್-3, 4ನೇ ಮಹಡಿ, ಜಿಬಿಎ ಕಚೇರಿ ಕಾಂಪೌಂಡ್, ಎನ್.ಆರ್. ಚೌಕ, ಬೆಂಗಳೂರು ಇವರ ಕಚೇರಿಯಲ್ಲಿ.** (3) ಭರ್ತಿ ಮಾಡಿದ ಟೆಂಡರ್‌ಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ: **21.11.2025ರ ಸಂಜೆ 4.00 ಗಂಟೆಯವರೆಗೆ.** (4) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **25.11.2025ರಂದು ಬೆಳಿಗ್ಗೆ 11.30 ಗಂಟೆಗೆ.** (5) ಆರ್ಥಿಕ ಬಿಡ್ ತೆರೆಯುವ ದಿನಾಂಕ: **ತಾಂತ್ರಿಕವಾಗಿ ಬಿಡ್ ಅನುಮೋದನೆಯ ನಂತರ. ತಿಳಿಸಲಾಗುವುದು.** ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಚೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ಕೆಪಿಪಿ ಪೋರ್ಟಲ್ **https://kppp.karnataka.gov.in** ನಲ್ಲಿ ಪಡೆದುಕೊಳ್ಳಬಹುದಾಗಿದೆ.

ಸಹಿ/- ಕಾರ್ಯಪಾಲಕ ಅಭಿಯಂತರರು, ಶಿವಾಜಿನಗರ ವಿಭಾಗ, ಬೃಕೆಂನಪಾ

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು,

ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಅ. ಬೆಂಗಳೂರು

ಹಾಸನ ಮಂಗಳೂರು ರೈಲು ಅಭಿವೃದ್ಧಿ ಕಂಪನಿ ನಿಯಮಿತ

(ರೈಲ್ವೆ ಸಚಿವಾಲಯ ಮತ್ತು ಕರ್ನಾಟಕ ಸರ್ಕಾರ ಜಂಟಿ ಉದ್ಯಮ)
ನೋಂದಾಯಿತ ಕಚೇರಿ: ಎಂಎಸ್‌ಐಎಲ್ ಹೌಸ್, 7ನೇ ಮಹಡಿ,
#36, ಕನ್ನಿಂಗ್‌ಹ್ಯಾಂ ರಸ್ತೆ, ಬೆಂಗಳೂರು-560001. ದೂರವಾಣಿ ಸಂಖ್ಯೆ: 080-23120582
ಇ-ಮೇಲ್: ceohmrdc@gmail.com CIN: U45203KA2003SGC032183

ಸಂಖ್ಯೆ: ಹೆಚ್‌ಎಂಆರ್‌ಡಿಸಿ/ಅಕೌಂಟ್ಸ್/ಇ-ಬಿಡ್ಡಿಂಗ್/2025-26 ದಿನಾಂಕ: 07.11.2025

ಇ-ಹರಾಜು ಅಧಿಸೂಚನೆ

ಹೆಚ್‌ಎಂಆರ್‌ಡಿಸಿ, ರಾಷ್ಟ್ರೀಕೃತ / ಸಾರ್ವಜನಿಕ ವಲಯದ ಬ್ಯಾಂಕುಗಳಲ್ಲಿ ಒಂದು ವರ್ಷದ ಅವಧಿಗೆ ತನ್ನ ಹೆಚ್ಚುವರಿ ನಿಧಿ ರೂ. 97.50 ಕೋಟಿಗಳನ್ನು ಸ್ಥಿರ ಠೇವಣಿಗಳಲ್ಲಿ ಹೂಡಿಕೆ ಮಾಡಲು ಉದ್ದೇಶಿಸಿದೆ.

ಆಸಕ್ತ ಅರ್ಹ ರಾಷ್ಟ್ರೀಕೃತ / ಸಾರ್ವಜನಿಕ ವಲಯದ ಬ್ಯಾಂಕುಗಳು ದಿನಾಂಕ: **18.11.2025 ಮಧ್ಯಾಹ್ನ 3.30 ಗಂಟೆಯೊಳಗಾಗಿ** ಇ-ಪೋರ್ಟಲ್‌ನಲ್ಲಿ ತಮ್ಮ ಬಿಡ್‌ಗಳನ್ನು ಅಪ್‌ಲೋಡ್ ಮಾಡಬಹುದು. ಹೆಚ್ಚಿನ ವಿವರಗಳಿಗಾಗಿ **https://kppp.karnataka.gov.in** ಮತ್ತು **www.hmrdc.com** ಗೆ ಭೇಟಿ ನೀಡಿ.

ಸಹಿ/-
ಸಿಎಫ್‌ಓ/ಹೆಚ್‌ಎಂಆರ್‌ಡಿಸಿ

DIPR/CP/SPAN/3627/2025-26

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಇಂಜಿನಿಯರಿಂಗ್ ಘಟಕ

ಮುಖ್ಯ ಇಂಜಿನಿಯರ್‌ರವರ ಕಛೇರಿ, ಆರೋಗ್ಯ ಸೌಧ, 3ನೇ ಮಹಡಿ, ಕುಷ್ಠರೋಗ ಆಸ್ಪತ್ರೆ ಆವರಣ, 1ನೇ ಅಡ್ಡರಸ್ತೆ, ಮಾಗಡಿ ರಸ್ತೆ, ಬೆಂಗಳೂರು- 560023, ದೂರವಾಣಿ ಸಂಖ್ಯೆ:080-29557023, ಇ-ಮೇಲ್: **cekhsdrp@gmail.com**

ಸಂಖ್ಯೆ:ಆಕುಕ/ಇಂಘ/ಮುಇಂ/ತಾಸ-3/ಸಇಂ-1&8/ಟೆಂಡರ್/2025-26/2547 ದಿನಾಂಕ:06.11.2025

ಟೆಂಡರ್ ಪ್ರಕಟಣೆ

ಮುಖ್ಯ ಇಂಜಿನಿಯರ್, ಆ&ಕುಕಇ, ಇಂಜಿನಿಯರಿಂಗ್ ಘಟಕ, ಬೆಂಗಳೂರು ರವರಿಂದ ಡಿಪಿಆರ್, ಆರ್ಕಿಟೆಕ್ಚರಲ್, ಸ್ಟ್ರಕ್ಚರಲ್ ಮತ್ತು ಇತರೆ ಸೇವೆಗಳ ವಿನ್ಯಾಸ ಮತ್ತು ನಕ್ಷೆಗಳನ್ನು ತಯಾರಿಸಲು ಸೇವಾ ಸಮಾಲೋಚಕರನ್ನು ನೇಮಿಸಲು ಈ ಕೆಳಕಂಡ ಸೇವಾ ಕಾಮಗಾರಿಗಳ ಟೆಂಡರ್‌ನ್ನು ಕಿಅಃಖ ಪದ್ಧತಿಯಲ್ಲಿ ವಿದ್ಯುನ್ಮಾನ ಸಂಗ್ರಹಣೆ ವೇದಿಕೆ (KPPP) ಮೂಲಕ ಟೆಂಡರ್‌ಗಳನ್ನು ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಅನುದಾನದಡಿಯಲ್ಲಿ ಆಹ್ವಾನಿಸಿದೆ.

ಕ್ರ ಸಂ	ಕಾಮಗಾರಿಯ ಹೆಸರು	ಸೇವಾ ಕಾಮಗಾರಿಯ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ) (ಜಿ.ಎಸ್.ಟಿ ಸೇರಿದಂತೆ)	ಇಎಂಡಿ ಮೊತ್ತ (ರೂ. ಲಕ್ಷಗಳಲ್ಲಿ)
1	ಬೆಂಗಳೂರು ದಕ್ಷಿಣ ಜಿಲ್ಲೆ, ಕನಕಪುರದಲ್ಲಿ ಹೊಸ ವೈದ್ಯಕೀಯ ಕಾಲೇಜು, 300 ಹಾಸಿಗೆಗಳ ಸಾಮರ್ಥ್ಯದ ಆಸ್ಪತ್ರೆ, ಬಾಲಕ-ಬಾಲಕಿಯರ ಹಾಸ್ಟೆಲ್‌ಗಳು ಹಾಗೂ ಇತರೆ ಸಂಬಂಧಿತ ಸೌಲಭ್ಯಗಳ ನಿರ್ಮಾಣ ಕಾಮಗಾರಿಗೆ ವಾಸ್ತುಶಿಲ್ಪ, ರಚನಾತ್ಮಕ ಮತ್ತು ಇತರೆ ಸೇವೆಗಳ ವಿನ್ಯಾಸ ಮತ್ತು ನಕ್ಷೆಗಳನ್ನು ತಯಾರಿಸಲು ಸೇವಾ ಸಮಾಲೋಚಕರ ನೇಮಕ.	415.00	6.23
2	ಬಾಗಲಕೋಟೆಯಲ್ಲಿ ಸರ್ಕಾರಿ ವೈದ್ಯಕೀಯ ಕಾಲೇಜು, ಬಾಲಕ, ಬಾಲಕಿಯರ ಹಾಸ್ಟೆಲ್‌ಗಳು, ಬೋಧಕ ಸಿಬ್ಬಂದಿಗಳ ವಸತಿಗೃಹಗಳು ಮತ್ತು ಇತರೆ ನಿರ್ಮಾಣ ಕಾಮಗಾರಿಗೆ ವಾಸ್ತುಶಿಲ್ಪ, ರಚನಾತ್ಮಕ ಮತ್ತು ಇತರೆ ಸೇವೆಗಳ ವಿನ್ಯಾಸ ಮತ್ತು ನಕ್ಷೆಗಳನ್ನು ತಯಾರಿಸಲು ಸೇವಾ ಸಮಾಲೋಚಕರ ನೇಮಕ.	300.00	4.50

ಟೆಂಡರ್ ಪ್ರಕ್ರಿಯೆಗಳ ದಿನಾಂಕಗಳು: 1. ಟೆಂಡರ್‌ಗಳನ್ನು ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಮೂಲಕ ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯ: **06.12.2025 ರಂದು 16.00 ಗಂಟೆಯವರೆಗೆ**. 2. ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ: **08.12.2025 ರಂದು 11.01 ಗಂಟೆಗೆ**. ಟೆಂಡರ್ ವಿವರಗಳನ್ನು ವಿದ್ಯುನ್ಮಾನ ಸಂಗ್ರಹಣೆ ವೇದಿಕೆ ಮೂಲಕ **(Through KPPP Platform) www.kppp.karnataka.gov.in** ದಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಟೆಂಡರ್ ಪ್ರಕ್ರಿಯೆ ಶುಲ್ಕವನ್ನು **www.kppp.karnataka.gov.in** ನಲ್ಲಿ ವಿದ್ಯುನ್ಮಾನ **(Electronic)** ವಿಧಾನದಲ್ಲಿ ಪಾವತಿಸಬಹುದಾಗಿರುತ್ತದೆ. ಆಸಕ್ತಿಯುಳ್ಳ ಗುತ್ತಿಗೆದಾರರು ಸದರಿ ಟೆಂಡರ್‌ನಲ್ಲಿ ಭಾಗವಹಿಸಲು ವಿದ್ಯುನ್ಮಾನ ಸಂಗ್ರಹಣೆ ವೇದಿಕೆಯಲ್ಲಿ **(KPPP Platform)** ನೊಂದಾಯಿಸಿಕೊಳ್ಳಬೇಕಾಗಿರುತ್ತದೆ.

ಟಿಪ್ಪಣಿ: 1. ಈ ಕೆಳಗೆ ಸಹಿ ಮಾಡಿರುವವರು ಯಾವುದೇ ಕಾರಣಗಳನ್ನು ನೀಡದೆ ಟೆಂಡರ್ ಪ್ರಕ್ರಿಯೆಯನ್ನು ಮುಂದೂಡುವ/ಸಂಪೂರ್ಣವಾಗಿ ಟೆಂಡರ್ ರದ್ದುಗೊಳಿಸುವ/ ಟೆಂಡರ್ ನಿರಾಕರಿಸುವ ಹಕ್ಕನ್ನು ಹೊಂದಿರುತ್ತಾರೆ. 2. ಇನ್ನು ಮುಂದೆ ಟೆಂಡರ್ ಪ್ರಕ್ರಿಯೆಯಲ್ಲಿ ಯಾವುದೇ ಬದಲಾವಣೆಗಳು ಇದ್ದಲ್ಲಿ ದಿನ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ, ಬದಲಾಗಿ ವಿದ್ಯುನ್ಮಾನ ಸಂಗ್ರಹಣೆ ವೇದಿಕೆಯಲ್ಲಿ ಮಾತ್ರ ಬದಲಾವಣೆಗಳನ್ನು ಪ್ರಕಟಿಸಲಾಗುವುದು.

ಸಹಿ/- ಮುಖ್ಯ ಇಂಜಿನಿಯರ್, ಆ&ಕುಕಇ, ಇಂಜಿನಿಯರಿಂಗ್ ಘಟಕ, ಬೆಂಗಳೂರು

ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ (ಕೆಎಸ್‌ಐಐಡಿಸಿ)

KSIIDC

"ಖನಿಜ ಭವನ", 4ನೇ ಮಹಡಿ, ಪೂರ್ವ ಭಾಗ, ನಂ. 49, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು-1 ದೂರವಾಣಿ: 080-22258131-33,
ಇ-ಮೇಲ್: **murthy.ksiidc@gmail.com // info@ksiidc.com** ವೆಬ್‌ಸೈಟ್: **www.ksiidc.karnataka.gov.in**

ವಿಜಯಪುರ ವಿಮಾನ ನಿಲ್ದಾಣಕ್ಕೆ ತಾಂತ್ರಿಕ ಸಿಬ್ಬಂದಿ (ಒಪ್ಪಂದದ ಆಧಾರದ ಮೇಲೆ) ನೇಮಕಾತಿ ಅಧಿಸೂಚನೆ

ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ (ಕೆಎಸ್‌ಐಐಡಿಸಿ), ಕರ್ನಾಟಕ ಸರ್ಕಾರವು ವಿಜಯಪುರ ವಿಮಾನ ನಿಲ್ದಾಣವನ್ನು ನಿರ್ವಹಿಸುತ್ತಿದೆ. ಈ ಕೆಳಕಂಡ ಸಿಬ್ಬಂದಿಗಳನ್ನು ಕ್ರೋಢೀಕೃತ ವೇತನದ ಮೇಲೆ 1 ವರ್ಷದ ಅವಧಿಗೆ ಗುತ್ತಿಗೆ ಆಧಾರದ ಮೇಲೆ ನೇಮಿಸಲು ಪ್ರಸ್ತಾಪಿಸಲಾಗಿದೆ. ಅಭ್ಯರ್ಥಿಗಳ ಕಾರ್ಯಕ್ಷಮತೆಯ ಆಧಾರದ ಮೇಲೆ ಗುತ್ತಿಗೆ ಅವಧಿಯನ್ನು ಅವಶ್ಯಕತೆಗೆ ಅನುಗುಣವಾಗಿ ಇನ್ನೊಂದು ವರ್ಷ ಅಥವಾ ಅದಕ್ಕಿಂತ ಹೆಚ್ಚಿನ ಅವಧಿಗೆ ವಿಸ್ತರಿಸಲಾಗುತ್ತದೆ.

ಕ್ರ. ಸಂ.	ಹುದ್ದೆಯ ಹೆಸರು	ವಿದ್ಯಾರ್ಹತೆ ಮತ್ತು ಅನುಭವದ ವಿವರಗಳು	ಕ್ರೋಢೀಕೃತ ಸಂಭಾವನೆ (ತಿಂಗಳಿಗೆ ರೂ.)	ವಯೋಮಿತಿ
01	ಮುಖ್ಯ ಭದ್ರತಾ ಮುಖ್ಯಸ್ಥ (ಒಂದು ಹುದ್ದೆ)	• ಅಭ್ಯರ್ಥಿಯು ಮಾನ್ಯತೆ ಪಡೆದ ವಿಶ್ವವಿದ್ಯಾಲಯದಲ್ಲಿ ಪದವಿ ಪಡೆದಿರಬೇಕು. • ಅಂತರರಾಷ್ಟ್ರೀಯ ಪ್ರಾದೇಶಿಕತೆ ಮತ್ತು ರಾಷ್ಟ್ರೀಯ ವಾಯುಯಾನ ಭದ್ರತಾ ನಿಯಮಗಳ ಕುರಿತಾದ ಜ್ಞಾನ. • ವಿಮಾನ ನಿಲ್ದಾಣದಲ್ಲಿ ವಾಯುಯಾನ ಭದ್ರತಾ ಕಾರ್ಯಾಚರಣೆಗಳಲ್ಲಿ ಸಾಕಷ್ಟು ಅನುಭವ. • ಪೊಲೀಸ್ ಭದ್ರತೆ, ಗುಪ್ತಚರ, ತನಿಖಾ ಸಂಸ್ಥೆಗಳು ಮತ್ತು ಸೈಬರ್ ಭದ್ರತೆಯಂತಹ ಇತರ ಭದ್ರತೆಗೆ ಸಂಬಂಧಿತ ಪಡೆಗಳಲ್ಲಿ ಅನುಭವ. • ಭದ್ರತಾ ವ್ಯವಸ್ಥೆ ಮತ್ತು ಪ್ರವೇಶ ನಿಯಂತ್ರಣ, ವಿಮಾನದ ಒಳಗೆ ಮತ್ತು ಹೊರಗಿನ ಭದ್ರತೆಯ ಜ್ಞಾನ. • ಕಂಪ್ಯೂಟರ್ ಜ್ಞಾನ. • ಮಾನ್ಯತೆ ಹೊಂದಿರುವ AvSec ಪ್ರಮಾಣಪತ್ರ ಮತ್ತು AvSec ರಿಫ್ರೆಶರ್ ಪ್ರಮಾಣಪತ್ರದೊಂದಿಗೆ BCAS ನಿಂದ ವಾಯುಯಾನ ಭದ್ರತಾ ತರಬೇತಿಯಲ್ಲಿ ಮೂಲ ಜ್ಞಾನ ಹೊಂದಿದ್ದು ಅರ್ಹತೆ ಪಡೆದಿರಬೇಕು • ವಿಮಾನ ನಿಲ್ದಾಣದಲ್ಲಿ ಭದ್ರತಾ ಅಧಿಕಾರಿಯಾಗಿ 10 ವರ್ಷಗಳ ಅನುಭವ.	ರೂ. 75,000/-	ಕನಿಷ್ಠ: 25 ವರ್ಷ ಗರಿಷ್ಠ: 55 ವರ್ಷ
2	ಸಹಾಯಕ ಟರ್ಮಿನಲ್ ವ್ಯವಸ್ಥಾಪಕರು	• ಅಭ್ಯರ್ಥಿಯು ಯಾವುದೇ ವಿಭಾಗದಲ್ಲಿ ಪದವಿ/ಅಥವಾ ಡಿಪ್ಲೊಮಾ ಪಡೆದಿರಬೇಕು. • ಸ್ನಾತಕೋತ್ತರ/ಎಂಬಿಎ ಪದವಿ ಪಡೆದವರಿಗೆ ಆದ್ಯತೆ. • ಅಭ್ಯರ್ಥಿಯು ವಿಮಾನ ನಿಲ್ದಾಣ ಕಾರ್ಯಾಚರಣೆಯ ಬಗ್ಗೆ ಪರಿಚಿತರಾಗಿರಬೇಕು. ವಿಮಾನ ನಿಲ್ದಾಣ ಕಾರ್ಯಾಚರಣೆಗಳಲ್ಲಿ ತರಬೇತಿ ಪಡೆದ ಅಭ್ಯರ್ಥಿಗಳಿಗೆ ಆದ್ಯತೆ ನೀಡಲಾಗುವುದು.	50,000/-	ಕನಿಷ್ಠ: 25 ವರ್ಷ ಗರಿಷ್ಠ: 45 ವರ್ಷ
3	ಸಹಾಯಕ ಏರ್ ಸೈಡ್ ಕಾರ್ಯಾಚರಣೆ ವ್ಯವಸ್ಥಾಪಕರು- ಕಾರ್ಯಾಚರಣೆ ಇಲಾಖೆ (ಒಂದು ಹುದ್ದೆ)	• ಅಭ್ಯರ್ಥಿಯು ಯಾವುದೇ ವಿಭಾಗದಲ್ಲಿ ಪದವಿ/ಅಥವಾ ಡಿಪ್ಲೊಮಾ ಪಡೆದಿರಬೇಕು. • ಸ್ನಾತಕೋತ್ತರ/ಎಂಬಿಎ ಪದವಿ ಪಡೆದವರಿಗೆ ಆದ್ಯತೆ. • ಅಭ್ಯರ್ಥಿಯು ವಿಮಾನ ನಿಲ್ದಾಣ ಕಾರ್ಯಾಚರಣೆಯ ಬಗ್ಗೆ ಪರಿಚಿತರಾಗಿರಬೇಕು. ವಿಮಾನ ನಿಲ್ದಾಣ ಕಾರ್ಯಾಚರಣೆಗಳಲ್ಲಿ ತರಬೇತಿ ಪಡೆದ ಅಭ್ಯರ್ಥಿಗಳಿಗೆ ಆದ್ಯತೆ ನೀಡಲಾಗುವುದು.	50,000/-	ಕನಿಷ್ಠ: 25 ವರ್ಷ ಗರಿಷ್ಠ: 45 ವರ್ಷ
4	ಸಹಾಯಕ ವ್ಯವಸ್ಥಾಪಕರು- ಭದ್ರತಾ ಇಲಾಖೆ (ಒಂದು ಹುದ್ದೆ)	• ಯಾವುದೇ ವಿಭಾಗದಲ್ಲಿ ಪದವಿ ಪಡೆದಿರಬೇಕು. • ರಾಷ್ಟ್ರೀಯ ನಾಗರಿಕ ವಿಮಾನಯಾನ ಭದ್ರತಾ ತರಬೇತಿ ಕಾರ್ಯಕ್ರಮ (NCASTP) ದ ಅನುಸಾರ BCAS ನಿಂದ ಪ್ರಮಾಣೀಕರಣದೊಂದಿಗೆ ವಾಯುಯಾನ ಭದ್ರತೆಯಲ್ಲಿ ಸಾಕಷ್ಟು ಅನುಭವ ಹೊಂದಿರುವ ಅರ್ಹ ವೃತ್ತಿಪರರು. • ವಾಯುಯಾನ ಭದ್ರತಾ ಕ್ಷೇತ್ರದಲ್ಲಿ ಕನಿಷ್ಠ 3 ವರ್ಷ ಮತ್ತು ಅದಕ್ಕಿಂತ ಹೆಚ್ಚಿನ ಅನುಭವ. • AvSec ಪ್ರಮಾಣಪತ್ರ ಮತ್ತು AvSec ರಿಫ್ರೆಶರ್ ಪ್ರಮಾಣಪತ್ರದೊಂದಿಗೆ BCAS ನಿಂದ ವಾಯುಯಾನ ಭದ್ರತಾ ಹುದ್ದೆಯಲ್ಲಿ ಮೂಲ ಜ್ಞಾನ ಹೊಂದಿದ್ದು ಅರ್ಹತೆ ಪಡೆದಿರಬೇಕು. • ಕಂಪ್ಯೂಟರ್ ಕಾರ್ಯಾಚರಣೆ ಮತ್ತು ಎಂಎಸ್ ಆಫೀಸ್ ಪ್ಯಾಕೇಜ್‌ನಲ್ಲಿ ಉತ್ತಮ ಜ್ಞಾನ ಹೊಂದಿರಬೇಕು.	50,000/-	ಕನಿಷ್ಠ: 25 ವರ್ಷ ಗರಿಷ್ಠ: 50 ವರ್ಷ
5	ವಿಮಾನ ನಿಲ್ದಾಣ ವ್ಯವಸ್ಥೆ ಮತ್ತು ಐಟಿ ನೆಟ್ವರ್ಕ್ ಸಲಹೆಗಾರ (ಒಂದು ಹುದ್ದೆ)	• ಅಭ್ಯರ್ಥಿಯು AICTE ಅಥವಾ UGC ಮಾನ್ಯತೆ ಪಡೆದ/ಅನುಮೋದಿತ ವಿಶ್ವವಿದ್ಯಾಲಯ/ಸಂಸ್ಥೆಯಿಂದ ಎಲೆಕ್ಟ್ರಾನಿಕ್ಸ್ ಮತ್ತು ಸಂವಹನ ಇಂಜಿನಿಯರಿಂಗ್ ಅಥವಾ ಕಂಪ್ಯೂಟರ್ ಇಂಜಿನಿಯರಿಂಗ್‌ನಲ್ಲಿ ಪದವಿ ಪಡೆದಿರಬೇಕು. • LAN ಆಪ್ಟಿಕಲ್ ಫೈಬರ್ ನೆಟ್‌ವರ್ಕ್, ಐಪಿ ಫೋನ್‌ಗಳು, ಐಪಿ ಫೋನ್ IPBX ಗಳಿಗೆ ಸಂಬಂಧಿಸಿದ ಸರ್ವರ್‌ಗಳು, ಇಂಟರ್‌ನೆಟ್ ಸಂಪರ್ಕಗಳು. CCTV ಸ್ವಿಚ್‌ಗಳು, CCTV ಕ್ಯಾಮರಾಗಳು. ಬೃಹತ್ ಡೇಟಾ ಸಂಗ್ರಹ ವ್ಯವಸ್ಥೆಗಳು. ಫೈರ್ ಅಲಾರ್ಮ್ ಸಿಸ್ಟಮ್, ಫೈರ್/ಸ್ಮೋಕ್ ಡಿಟೆಕ್ಟರ್‌ಗಳು, ಪ್ರವೇಶ ನಿಯಂತ್ರಣ ವ್ಯವಸ್ಥೆಗಳು, ಡೆಸ್ಕ್ ಟಾಪ್ ಸಿಸ್ಟಮ್‌ಗಳು ಮತ್ತು ಸಂಬಂಧಿತ ಹಾರ್ಡ್‌ವೇರ್, ಹಾರ್ಡ್‌ವೇರ್ ಸಂಬಂಧಿತ ಅಟೋಮ್ಯಾಟಿಕ್ ಹವಾಮಾನ ಕೇಂದ್ರಗಳು/ವಿಮಾನ ನಿಲ್ದಾಣ ವ್ಯವಸ್ಥೆಗಳು, ನೆಟ್‌ವರ್ಕ್ ಭದ್ರತಾ ವ್ಯವಸ್ಥೆಗಳಿಗೆ ಸಂಬಂಧಿಸಿದ PLC ಗಳ ನಿರ್ವಹಣೆ/ತೊಂದರೆ ನಿವಾರಣೆಯಲ್ಲಿ 5 ವರ್ಷಗಳ ಅನುಭವ ಹೊಂದಿರಬೇಕು. ಅಭ್ಯರ್ಥಿಯು BSNL ಮತ್ತು ಇತರ ಏಜೆನ್ಸಿಗಳೊಂದಿಗೆ ಸಂಪರ್ಕ ಸಾಧಿಸುವ ನಿರೀಕ್ಷೆಯಿದೆ. • ಅಭ್ಯರ್ಥಿಯು ವೆಬ್‌ಸೈಟ್ ಮತ್ತು ಸಾಮಾಜಿಕ ಮಾಧ್ಯಮ ವಿಷಯಗಳನ್ನು ಸಹ ನಿರ್ವಹಿಸಲು ಸಾಧ್ಯವಾಗುವುದು ಅಪೇಕ್ಷಣೀಯವಾಗಿದೆ.	65,000/-	ಕನಿಷ್ಠ: 25 ವರ್ಷ ಗರಿಷ್ಠ: 45 ವರ್ಷ
6	ಸಿವಿಲ್ ಇಂಜಿನಿಯರ್ (ಒಂದು ಹುದ್ದೆ)	• ಅಭ್ಯರ್ಥಿಗಳು ಬಿ.ಇ (ಸಿವಿಲ್) ಪಡೆದಿರಬೇಕು. • ರನ್‌ವೇ ರಸ್ತೆಗಳು ಮತ್ತು ವಿಮಾನ ನಿಲ್ದಾಣ ನಿರ್ವಹಣೆಯಲ್ಲಿ ಪ್ರಮುಖ ಸಿವಿಲ್ ನಿರ್ಮಾಣ ಕಾರ್ಯಗಳಲ್ಲಿ 5 ವರ್ಷಗಳ ಅನುಭವ.	50,000/-	ಕನಿಷ್ಠ:25 ವರ್ಷ ಗರಿಷ್ಠ:40 ವರ್ಷ
7	ಎಲೆಕ್ಟ್ರಿಕಲ್ ಇಂಜಿನಿಯರ್ (ಒಂದು ಹುದ್ದೆ)	• ಅಭ್ಯರ್ಥಿಯು ಬಿ.ಇ (ಎಲೆಕ್ಟ್ರಿಕಲ್) / ಡಿಪ್ಲೊಮಾ (ಎಲೆಕ್ಟ್ರಿಕಲ್) ಪಡೆದಿರಬೇಕು. • ಸಬ್‌ಸ್ಟೇಷನ್ ನಿರ್ವಹಣೆ ಮತ್ತು ಕಟ್ಟಡ, ವಿದ್ಯುತ್, ELV ವ್ಯವಸ್ಥೆ/ HVAC ಸ್ಥಾಪನೆಯ ಸಂಬಂಧಿತ ಕ್ಷೇತ್ರದಲ್ಲಿ 5 ವರ್ಷಗಳ ಅನುಭವ.	50,000/-	ಕನಿಷ್ಠ:25 ವರ್ಷ ಗರಿಷ್ಠ:40 ವರ್ಷ

- ➢ ಆಸಕ್ತ ಅಭ್ಯರ್ಥಿಗಳು ಈ ಅಧಿಸೂಚನೆ ಪ್ರಕಟವಾದ 10 ದಿನಗಳ ಒಳಗೆ, ಶೈಕ್ಷಣಿಕ ಅರ್ಹತೆ ಮತ್ತು ಅನುಭವ ಪ್ರಮಾಣಪತ್ರಗಳೊಂದಿಗೆ ತಮ್ಮ ರೆಸ್ಯೂಮ್ ಅನ್ನು ಸ್ಪೀಡ್ ಪೋಸ್ಟ್ ಮೂಲಕ/ ಖುದ್ದಾಗಿ ಮೇಲೆ ತಿಳಿಸಿದ ವಿಳಾಸಕ್ಕೆ ಸಲ್ಲಿಸುವುದು.
- ➢ ಸಂದರ್ಶನದ ದಿನಾಂಕ ಮತ್ತು ಸಮಯವನ್ನು ತಿಳಿಸಲಾಗುವುದು.
- ➢ ಆಯ್ಕೆಯಾದವರನ್ನು ಮೇಲಿನಂತೆ ವಿಜಯಪುರ ವಿಮಾನ ನಿಲ್ದಾಣಕ್ಕೆ ಪೋಸ್ಟ್ ಮಾಡಲಾಗುತ್ತದೆ.
- ➢ ಯಾವುದೇ ಸ್ಪಷ್ಟೀಕರಣಗಳಿಗೆ, ನೀವು ಉಪ ಪ್ರಧಾನ ವ್ಯವಸ್ಥಾಪಕರು (ಪಿ & ಎ) – ಮೊ: 98458-33566 ಅವರನ್ನು ಸಂಪರ್ಕಿಸಬಹುದು.
- ➢ ನಿಗಮವು ಎಲ್ಲಾ ಅರ್ಜಿಗಳನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಿಕೊಂಡಿರುತ್ತದೆ ಮತ್ತು ಎಲ್ಲಾ ವಿಷಯಗಳಲ್ಲಿ ನಿಗಮದ ನಿರ್ಧಾರವೇ ಅಂತಿಮವಾಗಿರುತ್ತದೆ.
- ➢ ಕನ್ನಡ ಓದಲು, ಬರೆಯಲು ಮತ್ತು ಮಾತನಾಡುವ ಜ್ಞಾನ ಅತ್ಯಗತ್ಯ

ಸಹಿ/- ಉಪ ಪ್ರಧಾನ ವ್ಯವಸ್ಥಾಪಕರು (ಪಿ & ಎ)

ಮೈಸೂರು ಮಹಾನಗರ ಪಾಲಿಕೆ, ಮೈಸೂರು

ಕಾರ್ಯಪಾಲಕ ಅಭಿಯಂತರವರ ಕಛೇರಿ, ನೀಸ&ಒಚ (ಪಶ್ಚಿಮ) ವಿಭಾಗ, ವಾವಿನೀಸ ಆವರಣ, ಯಾದವಗಿರಿ, ಮೈಸೂರು-570020

ಟೆಂಡರ್ ಪ್ರಕಟಣೆ ಸಂಖ್ಯೆ:ಮೈನಪಾ/ಕಾಇಂ/ನೀಸ&ಒಚ(ಪಶ್ಚಿಮ)/ಸ.ಅ/ಟಿಎನ್-15/673/2025-26 ದಿನಾಂಕ: 05.11.2025

ಅಲ್ಪಾವಧಿ/ಪೂರ್ಣಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ ಮುಖಾಂತರ ಮಾತ್ರ

ಮೈಸೂರು ಮಹಾನಗರ ಪಾಲಿಕೆಯ ವಿವಿಧ ಅನುದಾನಗಳಲ್ಲಿ KTPP ನಿಯಮಗಳಿಗೆ ಒಳಪಟ್ಟಂತೆ ಟೆಂಡರ್‌ಗಳಿಗೆ ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ. ವಿವರ ಈ ಕೆಳಕಂಡಂತಿರುತ್ತದೆ.

ಕ್ರ ಸಂ	ವಿವರ	ಕಾಮಗಾರಿಗಳು	ಟೆಂಡರ್ ಮೊತ್ತ (ರೂ. ಲಕ್ಷಗಳಲ್ಲಿ)	ಸಂಜೆ 5.30 ಗಂಟೆ ನಂತರ	ಸಂಜೆ 4.30 ಗಂಟೆ ಒಳಗೆ	ಸಂಜೆ 4.30 ಗಂಟೆ ನಂತರ
				ಕೆಪಿಪಿ ಪೋರ್ಟಲ್ ನಲ್ಲಿ ಟೆಂಡರ್ ಚಾಲ್ತಿಗೆ ಬರುವ ದಿನಾಂಕ	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	ಟೆಂಡರ್/ತಾಂತ್ರಿಕ ಬಿಡ್ ತೆರೆಯುವ ದಿನಾಂಕ
1	kw-1,Kw-2 & Kw-3	03 ಸಂಖ್ಯೆಗಳು	131.02	06.11.2025	13.11.2025	14.11.2025
2	kw-1,	13 ಸಂಖ್ಯೆಗಳು	145.36	06.11.2025	21.11.2025	24.11.2025
3	Service Tenders	02 ಸಂಖ್ಯೆಗಳು	-	06.11.2025	21.11.2025	24.11.2025

ವಿಶೇಷ ಸೂಚನೆ: ಮುಂದೆ ಯಾವುದೇ ಸೂಚನೆ/ಬದಲಾವಣೆ/ತಿದ್ದುಪಡಿಗಳಿದ್ದಲ್ಲಿ ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ ನಲ್ಲಿ ಅಥವಾ ಪತ್ರಿಕಾ ಪ್ರಕಟಣೆ ಹೊರಡಿಸಲಾಗುವುದು.

ಸಹಿ/- ಕಾರ್ಯಪಾಲಕ ಅಭಿಯಂತರರು
ನೀಸ&ಒಚ (ಪಶ್ಚಿಮ) ವಿಭಾಗ
ಮೈಸೂರು ಮಹಾನಗರ ಪಾಲಿಕೆ, ಮೈಸೂರು.

ವಾಸಾಸಂಇ/ಮೈಸೂರು/1181/ಎಸ್‌ಎಸ್‌ಸಿ/2025-26

ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ

ಉಪ ಪ್ರಧಾನ ವ್ಯವಸ್ಥಾಪಕರು-4 ರವರ ಕಚೇರಿ, 1ನೇ ಮಹಡಿ, ಬಿಬಿಎಂಪಿ ಕಟ್ಟಡ, ತಿಮ್ಮಯ್ಯ ರಸ್ತೆ, ವಸಂತನಗರ, ಬೆಂಗಳೂರು – 560052. ಇಮೇಲ್ : **bswmlee4@gmail.com**

No: DGM-4/BSWML/Tend/04/2025-26 Date: 06.11.2025

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ) (ಜಿಓಕೆ ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

1) ಉಪ ಪ್ರಧಾನ ವ್ಯವಸ್ಥಾಪಕರು-4 ಬಿ ಎಸ್ ಡಬ್ಲ್ಯೂ ಎಂ ಎಲ್ ಇವರು ವ್ಯವಸ್ಥಾಪಕ ನಿರ್ದೇಶಕರು, ಬಿ ಎಸ್ ಡಬ್ಲ್ಯೂ ಎಂ ಎಲ್, ಬೆಂಗಳೂರು ಇವರ ಪರವಾಗಿ ಕೆಳಗಿನ ಕೋಷ್ಟಕದಲ್ಲಿ ವಿವರಿಸಲಾಗಿರುವ ಕಾಮಗಾರಿಗಳಿಗೆ ಅರ್ಹ ಬಿಡ್‌ದಾರರಿಂದ ಕರ್ನಾಟಕ ಸರಕಾರದ ಕೆಪಿಪಿ ಪೋರ್ಟಲ್ : **https ://kppp.karnataka.gov.in** ಮೂಲಕ ಹೊಸ ಪ್ರಸ್ತಾವನೆಗಳನ್ನು ಆಹ್ವಾನಿಸಿರುತ್ತಾರೆ. ಕಾಮಗಾರಿಗೆ ಅರ್ಹತೆ ಪಡೆಯಲು ಷರತ್ತು 3 ರಲ್ಲಿ ನಿರ್ದಿಷ್ಟ ಪಡಿಸಿದ ಕನಿಷ್ಠ ಅರ್ಹತಾ ಮಾನದಂಡಗಳನ್ನು ಗಮನಿಸಲು ಬಿಡ್‌ದಾರರಿಗೆ ಸೂಚಿಸಲಾಗಿದೆ. 2) ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್‌ನಿಂದ ದಿನಾಂಕ 10.11.2025 ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. 3) ಹೆಚ್ಚಿನ ವಿವರಗಳನ್ನು ಟೆಂಡರ್ ಡಾಕ್ಯುಮೆಂಟ್ ನಲ್ಲಿ ವೀಕ್ಷಿಸಬಹುದು.

ಕ್ರ. ಸಂ.	ಕಾಮಗಾರಿಯ ವಿವರಗಳು	ಶೌಚಾಲಯಗಳ ಸಂಖ್ಯೆ	ಇಎಂಡಿ ಮೊತ್ತ (ರೂ.ಗಳಲ್ಲಿ	ಷರಾ
1	ಜಿಬಿಎ ವ್ಯಾಪ್ತಿಯಲ್ಲಿ ಪಿಪಿಪಿ ಮಾದರಿಯಲ್ಲಿ ಮಹಿಳೆಯರ ಶೌಚಾಲಯಗಳ ನಿರ್ಮಾಣ. ಪ್ಯಾಕೇಜ್-1ಬಿ	07	ರೂ. 3,00,000/-	ಸಾಮಾನ್ಯ

ವೇಳಾಪಟ್ಟಿ :

1. ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ: 27.11.2025 ಸಂಜೆ 4.30 ಗಂಟೆಯವರೆಗೆ 2. ಕೆಪಿಪಿ ಪೋರ್ಟಲ್‌ನಲ್ಲಿ ಆಕ್ಷೇಪಣೆಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ 15.11.2025 ಸಂಜೆ 4.00 ಗಂಟೆಯವರೆಗೆ. 3. ಪೂರ್ವಭಾವಿ ಸಭೆಯ ದಿನಾಂಕ : 17.11.2025, ಸಂಜೆ 4 ಗಂಟೆಗೆ. ಸ್ಥಳ : ಮುಖ್ಯ ಅಭಿಯಂತರರು ಮತ್ತು ಮುಖ್ಯ ಪ್ರಧಾನ ವ್ಯವಸ್ಥಾಪಕರ ಅಧ್ಯಕ್ಷತೆಯಲ್ಲಿ (ತಾಂತ್ರಿಕ), ಬಿ ಎಸ್‌ಡಬ್ಲ್ಯೂಎಂಎಲ್, ಮೀಟಿಂಗ್ ಹಾಲ್, ಬಿಬಿಎಂಪಿಕಟ್ಟಡ, ತಿಮ್ಮಯ್ಯ ರಸ್ತೆ, ಬೆಂಗಳೂರು. 4) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ : 29.11.2025 ರಂದು ಸಂಜೆ 4.30 ರೊಳಗೆ ಅಥವಾ ಮುಂದಿನ ಕೆಲಸದ ದಿನದಂದು. 5) ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕವನ್ನು ತಾಂತ್ರಿಕವಾಗಿ ಅರ್ಹರಾಗಿರುವ ಬಿಡ್‌ದಾರರಿಗೆ ತಿಳಿಸಲಾಗುವುದು.

ಸಹಿ/- ಉಪ ಪ್ರಧಾನ ವ್ಯವಸ್ಥಾಪಕರು-4, ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ.

DIPR/CP/3629/NR/2025-26

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ಕಲಬುರಗಿ ವಿಭಾಗ, ಕಲಬುರಗಿ

ಸಂ.ಕಾನಿಅ/ಲೋಇ/ಕವಿ/ತಾಶಾ-3,4,5/.ಟೆಂಡರ್.ಅಧಿಸೂಚನೆ/2025-26/5013 ದಿನಾಂಕ : 05.11.2025

ಅಲ್ಪಾವಧಿ ಟೆಂಡರ್ ಅಧಿಸೂಚನೆ

1) ಕಾಮಗಾರಿ ವಿವರ : ಕಾರ್ಯನಿರ್ವಾಹಕ ಇಂಜಿನಿಯರರು, ಲೋಕೋಪಯೋಗಿ, ಇಲಾಖೆ, ಕಲಬುರಗಿ ವಿಭಾಗ ಕಾರ್ಯಲಯದಿಂದ ಅಪೆಂಡಿಕ್ಸ್-ಇ 5054, ಎಂಪಿ ಲ್ಯಾಡ್, ಕೆ.ಕೆ.ಆರ್.ಡಿ.ಬಿ. ಯೋಜನೆಯಡಿಯಲ್ಲಿನ ಒಟ್ಟು -05 ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗಿದೆ. ಇಂಡೆಂಟ್ ಸಂಖ್ಯೆ: 28084, 28324, 28964, (Reserved for CAT-1) 28447, 28128, 2) ಕಾಮಗಾರಿ ಅಂದಾಜು ಮೊತ್ತ : **ಕನಿಷ್ಠ ರೂ. 81.00 ಲಕ್ಷಗಳು ಮತ್ತು ಗರಿಷ್ಠ ರೂ. 490.00 ಲಕ್ಷ**ಗಳು, 3) ಗುತ್ತಿಗೆದಾರರ ಅರ್ಹತೆ ವಿವರ : ಈ ಕಾಮಗಾರಿಗೆ ಟೆಂಡರ ಸಲ್ಲಿಸುವವರು, ಲೋಕೋಪಯೋಗಿ ಇಲಾಖೆಯಲ್ಲಿ ನಾಲ್ಕನೇ ದರ್ಜೆ ಹಾಗೂ ಮೇಲ್ಪಟ್ಟು ಗುತ್ತಿಗೆದಾರರಾಗಿರಬೇಕು. 4) ಇ.ಎಮ್.ಡಿ. ಮೊತ್ತ ಕನಿಷ್ಠ ರೂ. **1,37,000.00 ಮತ್ತು ಗರಿಷ್ಠ ರೂ. 6,17,000.00,** 5) ಪ್ರೀ ಬಿಡ್ ಮೀಟಿಂಗ್ : **02.12.2025 (11.00 Hrs)** 6) ಟೆಂಡರ ಬಗ್ಗೆ ಮಾಹಿತಿ ಹಾಗೂ ಸ್ಪಷ್ಟೀಕರಣ ಕೋರುವ ಕೊನೆಯ ದಿನಾಂಕ : **03.12.2025 (17.30 Hrs)**, 7) ಟೆಂಡರ ಸಲ್ಲಿಸುವ ಕೊನೆಯ ದಿನಾಂಕ : **04.12.2025 (16.00 Hrs)**, 8) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : **05.12.2025 (16.30 Hrs)**, 9) ಆರ್ಥಿಕ ಬಿಡ್ ತೆರೆಯುವ ದಿನಾಂಕ : **06.12.2025 (16.30 Hrs)**, 10) ಹೆಚ್ಚಿನ ವಿವರಗಳಿಗೆ : ಕಾರ್ಯನಿರ್ವಾಹಕ ಇಂಜಿನಿಯರರು, ಲೋಕೋಪಯೋಗಿ ಇಲಾಖೆ, ವಿಭಾಗ ಕಲಬುರಗಿ ಕಚೇರಿ, 11) **ಸೂಚನೆ: ಜಿ.ಎಸ್.ಟಿ. ಪ್ರತ್ಯೇಕವಾಗಿ ನೀಡಲಾಗುವುದು,** 12) ಅಂತರ್ಜಾಲ ತಾಣದ ವಿಳಾಸ : https://kppp.karnataka.gov.in 13) **ಗಮನಿಸಬೇಕಾದ ಅಂಶಗಳು : ಟಿಪ್ಪಣಿ:** 1) ಈ ಕೆಳಗೆ ಸಹಿ ಮಾಡಿರುವವರು ಯಾವೂದೇ ಕಾರಣಗಳನ್ನು ನೀಡದೆ ಟೆಂಡರ್ ಪ್ರಕ್ರಿಯೆಯನ್ನು ಮಂದೂಡುವಿಕೆ/ಸಂಪೂರ್ಣವಾಗಿ ಟೆಂಡರ್ ರದ್ದುಗೊಳಿಸುವ/ ಟೆಂಡರ್ ನಿರಾಕರಿಸುವ ಹಕ್ಕನ್ನು ಹೊಂದಿರುತ್ತಾರೆ. 2) ಇನ್ನು ಮೂಂದೆ ಟೆಂಡರ್ ಪ್ರಕ್ರಿಯೆಯಲ್ಲಿ ಯಾವೂದೆ ಬದಲಾವಣೆಗಳು ಇದ್ದಲ್ಲಿ, ದಿನ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಬದಲಾಗಿ ವಿದ್ಯೂನ್ಮಾನ ಸಂಗ್ರಹಣೆ ವೇದಿಕೆಯಲ್ಲಿ ಮಾತ್ರ ಬದಲಾವಣೆಗಳನ್ನು ಪ್ರಕಟಿಸಲಾಗುವುದು.

ಸಹಿ/-
ಕಾರ್ಯನಿರ್ವಾಹಕ ಇಂಜಿನೀಯರರು,
ಲೋಕೋಪಯೋಗಿ ಇಲಾಖೆ, ವಿಭಾಗ ಕಲಬುರಗಿ

ವಾ.ಸಾ.ಸಂ.ಇ.ಕಲಬುರಗಿ/682/2025-26/ದೇಶಪಾಂಡೆ ಪಬ್ಲಿಸಿಟಿ

ಗೆಲುವಿನಲ್ಲಿ ಮಿಂಚಿದ ಬೌಲರ್‌ಗಳು

ಟಿ20: ಸರಣಿಯಲ್ಲಿ ಭಾರತಕ್ಕೆ 2–1 ಮುನ್ನಡೆ ಆಸ್ಟ್ರೇಲಿಯಾ ತಂಡಕ್ಕೆ 48 ರನ್‌ಗಳ ಸೋಲು

ಕರಾರ (ಗೋಲ್ಡ್ ಕೋಸ್ಟ್), (ಪಿಟಿಐ): ಬಿಗು ಬೌಲಿಂಗ್ ದಾಳಿಯ ಮೂಲಕ ಸಾಧಾರಣ ಮೊತ್ತ ರಕ್ಷಿಸಿದ ಭಾರತ ತಂಡ ನಾಲ್ಕನೇ ಟಿ20 ಪಂದ್ಯದಲ್ಲಿ ಆಸ್ಟ್ರೇಲಿಯಾ ತಂಡದ ಮೇಲೆ 48 ರನ್‌ಗಳ ಸುಲಭ ಗೆಲುವು ಸಾಧಿಸಿತು. ಆ ಮೂಲಕ, ಸರಣಿಯಲ್ಲಿ ಇನ್ನೊಂದು ಪಂದ್ಯ ಉಳಿದಿರುವಂತೆ ಗುರುವಾರ 2–1 ಮುನ್ನಡೆ ಸಂಪಾದಿಸಿತು.

ಸ್ಪಿನ್ನರ್ ಅಕ್ಷರ್ ಪಟೇಲ್ ಮತ್ತು ಮಧ್ಯಮ ವೇಗಿ ಶಿವಂ ದುಬೆ ಅವರು ತಲಾ ಎರಡು ವಿಕೆಟ್ ಪಡೆದು ಆತಿಥೇಯರನ್ನು ಒತ್ತಡಕ್ಕೆ ಸಿಲುಕಿಸಿ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದರು. ಕೊನೆಯಲ್ಲಿ ವಾಷಿಂಗ್ಟನ್ ಸುಂದರ್ ಲಗುಬಗನೆ ಮೂರು ವಿಕೆಟ್ ಪಡೆದರು.

ಸರಣಿಯ ಅಂತಿಮ ಪಂದ್ಯ ಇದೇ 8ರಂದು ಬ್ರಿಸ್ಬೇನ್‌ನಲ್ಲಿ ನಡೆಯಲಿದೆ. ಮೊದಲ ಪಂದ್ಯ ಮಳೆಗೆ ಕೊಚ್ಚಿಹೋಗಿತ್ತು.

ಸಾಧಾರಣ ಮೊತ್ತ ಬೆಂಬತ್ತುವಾಗ ಒಂದು ಹಂತದಲ್ಲಿ, 11.3 ಓವರುಗಳಲ್ಲಿ 3 ವಿಕೆಟ್‌ಗೆ 91 ರನ್ ಗಳಿಸಿ ರನ್ ಚೇಸ್ ಉಮೇದಿನಲ್ಲಿದ್ದ ಆಸ್ಟ್ರೇಲಿಯಾ 18.2 ಓವರುಗಳಲ್ಲಿ 119 ರನ್‌ಗಳಿಗೆ ಕುಸಿಯಿತು. ಇದಕ್ಕೆ ಮೊದಲು ಭಾರತ 20 ಓವರುಗಳಲ್ಲಿ 8 ವಿಕೆಟ್‌ಗೆ 167 ರನ್ ಗಳಿಸಿತ್ತು.

ಮುಖ್ಯಾಂಶಗಳು

- ವಾಷಿಂಗ್ಟನ್ ಸುಂದರ್‌ಗೆ ಮೂರು ವಿಕೆಟ್
- ಅಕ್ಷರ್ ಪಟೇಲ್, ಶಿವಂ ದುಬೆಗೆ ತಲಾ 2 ವಿಕೆಟ್
- ಶನಿವಾರ ಬ್ರಿಸ್ಬೇನ್‌ನಲ್ಲಿ ಕೊನೆಯ ಪಂದ್ಯ

ಆರಂಭ ಆಟಗಾರರಾದ ಮ್ಯಾಥ್ಯೂ ಶಾರ್ಟ್ (30, 24ಎ) ಮತ್ತು ಮಿಚೆಲ್ ಮಾರ್ಷ್ (25, 19ಎ) ಅವರು 5 ಓವರುಗಳಲ್ಲಿ 37 ರನ್ ಸೇರಿಸಿದ್ದರು. ನಂತರ ಮಧ್ಯಮ ಹಂತದ ಓವರುಗಳಲ್ಲಿ ವಿಕೆಟ್‌ಗಳು ನಿಯಮಿತವಾಗಿ ಬಿದ್ದವು. ಪವರ್‌ಪ್ಲೇಯೊಳಗೆ ಅಕ್ಷರ್ ಪಟೇಲ್ ಅವರು, ಶಾರ್ಟ್ ಅವರನ್ನು ಎಲ್‌ಬಿ ಬಲೆಗೆ ಕೆಡವಿದರು. ದುಬೆ, ಎದುರಾಳಿ ನಾಯಕ ಮಾರ್ಷ್ ಮತ್ತು ಅಪಾಯಕಾರಿ ಆಟಗಾರ ಟಿಮ್ ಡೇವಿಡ್ (14) ವಿಕೆಟ್‌ಗಳನ್ನು ಪಡೆದಿದ್ದರು.

ಇದಕ್ಕೆ ಮೊದಲು ಭಾರತದ ಬ್ಯಾಟರ್‌ಗಳ ಪ್ರದರ್ಶನ ಅಷ್ಟೇನೂ ಹೇಳಿಕೊಳ್ಳುವ ಹಾಗಿರಲಿಲ್ಲ. ಅಭಿಷೇಕ್ ಶರ್ಮಾ (28, 21ಎ) ಮತ್ತು ಶುಭಮನ್ ಗಿಲ್ (46, 39ಎ) ಅವರು 56 ರನ್ ಸೇರಿಸಿ ಉತ್ತಮ ಆರಂಭ ಒದಗಿಸಿದರು.

ವಿಕೆಟ್ ಪಡೆದ ಅಕ್ಷರ್ ಪಟೇಲ್ ಅವರನ್ನು ಅಭಿನಂದಿಸಿದ ಜಸ್‌ಪ್ರೀತ್ ಬೂಮ್ರಾ, ಶಿವಂ ದುಬೆ ಮತ್ತು ಅಕ್ಷರ್ ಪಟೇಲ್ (ಎಡ) ಶುಭಮನ್ ಗಿಲ್ ಬ್ಯಾಟಿಂಗ್ ಎಎಫ್‌ಪಿ ಚಿತ್ರಗಳು

ಆದರೆ ನಂತರ ಅದೇ ಲಯ ಮುಂದುವರಿಯಲಿಲ್ಲ. ಜಂಪಾ ಅವರನ್ನು ನಿಭಾಯಿಸಲು ಮೂರನೇ ಕ್ರಮಾಂಕಕ್ಕೆ ಬಡ್ತಿ ಪಡೆದ ಶಿವಂ ದುಬೆ (22, 18ಎ) ಎದುರಾಳಿಗಳನ್ನು ಹೆಚ್ಚು ಕಾಡಲಿಲ್ಲ. ನಾಯಕ ಸೂರ್ಯಕುಮಾರ್ (20) ನಿರ್ಗಮಿಸುವ ಮೊದಲು ಎರಡು ಸಿಕ್ಸರ್ ಬಾರಿಸಿದರು.

ಕೊನೆಯಲ್ಲಿ ಅಕ್ಷರ್ ಪಟೇಲ್ 11 ಎಸೆತಗಳಲ್ಲಿ 21 ರನ್ ಬಾರಿಸಿದ್ದರಿಂದ ಮೊತ್ತ ಬೆಳೆಯಿತು.

ಆಸ್ಟ್ರೇಲಿಯಾ ಬೌಲರ್‌ಗಳ ಪರ ವೇಗಿ ನಥಾನ್ ಎಲಿಸ್ (4–0–21–3) ಪರಿಣಾಮಕಾರಿಯಾಗಿದ್ದರು. ಲೆಗ್ ಸ್ಪಿನ್ನರ್ ಜಂಪಾ 45 ರನ್ ತೆತ್ತರೂ ಅಪಾಯಕಾರಿ ಅಭಿಷೇಕ್ ಶರ್ಮಾ ಅವರನ್ನು ಸೇರಿ 3 ವಿಕೆಟ್‌ಗಳನ್ನು ಗಳಿಸಿದರು.

ಸಂಕ್ಷಿಪ್ತ ಸ್ಕೋರ್: ಭಾರತ: 20 ಓವರುಗಳಲ್ಲಿ 8 ವಿಕೆಟ್‌ಗೆ 167 (ಅಭಿಷೇಕ್ 28, ಶುಭಮನ್ ಗಿಲ್ 46, ಶಿವಂ ದುಬೆ 22, ಸೂರ್ಯಕುಮಾರ್ ಯಾದವ್ 20, ಅಕ್ಷರ್ ಪಟೇಲ್ ಔಟಾಗದೇ 21; ನಥಾನ್ ಎಲಿಸ್ 21ಕ್ಕೆ 3, ಆ್ಯಡಂ ಜಂಪಾ 45ಕ್ಕೆ 3); **ಆಸ್ಟ್ರೇಲಿಯಾ:** 18.2 ಓವರುಗಳಲ್ಲಿ 119 (ಮಿಚೆಲ್ ಮಾರ್ಷ್ 30, ಮ್ಯಾಥ್ಯೂ ಶಾರ್ಟ್ 25; ಅಕ್ಷರ್ ಪಟೇಲ್ 20ಕ್ಕೆ 2, ಶಿವಂ ದುಬೆ 20ಕ್ಕೆ 2, ವಾಷಿಂಗ್ಟನ್ ಸುಂದರ್ 3ಕ್ಕೆ 3. **ಫಲಿತಾಂಶ:** ಭಾರತಕ್ಕೆ 48 ರನ್‌ಗಳ ಗೆಲುವು. ಪಂದ್ಯದ ಆಟಗಾರ: ಅಕ್ಷರ್ ಪಟೇಲ್

ಚೆಸ್ ವಿಶ್ವಕಪ್: ಸಾಧ್ವಾನಿ, ನಿಹಾಲ್‌ಗೆ ನಿರಾಸೆ

3ನೇ ಸುತ್ತಿಗೆ ಪ್ರಜ್ಞಾನಂದ, ವಿದಿತ್

ಪಣಜಿ (ಪಿಟಿಐ): ಆಸ್ಟ್ರೇಲಿಯಾದ ತೆಮೂರ್ ಕುಯ್ಬೊಕರೋವ್ ಅವರನ್ನು ಟೈಬ್ರೇಕರ್‌ನಲ್ಲಿ 5–3 ರಲ್ಲಿ ಪ್ರಯಾಸದಿಂದ ಸೋಲಿಸಿದ ಭಾರತದ ಗ್ರ್ಯಾಂಡ್‌ಮಾಸ್ಟರ್ ಪ್ರಜ್ಞಾನಂದ ಆರ್. ಅವರು ವಿಶ್ವಕಪ್ ಚೆಸ್ ಟೂರ್ನಿಯ ಮೂರನೇ ಸುತ್ತಿಗೆ ಪ್ರವೇಶಿಸಿದರು. ವಿದಿತ್ ಗುಜರಾತಿ ಅವರು ಅರ್ಜೆಂಟೀನಾದ ಪ್ರತಿಭಾನ್ವಿತ ಫೌಸ್ಟಿನೊ ಓರೊ ವಿರುದ್ಧ ಟೈಬ್ರೇಕರ್‌ನಲ್ಲಿ ಗೆದ್ದು ಮುನ್ನಡೆದರು.

ಆದರೆ ಭಾರತದ ಗ್ರ್ಯಾಂಡ್‌ಮಾಸ್ಟರ್‌ಗಳಾದ ನಿಹಾಲ್ ಸರಿನ್ ಮತ್ತು ರೋನಕ್ ಸಾಧ್ವಾನಿ ಗುರುವಾರ ನಿರಾಶೆ ಅನುಭವಿಸಬೇಕಾಯಿತು. ಗ್ರೀಸ್‌ನ ಗ್ರ್ಯಾಂಡ್‌ಮಾಸ್ಟರ್ ಕೌರ್ಕೊಲೊಸ್ ಅರ್ಡಿಟಿಸ್ ಸ್ಟಮಾಟಿಸ್ ಅವರು ಟೈಬ್ರೇಕರ್‌ನ ಮೊದಲ ಸೆಟ್‌ನಲ್ಲಿ ಕೇರಳದ ಸರಿನ್ ಅವರಿಗೆ ಆಘಾತ ನೀಡಿದರು. ಸಾಧ್ವಾನಿ ಅವರು 1–3 ರಿಂದ ಅರ್ಮೇನಿಯಾದ ರಾಬರ್ಟ್ ಹೊವನೀಸಿಯನ್ ಅವರಿಗೆ ಸೋತರು.

ಭಾರತದ ಆಟಗಾರರ ವ್ಯವಹಾರವಾಗಿದ್ದ ಇನ್ನೊಂದು ಪಂದ್ಯದಲ್ಲಿ ಅರವಿಂದ ಚಿದಂಬರಮ್ ಅವರು ತಮಗಿಂತ ಕೆಳ ಕ್ರಮಾಂಕದ ಕಾರ್ತಿಕ್ ವೆಂಕಟರಾಮನ್ ಅವರಿಗೆ ಎರಡನೇ ಸೆಟ್ ಟೈಬ್ರೇಕರಿನಲ್ಲಿ ಮಣಿದರು.

ವಿಶ್ವ ಜೂನಿಯರ್ ಚಾಂಪಿಯನ್ ವಿ. ಪ್ರಣವ್ ಕೂಡ ಸಂಯಮ ತೋರಿ, ನಾರ್ವೆಯ ಆರ್ಯನ್ ತರಿ ಅವರನ್ನು ಮಣಿಸಿ ಮೂರನೇ ಸುತ್ತನ್ನು ಪ್ರವೇಶಿಸಿದರು. ಗ್ರ್ಯಾಂಡ್ ಮಾಸ್ಟರ್ ಎಂ.ಪ್ರಾಣೇಶ್ ಅವರು ಜರ್ಮನಿಯ ಡಿಮಿಟ್ರಿ ಕೊಲ್ಲರ್ಸ್ ಅವರನ್ನು ಪರಾಭವಗೊಳಿಸಿದರು. ಎಸ್.ಎಲ್. ನಾರಾಯಣನ್ ಅವರು ಇಂಗ್ಲೆಂಡ್‌ನ ನಿಕಿಟಾ ವಿಟಿಯುಗೊವ್ ಅವರನ್ನು ಸೋಲಿಸಿದರು.

ಪ್ರಜ್ಞಾನಂದ ಫಿಡೆ ವೆಬ್‌ಸೈಟ್ ಚಿತ್ರ

ಒಟ್ಟಾರೆ ಭಾರತದ 10 ಮಂದಿ ಮೂರನೇ ಸುತ್ತಿಗೆ ಮುನ್ನಡೆದಂತಾಗಿದೆ. ಅಗ್ರ ಶ್ರೇಯಾಂಕದ ಗುಕೇಶ್ ದೊಮ್ಮರಾಜು, ಎರಡನೇ ಶ್ರೇಯಾಂಕದ ಅರ್ಜುನ್ ಇರಿಗೇಶಿ, ದೀಪ್ತಾಯನ ಘೋಷ್, ಕಾರ್ತಿಕ್ ವೆಂಕಟರಾಮನ್, ಪೆಂಟಾಲ ಹರಿಕೃಷ್ಣ ಅವರು ಎರಡನೇ ದಿನವೇ ತಮ್ಮ ಎದುರಾಳಿಗಳ ವಿರುದ್ಧ ಜಯಗಳಿಸಿದ್ದರು.

ಬೆಟ್ಟಿಂಗ್: ರೈನಾ, ಧವನ್‌ಗೆ ಸೇರಿದ ಆಸ್ತಿ ಮುಟ್ಟುಗೋಲು

ನವದೆಹಲಿ (ಪಿಟಿಐ): ಬೆಟ್ಟಿಂಗ್ ಸಂಬಂಧಿ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಭಾರತದ ಮಾಜಿ ಕ್ರಿಕೆಟಿಗರಾದ ಸುರೇಶ್ ರೈನಾ ಹಾಗೂ ಶಿಖರ್ ಧವನ್ ಅವರಿಗೆ ಸೇರಿದ ₹11.14 ಕೋಟಿ ಮೌಲ್ಯದ ಆಸ್ತಿಯನ್ನು ಜಾರಿ ನಿರ್ದೇಶನಾಲಯ (ಇ.ಡಿ) ಮುಟ್ಟುಗೋಲು ಹಾಕಿಕೊಂಡಿದೆ.

'1xBet' ಹೆಸರಿನ ಆನ್‌ಲೈನ್ ಬೆಟ್ಟಿಂಗ್ ವೆಬ್‌ಸೈಟ್ ವಿರುದ್ಧದ ಪ್ರಕರಣದಲ್ಲಿ ಧವನ್ ಅವರಿಗೆ ಸೇರಿದ ₹4.5 ಕೋಟಿ ಮೌಲ್ಯದ ಸ್ಥಿರಾಸ್ತಿ ಮತ್ತು ರೈನಾ ಅವರ ₹6.64 ಕೋಟಿ ಮೌಲ್ಯದ ಮ್ಯೂಚುವಲ್ ಫಂಡ್ ಅನ್ನು ಮುಟ್ಟುಗೋಲು ಹಾಕಲು ತಾತ್ಕಾಲಿಕ ಆದೇಶ ಹೊರಡಿಸಲಾಗಿದೆ. ಅವರಿಬ್ಬರ ವಿರುದ್ಧ ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆಯ (ಪಿಎಂಎಲ್‌ಎ) ಅಡಿಯಲ್ಲಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ.

ಇದೇ ಪ್ರಕರಣದ ತನಿಖೆಯ ಭಾಗವಾಗಿ ಮಾಜಿ ಕ್ರಿಕೆಟಿಗರಾದ ಯುವರಾಜ್ ಸಿಂಗ್, ರಾಬಿನ್ ಉತ್ತಪ್ಪ, ನಟ ಸೋನು ಸೂದ್, ಊರ್ವಶಿ ರೌಟೇಲಾ, ಅಂಕುಶ್ ಹಜ್ರಾ ಮತ್ತು ಮಾಜಿ ಸಂಸದೆ ಮಿಮಿ ಚಕ್ರವರ್ತಿ ಅವರನ್ನೂ ವಿಚಾರಣೆಗೊಳಪಡಿಸಲಾಗಿತ್ತು.

30ರಂದು ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಗೆ ಚುನಾವಣೆ

ಅಧ್ಯಕ್ಷ ಸ್ಥಾನಕ್ಕೆ ಶಾಂತಕುಮಾರ್ ಸ್ಪರ್ಧೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯ ಅಧ್ಯಕ್ಷ ಸ್ಥಾನಕ್ಕಾಗಿ ದಿ ಪ್ರಿಂಟರ್ಸ್ ಮೈಸೂರು ಪ್ರೈವೇಟ್ ಲಿಮಿಟೆಡ್ ('ಪ್ರಜಾವಾಣಿ' ಮತ್ತು 'ಡೆಕ್ಕನ್ ಹೆರಾಲ್ಡ್' ಪತ್ರಿಕಾ ಸಮೂಹ) ನಿರ್ದೇಶಕ ಕೆ.ಎನ್. ಶಾಂತಕುಮಾರ್ ಅವರು ಸ್ಪರ್ಧಿಸಲಿದ್ದಾರೆ.



ಶಾಂತಕುಮಾರ್

ಕೆಎಸ್‌ಸಿಎ ನಿಕಟಪೂರ್ವ ಅಧ್ಯಕ್ಷ ಎ.ರಘುರಾಮ್ ಭಟ್ ಅವರ ಅಧಿಕಾರಾವಧಿಯು ಸೆಪ್ಟೆಂಬರ್ 30ರಂದು ಮುಕ್ತಾಯವಾಗಿತ್ತು. ಅವರು ಇತ್ತೀಚೆಗೆ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಖಜಾಂಚಿಯಾಗಿ ನೇಮಕರಾಗಿದ್ದಾರೆ. ಭಾರತ ತಂಡದ ಮಾಜಿ ಕ್ರಿಕೆಟಿಗ ಬ್ರಿಜೇಶ್ ಪಟೇಲ್ ಬಣದಿಂದ ಶಾಂತಕುಮಾರ್ ಅವರು ಕಣಕ್ಕಿಳಿಯಲಿದ್ದಾರೆ.

ಶಾಂತಕುಮಾರ್ ಅವರು ಎಂಟು ಒಲಿಂಪಿಕ್ ಕೂಟಗಳಲ್ಲಿ ಪತ್ರಿಕಾ ಛಾಯಾಗ್ರಾಹಕರಾಗಿ ಕಾರ್ಯನಿರ್ವಹಿಸಿದ್ದಾರೆ. ಮೂರು ದಶಕಗಳಿಗೂ ಹೆಚ್ಚು ಕಾಲದಿಂದ ವಿವಿಧ ಕ್ರೀಡಾ ಸಂಸ್ಥೆಗಳ ಆಡಳಿತದಲ್ಲಿ ಸಕ್ರಿಯರಾಗಿದ್ದಾರೆ.

ಪಟೇಲ್ ಬಣದ ಎದುರಾಳಿ ತಂಡದಿಂದ ಭಾರತ ತಂಡದ ಮಾಜಿ ವೇಗಿ ವೆಂಕಟೇಶ್ ಪ್ರಸಾದ್ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸುವ ಸಾಧ್ಯತೆ ನಿಚ್ಚಳವಾಗಿದೆ. ಸಮಿತಿಯ ಇನ್ನುಳಿದ ಸ್ಥಾನಗಳಿಗೆ ಉಭಯ ಬಣಗಳಿಂದ ಅಭ್ಯರ್ಥಿಗಳನ್ನು ಇನ್ನೂ ಪ್ರಕಟಿಸಿಲ್ಲ.

12ರಿಂದ ನಾಮಪತ್ರ ಸಲ್ಲಿಕೆ: ಕೆಎಸ್‌ಸಿಎ ಚುನಾವಣೆಗೆ ಇದೇ 12ರಿಂದ 15ರವರೆಗೆ ನಾಮಪತ್ರ ಸಲ್ಲಿಕೆ ನಡೆಯಲಿದೆ. 17ರಂದು ಕಣದಲ್ಲಿರುವವರ ಅಂತಿಮ ಪಟ್ಟಿ ಬಿಡುಗಡೆಯಾಗಲಿದೆ. ನವೆಂಬರ್ 30ರಂದು ಚುನಾವಣೆ ನಡೆಯಲಿದೆ.

ತಿಂಗಳ ಆಟಗಾರ್ತಿ ರೇಸ್‌ನಲ್ಲಿ ಮಂದಾನ

ದುಬೈ (ಪಿಟಿಐ): ಆರಂಭ ಆಟಗಾರ್ತಿ ಸ್ಮೃತಿ ಮಂದಾನ ಅವರನ್ನು ಐಸಿಸಿಯ ಅಕ್ಟೋಬರ್ ತಿಂಗಳ ಆಟಗಾರ್ತಿ ಪ್ರಶಸ್ತಿಗೆ ನಾಮನಿರ್ದೇಶನಗೊಂಡಿದ್ದಾರೆ. ಭಾರತ ತಂಡವು ಭಾನುವಾರ ಏಕದಿನ ವಿಶ್ವಕಪ್ ಟ್ರೋಫಿ ಗೆಲ್ಲುವ ಹಾದಿಯಲ್ಲಿ ಅವರು ಕೆಲವು ಉಪಯುಕ್ತ ಇನಿಂಗ್ಸ್‌ಗಳನ್ನು ಆಡಿದ್ದರು.

ದಕ್ಷಿಣ ಆಫ್ರಿಕಾದ ನಾಯಕಿ ಲಾರಾ ವೋಲ್ವಾರ್ಟ್ ಮತ್ತು ಆಸ್ಟ್ರೇಲಿಯಾದ ಬ್ಯಾಟರ್ ಆಶ್ಲೇ ಗಾರ್ಡನರ್ ಅವರೂ ಈ ಗೌರವ ಪಡೆಯಲು ರೇಸ್‌ನಲ್ಲಿದ್ದಾರೆ.

ನ್ಯೂಜಿಲೆಂಡ್ ವಿರುದ್ಧ ಶತಕ (109) ಬಾರಿಸಿದ್ದ ಮಂದಾನ, ಆಸ್ಟ್ರೇಲಿಯಾ ಎದುರು 80 ರನ್ ಮತ್ತು ಇಂಗ್ಲೆಂಡ್ ವಿರುದ್ಧ 88 ರನ್ ಗಳಿಸಿದ್ದರು.

2026ರ ಟಿ20 ಪುರುಷರ ವಿಶ್ವಕಪ್ ಐದು ತಾಣಗಳಲ್ಲಿ ಪಂದ್ಯಗಳು

ನವದೆಹಲಿ (ಪಿಟಿಐ): ಮುಂದಿನ ವರ್ಷದ ಫೆಬ್ರುವರಿ– ಮಾರ್ಚ್ ತಿಂಗಳಿನಲ್ಲಿ ನಿಗದಿಯಾಗಿರುವ ಐಸಿಸಿ ಟಿ20 ಕ್ರಿಕೆಟ್ ವಿಶ್ವಕಪ್ ಟೂರ್ನಿಗೆ ಐದು ತಾಣಗಳನ್ನು (ಅಹಮದಾಬಾದ್, ದೆಹಲಿ, ಕೋಲ್ಕತ್ತ, ಚೆನ್ನೈ ಮತ್ತು ಮುಂಬೈ) ಅಂತಿಮಗೊಳಿಸಲಾಗಿದೆ. ಫೈನಲ್ ಪಂದ್ಯ ಅಹಮದಾಬಾದ್‌ನಲ್ಲಿ ನಡೆಯಲಿದೆ.

2023ರ ಏಕದಿನ ವಿಶ್ವಕಪ್ ಫೈನಲ್ ಪಂದ್ಯ (ಭಾರತ– ಆಸ್ಟ್ರೇಲಿಯಾ) ಸಹ ಅಹಮದಾಬಾದಿನಲ್ಲಿ ನಡೆದಿತ್ತು. ಒಂದು ಲಕ್ಷಕ್ಕೂ ಹೆಚ್ಚು ಪ್ರೇಕ್ಷಕರಿಗೆ ಸ್ಥಳಾವಕಾಶವಿರುವ ಇಲ್ಲಿನ ನರೇಂದ್ರ ಮೋದಿ ಕ್ರೀಡಾಂಗಣ ವಿಶ್ವದ ಅತಿ ದೊಡ್ಡ ಕ್ರಿಕೆಟ್ ಕ್ರೀಡಾಂಗಣವೆನಿಸಿದೆ. 2023ರ ವಿಶ್ವಕಪ್ ಪಂದ್ಯಗಳು 10 ಕಡೆ ನಡೆದಿದ್ದವು.

ಐಸಿಸಿಯು ಮುಂದಿನ ವಾರ ಈ ವಿಶ್ವಕಪ್‌ನ ಪೂರ್ಣ ವೇಳಾಪಟ್ಟಿಯನ್ನು ಪ್ರಕಟಿಸಲಿದೆ ಎಂದು ತಿಳಿದುಬಂದಿದೆ. ಈ ಟೂರ್ನಿಗೆ ಶ್ರೀಲಂಕಾ ಜಂಟಿ ಆತಿಥ್ಯ ವಹಿಸಲಿದೆ. ಈ ಹಿಂದೆ ಭಾರತದ ಜೊತೆ ಆದ ಏರ್ಪಾಡಿನ ಪ್ರಕಾರ ಪಾಕಿಸ್ತಾನದ ಪಂದ್ಯಗಳಿಗೆ ಶ್ರೀಲಂಕಾ ತಟಸ್ಥ ತಾಣವಾಗಿದೆ. ಕೊಲಂಬೊ ಸೇರಿ ಶ್ರೀಲಂಕಾದ ಮೂರು ನಗರಗಳಲ್ಲಿ ವಿಶ್ವಕಪ್ ಪಂದ್ಯಗಳು ನಡೆಯಲಿವೆ.

ಭಾರತವು ಈ ಟೂರ್ನಿಯ ಹಾಲಿ ಚಾಂಪಿಯನ್ ಆಗಿದೆ. 2024ರ ಜೂನ್‌ನಲ್ಲಿ ಬಾರ್ಬಡೋಸ್‌ನಲ್ಲಿ ಭಾರತ ಚುಟುಕು ಮಾದರಿಯ ವಿಶ್ವಕಪ್ ಗೆದ್ದುಕೊಂಡಿತ್ತು.

ಟಿ20 ವಿಶ್ವಕಪ್‌ಗೆ ಅಂತಿಮಗೊಳಿಸಿ ರುವ ಐದೂ ನಗರಗಳು ಟೈರ್ 1 ನಗರಗಳಾಗಿದ್ದು, ಪ್ರೇಕ್ಷಕರು ಹೆಚ್ಚಿನ ಸಂಖ್ಯೆಯಲ್ಲಿ ಸೇರುವ ನಿರೀಕ್ಷೆಯಿದೆ.

ಪಾಕಿಸ್ತಾನ ತಂಡವು ಒಂದು ವೇಳೆ ಫೈನಲ್ ತಲುಪಿದರೆ, ಆ ಪಂದ್ಯ ಶ್ರೀಲಂಕಾದಲ್ಲಿ ಆಡಬೇಕಾಗುತ್ತದೆ. ಐಸಿಸಿ, ಬಿಸಿಸಿಐ ಮತ್ತು ಪಿಸಿಬಿ ನಡುವೆ 2027ರವರೆಗೆ ಆಗಿರುವ ಒಪ್ಪಂದದ ಪ್ರಕಾರ, ಯಾವುದೇ ದೇಶ ಆತಿಥ್ಯ ವಹಿಸಿರಲಿ, ಭಾರತ ಮತ್ತು ಪಾಕಿಸ್ತಾನ ತಂಡಗಳು ತಮ್ಮ ಮುಖಾಮುಖಿ ಪಂದ್ಯಗಳನ್ನು ತಟಸ್ಥ ರಾಷ್ಟ್ರದಲ್ಲಿ ಆಡಬೇಕಾಗುತ್ತದೆ.

'ಟೆಸ್ಟ್': ದಕ್ಷಿಣ ಆಫ್ರಿಕಾ ಎ ವಿರುದ್ಧ 255 ರನ್ ಕಲೆಹಾಕಿದ ಭಾರತ ಎ

ಧ್ರುವ ಜುರೇಲ್ ಅಮೋಘ ಶತಕ

• ಗಿರೀಶ ದೊಡ್ಡಮನಿ

ಬೆಂಗಳೂರು: ಗುರುವಾರ ಬೆಳಗಿನ ಅಹ್ಲಾದಕರ ವಾತಾವರಣದಲ್ಲಿ 'ಆರಂಭಿಕ ಆಘಾತ' ಅನುಭವಿಸಿದ ಭಾರತ ಎ ತಂಡಕ್ಕೆ ಧ್ರುವ ಜುರೇಲ್ ಆಸರೆಯಾದರು.

ಇಲ್ಲಿ ಆರಂಭವಾದ 'ಟೆಸ್ಟ್' (ಚತುರ್ದಿನಗಳ) ಪಂದ್ಯದ ಮೊದಲ ದಿನದಾಟದಲ್ಲಿ 86 ರನ್‌ಗಳಿಗೆ 5 ವಿಕೆಟ್ ಕಳೆದುಕೊಂಡಿದ್ದ ಆತಿಥೇಯ ತಂಡಕ್ಕೆ ಧ್ರುವ (ಅಜೇಯ 132, 175ಎ, 4X12, 6X4) ಅವರು ತಮ್ಮ ಅಮೋಘ ಶತಕದ ಮೂಲಕ ಆಸರೆಯಾದರು. ದಿನದಾಟದ ಮುಕ್ತಾಯಕ್ಕೆ ಸರಿಯಾಗಿ ಭಾರತ ಎ ತಂಡವು 77.1 ಓವರ್‌ಗಳಲ್ಲಿ 255 ರನ್ ಗಳಿಸಿತು. ಪ್ರವಾಸಿ ತಂಡದ ಟಿಯಾನ್ ವ್ಯಾನ್ ವುರೆನ್ (52ಕ್ಕೆ4) ಪರಿಣಾಮಕಾರಿ ದಾಳಿ ನಡೆಸಿದರು.

ಈ ಪಂದ್ಯದಲ್ಲಿ ಕಣಕ್ಕಿಳಿದ ಹನ್ನೊಂದರ ಬಳಗದಲ್ಲಿ ಅಭಿಮನ್ಯು ಈಶ್ವರನ್ ಮತ್ತು ಹರ್ಷ ದುಬೆ ಬಿಟ್ಟರೆ ಉಳಿದೆಲ್ಲರೂ ಭಾರತ ತಂಡದಲ್ಲಿ ಆಡಿದ ಅನುಭವಿಗಳು. ಆದರೆ ಇದರಲ್ಲಿ ಯಶಸ್ವಿಯಾಗಿ ತಂಡಕ್ಕೆ ಬಲ ತುಂಬಿದವರು ಜುರೇಲ್ ಮಾತ್ರ.

ಟಾಸ್ ಗೆದ್ದು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡ ದಕ್ಷಿಣ ಆಫ್ರಿಕಾದ ನಿರ್ಧಾರ ಆರಂಭದಲ್ಲಿಯೇ ಫಲ ನೀಡಿತು. ಹಸಿರು ಇದ್ದ ಪಿಚ್ ವೇಗಿಗಳಿಗೆ ನೆರವು ನೀಡಿತು. ಆತಿಥೇಯ ತಂಡವು ಮೊದಲ ಅವಧಿಯಲ್ಲಿಯೇ 55ಕ್ಕೆ4 ವಿಕೆಟ್ ಕಳೆದುಕೊಂಡಿತು.

ಆಫ್ರಿಕಾ ಎ ವಿರುದ್ಧದ 'ಟೆಸ್ಟ್' ಪಂದ್ಯದಲ್ಲಿ ಭಾರತ ಎ ತಂಡದ ಧ್ರುವ ಜುರೇಲ್ ಶತಕ ದಾಖಲಿಸಿ ಸಂಭ್ರಮಿಸಿದರು ಪ್ರಜಾವಾಣಿ ಚಿತ್ರ: ಪ್ರಶಾಂತ್ ಎಚ್‌.ಜಿ.

ಈ ಹಂತದಲ್ಲಿ ಕ್ರೀಸ್‌ನಲ್ಲಿದ್ದ ನಾಯಕ ರಿಷಭ್ ಪಂತ್ ಜೊತೆಗೆ ಸೇರಿದ ಧ್ರುವ ವಿಕೆಟ್ ಕುಸಿತಕ್ಕೆ ತಡೆಯೊಡ್ಡಿದರು. ರಿಷಭ್ ಯಥಾಪ್ರಕಾರ ತಮ್ಮದೇ ವಿಶಿಷ್ಟ ಶೈಲಿಯ ಬ್ಯಾಟಿಂಗ್ ಮಾಡಿದರು. ಮುನ್ನುಗ್ಗಿ ಸಿಕ್ಸರ್ ಎತ್ತಿದರು. ಕ್ರೀಸ್‌ನಲ್ಲಿ ಮಲಗಿ ರಿವರ್ಸ್ ಸ್ಕೂಪ್ ಬೌಂಡರಿ ಗಿಟ್ಟಿಸಿದರು. ಅವರು ಕ್ರೀಸ್‌ನಲ್ಲಿದ್ದಷ್ಟು ಹೊತ್ತು ಬೌಂಡರಿಲೈನ್ ಬಳಿಯೇ ಹೆಚ್ಚು ಫೀಲ್ಡರ್‌ಗಳು ನಿಯೋಜಿತರಾಗಿದ್ದರು. ಊಟದ ವಿರಾಮದ ನಂತರ ಮೊರೆಕಿ ಬೌಲಿಂಗ್‌ನಲ್ಲಿ ಫೀಲ್ಡರ್ ಏಕರ್‌ಮನ್ ಅವರಿಗೆ ಕ್ಯಾಚಿತ್ತರು.

ಆಗ ಇಡೀ ಇನಿಂಗ್ಸ್ ಹೊಣೆ ಹೊತ್ತ ಧ್ರುವ ಕೆಳಕ್ರಮಾಂಕದ ಆಟಗಾರರೊಂದಿಗೆ ಜೊತೆಯಾಟ ಕಟ್ಟಿದರು. ಮಧ್ಯಾಹ್ನ ಒಂದೂವರೆ ಸುಮಾರಿಗೆ ಮೋಡ ಕವಿದ ವಾತಾವರಣದಲ್ಲಿ ಬೆಳಗಿದ ಫ್ಲಡ್‌ಲೈಟ್ ಬೆಳಕಲ್ಲಿ ಧ್ರುವ ಅವರ ಆಟ ಅಪ್ಯಾಯಮಾನವಾಗಿತ್ತು. ಚೆಂದದ ಡ್ರೈವ್, ಸ್ವೀಪ್‌ಗಳ ಆಟವಾಡಿದರು. ಅವರು ಕುಲದೀಪ್ ಯಾದವ್ ಅವರೊಂದಿಗಿನ ಜೊತೆಯಾಟದಲ್ಲಿ 79 ರನ್ ಸೇರಿಸಿದರು. ಕುಲದೀಪ್ ರನೌಟ್ ಆಗುವುದರೊಂದಿಗೆ ಜೊತೆಯಾಟ ಮುರಿಯಿತು.

ಎಡವಿದ ಅಗ್ರ ಕ್ರಮಾಂಕದ ಬ್ಯಾಟರ್‌ಗಳು: ಪಂದ್ಯದ ಎರಡನೇ ಓವರ್‌ನಲ್ಲಿ ಟಿಶೆಪೊ ಮೊರೆಕಿ ಬೀಸಿದ ಎಲ್‌ಬಿಡಬ್ಲ್ಯು ಬಲೆಗೆ ಅಭಿಮನ್ಯು ಈಶ್ವರನ್ ಬಿದ್ದರು. ಖಾತೆ ತೆರೆಯಲೂ ಅವರಿಗೆ ಸಾಧ್ಯವಾಗಲಿಲ್ಲ. ಕೆ.ಎಲ್. ರಾಹುಲ್ ಮತ್ತು ಸಾಯಿ ಸುದರ್ಶನ್ ತಾಳ್ಮೆಯ ಆಟವಾಡಿ ಇನಿಂಗ್ಸ್ ಕಟ್ಟುವ ಪ್ರಯತ್ನ ಮಾಡಿದರು. ಚುರುಕಾಗಿ ತಿರುವು ಪಡೆದು ಬರುತ್ತಿದ್ದ ಎಸೆತಗಳನ್ನು ಎಚ್ಚರಿಕೆಯಿಂದ ಎದುರಿಸಿದರು. ಎರಡನೇ ವಿಕೆಟ್ ಜೊತೆಯಾಟದಲ್ಲಿ 35 ರನ್ ಸೇರಿಸಿದರು. ಆದರೆ 16ನೇ ಓವರ್‌ನಲ್ಲಿ ವ್ಯಾನ್ ವುರನ್ ಎಸೆತವನ್ನು ಆಡುವ ಭರದಲ್ಲಿ ರಾಹುಲ್ ಕಾನರ್ ಎಸ್ತುರ್ಝಿಯಾನ್‌ಗೆ ಕ್ಯಾಚಿತ್ತರು.

ನಂತರದ ಓವರ್‌ನಲ್ಲಿ ಸ್ಪಿನ್ನರ್ ಪ್ರೆರಲನ್ ಸುಬ್ರಾಯನ್ ಬೌಲಿಂಗ್‌ನಲ್ಲಿ ಸಾಯಿ ಸುದರ್ಶನ್ (17 ರನ್) ಎಲ್‌ಬಿಡಬ್ಲ್ಯು ಬಲೆಗೆ ಬಿದ್ದರು. ದೇವದತ್ತ ಪಡಿಕ್ಕಲ್ (5 ರನ್) ಮತ್ತೊಮ್ಮೆ ಲಯ ಕಂಡುಕೊಳ್ಳುವಲ್ಲಿ ವಿಫಲರಾದರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಭಾರತ ಎ: 77.1 ಓವರ್‌ಗಳಲ್ಲಿ 255 (ಕೆ.ಎಲ್. ರಾಹುಲ್ 19, ಸಾಯಿ ಸುದರ್ಶನ್ 17, ರಿಷಭ್ ಪಂತ್ 24, ಧ್ರುವ ಜುರೇಲ್ ಔಟಾಗದೇ 132, ಕುಲದೀಪ್ ಯಾದವ್ 20, ಮೊಹಮ್ಮದ್ ಸಿರಾಜ್ 15, ಟಿಶೆಪೊ ಮೊರೆಕಿ 52ಕ್ಕೆ2, ಪೆರಲಾನ್ ಸುಬೆರಾಯನ್ 73ಕ್ಕೆ2, ಟಿಯಾನ್ ವ್ಯಾನ್ ವುರನ್ 52ಕ್ಕೆ4) ವಿರುದ್ಧ ದಕ್ಷಿಣ ಆಫ್ರಿಕಾ ಎ.

ಪಿಟಿಐ ಚಿತ್ರ

ರಾಷ್ಟ್ರಪತಿ ಭೇಟಿ

ಐಸಿಸಿ ಮಹಿಳಾ ಏಕದಿನ ವಿಶ್ವಕಪ್ ಗೆದ್ದ ಭಾರತ ಕ್ರಿಕೆಟ್ ತಂಡದ ನಾಯಕಿ ಹರ್ಮನ್‌ಪ್ರೀತ್ ಕೌರ್ ಅವರು ಗುರುವಾರ ನವದೆಹಲಿಯ ರಾಷ್ಟ್ರಪತಿ ಭವನದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಗೆ ತಂಡದ ಜೆರ್ಸಿಯನ್ನು ಹಸ್ತಾಂತರಿಸಿದರು

ಆರ್‌ಸಿಬಿಯಲ್ಲಿ ಸ್ಮೃತಿ, ಪೆರಿ ರಿಟೇನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಿಳಾ ಪ್ರಿಮಿಯರ್ ಲೀಗ್ ಟೂರ್ನಿಯಲ್ಲಿ ಆಡುವ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ನಾಯಕಿ ಸ್ಮೃತಿ ಮಂದಾನ ಹಾಗೂ ಆಸ್ಟ್ರೇಲಿಯಾ ಆಲ್‌ರೌಂಡರ್ ಎಲಿಸ್ ಪೆರಿ ಅವರನ್ನು ಉಳಿಸಿಕೊಂಡಿದೆ.

ಗುರುವಾರ ಉಳಿಕೆ ಆಟಗಾರರ ಪಟ್ಟಿ ಪ್ರಕಟಿಸಿರುವ ತಂಡವು ಆಫ್‌ಸ್ಪಿನ್ನರ್ ಶ್ರೇಯಾಂಕಾ ಪಾಟೀಲ ಹಾಗೂ ವಿಕೆಟ್‌ಕೀಪರ್ ರಿಚಾ ಘೋಷ್ ಅವರನ್ನೂ ಉಳಿಸಿಕೊಂಡಿದೆ.

2024ರಲ್ಲಿ ಪ್ರಶಸ್ತಿ ಜಯಿಸಿದ್ದ ಆರ್‌ಸಿಬಿ ತಂಡಕ್ಕೆ ಸ್ಮೃತಿ ನಾಯಕಿಯಾಗಿದ್ದರು. ಸ್ಮೃತಿ ಅವರಿಗೆ ಗರಿಷ್ಠ ಮೌಲ್ಯ (₹ 3.5 ಕೋಟಿ) ನೀಡಿ ಉಳಿಸಿಕೊಳ್ಳಲಾಗಿದೆ. ಅವರು ಆರ್‌ಸಿಬಿ ನಾಯಕಿಯಾಗಿ ಮುಂದುವರಿಯುವರು.

ಈಚೆಗೆ ಭಾರತ ಮಹಿಳಾ ತಂಡವು ಏಕದಿನ ಕ್ರಿಕೆಟ್ ವಿಶ್ವಕಪ್ ಜಯಿಸುವಲ್ಲಿ ಸ್ಮೃತಿ ಪ್ರಮುಖ ಪಾತ್ರ ವಹಿಸಿದ್ದರು. ಅವರು 434 ರನ್ ಗಳಿಸಿದ್ದರು.

ರಿಚಾ ಘೋಷ್ (₹2.75 ಕೋಟಿ), ಎಲಿಸ್ ಪೆರಿ (₹ 2 ಕೋಟಿ) ಮತ್ತು ಶ್ರೇಯಾಂಕಾ (₹ 60 ಲಕ್ಷ) ಅವರನ್ನು ಉಳಿಸಿಕೊಳ್ಳಲಾಗಿದೆ. ಆಟಗಾರ್ತಿಯರನ್ನು ರಿಟೇನ್ ಮಾಡಿಕೊಳ್ಳಲು ಆರ್‌ಸಿಬಿಯು ₹ 8.85 ಕೋಟಿ ಖರ್ಚು ಮಾಡಿದೆ. ಸದ್ಯ ತನ್ನ ಪರ್ಸ್‌ನಲ್ಲಿರುವ ₹ 6.15 ಕೋಟಿಯನ್ನು ಹರಾಜು ಪ್ರಕ್ರಿಯೆಯಲ್ಲಿ ವಿನಿಯೋಗಿಸಲಿದೆ.

ಸ್ಮೃತಿ ಮಂದಾನ

ಎಲಿಸ್ ಪೆರಿ

ರಂಗರಾಜನ್ ಮುಖ್ಯ ಕೋಚ್

ಆರ್‌ಸಿಬಿ ತಂಡದ ಮುಖ್ಯ ಕೋಚ್ ಆಗಿ ಮಲೋಳನ್ ರಂಗರಾಜನ್ ಅವರನ್ನು ನೇಮಕ ಮಾಡಲಾಗಿದೆ. ಅವರು ಕಳೆದ ಎರಡು ಋತುಗಳಲ್ಲಿ ಸಹಾಯಕ ಕೋಚ್ ಆಗಿದ್ದರು.